College with Potential for Excellence

Education to Excel

SBRR MAHAJANA FIRST GRADE COLLEGE (Autonomous)

Jayalakshmipuram, Mysore - 12

2023-24

MAHAJANA IN THE EYES OF THE PRESS.....

17

SEVENTEENTH VOLUME

MAHAJANA EDUCATION SOCIETY (R.)

MAHAJANA IN THE EYES OF THE PRESS....


ಕನ್ನಡಪ್ರಭ

13.01.2024

ಮಹಾಜನ ಕಾಲೇಜಿನಲ್ಲಿ ವಿವೇಕಾನಂದರ ಜಯಂತಿ

ಆಲೋಚನ

ದಿನ ಪತ್ರಿಕೆ

ಶನಿವಾರ, 24 ಫೆಬ್ರವರಿ 2024

'ಕಾಲಹರಣ ಮಾಡಬೇಡಿ, ಓದಿನತ್ತ ಗಮನಕೊಡಿ'

ಸಂವಾದ ಕಾರ್ಯಕ್ರಮದಲ್ಲಿ ಚಿಂತಕ ಶಂಕರ ದೇವನೂರು ಕಿವಿಮಾತು

ಹೊಸ ದಿಗಂತ

ಬುಧವಾರ

ಸೆಪ್ಟೆಂಬರ್ 27, 2023

ಸೇನೆ ಮಾಡಲು ಅಧಿಕಾರದ ಅವಶ್ಯಕತೆ ಇಲ್ಲ


ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಬಾಸರ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 26 ಫೆಬ್ರವರಿ 2024

ಸೋಪಾಸ್ ಕಾಸ್ಟೋಬಲ್ ನೇಮಕಾತಿ ಪರೀಕ್ಷೆ

10,300 ಅಭ್ಯರ್ಥಿಗಳ ಪೈಕಿ 4,075 ಮಂದಿ ಗೈರು

ವಿಜಯವಾಣಿ

ಕನ್ನಡಿಗರ ಧ್ವನಿ

ಗುರುವಾರ 7 ಮಾರ್ಚ್ 2024

7 MARCH 2024

ಮೈವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ ರಾಷ್ಟ್ರ ಮಟ್ಟದ ಕಾರ್ಯಾಗಾರ

ಸಂಶೋಧನೆಗಳು ಸಮಾಜಕ್ಕೆ ಕೊಡುಗೆ ನೀಡುವಂತಿರಲಿ

ಪ್ರತಿನಿಧಿ

...ಇವ ನಮ್ಮವ

ಶುಕ್ರವಾರ

ಅಕ್ಟೋಬರ್ 13, 2023

ಪರಂಪರೆ ಉಳಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ


ಪ್ರಜಾವಾಣಿ

ಮಂಗಳವಾರ • ಮೇ 7, 2024

'ಪ್ರಾಯೋಗಿಕ ಅನುಭವ ಅಗತ್ಯ'

STAR OF MYSORE

Sunday 18th February 2024

Excel in Women's Cricket Tourney


Mysore University Women's Cricket Team bagged third place in the Inter-University Women's Cricket Tournament organised by Nalapapa University, Tamil Nadu. The team is qualified to participate in All India Inter-University Tournament. Seen in the picture are the students of SBRR Mahajana First Grade College, Jayalakshmipuram. who were

ವಿಜಯ ಕರ್ನಾಟಕ

ಭಾನುವಾರ,8 ಅಕ್ಟೋಬರ್ 2023

ಹಸ, ಭಲುದಿಂದ ಓದಿ: ಮಂಜೇಗೌಡ ಸಲಹೆ



ಮುನ್ನುಡಿ

ಸಾಂಸ್ಕೃತಿಕ ನಗರ ಮೈಸೂರು ವೈವಿಧ್ಯಮಯ ರತ್ನಗಳಿಂದ ಶೋಭಿಸುತ್ತಿರುವ ದೊಡ್ಡ ಕಿರೀಟ. ಆ ಕಿರೀಟದಲ್ಲಿನ ಒಂದು ಮುತ್ತು ನಮ್ಮ ಮಹಾಜನ ವಿದ್ಯಾಸಂಸ್ಥೆ. ಸಮಾಜದಲ್ಲಿ ಶೈಕ್ಷಣಿಕವಾಗಿ ಸಹಾಯ ಮಾಡಬೇಕು ಎಂಬ ಸದುದ್ದೇಶದಿಂದ ಆರಂಭಗೊಂಡ ಸಂಸ್ಥೆ ನಮ್ಮದು. SBRR ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸದಾ ತುಡಿಯುತ್ತಾ, ಕಲಿಕೆಯ ಪ್ರಕ್ರಿಯೆಯನ್ನು ನಿರಂತರವಾಗಿ ಆರೋಗ್ಯ ಹಾಗೂ ಕ್ರಿಯಾಶೀಲವಾಗಿರಿಸಲು ಪಠ್ಯದ ಜೊತೆಗೆ ಪಠ್ಯ ಪೂರಕ, ಪಠ್ಯೇತರ ಮತ್ತು ಕೌಶಲ್ಯವರ್ಧಿತ ಚಟುವಟಿಕೆಗಳನ್ನು ಆಯೋಜಿಸುತ್ತಾ ಬರುತ್ತಿದೆ. ಇಂಥ ಯಾವುದೇ ಕಾರ್ಯಕ್ರಮ ಕಾಲೇಜಿನಲ್ಲಿ ನಡೆದರೂ ಮರುದಿನ ಪತ್ರಿಕೆಯಲ್ಲಿ ಅದರ ಮಾಹಿತಿ ಮತ್ತು ಛಾಯಚಿತ್ರವನ್ನು ನೋಡುವುದು ಅತ್ಯಂತ ಸಂತೋಷ ಮತ್ತು ತೃಪ್ತಿದಾಯಕವಾದುದು. ಅದಷ್ಟೇ ಅಲ್ಲ ಕಾಲೇಜಿನ ಮತ್ತು ಸಮಾಜದ ದೃಷ್ಟಿಯಿಂದ ಮಹತ್ವವಾದದ್ದೂ ಕೂಡ. ಇದರಿಂದ ಕಾಲೇಜು ಸಮಾಜದೊಂದಿಗೆ ನೇರ ಸಂಪರ್ಕ ಸಾಧಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತದೆ. ನಮ್ಮ ಸಾಧನೆಗಳನ್ನು, ಘಟನೆಗಳನ್ನು, ಕಾರ್ಯಕ್ರಮಗಳನ್ನು, ಸಮಾಜದೊಂದಿಗೆ ಹಂಚಿಕೊಳ್ಳಲು ನಮಗೆ ಹೆಮ್ಮೆ ಎನಿಸುತ್ತದೆ. ಅಧ್ಯಾಪಕರ, ಅಧ್ಯಾಪಕೇತರರ, ವಿದ್ಯಾರ್ಥಿಗಳ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಂಸ್ಕೃತಿಕೇತರ ಸಾಧನೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಆರೋಗ್ಯಕರ ಸಮಾಜವನ್ನು ನಿರ್ಮಿಸುವುದು ನಮ್ಮ ಜವಾಬ್ದಾರಿಯಾಗಿದೆ.

ಈ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಗಳನ್ನು ಡಿಜಿಟಲ್ ರೂಪದಲ್ಲಿ ಸಂಕಲಿಸಿ ಅದನ್ನು ಪುಸ್ತಕ ರೂಪದಲ್ಲಿ ತಂದು ದಾಖಲಿಸಿ **'ಪತ್ರಿಕೆಯ ಕಣ್ಣುಗಳಲ್ಲಿ ಮಹಾಜನ'** ಎಂಬ ಶೀರ್ಷಿಕೆಯೊಂದಿಗೆ ಕೃತಿ ರೂಪ ತಾಳಿದೆ. ಈ ಕೃತಿ ನಮ್ಮ ಕಾಲೇಜಿನ ಇತಿಹಾಸದ ಮೈಲಿಗಲ್ಲು. ಮುಂದಿನವರಿಗೆ ಮಾಹಿತಿಯ ಮೂಲವೂ ಆಗಿದೆ. ಪ್ರತಿದಿನ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಗಳನ್ನು ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ನಮ್ಮ ಗ್ರಂಥಾಲಯ ವಿಭಾಗ ಅತ್ಯಂತ ಬದ್ಧತೆಯಿಂದ ನಿರ್ವಹಿಸಿಕೊಂಡು ಬರುತ್ತಿದೆ.

ಮುಖ್ಯ ಗ್ರಂಥಪಾಲಕಿಯಾದ ಶ್ರೀಮತಿ ವೀಣಾ ಎಂ ಅವರಿಂದ ಗ್ರಂಥಾಲಯಕ್ಕೆ ಹೊಸ ಚೈತನ್ಯ ಬಂದಿದೆ. ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಗ್ರಂಥಾಲಯದೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಲೈಬ್ರರಿ ಕೇವಲ ಪುಸ್ತಕ ಸಂಗ್ರಹಿಸುವ ಕೇಂದ್ರವಾಗಿಲ್ಲ. ಸರಸ್ವತಿಯ ಮಂದಿರವಾಗಿದೆ. ಈ ಮಂದಿರಕ್ಕೆ ಗೌರವ ತರುವ ರೀತಿಯಲ್ಲಿ ಶ್ರೀ ಮಹೇಶ್ ಎಂ ಮತ್ತು ಶ್ರೀಮತಿ ಪುಷ್ಪ ಎಲ್ ಅವರು ಸಂಕಲ್ಪ ಸಿದ್ಧರಾಗಿ ದುಡಿಯುತ್ತಿದ್ದಾರೆ. ಗ್ರಂಥಾಲಯ ವಿಭಾಗದ ಎಲ್ಲಾ ಸದಸ್ಯರು ಇವರೊಂದಿಗೆ ಕೈ ಜೋಡಿಸಿ ಮುನ್ನಡೆಸುತ್ತಿದ್ದಾರೆ. ಈ ದುಡಿಮೆಯ ಫಲ **'ಪತ್ರಿಕೆಯ ಕಣ್ಣುಗಳಲ್ಲಿ ಮಹಾಜನ'** ಸಂಪುಟಗಳು ಹೊರಬಂದಿವೆ. ಇವರೆಲ್ಲರಿಗೂ ವಿಶೇಷ ಅಭಿನಂದನೆಗಳು. ಈ ಕೃತಿಗಾಗಿ ಪರಿಶ್ರಮದಿಂದ ಕಾರ್ಯನಿರ್ವಹಿಸಿದ ಅಧ್ಯಾಪಕರು, ಅಧ್ಯಾಪಕೇತರರಿಗೆ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ನಮ್ಮ ಕಾಲೇಜಿನ ಇತಿಹಾಸ ಹಸಿರಾಗಿ ಉಳಿಯಬೇಕಾದರೆ ಈ ಕೆಲಸ ನಿರಂತರವಾಗಿ ಸಾಗಲೆಂದು ಆಶಿಸುತ್ತೇನೆ.

(ಡಾ. ಬಿ.ಆರ್ ಜಯಕುಮಾರಿ)

ದಿನಾಂಕ: 30–06–2024

THE TIMES OF INDIA

THURSDAY, JULY 6, 2023

MAHAJANA EDUCATION SOCIETY (R)

Jayalakshmipuram, Mysuru – 570 012
Ph: 0821-2512065 Email: mes@mahajana.edu.in

APPOINTMENT NOTIFICATION

Applications are invited for the following posts as shown below. **The posts are purely temporary.**

RVPB P.U. COLLEGE

POOJA BHAGAVAT MEMORIAL MAHAJANA EDUCATION CENTRE,
K.R.S. Road, Metagalli, Mysuru-16

Sl.No.	Name of the Post	No. of Post	Eligibility
1	Principal	01	Any PG degree from recognized University with a minimum of 55% aggregate marks and with - 5 years of Teaching/Administrative Experience in Science/Commerce College.

SBRR MAHAJANA FIRST GRADE COLLEGE (AUTONOMOUS)

Jayalakshmipuram, Mysuru-12

Sl. No.	Subjects	No. of Post	Post Vacant (Designation)	Eligibility
1	BCA	03	Asst. Professor (Full Time)	The minimum qualification for the post of Assistant Professor is Postgraduate degree in MCA/B.E., M.Tech from any recognized university in the concerned subject, with a minimum of 55% aggregate marks with NET/SLET/Ph.D and preferably having teaching experience in Degree Colleges.
2	Head of Facility Management	01	Full Time	• 5+ years experience in Facility Management & Administration • Qualification - Any Graduate / Post Graduate • Preference will be given to Ex-Army people
Good Salary as per Mahajana Education Society's rules				

Application along with supportive documents, Curriculum Vitae with a passport photograph mentioning therein the e-mail ID and contact phone number should be sent to **Hon.Secretary, Mahajana Education Society, Jayalakshmipuram, Mysuru-12,** so as to reach on or before 12-07-2023. The soft copy of the applications may be sent to **mes@mahajana.edu.in. For more details contact 0821-2414060.**

Sd/-
Dr. T. Vijayalakshmi Muralidhar
Hon. Secretary

Sd/-
Sri. T. Muralidhar Bhagavat
President

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 11.7.2023

ಬಂಡವಾಳ ಮಾರುಕಟ್ಟೆ ಕುರಿತ ಕಾರ್ಯಗಾರ



ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯವಹಾರ ನಿರ್ವಹಣಾ ವಿಭಾಗ ಹಾಗೂ ಐಕ್ಯೂಎಸಿ ಸಂಯುಕ್ತಾಶ್ರಯದಲ್ಲಿ ಬಂಡವಾಳ ಮಾರುಕಟ್ಟೆ ಕುರಿತು ಕಾರ್ಯಗಾರ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಜಸ್ಟ್ ನಿಫ್ಟಿ ಸಂಸ್ಥಾಪಕರಾದ ಪ್ರದೀಪ್, ಸಾಗರ್ ಹಾಗೂ ಮೋಹನ್‌ಕುಮಾರ್ ಪಾಲ್ಗೊಂಡಿದ್ದರು. ಈ ಕಾರ್ಯಗಾರವು ವಿದ್ಯಾರ್ಥಿಗಳಿಗೆ ಭಾರತದಲ್ಲಿ ಬಂಡವಾಳ ಮಾರುಕಟ್ಟೆಗಳ ಕಾರ್ಯನಿರ್ವಹಣೆ ಮತ್ತು ಮಹತ್ವದ ಬಗ್ಗೆ ಸಮಗ್ರ ತಿಳವಳಿಕೆಯನ್ನು ನೀಡಿತು. ಕಾರ್ಯಾಗಾರವು ಪ್ರಾಥಮಿಕ ಮತ್ತು ಮಾಧ್ಯಮಿಕ ಮಾರುಕಟ್ಟೆಗಳ ಸಮಗ್ರ ಅವಲೋಕನವನ್ನು ವಿದ್ಯಾರ್ಥಿಗಳಿಗೆ ಒದಗಿಸಿತು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ನಿರ್ವಹಣಾ ವಿಭಾಗದ ಡಾ.ಎಸ್. ಶೈಲಾ ಮೊದಲಾದವರು ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 11 ಜುಲೈ 2023

ಮಹಾಜನ ಕಾಲೇಜಿನಲ್ಲಿ ಬಂಡವಾಳ ಮಾರುಕಟ್ಟೆ ಕಾರ್ಯಾಗಾರ

ಮೈಸೂರು, ಜು. 10– ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯವಹಾರ ನಿರ್ವಹಣಾ ವಿಭಾಗ ಹಾಗೂ IQAC ಸಂಯುಕ್ತಾ ಶ್ರಯದಲ್ಲಿ ಬಂಡವಾಳ ಮಾರುಕಟ್ಟೆ ಕಾರ್ಯಾಗಾರ ನಡೆಯಿತು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಜಸ್ಟ್ ನಿಫ್ಟಿ ಸಂಸ್ಥಾಪಕರಾದ ಪ್ರದೀಪ್, ಸಾಗರ್ ಹಾಗೂ ಮೋಹನ್ ಕುಮಾರ್ ಆಗಮಿಸಿದ್ದರು. ಕಾರ್ಯಾಗಾರವು ವಿದ್ಯಾರ್ಥಿಗಳಿಗೆ ಭಾರತದಲ್ಲಿ ಬಂಡವಾಳ ಮಾರುಕಟ್ಟೆಗಳ ಕಾರ್ಯನಿರ್ವಹಣೆ ಮತ್ತು ಮಹತ್ವದ ಬಗ್ಗೆ ಸಮಗ್ರ ತಿಳಿವಳಿಕೆಯನ್ನು ನೀಡಿತು. ಕಾರ್ಯಾಗಾರವು ಪ್ರಾಥಮಿಕ ಮತ್ತು ಮಾಧ್ಯಮಿಕ ಮಾರುಕಟ್ಟೆಗಳ ಸಮಗ್ರ ಅವಲೋಕನವನ್ನು ವಿದ್ಯಾರ್ಥಿಗಳಿಗೆ ಒದಗಿಸಿತು. ಕಾರ್ಯಕ್ರಮದಲ್ಲಿ ಮೂಲಭೂತ ವಿಶ್ಲೇಷಣಾ ವಿಧಾನವನ್ನು ಪರಿಚಯಿಸಲಾಯಿತು. ಇದು ಕಂಪನಿಯ



ಹಣಕಾಸು ಹೇಳಿಕೆಗಳು, ಉದ್ಯಮದ ಪ್ರವೃತ್ತಿಗಳು ಮತ್ತು ಅದರ ಆಂತರಿಕ ಮೌಲ್ಯವನ್ನು ಮಾಡಲು ಸ್ಥೂಲ ಆರ್ಥಿಕ ಅಂಶಗಳನ್ನು ವಿಶ್ಲೇಷಿಸುವುದನ್ನು ಒಳಗೊಂಡಿತ್ತು. ತಿಳುವಳಿಕೆಯುಳ್ಳ ಹೂಡಿಕೆ ಆಯ್ಕೆಗಳನ್ನು ಮಾಡಲು ಹಣಕಾಸಿನ ಅನುಪಾತಗಳು ಮತ್ತು ಪ್ರಮುಖ ಕಾರ್ಯಕ್ಷಮತೆ ಸೂಚಕಗಳನ್ನು ಹೇಗೆ ನಿರ್ಣಯಿಸುವುದು ಎಂಬುದನ್ನು ವಿದ್ಯಾರ್ಥಿಗಳು ಕಲಿತರು.

ಹೂಡಿಕೆ ತಂತ್ರಗಳು: ಭಾಗಮಹಿಸುವಿಕೆಗೆ ಮೌಲ್ಯ ಹೂಡಿಕೆ ಮತ್ತು ಆದಾಯ ಹೂಡಿಕೆಯಂತಹ ತಂತ್ರಗಳ ವ್ಯಾಪ್ತಿಯನ್ನು ಪರಿಚಯಿಸಲಾಯಿತು. ವೈಯಕ್ತಿಕ ಹೂಡಿಕೆ ವಿಧಾನವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವರನ್ನು ಪ್ರೋತ್ಸಾಹಿಸಲಾಯಿತು.

ಪೋರ್ಟ್ಫೋಲಿಯೊ ವೈವಿಧ್ಯೀಕರಣ: ಅಪಾಯವನ್ನು ಕಡಿಮೆ ಮಾಡಲು ಮತ್ತು ಆದಾಯವನ್ನು ಗರಿಷ್ಠಗೊಳಿಸಲು ಪೋರ್ಟ್ಫೋಲಿಯೊ ವೈವಿಧ್ಯೀಕರಣದ ಮಹತ್ವವನ್ನು ಕಾರ್ಯಾಗಾರವು ಒತ್ತಿ ಹೇಳಿತು. ವಿದ್ಯಾರ್ಥಿಗಳು ಆಸ್ತಿ ಹಂಚಿಕೆ, ವಲಯದ ವೈವಿಧ್ಯೀಕರಣ ಮತ್ತು ಸಮತೋಲಿತ ಹೂಡಿಕೆ ಬಂಡವಾಳದ ಪ್ರಾಮುಖ್ಯತೆಯ ಬಗ್ಗೆ ಕಲಿತರು.

ತಂತ್ರಜ್ಞಾನದ ಪಾತ್ರ: ಕಾರ್ಯಾಗಾರವು ಬಂಡವಾಳ ಮಾರುಕಟ್ಟೆಗಳ ಮೇಲೆ ತಂತ್ರಜ್ಞಾನದ ಪ್ರಭಾವವನ್ನು ಪರಿಶೋಧಿಸಿತು, ಡೌಸ್ ಥಿಯರಿ, ಅಪ್ಟ್ರೆಂಡ್, ಡೌನ್ಟ್ರೆಂಡ್, ಸೈಡ್ವೇಸ್ ಮತ್ತು ವ್ಯಾಪಾರ ಮತ್ತು ಹೂಡಿಕೆಗಾಗಿ ಡಿಜಿಟಲ್ ಪ್ಲಾಟ್ಫಾರ್ಮ್ಗಳ ವಿಷಯಗಳ ಕುರಿತು ಚರ್ಚಿಸಲಾಯಿತು.

ಪ್ರಾಂಶುಪಾಲರಾದ ಡಾ. ಬಿ ಆರ್ ಜಯಕುಮಾರಿ, ನಿರ್ವಹಣಾ ವಿಭಾಗದ ಡಾ. ಶೈಲಾ ಎಸ್, ವಿಭಾಗದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಸೋಮವಾರ, 17 ಜುಲೈ 2023

ಸಾಧನೆ ಮಾಡಲು ಗುರಿ, ಬದ್ಧತೆ ಮುಖ್ಯ: ಡಾ.ಆನಂದ್ ಅಭಿಮತ



ಮೈಸೂರು: ಸಾಧನೆ ಮಾಡಲು ದೃಢ ನಿರ್ಧಾರ, ಗುರಿ ಮತ್ತು ಬದ್ಧತೆ ಮುಖ್ಯ ಎಂದು ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಆನಂದ್ ತಿಳಿಸಿದರು. ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೀವನದಲ್ಲಿ ಸೋಲೇ ಗೆಲುವಿನ ಮೆಟ್ಟಿಲು. ಸ್ಪರ್ಧೆಯಲ್ಲಿ ಗೆದ್ದವರು ಇನ್ನೂ ಹೆಚ್ಚು ಸಾಧನೆ ಮಾಡಿ ಕಾಲೇಜಿಗೆ ಕೀರ್ತಿ ತರಬೇಕು. ಮಹಾಜನ ವಿದ್ಯಾಸಂಸ್ಥೆ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಲು ಸೂಕ್ತ ವೇದಿಕೆ ಒದಗಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ 25 ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಡೇರ್ ಡೆವಿಲ್ ಮುಸ್ತಫಾ ಖ್ಯಾತಿಯ ಶಿಶಿರ್ ಬೈಕಾಡಿ ಮಾತನಾಡಿದರು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ, ಅಧ್ಯಾಪಕ ಡಾ.ಎಚ್.ಆರ್.ತಿಮ್ಮೇಗೌಡ, ಪ್ರತಿಭಾ ವೇದಿಕೆಯ ಸಂಚಾಲಕರಾದ ನಾಗೇಶ್, ಹಂಸವೇಣಿ ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 16.7.2023

ಮಹಾಜನ ಕಾಲೇಜಿನಲ್ಲಿ ಪಠ್ಯಪುಸ್ತಕಗಳ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಶೈಕ್ಷಣಿಕ ಡೀನ್ ಡಾ. ಎಚ್. ಶ್ರೀಧರ ಅವರು ರಚಿಸಿರುವ ಇತಿಹಾಸ ಪಠ್ಯಪುಸ್ತಕಗಳನ್ನು ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕ ಪ್ರೊ.ಡಿ. ಆನಂದ್ ಬಿಡುಗಡೆಗೊಳಿಸಿದರು.

ಬಿ.ಎ ಪದವಿಯ ಇತಿಹಾಸ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹೊಸ ರಾಷ್ಟ್ರೀಯ ಶಿಕ್ಷಣ ಪಠ್ಯಕ್ರಮಕ್ಕೆ ಅನುಗುಣವಾಗಿ ರಚಿಸಿರುವ 2 ಪಠ್ಯಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು. ಮಹಾಜನ



ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ರಂಗಕರ್ಮಿ ಶಿಶಿರ ಬೈಕಾಡಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಮೊದಲಾದವರು ಇದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರ • ಜುಲೈ 16, 2023



ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಎಚ್.ಶ್ರೀಧರ ರಚಿಸಿರುವ ಇತಿಹಾಸ ಪಠ್ಯಪುಸ್ತಕಗಳಾದ 'ಹಿಸ್ಟರಿ ಆಫ್ ಮೆಡಿವಲ್ ಇಂಡಿಯಾ' ಹಾಗೂ 'ಇಂಡಿಯನ್ ನ್ಯಾಷನಲ್ ಮೂವ್‌ಮೆಂಟ್' ಕೃತಿಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ. ಆನಂದ್ ಬಿಡುಗಡೆ ಮಾಡಿದರು. ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ನಟ ಶಿಶಿರ ಬೈಕಾಡಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಇದ್ದರು

ಪ್ರಜಾವಾಣಿ
ಅತ್ಯಂತ ವಿಶ್ವಾರ್ಹ ಕನ್ನಡ ದಿನಪತ್ರಿಕೆ

ಮಂಗಳವಾರ • ಜುಲೈ 4, 2023

'ಜ್ಞಾನಕ್ಕಿಂತ ವಿವೇಕ ದೊಡ್ಡದು'

ಪ್ರಜಾವಾಣಿ ವಾರ್ತೆ

ಮೈಸೂರು: ಜ್ಞಾನಕ್ಕಿಂತ ವಿವೇಕ ದೊಡ್ಡದು. ಜ್ಞಾನವನ್ನು ನಿಯಂತ್ರಿಸದಿದ್ದರೆ ಅದೇ ಮನುಷ್ಯನನ್ನು ನಾಶ ಮಾಡುತ್ತದೆ ಎಂದು ಸಾಹಿತಿ ಮೈಸೂರು ಕೃಷ್ಣಮೂರ್ತಿ ಹೇಳಿದರು.

ನಗರದ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಸೋಮವಾರ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿದ್ದ ಒಂದು ದಿನದ ಅಂತರ ಕಾಲೇಜು ಮಟ್ಟದ ಸಾಹಿತ್ಯ ಕಮ್ಮಟವನ್ನು ಉದ್ಘಾಟಿಸಿ ಮಾತನಾಡಿದರು.

ಜಗತ್ತನ್ನು ರಾಕ್ಷಸಿ ಪ್ರವೃತ್ತಿಯಿಂದ ಉತ್ತಮ ಮನುಷ್ಯರಾಗಿ ಪರಿವರ್ತನೆ ಮಾಡುವುದಕ್ಕೆ ಇಂತಹ ಕಮ್ಮಟಗಳು ಸಹಕಾರಿ. ಆಧುನಿಕತೆ ಇಲ್ಲದ ಕಾಲದಲ್ಲಿ ಗಾಂಧಿ, ಬಸವ, ಬುದ್ಧ, ಅಕ್ಕ, ಏಸು ಎಲ್ಲರೂ ಮಾನವೀಯತೆಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟವರು. ಆದರೆ ವಿಜ್ಞಾನ ಕೊಟ್ಟ ಸಾಧನ ಸಲಕರಣೆಗಳಿಂದ ನಾವು ಮನುಷ್ಯತ್ವವನ್ನು ಕಳೆದುಕೊಳ್ಳುತ್ತಿದ್ದೇವೆ ಎಂದು ವಿಷಾದಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆಯನ್ನು, ಶಕ್ತಿಯನ್ನು ಗುರುತಿಸಿಕೊಳ್ಳಲು ಇಂತಹ ಕಮ್ಮಟಗಳು ಅತ್ಯಗತ್ಯ. ವಿದ್ಯಾರ್ಥಿಗಳು ತಮ್ಮ ಆಸಕ್ತ ವಿಷಯಗಳನ್ನು ಬರವಣಿಗೆಯಲ್ಲಿ ದಾಖಲಿಸಿಕೊಳ್ಳುವ ಕೆಲಸ ಮಾಡಿಕೊಳ್ಳಬೇಕು ಎಂದರು.

ಹೊಳೆಹೊನ್ನೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಪಿ. ಭಾರತಿದೇವಿ ಪ್ರಬಂಧ ರಚನೆಯ ವಿಧಾನವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ಸಣ್ಣಕಥಾ ರಚನಾ ವಿಧಾನದ ಕುರಿತು ಮೈಸೂರಿನ ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಪ್ರೊ. ಕೆ.ತಿಮ್ಮಯ್ಯ ಹಾಗೂ ಕವಿತೆ ರಚನೆ ಕುರಿತು ಪ್ರೊ. ಮೈಸೂರು ಕೃಷ್ಣಮೂರ್ತಿ ಮಾತನಾಡಿದರು. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಸಹಾಯಕ ಪ್ರಾಧ್ಯಾಪಕರಾದ ಡಾ. ವಿನೋದಮ್ಮ, ಎಂ. ಮನೋಜ್ ಕುಮಾರ್, ಸಿ.ಎಂ. ಕಿರಣ್ ಕುಮಾರ್, ಎಂ. ನಾಗೇಶ್ ಇದ್ದರು.

ಜೆ.ಎಸ್.ಎಸ್ ಮಹಿಳಾ ಕಾಲೇಜು, ಮಹಾರಾಣಿ ಮಹಿಳಾ ವಾಣಿಜ್ಯ ನಿರ್ವಹಣಾ ಕಾಲೇಜು, ನಟರಾಜ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಎಲ್ಲಾ ವಿಭಾಗಗಳ ಕನ್ನಡ ಭಾಷೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಎಸ್.ಬಿ.ಆರ್.ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಅಂತರ ಕಾಲೇಜು ಮಟ್ಟದ ಸಾಹಿತ್ಯ ಕಮ್ಮಟದ ಉದ್ಘಾಟನೆಯಲ್ಲಿ ಸಾಹಿತಿ ಮೈಸೂರು ಕೃಷ್ಣಮೂರ್ತಿ, ಪಿ.ಭಾರತಿದೇವಿ, ಪ್ರೊ.ಕೆ.ತಿಮ್ಮಯ್ಯ, ಡಾ. ಬಿ.ಆರ್. ಜಯಕುಮಾರಿ, ಸಹಾಯಕ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಇದ್ದರು

MFGE In the Eyes of the Press.....

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಗುರುವಾರ 27.7.2023

ಮಹಾಜನ ಕಾಲೇಜಿನಲ್ಲಿ ಕಾರ್ಗಿಲ್ ವಿಜಯ ದಿವಸ ಆಚರಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಗಿಲ್ ವಿಜಯ ದಿವಸ ಆಚರಣೆ ಅಂಗವಾಗಿ ನಿವೃತ್ತ ಸೈನಿಕರು ಹಾಗೂ ಮೈಸೂರು ಎಕ್ಸ್‌ಸರ್ವೀಸ್‌ಮೆನ್ ಮೂವ್‌ಮೆಂಟ್ ಸದಸ್ಯರು ಪಾಲ್ಗೊಂಡಿದ್ದರು.

ಎಸ್‌ಐ ವಿ. ಮಹೇಶ್, ಬಿರ್ಲ ಕಂಪನಿಯ ಮುಖ್ಯ ಸೆಕ್ಯೂರಿಟಿ ಆಫೀಸರ್ ಪ್ರಿನ್ಸ್, ಸೆಕ್ಯೂರಿಟಿ ಅಧಿಕಾರಿ ವಿವೇಕಾನಂದ, ರೈಲ್ವೆ ಇಲಾಖೆಯ ವಿಶ್ವನಾಥ್, ಮೈಸೂರು ಏರ್ ಪೋರ್ಟ್‌ನ ಎಸ್‌ಐ ಪುರುಷೋತ್ತಮ, ಟಿವಿಎಸ್ ಕಂಪನಿ ಸೆಕ್ಯೂರಿಟಿ ಅಧಿಕಾರಿ ಗಣೇಶ್, ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ಕಿಶೋರ್, ಮೈಸೂರು ಸೈನಿಕ್ ಅಕಾಡೆಮಿಯ ಶ್ರೀಧರ್, ಸೆಕ್ಯೂರಿಟಿ ಆಫೀಸರ್ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಮಿಥ್ಸನ್ ಪಾಲ್ಗೊಂಡಿದ್ದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಮೇಜರ್ ಬಿ.ಆರ್. ನಿಖಿಲ್, ಕ್ಯಾಪ್ಟನ್ ಡಾ.ಎಂ.ಆರ್. ಇಂದ್ರಾಣಿ, ಅಧ್ಯಾಪಕ, ಅಧ್ಯಾಪಕೇತರರು ಹಾಗೂ ಎನ್‌ಸಿಸಿ ಕೆಡೆಟ್‌ಗಳು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 7.7.2023

ಮಹಾಜನ ಕಾಲೇಜಿನಲ್ಲಿ ಡಾ.ಕಿರಣ್ ಬೇಡಿ ವರ್ಚುವಲ್ ಸಂವಾದ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಭಾರತದ ಮೊದಲ ಮಹಿಳಾ ಐಪಿಎಸ್ ಅಧಿಕಾರಿ ಡಾ.ಕಿರಣ್‌ಬೇಡಿ ವರ್ಚುವಲ್ ಮೂಲಕ ಪಾಲ್ಗೊಂಡು ಮಾತನಾಡಿದರು.

ಕಾಲೇಜಿನ ಎವಿಸಿ-3 ಸಭಾಂಗಣದಲ್ಲಿ ವಿದ್ಯಾರ್ಥಿ ಸಂಸತ್ತು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಹಾಗೂ ಐಕ್ಯೂಎಸ್ಸಿ ಸಂಯುಕ್ತ ಆಶ್ರಯದಲ್ಲಿ ಸಂವಾದ ಆಯೋಜಿಸಲಾಗಿತ್ತು.

ಬಳಿಕ ಮಾತನಾಡಿದ ಅವರು, ಭಾರತ ಇತ್ತೀಚಿನ ವರ್ಷಗಳಲ್ಲಿ ಉತ್ತಮ ಆಡಳಿತ ಉತ್ತೇಜಿಸುವಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಕಾನೂನಿನ ನಿಯಮವನ್ನು ಸುಧಾರಿಸುವ ಗುರಿ



ಹೊಂದಲು ಹಲವು ಉಪಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಮಹಿಳೆಯರಿಗೆ ಶಿಕ್ಷಣ ಮತ್ತು ಆರೋಗ್ಯ ಸುಧಾರಿಸುವ ಕುರಿತು ಮಾಹಿತಿ ನೀಡಲಾಯಿತು.

ಇಂದಿನ ಯುವ ಸಮೂಹ ಉತ್ತಮ ಬದುಕು ಕಟ್ಟಿಕೊಳ್ಳಬೇಕು. ಶಿಕ್ಷಣವು ವ್ಯಕ್ತಿಯ ಜೀವನದ ಅನುಭವವನ್ನು ಸಮೃದ್ಧಗೊಳಿಸುತ್ತದೆ. ಗ್ರೀಕ್ ತತ್ವಜ್ಞಾನಿ ಹೆರಾಕ್ಲಿಟಸ್‌ನ ಆಲೋಚನೆಗಳನ್ನು ತಿಳಿಸಿದರು.

ಡಾ.ಕಿರಣ್ ಬೇಡಿ ಅವರು ಮುಂದಿನ ಪೀಳಿಗೆಯ ಹೆಣ್ಣು ಮಕ್ಕಳು ಕಾನೂನು ಸುವ್ಯವಸ್ಥೆ ಕಾಪಾಡುವ ಪೊಲೀಸ್ ಕೆಲಸಕ್ಕೆ ತೊಡಗಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ, ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಶೈಕ್ಷಣಿಕ ಸಲಹೆಗಾರ ಡಾ.ಎಚ್. ಶ್ರೀಧರ್, ಶೈಕ್ಷಣಿಕ ಡೀನ್ ಡಾ.ಎಚ್. ಆರ್. ತಿಮ್ಮೇಗೌಡ, ಎಂ.ಆರ್. ಇಂದ್ರಾಣಿ ಮೊದಲಾದವರು ಇದ್ದರು.

ಆರೋಗ್ಯ
ದಿನಪತ್ರಿಕೆ

ಭಾನುವಾರ, 9 ಜುಲೈ 2023

ಹಳ್ಳಿಯ ಜನರಲ್ಲೂ ಸಕ್ಕರೆ ಕಾಯಿಲೆ ಹೆಚ್ಚಾಗುತ್ತಿದೆ: ಡಾ.ಲಕ್ಷ್ಮೀಗೌಡ

ಮಹಾಜನ ಕಾಲೇಜಿನಲ್ಲಿ ವಾರದ ಸಮಾವೇಶ

ಮೈಸೂರು: ಒತ್ತಡದ ಬದುಕಿನಿಂದಾಗಿ ಇಂದು ಹಳ್ಳಿಯ ಜನರಲ್ಲೂ ಸಕ್ಕರೆ ಕಾಯಿಲೆ ಹೆಚ್ಚಾಗುತ್ತಿದೆ, ಎಂದು ನಿವೃತ್ತ ವೈದ್ಯ ಡಾ. ಲಕ್ಷ್ಮೀಗೌಡ ಹೇಳಿದರು.

ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ವಾರದ ಸಮಾವೇಶದಲ್ಲಿ ಮಾತನಾಡಿದ ಅವರು, ಇಂದು ಹದಿಹರೆಯದ ವಯಸ್ಸಿನಲ್ಲೇ ಕಾಯಿಲೆಯಿಂದ ಬಳಲುವ ಪರಿಸ್ಥಿತಿ ಹೆಚ್ಚಾಗುತ್ತಿದೆ. ಹಾಗಾಗಿ ಆರೋಗ್ಯ ಎಲ್ಲರಿಗೂ ತುಂಬಾ ಮುಖ್ಯ. ವಿದ್ಯಾರ್ಥಿಗಳು ತಮ್ಮ ಆರೋಗ್ಯದ ಕಡೆ ನಿಗಾವಹಿಸಿ ವ್ಯಾಯಾಮ, ಯೋಗ ಮುಂತಾದ ವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಹೃದಯ ಮತ್ತು ಶ್ವಾಸಕೋಶಗಳ ಶಕ್ತಿಯನ್ನು ಹೆಚ್ಚಿಸಿ ಕೊಳ್ಳಬೇಕು ಎಂದರು.



ಇದೇ ವೇಳೆ ನಿವೃತ್ತ ವೈದ್ಯ ಡಾ.ಲಕ್ಷ್ಮೀಗೌಡ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯ ಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಶೈಕ್ಷಣಿಕ ಡೀನ್ ಡಾ. ಎಚ್.ಶ್ರೀಧರ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ವೈದ್ಯ ಡಾ.ಲಕ್ಷ್ಮೀಗೌಡ ಅವರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಸಿಇಒ ಡಾ.ಎಸ್. ಆರ್.ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ ಇತರರು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 9.7.2023

ಉತ್ತಮ ಆರೋಗ್ಯವಿದ್ದರೆ ಯಶಸ್ಸು ಗಳಿಸಲು ಸಾಧ್ಯ

ನಿವೃತ್ತ ಪ್ರಾಧ್ಯಾಪಕ ಡಾ. ಲಕ್ಷ್ಮೇಗೌಡ ಅಭಿಮತ | ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಸಮಾವೇಶ

• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿ ಜೀವನ ಅಮೂಲ್ಯವಾದದ್ದು, ಉತ್ತಮ ಆರೋಗ್ಯವಿದ್ದರೆ ಯಶಸ್ಸು ಗಳಿಸಲು ಸಾಧ್ಯ ಎಂದು ಕೆ. ಆರ್. ಆಸ್ಪತ್ರೆಯ ಮೆಡಿಸಿನ್ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಲಕ್ಷ್ಮೇಗೌಡ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಮಾತನಾಡಿದ ಅವರು, ಆರೋಗ್ಯ ಎಲ್ಲರಿಗೂ ತುಂಬಾ ಮುಖ್ಯ. ವಿದ್ಯಾರ್ಥಿಗಳು ತಮ್ಮ ಆರೋಗ್ಯದ ಕಡೆ ನಿಗಾವಹಿಸಿ ವ್ಯಾಯಾಮ, ಯೋಗ ಮುಂತಾದುವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಹೃದಯ ಮತ್ತು ಶ್ವಾಸಕೋಶಗಳ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು ಎಂದರು. ದುಷ್ಚಟಗಳಿಂದ ಹಾಗೂ ಜಂಕ್ ಫುಡ್‌ನಿಂದ ದೂರ ಇರಿ. ಇಂದು ಹಳ್ಳಿಯ ಜನರಿಗೆ ಒತ್ತಡದಿಂದಾಗಿ ಸಕ್ಕರೆ



ಕಾಯಿಲೆ ಹೆಚ್ಚಾಗುತ್ತಿದೆ. ಹದಿಹರೆಯದ ವಯಸ್ಸಿನಲ್ಲೇ ಕಾಯಿಲೆಯಿಂದ ಬಳಲುವ ಪರಿಸ್ಥಿತಿ ಹೆಚ್ಚಾಗುತ್ತಿದೆ. ಆದ್ದರಿಂದ ಮನೆ ಊಟ, ಆರೋಗ್ಯದ ಬಗ್ಗೆ ಎಚ್ಚರವಹಿಸಿ ನಿಮ್ಮ ಕನಸುಗಳನ್ನು ಈಡೇರಿಸಿಕೊಳ್ಳಿ ಎಂದು ಅವರು ಕಿವಿಮಾತು ಹೇಳಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಮೊದಲಾದವರು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 11 ಜುಲೈ 2023



ಮೈಸೂರಿನ ಮಹಾಜನ ಕಾಲೇಜು ಮತ್ತು ಕನ್ನಡ ವಿಭಾಗದ ವತಿಯಿಂದ ಇತ್ತೀಚೆಗಷ್ಟೆ ನಿವೃತ್ತರಾದ ಡಾ. ಲಕ್ಷ್ಮೀಗೌಡರನ್ನು ಸನ್ಮಾನಿಸಲಾಯಿತು. ಈ ವೇಳೆ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಪ್ರಾಂಶುಪಾಲೆ ಡಾ. ಬಿ. ಆರ್. ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರ ಡಾ. ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ. ಎಚ್. ಶ್ರೀಧರ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಆಂದೋಲನ
ದಿನ ಪತ್ರಿಕೆ

ಶನಿವಾರ, 15 ಜುಲೈ 2023

ಜುಲೈ 17, 18ರಂದು ರಾಷ್ಟ್ರಮಟ್ಟದ ಮಹಾಮ್ ಫೆಸ್ಟ್

ಮೈಸೂರು:ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಜು.17 ಮತ್ತು 18ರಂದು ರಾಷ್ಟ್ರಮಟ್ಟದ ಮಹಾಮ್-2023 ಫೆಸ್ಟ್‌ನ್ನು ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಬೆಳಿಗ್ಗೆ 9.30ಕ್ಕೆ ನಡೆಯುವ ಫೆಸ್ಟ್ ಅನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ಸಿಐಐ ಮೈಸೂರು ಅಧ್ಯಕ್ಷ ಸ್ಯಾಮ್ ಚೆರಿಯನ್ ಉದ್ಘಾಟಿಸಲಿದ್ದಾರೆ. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಹಾಗೂ ಗೌರವ ಕಾರ್ಯದರ್ಶಿ ಡಾ.ಟಿ.ಜಯಲಕ್ಷ್ಮೀ ಮುರಳೀಧರ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರರು ಮತ್ತು ಕಾರ್ಯನಿರ್ವಹಣಾಧಿಕಾರಿ ಡಾ.ಎಸ್. ಆರ್.ರಮೇಶ್, ಮಹಾಮ್-2023 ಫೆಸ್ಟ್‌ನ ಸಂಚಾಲಕ ಡಾ.ಎಚ್.ಆರ್.ತಿಮ್ಮೇಗೌಡ ಅವರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

MFGE In the Eyes of the Press.....

ಅಂಚೋಲನ
ದಿನ ಪತ್ರಿಕೆ

ಮಂಗಳವಾರ, 18 ಜುಲೈ 2023

ಮಹಾಜನದಲ್ಲಿ 'ಮಹಮ್-2023' ರಾಷ್ಟ್ರೀಯ ಫೆಸ್ಟ್

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಮಾಜಿ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಹಮ್-2023' ರಾಷ್ಟ್ರೀಯ ಫೆಸ್ಟ್ ಸಮಾರಂಭವನ್ನು ಸಿಐಐ ಮೈಸೂರು ಮುಖ್ಯಸ್ಥ ಸ್ಯಾಮ್ ಚೆರಿಯನ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮಹಾಜನ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ಬಹುತೇಕ ವಿದ್ಯಾರ್ಥಿಗಳು ಪ್ರತಿಕ್ಷೇತ್ರದಲ್ಲೂ ಸಾಧಕರಾಗಿ ಭಾರತ ಹಾಗೂ ವಿಶ್ವದೆಲ್ಲೆಡೆ ಇದ್ದಾರೆ. ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಸಾಧಿಸಬೇಕಾದರೆ ಜವಾಬ್ದಾರಿ, ಆಸಕ್ತಿ ಮತ್ತು ಉತ್ಸಾಹ ಹಾಗೂ ಸಾಧಿಸುವ ಮನಸ್ಥಿತಿ ಹೊಂದಿರಬೇಕು. ಜವಾಬ್ದಾರಿ ಇದ್ದರೆ ಯಾವ ಸೋಲೂ ಸುಳಿಯುವುದಿಲ್ಲ. ವಿದ್ಯಾರ್ಥಿಗಳು ಸದಾ ಮನದಲ್ಲಿ ತಮ್ಮ ಉದ್ದೇಶದ ಬಗ್ಗೆ ಜಾಗೃತರಾಗಿರಬೇಕು. ಅಲ್ಲದೆ, ಬದ್ಧತೆ ಮತ್ತು ಪರಿಶ್ರಮವನ್ನು ತಮ್ಮ ಕೆಲಸದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಯೂ ಜವಾಬ್ದಾರಿ ಇರುವಂತಹ ಒಬ್ಬ ನಾಯಕನಾಗಿರುತ್ತಾನೆ. ಯುವ ಜನಾಂಗ, ತಮ್ಮ ಅಮೂಲ್ಯವಾದ



ಸಮಯವನ್ನು ಹಾಳು ಮಾಡಿಕೊಳ್ಳದೆ, ಅವರ ಆಸಕ್ತಿಗೆ ಅನುಗುಣವಾಗಿ ವ್ಯಾಸಂಗ ಮಾಡಿ ಗುರಿಯ ಕಡೆಗೆ ದೃಢವಾಗಿ ಹೆಜ್ಜೆ ಇರಿಸಬೇಕು ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರಸ್ತುತ ವಿದ್ಯಮಾನಗಳ ಕುರಿತು ಪರಿಣತಿ ಹೊಂದುತ್ತಿರಬೇಕು ಹಾಗೂ ಸಂಘಟಿತ ಮತ್ತು ರಚನಾತ್ಮಕ ಜೀವನವನ್ನು ಅಳವಡಿಸಿಕೊಳ್ಳಬೇಕು. ಯಶಸ್ಸಿಗೆ ವಯಸ್ಸು ಮತ್ತು ಸಮಯದ ಮಿತಿಯಿಲ್ಲ, 'ಮಹಾಜನ ವಿದ್ಯಾಸಂಸ್ಥೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾದ ಕಲೆ ಮತ್ತು ಸಾಂಸ್ಕೃತಿಕ ಪ್ರತಿಭೆಯ ಅನಾವರಣಕ್ಕೆ ಸೂಕ್ತ ವೇದಿಕೆಯನ್ನು ಹಿಂದಿನಿಂದಲೂ ಕಲ್ಪಿಸಿಕೊಡುತ್ತಿದೆ. ಹೀಗಾಗಿ ವಿದ್ಯಾಸಂಸ್ಥೆಯಲ್ಲಿ ಕಲಿತ ಹಲವರು ಬೇರೆ ಬೇರೆ ಕ್ಷೇತ್ರಗಳಲ್ಲಿ ತಮ್ಮದೇ ಆದ ಸಾಧನೆ ಮಾಡಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಚ್.ಆರ್.ತಿಮ್ಮೇಗೌಡ, ವಿದ್ಯಾರ್ಥಿ ಸಂಯೋಜಕ ದೀಕ್ಷಿತ್ ಭೂಮಿಕಾ, ಜೋಸ್ ಮತ್ತು ಸೃಷ್ಟಿ ಜೋಯಿಸ್, ವಿವಿಧ ಕಾಲೇಜುಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 4.7.2023

ಇಂದು ಮಹಾಜನ ಕಾಲೇಜಿನಲ್ಲಿ ಉದ್ಯೋಗ ಮೇಳ

ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಮಟ್ಟದ ಅಂತರ ಕಾಲೇಜು ಮಹಾಮ್ 2023 ಫೆಸ್ಟ್ ಅಂಗವಾಗಿ ಜು.4 ರಂದು ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಐಸಿಐಸಿಐ, ಆಕ್ಸಿಸ್, ಕೊಟಕ್ ಮಹೀಂದ್ರ ಬ್ಯಾಂಕ್ ಗಳು, ಸ್ಯೆಂಟ್ ಗೋಬೈನ್, ವಿಸ್ಟಾಮ್, ಕ್ವೇಸ್, ಬಿಗ್ ಬಾಸ್ಕೆಟ್, ಲೆನ್ಸ್‌ಕಾರ್ಟ್, ನೆಕ್ಸ್ಟ್, ಕ್ಲೀನ್ ಫಾನಟಿಕ್ಸ್, ಗ್ರೀಟ್ ಟೆಕ್ನಾಲಜೀಸ್, ವಿ-ಟೆಕ್, ಸಿಂಬಾ ಗ್ರೂಪ್, ಗ್ರಾಸ್‌ರೂಟ್ಸ್ ಅಂಡ್ ಕಾಸಾ ಗ್ರಾಂಡ್ ಸೇರಿದಂತೆ 17 ಕಂಪನಿಗಳು ಉದ್ಯೋಗಾಂಕ್ಷಿಗಳಿಗೆ ಅವಕಾಶ ನೀಡಲಿವೆ. ಈ ಉದ್ಯೋಗ ಮೇಳವು ಬಿಎ, ಬಿಕಾಂ, ಬಿಎಸ್ಸಿ, ಬಿಸಿಎ, ಬಿಬಿಎ, ಎಂಎಸ್ಸಿ, ಎಂಕಾಂ ಮತ್ತು ಎಂಎಸ್‌ಸಿ ವಿದ್ಯಾರ್ಥಿ ಗಳಿಗೆ ವಿವಿಧ ಹುದ್ದೆಗಳ ಅವಕಾಶ ನೀಡಲಿವೆ. ಈವರೆಗೂ 700 ಉದ್ಯೋಗಾಂಕ್ಷಿಗಳು ತಮ್ಮ ಹೆಸರನ್ನು ನೋಂದಾ ಯಿಸಿಕೊಂಡಿದ್ದು, ಸ್ಥಳದಲ್ಲೇ ಹೆಸರು ನೋಂದಾಯಿಸಿ ಕೊಳ್ಳುವ ಅವಕಾಶ ಕಲ್ಪಿಸಲಾ ಗಿದೆ. ಆಸಕ್ತರು ಮೊ. 81978 89596 ಕರೆ ಮಾಡಿ ಹೆಚ್ಚಿನ ಮಾಹಿತಿ ಪಡೆದು ಕೊಳ್ಳಬಹುದಾಗಿದೆ. ಈ ಉದ್ಯೋಗ ಮೇಳದಲ್ಲಿ ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ. ವಿಜಯ ಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಮಹಾಮ್ ಸಂಚಾಲಕ ಡಾ.ಎಚ್.ಆರ್. ತಿಮ್ಮೇಗೌಡ ಉಪಸ್ಥಿತರಿರುವರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 5.7.2023

ಮೌಲ್ಯಾಧಾರಿತ ಶಿಕ್ಷಣದ ಜತೆ ಆರ್ಥಿಕ ಸ್ವಾವಲಂಬನೆ

ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್ ಅಭಿಮತ | ಮಹಾಜನ ಕಾಲೇಜಿನಲ್ಲಿ ಉದ್ಯೋಗ ಮೇಳ ಉದ್ಘಾಟನೆ

• ಕನ್ನಡಪ್ರಭ ವಾರ್ತೆ ಮೈಸೂರು

ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣದ ಜೊತೆಗೆ ಆರ್ಥಿಕ ಸ್ವಾವಲಂಬನೆಗೆ ಒತ್ತು ನೀಡಿ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್ ತಿಳಿಸಿದರು.

ನಗರದಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಮಟ್ಟದ ಅಂತರ ಕಾಲೇಜು ಮಹಾಮ್ 2023 ಫೆಸ್ಟ್ ಆಂಗವಾಗಿ ಮಂಗಳವಾರ ಆಯೋಜಿಸಿದ್ದ ಉದ್ಯೋಗ ಮೇಳವನ್ನು ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾಯತ್ತತೆಯ ಬಗ್ಗೆ ಯುವಜನತೆಗೆ ತಪ್ಪು ಗ್ರಹಿಕೆ ಇದೆ. ಸ್ವಾಯತ್ತ ಕಾಲೇಜಿಗೆ ಪಠ್ಯ ಸುಧಾರಣಾ ಸ್ವಾತಂತ್ರ್ಯದ ಜೊತೆಗೆ ಹಲವು ಪ್ರಯೋಜನಗಳು ಇವೆ ಎಂದು ಹೇಳಿದರು. ಶೇ.75 ಹಾಜರಾತಿ ಕಡ್ಡಾಯವಿರುವುದು ಸಹ ಶಿಕ್ಷಿನ ಸಂಕೇತ. ಕಾಲೇಜು ಶಿಕ್ಷಣ ಪಡೆದ ಪ್ರತಿಯೊಬ್ಬರಿಗೂ ಉದ್ಯೋಗದ ಅವಕಾಶವನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಇಂತಹ ಉದ್ಯೋಗ ಮೇಳವು ಹೆಚ್ಚು ಪ್ರಯೋಜನಕಾರಿ. ಯುವಜನತೆ ಹೊಸ ತಂತ್ರಜ್ಞಾನವನ್ನು ಅರಿತು ಸಮಾಜದ ಏಳಿಗೆಗೆ ಪರಿಶ್ರಮದಿಂದ ದುಡಿಯಬೇಕು ಎಂದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ಉದ್ಯೋಗ ಮೇಳವನ್ನು ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್ ಉದ್ಘಾಟಿಸಿದರು.

ಈ ಉದ್ಯೋಗ ಮೇಳದಲ್ಲಿ ಐಸಿಐಸಿಐ, ಆಕ್ಸಿಸ್, ಕೊಟಕ್ ಮಹೀಂದ್ರ ಬ್ಯಾಂಕ್‌ಗಳು, ಸೈಂಟ್ ಗೋಬೈನ್, ವಿಸ್ಟಾಮ್, ಬಿಗ್ ಬಾಸ್ಕೆಟ್, ಲೆನ್ಸ್‌ಕಾರ್ಟ್, ಯುನಿಕ್ಸ್ಸ್, ಕ್ಲೀನ್ ಫಾನಟಕ್ಸ್, ಗ್ರೀಟ್ ಟೆಕ್ನಾಲಜೀಸ್, ವಿ-ಟೆಕ್, ಸಿಂಬಾ ಗ್ರೂಪ್, ಗ್ಯಾಸ್ ರೂಟ್ಸ್, ಕಾಸಾ ಗ್ರಾಂಡ್, ಮಹಾಲಕ್ಷ್ಮೀ ಸ್ವೀಟ್ಸ್ ಸೇರಿದಂತೆ 16 ಕಂಪನಿಗಳು ಭಾಗವಹಿಸಿ, ಅಂತಿಮ ವರ್ಷದ ಬಿಎ, ಬಿಕಾಂ, ಬಿಎಸ್ಸಿ, ಬಿಸಿಎ, ಬಿಬಿಎ, ಎಂಎಸ್ಸಿ, ಎಂಕಾಂ ಮತ್ತು ಎಂಸಿಎ ವಿದ್ಯಾರ್ಥಿಗಳಿಗೆ ವಿವಿಧ ಹುದ್ದೆಗಳಿಗೆ ಸಂದರ್ಶನ ನಡೆಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಮಹಾಜನ ಸ್ನಾತಕೋತ್ತರ ಕೇಂದ್ರದ ಪ್ರಭಾರ ನಿರ್ದೇಶಕ ಪ್ರೊ. ಹರೀಶ್ ಮಾಚಯ್ಯ ಕೋದಂಡೇರ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಮಹಾಮ್ 2023ರ ಅಧ್ಯಾಪಕ ಸಂಯೋಜಕ ಡಾ.ಎಚ್.ಆರ್. ತಿಮ್ಮೇಗೌಡ ಇದ್ದರು. ಕೆರಿಯರ್ ಗೈಡನ್ಸ್ ಅಂಡ್ ಪ್ಲೇಸ್‌ಮೆಂಟ್ ಸೆಲ್‌ನ ಸಂಚಾಲಕಿ ಎಚ್.ಎಲ್. ಸೌಮ್ಯ ಸ್ವಾಗತಿಸಿದರು. ವಿದ್ಯಾರ್ಥಿನಿ ಅರ್ಚನಾ ಹೆಗಡೆ ಪ್ರಾರ್ಥಿಸಿದರು. ಭೂಮಿಕಾ ಜೋಯಿಸ್ ನಿರೂಪಿಸಿದರು. ಶಶಾಂಕ್ ವಂದಿಸಿದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 5 ಜುಲೈ 2023

ಮಹಾಜನ ಕಾಲೇಜಲ್ಲಿ ಯಶಸ್ವಿ ಉದ್ಯೋಗ ಮೇಳ

ನೋಂದಾಯಿಸಿಕೊಂಡ 600 ಜನರಲ್ಲಿ 450 ಮಂದಿ ಸಂದರ್ಶನಕ್ಕೆ ಹಾಜರು

ಮೈಸೂರು, ಜು. 4– ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಮಟ್ಟದ ಅಂತರ ಕಾಲೇಜು ಮಹಾಮೇ 2023 ಫೆಸ್ಟ್ ಅಂಗವಾಗಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳವನ್ನು ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಈವರೆಗೂ 600ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದು, 450ಕ್ಕೂ ಹೆಚ್ಚು ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಿರುವುದು ಸಂತಸದ ಸಂಗತಿ. ಮಹಾಜನ ವಿದ್ಯಾಸಂಸ್ಥೆ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣದ ಜೊತೆಗೆ ಆರ್ಥಿಕ ಸ್ವಾವಲಂಬನೆಗೂ ಇಂತಹ ಉದ್ಯೋಗ ಮೇಳವನ್ನು ಆಯೋಜಿಸಿರುವುದು ಅದರ ಸಾಮಾಜಿಕ ಬದ್ಧತೆ ಹಾಗೂ ಸಾಂಸ್ಥಿತಿಕ ನಾಯಕತ್ವವನ್ನು ಪ್ರತಿಬಿಂಬಿಸುತ್ತದೆ. ಮಹಾಜನ ಕಾಲೇಜು



ಶಿಕ್ಷಣ ಪಡೆದ ಪ್ರತಿಯೊಬ್ಬರಿಗೂ ಉದ್ಯೋಗದ ಅವಕಾಶವನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಇಂತಹ ಉದ್ಯೋಗ ಮೇಳವು ಹೆಚ್ಚು ಪ್ರಯೋಜನಕಾರಿ. ಯುವಜನತೆ ಹೊಸ ತಂತ್ರಜ್ಞಾನವನ್ನು ಅರಿತು ಸಮಾಜದ ಏಳಿಗೆಗೆ ಪರಿಶ್ರಮದಿಂದ ದುಡಿಯಬೇಕು ಎಂದರು. ಇಂದಿನ ಉದ್ಯೋಗ ಮೇಳದಲ್ಲಿ ಪ್ರತಿಷ್ಠಿತ ಕಂಪನಿಗಳಾದ ICICI, AXIS, Kotak Mahindra ಬ್ಯಾಂಕುಗಳು, Saint Gobain, Wistron, Big Basket, Lenskart, UNEXT, Clean Fanatics, Greet Technologies, We-Technology, Simba Group, Grassroots, CASA Grand, Mahalakshmi Sweets and Infopine ನಂತಹ ಸುಮಾರು 16 ಕಂಪನಿಗಳು ಅಂತಿಮ ವರ್ಷದ ಬಿಎ, ಬಕಾಂ, ಬಎಸ್ಸಿ, ಬಸಿಎ, ಬಬಿಎ, ಎಂಎಸ್ಸಿ, ಎಂಕಾಂ ಮತ್ತು ಎಂಸಿಎ ವಿದ್ಯಾರ್ಥಿಗಳಿಗೆ Relationship Manager, Assistant Manager, Back Office Executive, Telecalling Executive, HR Recruiter, Branch Relationship Executives, Business Development Executive ಹುದ್ದೆಗಳಿಗೆ ವಿವಿಧ ಕಂಪನಿಗಳ ಪಾಲುದಾರರು, HR ಮ್ಯಾನೇಜರ್‌ಗಳು ಅಭ್ಯರ್ಥಿಗಳಿಗೆ ಸಂದರ್ಶನ ನಡೆಸಿದರು. ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಮಹಾಜನ ಸ್ನಾತಕೋತ್ತರ ಕೇಂದ್ರದ ಪ್ರಭಾರ ನಿರ್ದೇಶಕ ಪ್ರೊ. ಹರೀಶ್ ಮಾಚಯ್ಯ ಕೋದಂಡೇರ, ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಮಹಾಮೇ 2023ರ ಅಧ್ಯಾಪಕ ಸಂಯೋಜಕ ಡಾ. ಎಚ್.ಆರ್. ತಿಮ್ಮೇಗೌಡ ಹಾಗೂ ಕೆರಿಯರ್ ಗೈಡೆನ್ಸ್ & ಪ್ಲೇಸ್‌ಮೆಂಟ್ ಸೆಲ್‌ನ ಸಂಚಾಲಕರಾದ ಸೌಮ್ಯ ಹೆಚ್.ಎಲ್. ಉಪಸ್ಥಿತರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 15.7.2023

17, 18ರಂದು ಮಹಾಜನ ಕಾಲೇಜಲ್ಲಿ ಮಹಮ್ ಫೆಸ್ಟ್

ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಮಟ್ಟದ ಮಹಾಮ್ 2023 ಫೆಸ್ಟ್ ಅನ್ನು ಜು.17 ಮತ್ತು 18 ರಂದು ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಜು.17ರ ಬೆಳಗ್ಗೆ 9.30ಕ್ಕೆ ಈ ಫೆಸ್ಟ್ ಅನ್ನು ಶಾಸಕ ಜಿ.ಡಿ. ಹರೀಶ್‌ಗೌಡ, ಸಿಐಐ ವ್ಯವಸ್ಥಾಪಕ ನಿರ್ದೇಶಕ ಸ್ಯಾಮ್ ಚೆರಿಯನ್ ಉದ್ಘಾಟಿಸುವರು. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಡಾ. ಎಸ್. ಆರ್. ರಮೇಶ್ ಹಾಗೂ ಮಹಮ್ ಸಂಚಾಲಕ ಡಾ. ಎಚ್.ಆರ್. ತಿಮ್ಮೇಗೌಡ ಉಪಸ್ಥಿತರಿರುತ್ತಾರೆ. ಎರಡು ದಿನ ವಿವಿಧ ಸ್ಪರ್ಧೆಗಳು ನಡೆಯಲಿದ್ದು, ಸಂಜೆ ನಡೆಯುವ ಸಾಂಸ್ಕೃತಿಕ ಹಬ್ಬಕ್ಕೆ ಕನ್ನಡ ಚಲನ ಚಿತ್ರ ಗಾಯಕರಾದ ಅಲೋಕ್, ಚೇತನ್ ನಾಯಕ್, ಜೋಯಿಸ್, ಆಲಾಪ್, ಕನ್ನಡ ಚಲನಚಿತ್ರ ನಟ ಧನ್ ವೀರ್, ಕೆ.ಪಿ. ಅರವಿಂದ್, ದೀಪಿಕಾ ದಾಸ್, ಮಯೂರಿ, ದಿವ್ಯ ಉರುಡುಗ, ನಿರಂಜನ್ ದೇಶಪಾಂಡೆ, ನಿರೂಪಕಿ ಶ್ರೇಯಾ ಬಾಬು ಮೊದಲಾದವರು ಪಾಲ್ಗೊಳ್ಳಲಿರುವರು ಎಂದು ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ತಿಳಿಸಿದ್ದಾರೆ.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 18.7.2023

ಕಿವಿಮಾತು ವಿದ್ಯಾರ್ಥಿಗಳಿಗೆ ಸಿಐಐ ನಿರ್ದೇಶಕ ಸ್ಯಾಮ್ ಚೆರಿಯನ್ ಸಲಹೆ | ಮಹಮ್-2023 ರಾಷ್ಟ್ರೀಯ ಫೆಸ್ಟ್ ಉದ್ಘಾಟನೆ

ಜೀವನದಲ್ಲಿ ಯಶಸ್ಸು ಸಾಧಿಸಲು ಆಸಕ್ತಿ, ಉತ್ಸಾಹ ಮುಖ್ಯ

• ಕನ್ನಡಪ್ರಭ ವಾರ್ತೆ ಮೈಸೂರು

ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ಜವಾಬ್ದಾರಿ, ಆಸಕ್ತಿ ಮತ್ತು ಉತ್ಸಾಹ ಹಾಗೂ ಸಾಧಿಸುವ ಮನಸ್ಥಿತಿ ಹೊಂದಿರಬೇಕು ಎಂದು ಉದ್ಯಮಿ, ಸಿಐಐ ನಿರ್ದೇಶಕ ಸ್ಯಾಮ್‌ಚೆರಿಯನ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಪ್ರತಿಷ್ಠಿತ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಿದ್ದ ಮಹಮ್-2023 ರಾಷ್ಟ್ರೀಯ ಫೆಸ್ಟ್ ಉದ್ಘಾಟಿಸಿ ಅವರು ಮಾತನಾಡಿದರು.

ಈ ವೇಳೆ ಮಾತನಾಡಿದ ಅವರು, ಮಹಾಜನ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ಬಹುತೇಕ ವಿದ್ಯಾರ್ಥಿಗಳು ಪ್ರತಿಕ್ಷೇತ್ರದಲ್ಲೂ ಸಾಧಕರಾಗಿ ಭಾರತ ಹಾಗೂ ವಿಶ್ವದೆಲ್ಲೆಡೆ ಇದ್ದಾರೆ. ಜವಾಬ್ದಾರಿ ಇದ್ದರೆ ಯಾವ ಸೋಲು ಸುಳಿಯುವುದಿಲ್ಲ. ವಿದ್ಯಾರ್ಥಿಗಳು ಸದಾ ಮನದಲ್ಲಿ ತಮ್ಮ



ಉದ್ದೇಶದ ಬಗ್ಗೆ ಜಾಗೃತರಾಗಿರಬೇಕು. ಆಲ್ಲಸ ಬದ್ಧತೆ ಮತ್ತು ಪರಿಶ್ರಮವನ್ನು ತಮ್ಮ ಕೆಲಸದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಯು ಜವಾಬ್ದಾರಿ ಇರುವಂತಹ ಒಬ್ಬ ನಾಯಕನಾಗಿರುತ್ತಾನೆ. ಯುವ ಜನಾಂಗ ತಮ್ಮ ಅಮೂಲ್ಯ ಸಮಯವನ್ನು ಹಾಳು ಮಾಡಿಕೊಳ್ಳದೆ, ಅವರ ಆಸಕ್ತಿಗೆ ಅನುಗುಣವಾಗಿ ವ್ಯಾಸಂಗ ಮಾಡಿ ಗುರಿಯ ಪ್ರತಿಫಲದ ಪರಿಣಾಮದ ಕಡೆಗೆ ಶ್ರಮಿಸಿ, ದೃಢವಾಗಿ ಕೆಲಸ ಮಾಡಬೇಕು ಎಂದು ಅವರು ಹೇಳಿದರು.

ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರಸ್ತುತ ವಿದ್ಯಮಾನಗಳ ಕುರಿತು ಪರಿಣತಿ ಹೊಂದುತ್ತಿರಬೇಕು. ಸಂಘಟಿತ ಮತ್ತು ರಚನಾತ್ಮಕ ಜೀವನವನ್ನು ಅಳವಡಿಸಿಕೊಳ್ಳಬೇಕು. ಯಶಸ್ಸಿಗೆ ವಯಸ್ಸು ಮತ್ತು ಸಮಯದ ಮಿತಿ ಇಲ್ಲ. ಮಹಾಜನ ವಿದ್ಯಾಸಂಸ್ಥೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಆಗತ್ಯವಾದ ಕಲೆ ಮತ್ತು ಸಾಂಸ್ಕೃತಿಕ ಪ್ರತಿಭೆಯ ಅನಾವರಣಕ್ಕೆ ಸೂಕ್ತವೇದಿಕೆಯನ್ನು ಹಿಂದಿನಿಂದಲೂ ಕಲ್ಪಿಸಿಕೊಡುತ್ತಿದೆ. ಆದ್ದರಿಂದಲೇ ಮಾಜಿ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಹಾಗೂ ಫಿಲ್ಮಫೇರ್ ಪ್ರಶಸ್ತಿ ಪುರಸ್ಕೃತೆ ಅನನ್ಯಾ ಭಟ್ ಮುಂತಾದವರ ಸಾಧನೆಗಳು ಅವಿಸ್ಮರಣೀಯ ಎಂದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾಸಂಸ್ಥೆಯ ಟಿ. ಮುರಳೀಧರ್ ಭಾಗವತ್ ಮಾತನಾಡಿ, ಮಹಮ್-2023 ಫೆಸ್ಟ್ ಆಂಗವಾಗಿ ಈ ಹಿಂದೆ ಆಯೋಜಿಸಿದ್ದ ಆಟೋ ಎಕ್ಸ್‌ಪೋ ಮತ್ತು ಕೆರಿಯರ್ ಎಕ್ಸ್‌ಪೋ ಎರಡೂ ಕಾರ್ಯಕ್ರಮಗಳಿಂದ ಹಲವು ಕೈಗಾರಿಕಾ ಸಂಸ್ಥೆಗಳೂಡನೆ ಮಹಾಜನ ವಿದ್ಯಾಸಂಸ್ಥೆಯ ಸಂಬಂಧ ಹೆಚ್ಚಾಗಿ, ಒಟ್ಟು 112 ವಿದ್ಯಾರ್ಥಿಗಳಲ್ಲಿ ಎಂಬಿಎ ಸ್ನಾತಕೋತ್ತರ ಪದವಿಯಿಂದ 42 ಅಭ್ಯರ್ಥಿಗಳು ಹಾಗೂ ಉಳಿದ ಅಭ್ಯರ್ಥಿಗಳು ಪದವಿಯಿಂದ ನೇಮಕಾತಿ ಪ್ರಕ್ರಿಯೆಯೊಳಗೆ ಒಳಪಟ್ಟಿರುವುದು ತುಂಬಾ ಸಂತೋಷದ ಸಂಗತಿ ಎಂದು ಹೇಳಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾತ್ರ ವ್ಯಾಸಂಗ ಮಾಡಿ ಪೂಜಾಭಾಗವತ್ ಸ್ನಾತಕೋತ್ತರ ಕೇಂದ್ರಕ್ಕೆ ಸೇರುವ ಎಲ್ಲಾ ವಿದ್ಯಾರ್ಥಿಗಳಿಗೆ ಮಹಾಜನ ವಿದ್ಯಾಸಂಸ್ಥೆ ಶೇ. 10 ವಿದ್ಯಾರ್ಥಿ ವೇತನವನ್ನು ನೀಡುತ್ತದೆ ಎಂದು ಭರವಸೆ ನೀಡಿದರು.

ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನಟಿ ಮಯೂರಿ, ಸಾಗಿಣಿ, ದೀಪಿಕಾದಾಸ್, ನಾಯಕ್, ಕಿರುತೆರೆ ನಿರೂಪಕ ನಿರಂಜನ್ ದೇಶಪಾಂಡೆ ಪಾಲ್ಗೊಂಡಿದ್ದರು. ಜೋಯಿಸ್ ಬ್ಯಾಂಡ್ ತಂಡವು ಮನರಂಜಿಸಿತು.

ವೇದಿಕೆಯಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಚ್.ಆರ್. ತಿಮ್ಮೇಗೌಡ, ವಿದ್ಯಾರ್ಥಿ ಸಂಯೋಜಕರಾದ ಎನ್.ಸಿ. ದೀಕ್ಷಿತ್, ಕೆ.ಆರ್. ಭೂಮಿಕಾ ಇದ್ದರು. ವಿದ್ಯಾರ್ಥಿನಿ ಅರ್ಚನ ಪಿ. ಹೆಗ್ಗಡೆ ಪ್ರಾರ್ಥಿಸಿದರು. ಎಸ್. ರಿಷಬ್ ಸ್ವಾಗತಿಸಿದರು, ಸೃಷ್ಟಿ ಆರ್ ಜೋಯಿಸ್ ನಿರೂಪಿಸಿ, ವಂದಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 20.7.2023

ಮಹಾಜನ ಕಾಲೇಜಲ್ಲಿ ಮಹಮ್ ರಾಷ್ಟ್ರೀಯ ಫೆಸ್ಟ್ ಸಮಾರೋಪ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಜಗದೀಶ್ ಪ್ರಸಾದ್ ಕ್ರೀಡಾಂಗಣದಲ್ಲಿ ಮಹಮ್ -2023 ರಾಷ್ಟ್ರೀಯ ಫೆಸ್ಟ್ ಸಮಾರೋಪ ಸಮಾರಂಭ ಜರುಗಿತು.

ಮುಖ್ಯ ಅತಿಥಿಯಾಗಿದ್ದ ಕಾಲೇಜಿನ ಹಳೆಯ ವಿದ್ಯಾರ್ಥಿ ಹಾಗೂ ಕನ್ನಡ ಚಲನಚಿತ್ರ ನಟ ಪೂರ್ಣಚಂದ್ರ ಮಾತನಾಡಿ, ನಾನು ಐದಾರು ಕಿರು ಚಿತ್ರಗಳಲ್ಲಿ ನಟಿಸಿ ಸಿನಿರಂಗದಲ್ಲಿ ಉತ್ತಮ ನಟರಾಗಿ ಹೆಸರುವಾಸಿ ಆಗಿರುವುದಕ್ಕೆ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರತಿಭಾ ವೇದಿಕೆಯು ನೀಡಿದ ಪ್ರೋತ್ಸಾಹ ಕಾರಣ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಹಿನ್ನೆಲೆ ಗಾಯಕ ಅಲೋಕ್, ಬಿಗ್‌ಬಾಸ್ ರಿಯಾಲಿಟಿ ಶೋನ ಖ್ಯಾತ ನಟ ನಟಿಯರಾದ ಕೆ.ಪಿ. ಅರವಿಂದ, ದಿವ್ಯಾ ಉರುಡುಗ, ನಟಿ ಶ್ರೇಯಾಬಾಬು ಅವರು ಮನರಂಜನಾ ಕಾರ್ಯಕ್ರಮ ನೀಡಿದರು.

ಚಲನಚಿತ್ರ ನಟ ಧನ್‌ವೀರ್, ಸಿದ್ದು ಮೂಲೆಮನೆ, ಜೈ ಪ್ರಕಾಶ್, ಕುಶಾಲ್, ಹಾಸ್ಯನಟ ದ್ವಾರಕೀಶ್ ಅವರ ಪುತ್ರ ಅಭಿಲಾಷ್ ದ್ವಾರಕೀಶ್, ಕಾಲೇಜಿನ ಹಳೆಯ ವಿದ್ಯಾರ್ಥಿನಿ ಮತ್ತು ಸರಿಗಮಪದ ಜ್ಯೂರಿ ಸದಸ್ಯೆ ಭಾರತಿ ಹುರುಗಲ್ಲು ಅವರು ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್.ರಮೇಶ್, ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಚ್.ಆರ್. ತಿಮ್ಮೇಗೌಡ, ವಿದ್ಯಾರ್ಥಿ ಸಂಯೋಜಕ ಎಸ್. ರಿಷಬ್, ದೀಕ್ಷಿತ್ ಮೊದಲಾದವರು ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 18 ಜುಲೈ 2023

'ಮಹಮ್--2023' ರಾಷ್ಟ್ರೀಯ ಫೆಸ್ಟ್



ಮೈಸೂರಿನ ಪ್ರತಿಷ್ಠಿತ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಹಮ್–2023' ರಾಷ್ಟ್ರೀಯ ಫೆಸ್ಟ್ ಸಮಾರಂಭದ ಉದ್ಘಾಟನೆಯನ್ನು ಮೈಸೂರಿನ ಖ್ಯಾತ ಉದ್ಯಮಿ, CII ನಿರ್ದೇಶಕ ಸ್ಯಾಮ್ ಚೆರಿಯನ್ ಜ್ಯೋತಿ ಬೆಳಗುವುದರ ಮೂಲಕ ನೆರವೇರಿಸಿದರು. ಮಹಾಜನ ವಿದ್ಯಾಸಂಸ್ಥೆಯ ಟಿ. ಮುರಳೀಧರ್ ಭಾಗವತ್, ಮಹಾಜನ ವಿದ್ಯಾಸಂಸ್ಥೆಯ ಗೌ.ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ ಬಿ.ಆರ್. ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್.ರಮೇಶ್, ಫೆಸ್ಟ್‌ನ ಕಾರ್ಯಕ್ರಮ ಸಂಯೋಜನಾಧಿಕಾರಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ವಿದ್ಯಾರ್ಥಿ ಸಂಯೋಜಕ ರಿಷಬ್ ಎಸ್, ದೀಕ್ಷಿತ್ ಎನ್.ಪಿ, ಭೂಮಿಕಾ ಕೆ.ಆರ್. ಜೋಯಿಸ್ ಮತ್ತು ಸೃಷ್ಟಿ ಆರ್.ಜೋಯಿಸ್ ಉಪಸ್ಥಿತರಿದ್ದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಜುಲೈ 21, 2023

'ಮಹಮ್' ಉತ್ಸವ ಸಮಾರೋಪ; ಬಹುಮಾನ ವಿತರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಜಯಲಕ್ಷ್ಮೀ ಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಿಂದ ಹಮ್ಮಿಕೊಂಡಿದ್ದ 'ಮಹಮ್- 2023' ರಾಷ್ಟ್ರೀಯ ಉತ್ಸವದ ಸಮಾರೋಪ ಸಮಾರಂಭ ಮಂಗಳವಾರ ನಡೆಯಿತು.

ಮುಖ್ಯಅತಿಥಿಯಾಗಿ ಭಾಗವಹಿಸಿದ್ದ ಕಾಲೇಜಿನ ಹಳೆಯ ವಿದ್ಯಾರ್ಥಿ ಹಾಗೂ ಚಲನಚಿತ್ರ ನಟ ಪೂರ್ಣಚಂದ್ರ ಮಾತನಾಡಿ, 'ನಾನು ಐದಾರು ಕಿರು ಚಿತ್ರಗಳಲ್ಲಿ ನಟಿಸಿ, ಸಿನಿರಂಗದಲ್ಲಿ ಹೆಸರು ಗಳಿಸಿರುವುದಕ್ಕೆ ಮಹಾಜನ ಪ್ರಥಮ ದರ್ಜೆ ಕಾಲೇಜಿನ 'ಸಾರಂತ' ಹಾಗೂ ಪ್ರತಿಭಾ ವೇದಿಕೆಯು ನೀಡಿದ ಪ್ರೋತ್ಸಾಹವೇ ಕಾರಣ. ಇಂತಹ ಅವಕಾಶಗಳನ್ನು ಎಲ್ಲ ವಿದ್ಯಾರ್ಥಿಗಳೂ ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಹಿನ್ನೆಲೆ ಗಾಯಕ ಅಲೋಕ್, ನಟ ಅರವಿಂದ್ ಕೆ.ಪಿ., ನಟಿ ದಿವ್ಯಾ ಉರುಡುಗ ಹಾಗೂ ಕಾಲೇಜಿನ ಹಳೆಯ ವಿದ್ಯಾರ್ಥಿನಿ, ಚಲನಚಿತ್ರ ನಟಿ ಶ್ರೇಯಾ ಬಾಬು ಮತ್ತು ಅವರ ತಂಡದವರು, ಚಲನಚಿತ್ರ ನಟರಾದ ಧನ್ವೀರ್, ಸಿದ್ದು ಮೂಲಿಮನೆ, ಚೈತ್ರಾ ಪ್ರಕಾಶ್, ಕುಶಾಲ್, ಅಭಿಲಾಷ್ ದ್ವಾರಕೀಶ್, ಕಾಲೇಜಿನ ಹಳೆಯ ವಿದ್ಯಾರ್ಥಿನಿ ಮತ್ತು ಸರಿಗಮಪದ ಜ್ಯೂರಿ ಸದಸ್ಯೆ ಭಾರತಿ ಹುರುಗಲ್ಲು ಮನರಂಜನಾ ಕಾರ್ಯಕ್ರಮ ನೀಡಿದರು.

ಪಲಾಷ್ ಬಿಡ್ಡಪ್ಪ ಸಂಯೋಜನೆಯಲ್ಲಿ ಫ್ಯಾಷನ್ ಶೋ ನಡೆಯಿತು.

ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್. ಆರ್. ರಮೇಶ್, ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಚ್. ಆರ್. ತಿಮ್ಮೇಗೌಡ, ವಿದ್ಯಾರ್ಥಿ ಸಂಯೋಜಕರಾದ ರಿಷಬ್ ಎಸ್., ದೀಕ್ಷಿತ್ ಎನ್.ಸಿ., ಭೂಮಿಕಾ ಜೋಯಿಸ್ ಮತ್ತು ಸೃಷ್ಟಿ ಆರ್. ಜೋಯಿಸ್ ಇದ್ದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ಕಾಲೇಜಿನ ಹಳೆಯ ವಿದ್ಯಾರ್ಥಿ ಹಾಗೂ ಚಲನಚಿತ್ರ ನಟ ಪೂರ್ಣಚಂದ್ರ ಅವರನ್ನು ಸನ್ಮಾನಿಸಲಾಯಿತು

ಸ್ಪರ್ಧೆಗಳ ವಿಜೇತರು

'ಇನ್‌ಕಾಗ್ನಿಟೊ': ಫಿಝಾ ಸುಹೇರ್ ಮತ್ತು ವೈ.ಜಿಯಾ ರೆಡ್ಡಿ (ಪ್ರಥಮ), ಏಕ್ತಾ ಶಂಕರ್ ನಾರಾಯಣ ಭಟ್ ಮತ್ತು ಪಂಚಮಿ (ದ್ವಿತೀಯ).
ಮಾಸ್ಟರ್ ಆಫ್ ಮೈಕ್: ಪ್ರದೀಪ್ ನಾಯಕ್ ಮತ್ತು ದಿವ್ಯಶ್ರೀ ಎಚ್.ಎಂ. (ಪ್ರಥಮ), ಸಂಜನಾ ಯಾದವ್ ಮತ್ತು ಸಂಜನಾ ಕೆ.ಆರ್. (ದ್ವಿತೀಯ).
ಪಾಶ್ಚಾತ್ಯ ನೃತ್ಯ (ಸೋಲೋ): ನಿತಿನ್ ಕುಮಾರ್ (ಪ್ರಥಮ), ಶಶಾಂಕ್ (ದ್ವಿ).
ಜೋಡಿ ನೃತ್ಯ: ಭರತ್ ಮತ್ತು ನಿಶ್ಚಲ್ ಎಸ್. (ಪ್ರಥಮ), ಎಸ್.ಕುಮಾರ್ ಮತ್ತು ಪ್ರಿಯಾ (ದ್ವಿತೀಯ).
ಹ್ಯಾಕಥಾನ್: ಮೊಹಮ್ಮದ್ ಹುಝೇರ್ ಮತ್ತು ಜಯಂತ್ ಕುಮಾರ್ (ಪ್ರ).
ಭಾವಗೀತೆ: ದೀಕ್ಷಾ (ಪ್ರಥಮ), ಕೀರ್ತನಾ ಎಸ್.ಎಂ.(ದ್ವಿತೀಯ)
ಎಸ್ ಕ್ಯೂಯೆಡೊ: ಪ್ರಜ್ವಲ್ ಎನ್.ಜಿ. ಮತ್ತು ಪ್ರಜ್ವಲ್ ಪಿ. (ಪ್ರಥಮ), ಧನುಷ್ ಎಂ.ಡಿ.ಮತ್ತು ವರ್ಷಿತಾ (ದ್ವಿತೀಯ).
ಬಯೊ ಕಾರ್ನಿವಾಲ್: ಮೋಹಿತ್ ಕೃಷ್ಣ ಮತ್ತು ಬಾಲಾಜಿ (ಪ್ರಥಮ), ಇನೋಶ್ ಐಸ್ಕಾಕ್ ಮತ್ತು ಹಿಮನೀಶ್ ಡಿ. (ದ್ವಿತೀಯ)
ಪ್ರತಿಭಾನ್ವೇಷಣೆ: ಧೃತಿ ಜಿ.ಎಸ್., ನಮ್ರತಾ ಗೋಪಿನಾಥ್, ದಿನೇಶ್ ಎಸ್., ನವನೀತ್ ಜೈನ್ ಮತ್ತು ಕಾರ್ತಿಕ್ ಗೌಡ.
ಪಾಶ್ಚಾತ್ಯ ಗಾಯನ (ಸೋಲೋ): ಮಂಚಲ್ (ಪ್ರಥಮ), ಸೋನು (ದ್ವಿ).
ಮಾರ್ಕೆಟಿಂಗ್: ಮುಸ್ಸಾನ್, ಅಮೃತ ಕಿರಣ್, ಶೇಕ್ ಅಕ್ಬಲ್ (ಪ್ರಥಮ), ಮಮತಾ, ರಾಜೇಶ್, ಹರ್ಷಿತಾ ಎಸ್. (ದ್ವಿತೀಯ).
ಬ್ಯುಸಿನೆಸ್ ಕ್ವಿಜ್: ಫೈಯದ್ ಮೊಹಮ್ಮದ್ ಮುಝಾಹಿರ್, ಹರ್ಷ ಕುಮಾರ್ ಎಂ.ಎಸ್. (ಪ್ರ), ಜತಿನ್ ಕುಮಾರ್ ಪಿ, ಸಂಜಯ್ ಕುಮಾರ್ ಡಿ. (ದ್ವಿ).
ಹಣಕಾಸು: ಆದ್ವಿಕಾ ಎಸ್. ರಂಗನಾಥ್ (ಪ್ರ), ಶಶಾಂಕ್ ಎಚ್.ಎಸ್. (ದ್ವಿ).
ಉತ್ತಮ ಸಿಇಒ: ಭಾವೇಶ್ ನಾಗರಾಜ್ (ಪ್ರ), ಸೈಯದಾ ರುಮೇಝಾ (ದ್ವಿ).

MFGE In the Eyes of the Press.....

STAR OF MYSORE

Monday 31st July 2023

MAHAM-2023 enthrals participants, attendees







Mysuru, July 31 (BCT)- SBRR Mahajana First Grade College (Autonomous) conducted a two-day national-level fest, MAHAM-2023 recently. The event, which featured a diverse range of cultural and academic competitions, left participants and attendees enthralled with its grandeur.

The valedictory ceremony witnessed actor Poornachandra Mysore, as the chief guest. In a nostalgic speech, he expressed his gratitude towards the college for nurturing his love for theatre and acting during his formative years. He motivated the students to dream big and strive to achieve their aspirations.

Adding to the glamour, popular actors and former *Bigg Boss* contestants, K.P. Aravind and Divya Uruduga, along with their team, showcased their upcoming movie, 'Ardhambardha Prema Kathe' and interacted with students.

Singers Likith Gaayak and Bharathi mesmerised the audience with some all-time Kannada chartbusters. Fashion Designer Palash Bidappa's showcase of her creations, 'Closet,' further elevated the event's charm. Actors Siddu Moolimani and Dhanveer's presence created an electric atmosphere as they captivated their fans.

The fest was inaugurated by Sam Cherian, Chairman, CII, and Managing Director, Schevaran Laboratories Pvt. Ltd., Mysuru. He emphasised the importance of responsibility, passion, and mindset for achieving success. He urged the students to focus on upskilling themselves and cultivate meticulousness and perseverance in their endeavours.

T. Muralidhar Bhagavath, President of Mahajana Education Society, delivered the Presidential Address and highlighted the significance of events like MAHAM in providing a platform for students to showcase their entrepreneurial skills and bridge the gap between industry and academia. He also announced scholarships for post-graduate students.

The fest was attended by Dr. Vijayalakshmi Muralidhar, Hon. Secretary, Mahajana Education Society, Dr. B.R. Jayakumari, Principal, Dr. S.R. Ramesh, CEO and Academic Advisor, Dr. H.R. Thimmegowda, MAHAM Teacher Coordinator and Head of the Department of Kannada.

Several competitions were held as part of the fest, and students from various colleges showcased their talent and expertise. The prize winners in different categories are:

Solo Western Dance: Nithin Kunal (First), V. Shashank (Second).

Couple Dance: Bharath and S. Nischal (First), Nithin Kumar and Priya (Second).

Hackathon: Mohd. Uzair and Jayanth Kumar (First).

Bhavageethe: Deeksha (First), S.M. Keerthana (Second).

Incognito: Fiza Suhair and Y. Geya Reddy (First), Ekatha Shankar Narayan Bhat and Panchami (Second).

S Cleudo: N.G. Prajwal and P. Prajwal (First), M.D. Dhanush and Varshitha (Second).

Bio Carnival: Mohit Krishna and Balaji (First), Enosh Issac and Issac (Second).

Master of the Mic: Pradeep Naik and H.M. Divyashri(First), Sanjana Yadav and K.R. Sanjana (Second); Treasure Hunt: G.S. Druthi, Namratha Gopinath, S. Dinesh, Navaneeth Jain and Karthik Gowda (winners).

Western Solo Singing: Mancha (First), Sonu (Second).

Marketing: Muskan, Amrutha Kiran, and Sheikh Akmal (First), Mamatha, Rajesh, and S. Harshitha (Second).

Business Quiz: Syed Mohammad Muzakir and M.S. Harsha Kumar (First Place), P. Jathin Kumar and D. Sanjay Kumar (Second).

Finance: Advika S. Ranganath (First), H.S. Shashank and S.V. Shashank (Second)

Best CEO: Bhavesh Kumar (First), Syeda Rumesa.

ವಿಜಯವಾಣಿ
ಕನ್ನಡಿಗರ ಧ್ವನಿ

ಮಂಗಳವಾರ 18 ಜುಲೈ 2023
18 JULY 2023

ಉದ್ಯಮಿ ಸ್ಯಾಮ್‌ಚೆರಿಯನ್ ಅಭಿಪ್ರಾಯ | ಮಹಮ್-2023 ರಾಷ್ಟ್ರೀಯ ಫೆಸ್ಟ್

ಜೀವನದಲ್ಲಿ ಯಶಸ್ಸು ಸಾಧನೆಗೆ ಮನಸ್ಥಿತಿ ಮುಖ್ಯ

■ ವಿಜಯವಾಣಿ ಸುದ್ದಿಜಾಲ ಮೈಸೂರು

ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಸಾಧಿಸಬೇಕಾದರೆ ಜವಾಬ್ದಾರಿ, ಆಸಕ್ತಿ, ಉತ್ಸಾಹ ಹಾಗೂ ಸಾಧಿಸುವ ಮನಸ್ಥಿತಿ ಮುಖ್ಯ ಎಂದು ಉದ್ಯಮಿ ಸ್ಯಾಮ್‌ಚೆರಿಯನ್ ಸಲಹೆ ನೀಡಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಕಾಲೇಜಿನ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ 'ಮಹಮ್-2023' ರಾಷ್ಟ್ರೀಯ ಫೆಸ್ಟ್ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಜವಾಬ್ದಾರಿ ಇದ್ದರೆ ಯಾವ ಸೋಲೂ ಸುಳಿಯುವುದಿಲ್ಲ. ವಿದ್ಯಾರ್ಥಿಗಳು ಸದಾ ಮನದಲ್ಲಿ ತಮ್ಮ ಉದ್ದೇಶದ ಬಗ್ಗೆ ಜಾಗೃತರಾಗಿರಬೇಕು. ಅಲ್ಲದೆ, ಬದ್ಧತೆ ಮತ್ತು ಪರಿಶ್ರಮವನ್ನು ತಮ್ಮ ಕೆಲಸದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿ ಪ್ರಸ್ತುತ ವಿದ್ಯಮಾನಗಳ ಕುರಿತು ಪರಿಣತಿ ಹೊಂದುತ್ತಿರಬೇಕು. ಸಂಘಟಿತ ಮತ್ತು ರಚನಾತ್ಮಕ ಜೀವನವನ್ನು ಅಳವಡಿಸಿಕೊಳ್ಳಬೇಕು. ಯಶಸ್ಸಿಗೆ ವಯಸ್ಸು ಮತ್ತು ಸಮಯದ ಮಿತಿಯಿಲ್ಲ. ಮಹಾಜನ ವಿದ್ಯಾಸಂಸ್ಥೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾದ ಕಲೆ ಮತ್ತು ಸಾಂಸ್ಕೃತಿಕ ಪ್ರತಿಭೆಯ ಅನಾವರಣಕ್ಕೆ ಸೂಕ್ತ ವೇದಿಕೆಯನ್ನು ಹಿಂದಿನಿಂದಲೂ ಕಲ್ಪಿಸಿಕೊಡುತ್ತಿದೆ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಹಿನ್ನೆಲೆ ಗಾಯಕಿ ಅನನ್ಯಭಟ್ ಮುಂತಾದವರ ಸಾಧನೆಗಳು ಅವಿಸ್ಮರಣೀಯ. ಮಹಾಜನ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿದವರು ಇಂದು ವಿಶ್ವದೆಲ್ಲೆಡೆ ಇದ್ದಾರೆ ಎಂದರು. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಮಾತನಾಡಿ, 'ಮಹಮ್-2023 ಫೆಸ್ಟ್' ಅಂಗವಾಗಿ ಈ ಹಿಂದೆ ಆಯೋಜಿಸಿದ್ದ ಆಟೋ ಎಕ್ಸ್‌ಪೋ ಮತ್ತು ಕೆರಿಯರ್ ಎಕ್ಸ್‌ಪೋ ಎರಡೂ ಕಾರ್ಯಕ್ರಮಗಳಿಂದ ಹಲವು ಕೈಗಾರಿಕಾ ಸಂಸ್ಥೆಗಳೊಡನೆ ಮಹಾಜನ ವಿದ್ಯಾಸಂಸ್ಥೆಯ ಸಂಬಂಧ ಗಟ್ಟಿಯಾಗಿದೆ. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪೂಜಾಭಾಗವತ್ ಸ್ನಾತಕೋತ್ತರ ಕೇಂದ್ರಕ್ಕೆ ಸೇರುವ ಎಲ್ಲ ವಿದ್ಯಾರ್ಥಿಗಳಿಗೆ ಮಹಾಜನ ವಿದ್ಯಾಸಂಸ್ಥೆ ವಿದ್ಯಾರ್ಥಿ ವೇತನ ನೀಡುತ್ತದೆ ಎಂದು ಭರವಸೆ ನೀಡಿದರು. ಅಲ್ಲದೆ, ಸ್ನಾತಕೋತ್ತರ ಕೇಂದ್ರದ ಜೀವವಿಜ್ಞಾನ ವಿಭಾಗದಲ್ಲಿ ಹೊಸ ತಂತ್ರಜ್ಞಾನದೊಂದಿಗೆ ಪ್ರಯೋಗಾಲಯಗಳ ನವೀಕರಣಕ್ಕೆ ಸಿದ್ಧತೆ ಮಾಡಲಾಗುತ್ತಿದೆ ಎಂದರು. ವಿದ್ಯಾಸಂಸ್ಥೆಯ ಗೌ.ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಫೆಸ್ಟ್‌ನ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಚ್.ಆರ್.ತಿಮ್ಮೇಗೌಡ, ವಿದ್ಯಾರ್ಥಿ ಸಂಯೋಜಕರಾದ ರಿಷಬ್, ದೀಕ್ಷಿತ್, ಭೂಮಿಕಾ, ಜೋಯಿಸ್ ಇದ್ದರು. ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ರಿಯಾಲಿಟಿ ಷೋ ನಿರೂಪಕ ನಿರಂಜನ್ ದೇಶಪಾಂಡೆ, ಬಲನಟಚಿತ್ರನಟಿ ಮಯೂರಿ, ಬಿಗ್‌ಬಾಸ್ ಖ್ಯಾತಿಯ ದೀಪಿಕಾ ದಾಸ್ ಮನರಂಜನಾ ಕಾರ್ಯಕ್ರಮ ನಡೆಸಿಕೊಟ್ಟರು.



ವಿಜಯವಾಣಿ

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಮಹಮ್-2023 ರಾಷ್ಟ್ರೀಯ ಫೆಸ್ಟ್‌ಅನ್ನು ಸ್ಯಾಮ್‌ಚೆರಿಯನ್ ಉದ್ಘಾಟಿಸಿದರು. ಟಿ.ಮುರಳೀಧರ್ ಭಾಗವತ್, ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಬಿ.ಆರ್.ಜಯಕುಮಾರಿ, ಡಾ.ಎಸ್.ಆರ್.ರಮೇಶ್, ಡಾ.ಎಚ್.ಆರ್.ತಿಮ್ಮೇಗೌಡ ಇದ್ದರು.

MFGE In the Eyes of the Press.....



ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 17 ಜುಲೈ 2023

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು:** ಎರಡು ದಿನಗಳ ಮಹಾಮ್–2023 ರಾಷ್ಟ್ರೀಯ ಮಟ್ಟದ ಹಬ್ಬ, ಮುಖ್ಯ ಅತಿಥಿ: ಸಿಐಐ ಚೇರ್ಮನ್ ಸ್ಯಾಮ್ ಚೆರಿಯನ್, ಅಧ್ಯಕ್ಷತೆ: ಮಹಾಜನ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್. ಸ್ಥಳ: ಎಪಿಜೆ ಅಬ್ದುಲ್ ಕಲಾಂ ಆಡಿಟೋರಿಯಂ, ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 18 ಜುಲೈ 2023

■ **ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜು:** ರಾಷ್ಟ್ರ ಮಟ್ಟದ ಮಹಾಮ್ 2023 ಫೆಸ್ಟ್, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10 ರಿಂದ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಸೋಮವಾರ 17.7.2023

■ **ಮಹಾಜನ ಪ್ರಥಮ ದರ್ಜೆ ಕಾಲೇಜು:** ಮಹಮ್ -2023 ಫೆಸ್ಟ್ ಉದ್ಘಾಟನೆ- ಶಾಸಕ ಜಿ.ಡಿ. ಹರೀಶ್‌ಗೌಡ, ಶ್ಯಾಮ್ ಚೆರಿಯನ್, ಅಧ್ಯಕ್ಷತೆ- ಟಿ. ವಿಜಯಲಕ್ಷ್ಮೀ ಮುರಳೀಧರ್, ಜಯಲಕ್ಷ್ಮೀಪುರಂ, ಬೆಳಗ್ಗೆ 9.30.

ಆಂದೋಲನ

ದಿನ ಪತ್ರಿಕೆ

ಸೋಮವಾರ, 17 ಜುಲೈ 2023

● **ರಾಷ್ಟ್ರಮಟ್ಟದ ಮಹಾಮ್ - 2023 ಫೆಸ್ಟ್**

ಬೆಳಿಗ್ಗೆ 9.30ಕ್ಕೆ, ಎಸ್.ಬಿ. ಆರ್.ಆರ್.ಮಹಾಜನ ಪ್ರಥಮ ದರ್ಜೆ ಕಾಲೇಜು, ಉದ್ಘಾಟನೆ-ಶಾಸಕ ಜಿ.ಡಿ. ಹರೀಶ್‌ಗೌಡ, ಸಿಐಐ ಮೈಸೂರು ಅಧ್ಯಕ್ಷ ಶ್ಯಾಮ್ ಚೆರಿಯನ್, ಅಧ್ಯಕ್ಷತೆ-ಮಹಾಜನ ವಿದ್ಯಾ ಸಂಸ್ಥೆಯ ಅಧ್ಯಕ್ಷ ಟಿ.ಮುರಳೀ ಧರ್ ಭಾಗವತ್, ಸ್ಥಳ- ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 28.7.2023

ಕೆಲಸದಲ್ಲಿ ಸಮಯಪ್ರಜ್ಞೆ, ನಿಷ್ಠೆ, ಶ್ರದ್ಧೆ ಅಗತ್ಯ

ವಿದ್ಯಾರ್ಥಿಗಳಿಗೆ ಪದ್ಮಶ್ರೀ ಡಾ. ಮಾತಾ ಬಿ. ಮಂಜಮ್ಮ ಜೋಗತಿ ಸಲಹೆ | ಪ್ರತಿಭಾ ಪುರಸ್ಕಾರ ಸಮಾರಂಭ

• ಕನ್ನಡಪ್ರಭ ವಾರ್ತೆ ಮೈಸೂರು

ಸಮಯಕ್ಕೆ ಯಾರು ಗೌರವ ಕೊಡುತ್ತಾರೋ, ಅಂಥವರಿಗೆ ಸಮಯವೇ ಗೌರವತಂದುಕೊಡುತ್ತದೆ. ಅದಕ್ಕೆ ನಾನೇ ನಿದರ್ಶನ ಎಂದು ಪದ್ಮಶ್ರೀ ಪುರಸ್ಕೃತ ಜಾನಪದ ಕಲಾವಿದರಾದ ಡಾ. ಮಾತಾ ಬಿ. ಮಂಜಮ್ಮ ಜೋಗತಿ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ನಡೆದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯ ಸಮಾರೋಪ ಸಮಾರಂಭ, ಪ್ರತಿಭಾ ಪುರಸ್ಕಾರ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಕೆಲಸದಲ್ಲಿ ಸಮಯಪ್ರಜ್ಞೆ, ಶ್ರದ್ಧೆ, ನಿಷ್ಠೆ ಹಾಗೂ ಪ್ರಾಮಾಣಿಕತೆ ಹೊಂದಿರಬೇಕು. ಅಲ್ಲದೇ ಯಾವುದೇ ಕೆಲಸವನ್ನಾದರೂ ಪ್ರೀತಿಯಿಂದ ಮಾಡಬೇಕು ಎಂದರು.

ವಿದ್ಯಾರ್ಥಿಗಳು ಮೊಬೈಲನ್ನು ಆಗತ್ಯಕ್ಕೆ ಅನುಗುಣವಾಗಿ ಬಳಸಬೇಕು. ಮೊಬೈಲ್‌ಗೆ



ಮಹಾಜನ ಕಾಲೇಜಿನಲ್ಲಿ ಮಂಜಮ್ಮ ಜೋಗತಿ ಅವರನ್ನು ಸನ್ಮಾನಿಸಲಾಯಿತು.

ಶರಣಾಗದೆ ಅದರ ಬದಲು ದಿನಪತ್ರಿಕೆ, ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಹಾಗೂ ಬಸವಣ್ಣ, ಅಕ್ಕಮಹದೇವಿ, ಬುದ್ಧ, ಅಂಬೇಡ್ಕರ್, ಬೈಬಲ್, ಮಹಾಸಾಧಕರ ಆತ್ಮಚರಿತ್ರೆಯನ್ನು ಅಧ್ಯಯನ ಮಾಡಿ ಎಂದು ಅವರು ಸಲಹೆ ನೀಡಿದರು.

ನಾನು ಕಲೆಯನ್ನು ದೇವರೆಂದು ನಂಬಿದ್ದೇನೆ. ಜಾನಪದ ಕಲೆಯಿಂದ ನನಗೆ ಅಪಾರ ಗೌರವ ಮನ್ನಣೆ ದೊರಕಿದೆ. ಕೆಲವು ಕ್ಷೇತ್ರಗಳಿಗೆ ಮಾತ್ರ ಮೀಸಲಾಗಿದ್ದ ಪದ್ಮಶ್ರೀ ಪ್ರಶಸ್ತಿ ಪುರಸ್ಕಾರ ಸೂಲಗಿತ್ತಿ ಹಾಗೂ ನಪುಂಸಕ ತೃತೀಯಲಿಂಗಿಯಾದ ಜಾನಪದ ಕಲಾವಿದೆಯನ್ನು ಗುರುತಿಸಿ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ ಎಂದರು.

ವೇಷಭೂಷಣಗಳಿಂದ ಕಲಾವಿದರಾಗಲು ಸಾಧ್ಯವಿಲ್ಲ. ವ್ಯಕ್ತಿ ಅಚ್ಚುಕಟ್ಟಾಗಿ ಮಾಡುವ ಪ್ರತಿಯೊಂದು ಕೆಲಸವು ಕಲೆಯೇ. ಹಾಗಾಗಿ ಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಎಲ್ಲರೂ ಕಲಾವಿದರೆ. ಪ್ರಶಸ್ತಿ ಪದವಿಗಳಿಂದ ಮನುಷ್ಯ ಪರಿಪೂರ್ಣವಾದ ಬದುಕು ಕಟ್ಟಿಕೊಳ್ಳಲು ಸಾಧ್ಯವಿಲ್ಲ, ವ್ಯಕ್ತಿ ಕಲಾವಿದರ ಜೊತೆಗೆ ಹವ್ಯಾಸಿ ಕಲಾವಿದರಾಗಿ ಎಂದು ಅವರು ಕಿವಿಮಾತು ಹೇಳಿದರು.

ಜೀವನದಲ್ಲಿ ಯಾರು ಯಾರನ್ನು ಗುರುತಿಸುವುದಿಲ್ಲ, ನಮ್ಮನ್ನು ಗುರುತಿಸಿಕೊಳ್ಳುವ ಕೆಲಸ ನಾವೇ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ತಮ್ಮ ಆಸಕ್ತಿಗೆ ಅನುಗುಣವಾಗಿ ಹೆದರದೆ ಕೆಲಸ ಮಾಡಿ. ಈ ಸಮಾಜ ಹೇಗಿದ್ದರೂ ಟೀಕಿಸುತ್ತದೆ. ಆದ್ದರಿಂದ ಧೈರ್ಯದಿಂದ ಜೀವನವನ್ನು ಎದುರಿಸಲು ಕಲಿಯಿರಿ. ವ್ಯಕ್ತಿ ಸರಿಯಾಗಿದ್ದರೆ ಎಂತಹ ಸನ್ನಿವೇಶವನ್ನಾದರೂ ಎದುರಿಸಬಹುದು. ಜೀವನದಲ್ಲಿ ಬರುವ ಸಮಸ್ಯೆಗಳನ್ನು ಸವಾಲಾಗಿ ತೆಗೆದುಕೊಂಡು ಮುನ್ನುಗುವ ಧೈರ್ಯವನ್ನು ಬೆಳೆಸಿಕೊಳ್ಳಬೇಕು. ಆದಕ್ಕಾಗಿ ತಾಳ್ಮೆಯಿಂದ ವರ್ತಿಸಬೇಕು ಎಂದರು.

ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟಾರ್ ಎನ್. ನಮ್ರತಾ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಸಮೂಹನ ಕೌಶಲ್ಯವನ್ನು ವೃದ್ಧಿಸಿಕೊಳ್ಳಲು ದೇಶದ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳಲು ಸಂವಿಧಾನದ ಬಗ್ಗೆ ಅರಿವಿರಬೇಕು. ಉತ್ತಮ ಮಾತುಗಾರಿಕೆ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು, ದೇಶಸೇವೆ ಮಾಡಬೇಕು ಎಂದು ಹೇಳಿದರು.

ಇದೇ ವೇಳೆ ಅಂತಿಮ ಬಿಎ ವಿದ್ಯಾರ್ಥಿನಿ ಹಾಗೂ 2023 ವರ್ಷದ ವಿದ್ಯಾರ್ಥಿ ಸಂಸದೆ ಸೃಷ್ಟಿ ಆರ್. ಜೋಯ್ಸ್ ಅವರನ್ನು ಸನ್ಮಾನಿಸಲಾಯಿತು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎಸ್.ಆರ್. ರಮೇಶ್, ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ, ಪ್ರತಿಭಾ ವೇದಿಕೆಯ ಸಂಚಾಲಕ ಎಂ. ನಾಗೇಶ, ವಿದ್ಯಾರ್ಥಿ ಸಂಸತ್‌ನ ಸಂಚಾಲಕಿ ಡಾ.ಎಂ.ಆರ್. ಇಂದ್ರಾಣಿ, ಡಾ. ಎಚ್.ಆರ್.ತಿಮ್ಮೇಗೌಡ, ಎಂ.ಎನ್.ವೆಂಕಟಲಕ್ಷ್ಮಿ ಮೊದಲಾದವರು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 29 ಜುಲೈ 2023

ಸಮಯಕ್ಕೆ ಯಾರು ಗೌರವ ಕೊಡುತ್ತಾರೋ ಅಂಥವರಿಗೆ ಸಮಯವೇ ಗೌರವ ತಂದುಕೊಡುತ್ತದೆ

ಪದ್ಮಶ್ರೀ ಪುರಸ್ಕೃತೆ ಡಾ.ಮಾತಾ ಬಿ ಮಂಜಮ್ಮ ಜೋಗತಿ



ಮೈಸೂರು, ಜು. 28– ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯ ಸಮಾರೋಪ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಪದ್ಮಶ್ರೀ ಪುರಸ್ಕೃತರು ಮತ್ತು ಜಾನಪದ ಕಲಾವಿದರಾದ ಡಾ. ಮಾತಾ ಬಿ ಮಂಜಮ್ಮ ಜೋಗತಿ ಅವರು ಮಾತನಾಡಿ, ಸಮಯಕ್ಕೆ ಯಾರು ಗೌರವ ಕೊಡುತ್ತಾರೋ, ಅಂಥವರಿಗೆ ಸಮಯವೇ ಗೌರವ ತಂದುಕೊಡುತ್ತದೆ. ಅದಕ್ಕೆ ನಾನೇ ನಿದರ್ಶನ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಕೆಲಸದಲ್ಲಿ ಸಮಯ ಪ್ರಜ್ಞೆ, ಶ್ರದ್ಧೆ, ನಿಷ್ಠೆ ಹಾಗೂ ಪ್ರಾಮಾಣಿಕತೆ ಹೊಂದಿರಬೇಕು. ಅಲ್ಲದೇ ಯಾವುದೇ ಕೆಲಸವನ್ನಾದರೂ ಪ್ರೀತಿಯಿಂದ ಮಾಡಬೇಕು. ವಿದ್ಯಾರ್ಥಿಗಳು ಮೊಬೈಲನ್ನು ಅಗತ್ಯಕ್ಕನುಗುಣವಾಗಿ ಬಳಸಬೇಕು. ಮೊಬೈಲ್‌ಗೆ ಶರಣಾಗದೆ ಅದರ ಬದಲು ದಿನಪತ್ರಿಕೆ, ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಹಾಗೂ ಬಸವಣ್ಣ, ಅಕ್ಕಮಹಾದೇವಿ, ಬುದ್ಧ, ಅಂಬೇಡ್ಕರ್, ಬೈಬಲ್, ಮಹಾ ಸಾಧಕರ ಆತ್ಮಚರಿತ್ರೆಯನ್ನು ಅಧ್ಯಯನ ಮಾಡಿ ಎಂದರು. ವಿದ್ಯಾರ್ಥಿ ಸಂಸತ್ ಸಮಾರೋಪ ಭಾಷಣ ಮಾಡಿದ ಕರ್ನಾಟಕ ಜಾನಪದ ಅಕಾಡೆಮಿ ಕುಲಸಚಿವರಾದ ಎನ್.ನಮ್ರತಾ, ವಿದ್ಯಾರ್ಥಿಗಳು ತಮ್ಮ ಸಂವಹನ ಕೌಶಲ್ಯವನ್ನು ವೃದ್ಧಿಸಿಕೊಳ್ಳಲು ದೇಶದ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳಲು ಸಂವಿಧಾನದ ಬಗ್ಗೆ ಅರಿವಿರಬೇಕೆಂದರು. ಉತ್ತಮ ಮಾತುಗಾರಿಕೆ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು. ದೇಶಸೇವೆ ಮಾಡಬೇಕು ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್.ತಿಮ್ಮೇಗೌಡ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಎಂ.ಎನ್. ವೆಂಕಟಲಕ್ಷ್ಮಿ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ, ಪ್ರಾಂಶುಪಾಲರಾದ ಡಾ.ಜಿ.ಆರ್. ಜಯಕುಮಾರಿ, ಪ್ರತಿಭಾ ವೇದಿಕೆಯ ಸಂಚಾಲಕ ನಾಗೇಶ ಎಂ, ವಿದ್ಯಾರ್ಥಿ ಸಂಸತ್‌ನ ಸಂಚಾಲಕ ಡಾ. ಎಂ.ಆರ್.ಇಂದ್ರಾಣಿ ಉಪಸ್ಥಿತರಿದ್ದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಜುಲೈ 28, 2023

ಸಮಯ ಗೌರವಿಸಿದರಷ್ಟೇ ಬೆಲೆ: ಮಂಜಮ್ಮ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಮಯವು ತನ್ನನ್ನು ಗೌರವಿಸುವವರಿಗೆ ಮಾತ್ರ ಬೆಲೆ ದೊರಕಿಸುತ್ತದೆ. ಅದಕ್ಕೆ ನಾನೇ ಉದಾಹರಣೆ' ಎಂದು ಜಾನಪದ ಕಲಾವಿದೆ ಬಿ.ಮಂಜಮ್ಮ ಜೋಗತಿ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು.

'ವ್ಯಕ್ತಿ ಅಚ್ಚುಕಟ್ಟಾಗಿ, ಸಮಯಪ್ರಜ್ಞೆಯೊಂದಿಗೆ ಮಾಡುವ ಪ್ರತಿಯೊಂದು ಕೆಲಸವೂ ಕಲೆಯೇ. ನನಗೆ ಜಾನಪದ ಕಲೆ ಒಲಿದದ್ದೂ ಹೀಗೆಯೇ. ಲಿಂಗತ್ವ ಅಲ್ಪಸಂಖ್ಯಾತರಾದ ನನ್ನನ್ನು ಕೇಂದ್ರ ಸರ್ಕಾರ ಗುರುತಿಸಿ ಪದ್ಮಶ್ರೀ ಪ್ರಶಸ್ತಿ ನೀಡಿತು. ಇದೇ ಬಗೆಯ ಗುರುತಿಸುವಿಕೆ ಎಲ್ಲೆಡೆಯೂ, ಮುಖ್ಯವಾಗಿ ಮನೆಗಳಲ್ಲಿ ನಡೆಯಬೇಕು' ಎಂದರು.

'ಸಮಯ ಪ್ರಜ್ಞೆ, ಶ್ರದ್ಧೆ, ನಿಷ್ಠೆ ಹಾಗೂ ಪ್ರಾಮಾಣಿಕತೆ ವಿದ್ಯಾರ್ಥಿಗಳಿಗೆ ಬಹುಮುಖ್ಯ ಹೊಂದಿರಲೇಬೇಕು. ಸಮಾಜ ಒಪ್ಪಿತವಾದ ಯಾವುದೇ ಕೆಲಸವನ್ನು ಪ್ರೀತಿಯಿಂದ ಮಾಡಬೇಕು. ಮೊಬೈಲ್ ಗೀಳಿಗೆ ಒಳಗಾಗದ ದಿನಪತ್ರಿಕೆ, ದಾರ್ಶನಿಕರ ಚರಿತ್ರೆಗಳನ್ನು, ಮಹಾಕಾವ್ಯಗಳನ್ನು ಅಧ್ಯಯನ ಮಾಡಬೇಕು' ಎಂದರು.

ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟ್ರಾರ್ ಎನ್.ನಮ್ರತಾ ಮಾತನಾಡಿ, ವಿದ್ಯಾರ್ಥಿಗಳು ದೇಶದ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳಲು ಸಂವಿಧಾನ ಅರಿಯಬೇಕು. ಉತ್ತಮ ಮಾತುಗಾರಿಕೆ ಕೌಶಲ, ದೇಶಸೇವೆಯ ಗುಣ ಬೆಳೆಸಿಕೊಳ್ಳಿ' ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್. ಆರ್.ರಮೇಶ್, ಪ್ರಾಂಶುಪಾಲರಾದ ಡಾ. ಬಿ. ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ಎನ್.ವೆಂಕಟಲಕ್ಷ್ಮಿ, ಪ್ರತಿಭಾ ವೇದಿಕೆ ಸಂಚಾಲಕ ಎಂ.ನಾಗೇಶ, ವಿದ್ಯಾರ್ಥಿ ಸಂಸತ್ತು ಸಂಚಾಲಕಿ ಎಂ.ಆರ್.ಇಂದ್ರಾಣಿ ಇದ್ದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ಕಲಾವಿದೆ ಬಿ.ಮಂಜಮ್ಮ ಜೋಗತಿ ಅವರನ್ನು ಸನ್ಮಾನಿಸಲಾಯಿತು. ಎನ್.ನಮ್ರತಾ, ಟಿ.ವಿಜಯಲಕ್ಷ್ಮೀ ಮುರಳೀಧರ್, ಎಸ್.ಆರ್.ರಮೇಶ್, ಡಾ. ಬಿ. ಆರ್. ಜಯಕುಮಾರಿ, ಡಾ.ಎಚ್.ಆರ್.ತಿಮ್ಮೇಗೌಡ, ಎಂ.ಎನ್.ವೆಂಕಟಲಕ್ಷ್ಮಿ, ಎಂ.ನಾಗೇಶ, ಎಂ.ಆರ್.ಇಂದ್ರಾಣಿ ಇದ್ದಾರೆ

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಶುಕ್ರವಾರ 28 ಜುಲೈ 2023
28 JULY 2023

ಪದ್ಮಶ್ರೀ ಪುರಸ್ಕೃತ ಜಾನಪದ ಕಲಾವಿದೆ ಡಾ.ಬಿ.ಮಂಜಮ್ಮ ಜೋಗತಿ ಮನವಿ

ತೃತೀಯಲಿಂಗಿ ಮಕ್ಕಳಿಗೆ ಶಿಕ್ಷಣ ಕೊಡಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ತೃತೀಯ ಲಿಂಗಿ ಮಕ್ಕಳನ್ನು ಮನೆಯಿಂದ ಹೊರ ಹಾಕ ಬೇಡಿ. ಆ ಮಕ್ಕಳಿಗೆ ನೀವು ಮನೆ, ಆಸ್ತಿ ಕೊಡಬೇಡಿ. ಆದರೆ ನಿಮ್ಮ ಮಕ್ಕಳೆಂದು ಒಪ್ಪಿಕೊಂಡು ವಿದ್ಯೆಯೊಂದನ್ನು ನೀಡಿದರೆ ಸಾಕು ಎಂದು ಪದ್ಮಶ್ರೀ ಪುರಸ್ಕೃತ ಜಾನಪದ ಕಲಾವಿದೆ ಡಾ.ಬಿ.ಮಂಜಮ್ಮ ಜೋಗತಿ ಅವರು ಪಾಲಕರಲ್ಲಿ ಮನವಿ ಮಾಡಿದರು.

ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು.

ಮಗ ಕೊಲೆ ಮಾಡಿ ಜೈಲು ಶಿಕ್ಷೆ ಅನುಭವಿಸಿ ಬಂದರೂ ಆತನನ್ನು ಪಾಲಕರು ತಮ್ಮ ಮಗನೆಂದು ಒಪ್ಪಿ ಸ್ವೀಕಾರ ಮಾಡುತ್ತಾರೆ. ಆದರೆ ಯಾವುದೇ ತಪ್ಪು ಮಾಡದ ತೃತೀಯ ಲಿಂಗಿಗಳನ್ನು ಪಾಲಕರು ತಮ್ಮ ಮಕ್ಕಳೆಂದು ಒಪ್ಪಿಕೊಳ್ಳುತ್ತಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು. ಪಾಲಕರ ಆಸ್ಥೆಯಿಂದಾಗಿ ಮನೆಯಿಂದ ಹೊರ ಬಾಳುವ ತೃತೀಯ ಲಿಂಗಿಗಳು ಭಕ್ಷೆ ಬೇಡಿ ಬದುಕುವ ಪರಿಸ್ಥಿತಿ ಇದ್ದು, ಅಂತಹ ಸಂದರ್ಭ ನಿರ್ಮಾಣಕ್ಕೆ ಯಾವುದೇ ಪಾಲಕರು ಅವಕಾಶ ಮಾಡಿಕೊಡಬಾರದು ಎಂದು ಕೋರಿದರು.

ತೃತೀಯ ಲಿಂಗಿಗಳಿಗೆ ಸರ್ಕಾರ, ಉದ್ಯೋಗದಲ್ಲಿ ಶೇ 1ರಷ್ಟು ಮೀಸಲಾತಿ ನೀಡಿದ್ದು, ಶಿಕ್ಷಣ ದೊರೆತರೆ ಅವರು ಸುಲಭವಾಗಿ ಉದ್ಯೋಗ ಪಡೆದು ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಅಂತೆಯೆ, ಶಿಕ್ಷಣ, ಮೀಸಲಾತಿ ಸೌಲಭ್ಯ ಪಡೆದು ಶಿಕ್ಷಕ, ಪೊಲೀಸ್ ಸೇರಿದಂತೆ ವಿವಿಧ ಉನ್ನತ ಹುದ್ದೆಗಳನ್ನು ತೃತೀಯ ಲಿಂಗಿಗಳು ಅಲಂಕರಿಸಿದ್ದಾರೆ ಎಂದರು.

ಗಂಡು ಮಗು ಹುಟ್ಟಿ ಕೆಲವೊಮ್ಮೆ ಆ ಮಗು ಹೆಣ್ಣಾಗಿ ಪರಿವರ್ತನೆ ಹೊಂದುತ್ತದೆ. ಆದೇ ರೀತಿ ಹೆಣ್ಣಾಗಿ ಹುಟ್ಟಿ ಗಂಡಾಗಿ ಪರಿವರ್ತನೆ ಹೊಂದುತ್ತದೆ. ಈ ರೀತಿ ಪರಿವರ್ತನೆ ಹೊಂದಿದರೂ ಆ ಮಗುವನ್ನು ಸಾಕುವ, ಉತ್ತಮ ಶಿಕ್ಷಣ ನೀಡುವ ಸಂಕಲ್ಪವನ್ನು ಪ್ರತಿಯೊಬ್ಬರೂ ಮಾಡಬೇಕು. ಶಾಲಾ-ಕಾಲೇಜಿನಲ್ಲಿ ತೃತೀಯ ಲಿಂಗಿ ವಿದ್ಯಾರ್ಥಿಗಳು ಇದ್ದರೆ ಸಹಪಾಠಿಗಳು ಅವರನ್ನು ಗೇಲಿ ಮಾಡದೆ ಸಮಾನವಾಗಿ ಕಾಣಬೇಕು ಎಂದು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿದರು.

ಕಲೆ ಎಲ್ಲರನ್ನೂ ಕೈಬೀಸಿ ಕರೆಯುತ್ತದೆ. ಆದರೆ, ಕಲೆ ತನ್ನ ಗರ್ಭದಲ್ಲಿ ಇಟ್ಟು ಪೋಷಿಸುವುದು ಕೆಲವರನ್ನು ಮಾತ್ರ. ಕಲಾಕ್ಷೇತ್ರದಲ್ಲಿ ನಾವು ಸಾಧಿಸಬೇಕಾದರೆ ನಮಗೆ ಭಕ್ತಿ, ಶ್ರದ್ಧೆ, ಸಮಯಪ್ರಜ್ಞೆ ಇರಬೇಕು. ಸಮಯಕ್ಕೆ ಮಾಡಿ ಎಂದು ಕರೆ ನೀಡಿದರು. ಕಲಾವಿದರಾಗಲು ಬಯಸುವವರು ಎಂದಿಗೂ ವೃತ್ತಿ ಕಲಾವಿದರಾಗಬೇಡಿ. ಕಲಾವಿದರ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಉತ್ತಮವಾಗಿರುವುದಿಲ್ಲ. ಹಾಗಾಗಿ ನಿಮಗೆ ಕಲಾವಿದರಾಗಲು ಬಯಕೆ ಇದ್ದರೆ ಹವ್ಯಾಸಿ ಕಲಾವಿದ ರಾಗಿ. ಬೇರೆ ವೃತ್ತಿ ಮಾಡಿಕೊಂಡು ಹವ್ಯಾಸಿ ಕಲಾವಿದ ರಾದರೆ ವೃತ್ತಿಕ್ಷೇತ್ರ ಹಾಗೂ ಕಲಾರಂಗದಲ್ಲೂ ಸಾಧನೆ ತೋರಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜಾನಪದ, ರಂಗಭೂಮಿ ಕಲಾವಿದರನ್ನು ಸರ್ಕಾರ ಗುರುತಿಸುವುದು ಬಹಳ ಕಡಿಮೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರ್ಕಾರ ಜಾನಪದ ಮತ್ತು ರಂಗಭೂಮಿ ಕಲಾವಿದರನ್ನೂ ಗುರುತಿಸಿ ಪದ್ಮಶ್ರೀ ಪ್ರಶಸ್ತಿ ನೀಡಿರುವುದು ಸಂತಸದ ವಿಚಾರ ಎಂದರು.

ಕರ್ನಾಟಕ ಜಾನಪದ ಅಕಾಡೆಮಿ ಕುಲಸಚಿವೆ ಎನ್. ನಮ್ರತಾ ಮಾತನಾಡಿ, ವಿದ್ಯಾರ್ಥಿಗಳು ಸಂವಹನ ಕೌಶಲ ಮತ್ತು ನಾಯಕತ್ವ ಗುಣ ಬೆಳೆಸಿಕೊಳ್ಳಬೇಕು. ನಾಯಕತ್ವ ಗುಣ ಹಾಗೂ ಸಂವಹನ ಕೌಶಲ ವೃದ್ಧಿಸಲು ವಿದ್ಯಾರ್ಥಿ ಸಂಸತ್ ಸಹಕಾರಿಯಾಗಿದೆ ಎಂದರು.

ಅಂತಿಮ ಬಿಎ ವಿದ್ಯಾರ್ಥಿ ಸೃಷ್ಟಿ ಆರ್.ಜೋಯ್ಸ್ ಅವರಿಗೆ 'ಅತ್ಯುತ್ತಮ ವಿದ್ಯಾರ್ಥಿ ಸಂಸದ' ಪುರಸ್ಕಾರ ಪ್ರದಾನ ಮಾಡಲಾಯಿತು. ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ವಿದ್ಯಾರ್ಥಿ ಸಂಸತ್ ಸಂಚಾಲಕಿ ಡಾ.ಎಂ.ಆರ್. ಕೃಷ್ಣವೇಣಿ, ಪ್ರತಿಭಾ ವೇದಿಕೆ ಸಂಚಾಲಕ ಎಂ.ನಾಗೇಶ ಇದ್ದರು.


ವಿಜಯವಾಣಿ

ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಪದ್ಮಶ್ರೀ ಪುರಸ್ಕೃತ ಜನಪದ ಕಲಾವಿದೆ ಡಾ.ಬಿ.ಮಂಜಮ್ಮ ಜೋಗತಿ ಅವರನ್ನು ಸನ್ಮಾನಿಸಲಾಯಿತು. ಟಿ.ಮುರಳೀಧರ್ ಭಾಗವತ್, ಡಾ.ಬಿ.ಆರ್. ಜಯಕುಮಾರಿ, ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ಇತರರಿದ್ದರು.

ಕಾಯಕದಲ್ಲೇ ದೇವರಿದ್ದಾನೆ

ದೇವರು ಪ್ರಾರ್ಥನಾ ಮಂದಿರಗಳಲ್ಲಿ ಇಲ್ಲ. ನೀವು ಮಾಡುವ ಕಾಯಕದಲ್ಲಿಯೇ ದೇವರು ಇದ್ದಾನೆ. ಹಾಗಾಗಿ ನೀವು ಮಾಡುವ ಕೆಲಸವನ್ನು ಪ್ರೀತಿಸಿ. ಕೆಲಸದ ಮೂಲಕವೇ ದೇವರನ್ನು ಕಾಣಲು ಪ್ರಯತ್ನಿಸಿ. ಇದನ್ನು ಬುದ್ಧ, ಬಸವ, ಅಂಬೇಡ್ಕರ್ ಸಾರಿ ಹೇಳಿದ್ದಾರೆ. ಪ್ರತಿಯೊಬ್ಬರೂ ಮೊಬೈಲ್ ಬಳಕೆ ಅದಷ್ಟು ಕಡಿಮೆ ಮಾಡಬೇಕು. ಇಂದಿನ ಯುಗಕ್ಕೆ ಮೊಬೈಲ್ ಅನಿವಾರ್ಯ. ಆದರೆ, ಅದರ ಬಳಕೆಗೆ ಇತಿಮಿತಿ ಇರ ಬೇಕು. ಮೊಬೈಲ್ ಕಡಿಮೆ ಬಳಕೆ ಮಾಡಿ ಹೆಚ್ಚಿನ ಸಮಯ ಕೆಲಸಕ್ಕೆ ಮೀಸಲಿಡಿ. ಬಿಡುವಾದರೆ ಉತ್ತಮ ಸಾಹಿತ್ಯ ಕೃತಿ ಓದಿ ಎಂದು ಡಾ.ಬಿ.ಮಂಜಮ್ಮ ಜೋಗತಿ ಸಲಹೆ ನೀಡಿದರು.

ಗೌರವ ನೀಡಿದರೆ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ನಿಮ್ಮ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಲು ಯಾರೂ ಮುಂದೆ ಬರುವುದಿಲ್ಲ. ಹಾಗಾಗಿ ನಮ್ಮೊಳಗಿರುವ ಪ್ರತಿಭೆಯನ್ನು ನಾವೇ ಕಂಡುಕೊಂಡು ಅದಕ್ಕೆ ಪೂರಕವಾದ ವೇದಿಕೆಯನ್ನು ನಾವೇ ನಿರ್ಮಾಣ ಮಾಡಿ ಕೊಳ್ಳಬೇಕು. ನಮ್ಮನ್ನು ಸಮಾಜ ಗುರುತಿಸುತ್ತದೆ ಎಂದು ಕಾಯಲು ಹೋಗಬಾರದು. ಸಮಾಜ ನನ್ನ ಬಗ್ಗೆ ಏನು ಅಂದುಕೊಳ್ಳುವುದೋ ಎಂಬ ಭಯವೂ ಬೇಡ. ನೀವು ಮಾಡುವ ಕೆಲಸ ಪ್ರಾಮಾಣಿಕವಾಗಿದ್ದರೆ ಧೈರ್ಯವಾಗಿ ಮುನ್ನುಗ್ಗಿ. ನಿಮ್ಮ ಜೀವನಕ್ಕೆ ನೀವೇ ರಾಜ ಇದ್ದಂತೆ, ಬೇರೆಯವರೊಂದಿಗೆ ಎಂದಿಗೂ ಹೋಲಿಕೆ ಮಾಡಿಕೊಳ್ಳದೆ ನಿಮ್ಮದೇ ಸಾಧನೆಯ ಹಾದಿ ನಿರ್ಮಾಣ

MFGE In the Eyes of the Press.....



ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 27.7.2023

■ **ಮಹಾಜನ ವಿದ್ಯಾಸಂಸ್ಥೆ:** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಭಾಷಣ – ಜನಪದ ಕಲಾವಿದೆ ಪದ್ಮಶ್ರೀ ಡಾ. ಮಂಜಮ್ಮ ಜೋಗತಿ, ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟ್ರಾರ್ ಎನ್. ನಮ್ರತಾ, ಅಧ್ಯಕ್ಷತೆ– ಅತ್ಯುತ್ತಮ ವಿದ್ಯಾರ್ಥಿ ಸಂಸದೆ ಸೃಷ್ಟಿ ಆರ್. ಜೋಯ್ಸ್, ಜಯಲಕ್ಷ್ಮೀಪುರಂ, ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 11.

ಸಂಜೋಲನ

ದಿನಪತ್ರಿಕೆ

ಗುರುವಾರ, 27 ಜುಲೈ 2023

● **ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ**

ಬೆಳಿಗ್ಗೆ 11ಕ್ಕೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಸಮಾರೋಪ ಭಾಷಣ–ಜನಪದ ಕಲಾವಿದರಾದ ಡಾ.ಮಾತಾ ಬಿ.ಮಂಜಮ್ಮ ಜೋಗತಿ, ಕರ್ನಾಟಕ ಜಾನಪದ ಅಕಾಡೆಮಿ ಕುಲಸಚಿವರಾದ ಎನ್ .ನಮ್ರತಾ, ಅತಿಥಿಗಳು–ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಅಧ್ಯಕ್ಷತೆ–ಕಾಲೇಜಿನ ಅಂತಿಮ ಬಿಎ ವಿದ್ಯಾರ್ಥಿ ಸೃಷ್ಟಿ ಆರ್.ಜೋಯ್ಸ್, ಸ್ಥಳ–ಕಾಲೇಜಿನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣ, ಜಯಲಕ್ಷ್ಮೀಪುರಂ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 27 ಜುಲೈ 2023

■ **ಮಹಾಜನ ವಿದ್ಯಾಸಂಸ್ಥೆ, ಮಹಾಜನ ಪ್ರಥಮ ದರ್ಜೆ ಕಾಲೇಜು:** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ. ಮುಖ್ಯ ಅತಿಥಿಗಳು: ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ.ಮಾತಾ ಬಿ.ಮಂಜಮ್ಮ ಜೋಗತಿ, ಸಮಾರೋಪ ಭಾಷಣ: ಕರ್ನಾಟಕ ಜಾನಪದ ಅಕಾಡೆಮಿ ಕುಲಸಚಿವೆ ಎನ್.ನಮ್ರತ, ಅಧ್ಯಕ್ಷತೆ: ಕು.ಸೃಷ್ಟಿ ಆರ್.ಜೋಯ್ಸ್, ಉಪಸ್ಥಿತರು: ಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್.ರಮೇಶ್, ಸ್ಥಳ: ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 11ಕ್ಕೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 16.7.2023

ಸಾಧನೆಗೆ ದೃಢ ನಿರ್ಧಾರ, ಗುರಿ, ಬದ್ಧತೆ ಅತೀ ಅಗತ್ಯ

ಮೈವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ. ಆನಂದ್ ಅಭಿಮತ । ಬಹುಮಾನ ವಿತರಣಾ ಸಮಾರಂಭ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಾಧನೆಗೆ ದೃಢ ನಿರ್ಧಾರ, ಗುರಿ ಮತ್ತು ಬದ್ಧತೆ ಮೂರು ಗುಣಗಳನ್ನು ರೂಢಿಸಿಕೊಳ್ಳಬೇಕು ಎಂದು ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ. ಆನಂದ್ ಸಲಹೆ ನೀಡಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ವಿವಿಧ ಸ್ಪರ್ಧೆ ಹಾಗೂ ಇತರೆ ಕಾಲೇಜುಗಳು ಆಯೋಜಿಸಿದ್ದ ಫೆಸ್ಟ್, ಎನ್‌ಸಿಸಿ, ರೋಟರ್ಯಾಕ್ಟ್ ಮತ್ತು ಕ್ರೀಡಾ ವಿಭಾಗಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಜೀವನದಲ್ಲಿ ಸೋಲೇ ಗೆಲುವಿನ ಮೆಟ್ಟಿಲು. ಗೆದ್ದವರು ಇನ್ನೂ ಹೆಚ್ಚು ಸಾಧನೆ ಮಾಡಿ, ಭಾಗವಹಿಸಿದ ಇತರ ವಿದ್ಯಾರ್ಥಿಗಳು ಎದೆಗುಂದದೆ ಮುಂದೆ ಬರುವ ಸ್ಪರ್ಧೆಗಳಿಗೆ ಸೂಕ್ತ ಮಾರ್ಗದರ್ಶನ ಪಡೆದು ಪರಿಶ್ರಮದೊಂದಿಗೆ ಸವಾಲುಗಳನ್ನು ಎದುರಿಸಿ ಗೆಲುವನ್ನು ಸಾಧಿಸಬೇಕು ಎಂದರು.

ರಂಗಕರ್ಮಿ ಶಿಶಿರ್ ಬೈಕಾಡಿ ಅವರು, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನೂ



ಸರಿದೂಗಿಸಿಕೊಂಡು ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿವಿಧ ವಿಭಾಗಗಳ ಸಂಚಿಕೆಗಳಾದ ಸ್ಫೂರ್ತಿ, ಕ್ಯಾಪಟಲ್, ಇನಾಘೋಲಿಟಾ ಹಾಗೂ ಕಾಲೇಜಿನ ವಾರಪತ್ರಿಕೆ ಅಚೀವರ್ ಅನ್ನು ಬಿಡುಗಡೆ ಮಾಡಲಾಯಿತು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಪ್ರತಿಭಾ ವೇದಿಕೆಯ ಸಂಚಾಲಕರಾದ ಎಂ. ನಾಗೇಶ್, ಎನ್.ಸಿ. ಹಂಸವೇಣಿ ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಮಂಗಳವಾರ, 18 ಜುಲೈ 2023

ಮೈವಿವಿ ಅಂತರ ಕಾಲೇಜು ಅಂತರ ವಲಯ ಮಹಿಳಾ ಕ್ರೀಡಾಕೂಟ
ಮೈಸೂರಿನ ಟೆರೇಷಿಯನ್ ಕಾಲೇಜಿಗೆ ಸಮಗ್ರ ಪ್ರಶಸ್ತಿ

ಹುಣಸೂರು: ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಅಂತರ ವಲಯ ಮಹಿಳಾ ಕ್ರೀಡಾಕೂಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಮೈಸೂರಿನ ಟೆರೇಷಿಯನ್ ಕಾಲೇಜು ತಂಡ ಸಮಗ್ರ ಪ್ರಶಸ್ತಿಗೆ ಭಾಜನವಾಯಿತು.

ಸೋಮವಾರ ನಗರದ ಸರ್ಕಾರಿ ಮಹಿಳಾ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಸಮಾರೋಪ ಸಮಾರಂಭ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ ಪ್ರಶಸ್ತಿ ಪ್ರದಾನ ಮಾಡಿದರು.

ಕ್ರೀಡಾಕೂಟದಲ್ಲಿ 13 ವಿವಿಧ ಕ್ರೀಡೆಗಳ ಪೈಕಿ ನಾಲ್ಕರಲ್ಲಿ ಪ್ರಥಮ, ಒಂದು ದ್ವಿತೀಯ ಮತ್ತು ಒಂದು ತೃತೀಯ ಸ್ಥಾನದೊಂದಿಗೆ ಒಟ್ಟು 24 ಅಂಕಗಳೊಂದಿಗೆ ಮೈಸೂರಿನ ಟೆರೇಷಿಯನ್ ಕಾಲೇಜು ವನಿತೆಯರು ಸಮಗ್ರ ತಂಡ ಪ್ರಶಸ್ತಿಗೆ ಭಾಜನರಾದರು. ಬಾಸ್ಕೆಟ್ ಬಾಲ್, ಹ್ಯಾಂಡ್ ಬಾಲ್, ಹಾಕಿ ಮತ್ತು ವಾಲಿಬಾಲ್ ಪಂದ್ಯಗಳಲ್ಲಿ ವಿನ್ನರ್, ಬಾಲ್ ಬ್ಯಾಡ್ಮಿಂಟನ್‌ನಲ್ಲಿ ರನ್ನರ್ ಅಪ್ ಮತ್ತು ಕಬಡ್ಡಿಯಲ್ಲಿ ತೃತೀಯ ಸ್ಥಾನ ಗಳಿಸಿದರು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಕುಲಸಚಿವರಾದ ವಿ.ಆರ್.ಶೈಲಜಾ ಅವರು, ಯುವತಿಯರು ಓದಿನ ಜೊತೆಗೆ ಕ್ರೀಡೆಗಳು ದೈಹಿಕ ಹಾಗೂ ಮಾನಸಿಕ ಆರೋಗ್ಯದೊಂದಿಗೆ ವ್ಯಕ್ತಿಯಲ್ಲಿ ನಾಯಕತ್ವ ಗುಣ, ಕ್ಲಿಷ್ಟ ಸಂದರ್ಭಗಳನ್ನು ಎದುರಿಸುವ ಶಕ್ತಿಯನ್ನು ಕಲಿಸುತ್ತದೆ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, 107 ವರ್ಷಗಳ ಇತಿಹಾಸ ಹೊಂದಿರುವ ಮೈಸೂರು ವಿವಿಯು ಇದೇ ಮೊದಲ ಬಾರಿಗೆ ವಿವಿ ಮಟ್ಟದ ಕ್ರೀಡಾಕೂಟವನ್ನು ಮೈಸೂರು ನಗರದಿಂದ ಹೊರಗಡೆ ಆಯೋಜಿಸಿರುವುದು ಶ್ಲಾಘನೀಯ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಹುಣಸೂರಿನ ಸರ್ಕಾರಿ ಮಹಿಳಾ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಮೈಸೂರಿನ ಟೆರೇಷಿಯನ್ ಕಾಲೇಜು ತಂಡ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು. ತಂಡದ ತರಬೇತುದಾರ ಆಂಥೋನಿ ಮೋಸೆಸ್, ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಿಡಿಸಿ ಉಪಾಧ್ಯಕ್ಷ ಮೋದೂರು ಮಹೇಶಾರಾಧ್ಯ, ಪ್ಯಾಂಕುಪಾಲ ಪುಟ್ಟಶೆಟ್ಟಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ.ಎಸ್.ಭಾಸ್ಕರ್ ಚಿತ್ರದಲ್ಲಿದ್ದಾರೆ.

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ಕ್ರೀಡಾಕೂಟದ ಉಸ್ತುವಾರಿ ಸಮಿತಿ ಅಧ್ಯಕ್ಷ ಧರ್ಮಾಪುರ ನಾರಾಯಣ್, ಕಾಲೇಜಿನ ಪ್ಯಾಂಕುಪಾಲ ಪುಟ್ಟಶೆಟ್ಟಿ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮೋದೂರು ಮಹೇಶಾರಾಧ್ಯ ಮಾತನಾಡಿದರು.

ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ.ಎಸ್.ಭಾಸ್ಕರ್, ಸಿಡಿಸಿ ಸದಸ್ಯರಾದ ಜ್ಯೋತಿ ವಿಶ್ವನಾಥ್, ಡಾ.ರಾ.ಮಹೇಶ್, ರಾಜಶೇಖರ್, ಶಿವನಂಜು, ಶಿವಕುಮಾರ್ ವಿ.ರಾವ್, ಪ್ರಾಧ್ಯಾಪಕರು, ವಿವಿಧ ಕಾಲೇಜುಗಳಿಂದ ಆಗಮಿಸಿದ್ದ ಕ್ರೀಡಾಪಟುಗಳು ಹಾಜರಿದ್ದರು.

ವಿಜೇತ ತಂಡಗಳ ವಿವರ

ಬಾಲ್ ಬ್ಯಾಡ್ಮಿಂಟನ್ ಪಂದ್ಯ: ಕೆ.ಆರ್.ಹೆಬ್ಬಳೆಯ ಜಿಎಫ್‌ಜಿಸಿ ಕಾಲೇಜು(ಪ್ರ), ಟೆರೇಷಿಯನ್ ಕಾಲೇಜು(ದ್ವಿ) ಹಾಗೂ ಕೆ.ಆರ್.ನಗರದ ಜಿಎಫ್‌ಜಿಸಿ ಕಾಲೇಜು(ತೃ), ಹಾಕಿ ಪಂದ್ಯ: ಟೆರೇಷಿಯನ್ ಕಾಲೇಜು(ಪ್ರ), ಮೈಸೂರಿನ ಎಸ್‌ಬಿಆರ್‌ಆರ್ ಕಾಲೇಜು(ದ್ವಿ) ಹಾಗೂ ನಾಗಮಂಗಲದ ಬಿಜಿಎಸ್ ಬಿಪಿಇಡಿ ಕಾಲೇಜು(ತೃ).

ಕಬಡ್ಡಿ ಪಂದ್ಯ: ಮೈಸೂರಿನ ವಿದ್ಯಾನಿಕೇತನ್ ಕಾಲೇಜು(ಪ್ರ), ಭಾರತೀನಗರದ ಭಾರತಿ ಕಾಲೇಜು(ದ್ವಿ) ಹಾಗೂ ಟೆರೇಷಿಯನ್ ಕಾಲೇಜು(ತೃ), ಸಾಫ್ಟ್ ಬಾಲ್ ಪಂದ್ಯ: ಮೈಸೂರಿನ ಎಸ್‌ಬಿಆರ್‌ಆರ್ ಎಂಎಫ್‌ಜಿಸಿ ಕಾಲೇಜು(ಪ್ರ), ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜು(ದ್ವಿ) ಹಾಗೂ ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜು(ತೃ).

ಟೆನಿಕಾಯ್ಟ್ ಪಂದ್ಯ: ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜು(ಪ್ರ), ವಿಜಯನಗರ ಜಿಎಫ್‌ಜಿಸಿ ಕಾಲೇಜು(ದ್ವಿ), ಹಾಸನದ ಜಿಎಫ್‌ಜಿಸಿ ಕಾಲೇಜು(ತೃ), ಥ್ರೋಬಾಲ್ ಪಂದ್ಯ: ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜು(ಪ್ರ), ಹಾಸನದ ಜಿಎಫ್‌ಜಿಸಿ ಕಾಲೇಜು(ದ್ವಿ) ಹಾಗೂ ಮಂಡ್ಯದ ಪಿಇಎಸ್ ಕಾಲೇಜು(ತೃ), ವಾಲಿಬಾಲ್ ಪಂದ್ಯ: ಟೆರೇಷಿಯನ್ ಕಾಲೇಜು(ಪ್ರ), ಹಾಸನದ ಸರ್ಕಾರಿ ವಿಜ್ಞಾನ ಕಾಲೇಜು(ದ್ವಿ) ಹಾಗೂ ಹಾಸನದ ಬಿಎಫ್‌ಜಿಸಿ ಕಾಲೇಜು(ತೃ) ಗಳಿಸಿದವು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಶನಿವಾರ, 22 ಜುಲೈ 2023

ಮಹಾಜನ ಕಾಲೇಜು ತಂಡಕ್ಕೆ ಸಮಗ್ರ ಪ್ರಶಸ್ತಿ

ಮೈಸೂರು ವಿವಿ ಅಂತರ ಕಾಲೇಜು, ಅಂತರ ವಲಯ ಪುರುಷರ ಕ್ರೀಡಾಕೂಟ



ಮೈಸೂರು: ಮೈಸೂರು ವಿವಿ ಅಂತರ ಕಾಲೇಜು ಅಂತರ ವಲಯ ಪುರುಷರ ಕ್ರೀಡಾಕೂಟದಲ್ಲಿ ಅತ್ಯುತ್ತಮ ಪ್ರದರ್ಶನ ತೋರಿದ ಮಹಾಜನ ಕಾಲೇಜು ತಂಡ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು.

ಮಹಾರಾಜ ಕಾಲೇಜು ದ್ವಿತೀಯ, ಮೈಕಾ ಕಾಲೇಜು ತೃತೀಯ ಸ್ಥಾನಗಳನ್ನು ಪಡೆದುಕೊಂಡವು. ಮಹಾಜನ ಕಾಲೇಜಿಗೆ-22, ಮಹಾರಾಜ ಕಾಲೇಜಿಗೆ-18 ಹಾಗೂ ಮೈಕಾ ಕಾಲೇಜಿಗೆ 13 ಅಂಕಗಳು ಲಭಿಸಿದವು.

ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಶುಕ್ರವಾರ ನಡೆದ ಸಮಾರೋಪ ಸಮಾರಂಭದಲ್ಲಿ ವಿವಿಯ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ. ಮಹದೇವನ್, ಸಿಂಡಿಕೇಟ್ ಸದಸ್ಯರಾದ ಡಾ.ಚೈತ್ರಾ ನಾರಾಯಣ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಹುಮಾನಗಳನ್ನು ವಿತರಿಸಿದರು.

ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಸಹಾಯಕ ನಿರ್ದೇಶಕ ಡಾ.ಎಚ್.ಎಸ್.ಕೃಷ್ಣಕುಮಾರ್, ಯೋಗ ತರಬೇತುದಾರ ಬಿ.ರವಿ, ಕಬಡ್ಡಿ ತರಬೇತುದಾರ ಆರ್.ರಮೇಶ್ ಹಾಜರಿದ್ದರು. ಕಳೆದ ಮೂರು ದಿನಗಳಿಂದ ನಡೆದ 15 ಪಂದ್ಯಗಳಲ್ಲಿ 40 ಕಾಲೇಜುಗಳ ಸುಮಾರು 800 ಮಂದಿ ಕ್ರೀಡಾಪಟುಗಳು ಪಾಲ್ಗೊಂಡಿದ್ದರು.

ವಿಜೇತ ತಂಡಗಳ ವಿವರ

ಬ್ಯಾಡ್ಮಿಂಟನ್: ಮೈಸೂರಿನ ಸೇಪಿಯೆಂಟ್ ಕಾಲೇಜು, ಮಂಡ್ಯದ ಪಿಇಎಸ್ ಕಾಲೇಜು. **ಬಾಲ್ ಬ್ಯಾಡ್ಮಿಂಟನ್:** ಮಹಾರಾಜ ಕಾಲೇಜು, ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು. **ಬ್ಯಾಸ್ಕೆಟ್ ಬಾಲ್:** ಮೈಕಾ, ಮಹಾಜನ, ಮಂಡ್ಯದ ಪಿಇಎಸ್. **ಚೆದುರಂಗ:** ಮಹಾಜನ, ನಂಜನಗೂಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯುವರಾಜ, ಕೆ.ಆರ್.ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು.

ಕ್ರಿಕೆಟ್: ಮಹಾರಾಜ, ಮಹಾಜನ. **ಫುಟ್‌ಬಾಲ್:** ಸೆಂಟ್ ಫಿಲೋಮಿನಾ, ಪಿಇಎಸ್. **ಹ್ಯಾಂಡ್‌ಬಾಲ್:** ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು, ಯುವರಾಜ. **ಕಬ್ಬಡಿ:** ವಿದ್ಯಾವಿಕಾಸ್, ಚನ್ನರಾಯಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು. **ಖೋ ಖೋ:** ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಪಿಜಿ ಕಾಲೇಜು, ಮಹಾರಾಜ, **ಟೇಬಲ್ ಟೆನ್ನಿಸ್:** ಮಹಾಜನ, ಕೆ.ಆರ್.ನಗರ ಜಿಎಸ್‌ಜಿಸಿ, ಮಂಡ್ಯದ ಪಿಇಎಸ್.

ಥ್ರೋಬಾಲ್: ಮಹಾರಾಜ, ಭಾರತೀನಗರದ ಭಾರತಿ ಕಾಲೇಜು, ಗುಂಡ್ಲುಪೇಟೆಯ ಜಿಎಸ್‌ಜಿಸಿ. **ವಾಲಿಬಾಲ್:** ಪಿಜಿಎಸ್‌ಸಿಎಂಜಿ, ಮಹಾಜನ, ಚನ್ನರಾಯಪಟ್ಟಣದ ಎಸ್‌ಎಎಸ್‌ಜಿಸಿ. **ಹಾಕಿ:** ಬೆಳಗೊಳದ ಡಿ ಪೌಲ್(ಪ್ರ), ಮೈಕಾ(ದ್ವಿ). **ಟೆನ್ನಿಸ್:** ಪಿಜಿಎಸ್‌ಸಿಎಂಜಿ(ಪ್ರ), ಹಾಸನದ ಸೆಂಟ್ ಜೋಸೆಫ್(ದ್ವಿ), ಬೆಳಗೊಳದ ಡಿ ಪೌಲ್(ತೃ), **ಸ್ಕಾಬಾಲ್:** ಮೈಕಾ(ಪ್ರ), ಮಹಾಜನ(ದ್ವಿ), ನಂಜನಗೂಡಿನ ಜೆಎಸ್‌ಎಸ್(ತೃ).

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 22.7.2023

ಅಭಿನಂದನೆ ಮಹಾರಾಜ ಕಾಲೇಜಿಗೆ ದ್ವಿತೀಯ. ಮೈಕಾ ಕಾಲೇಜಿಗೆ ತೃತೀಯ ಸ್ಥಾನ

ಅಂತರ ವಲಯ ಕ್ರೀಡಾಕೂಟ: ಮಹಾಜನ ಕಾಲೇಜಿಗೆ ಸಮಗ್ರ

• ಕನ್ನಡಪ್ರಭ ವಾರ್ತೆ ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಂತರ ವಲಯ ಪುರುಷರ ಕ್ರೀಡಾ ಕೂಟದಲ್ಲಿ ಮಹಾಜನ ಕಾಲೇಜು ಸಮಗ್ರ ತಂಡ ಪ್ರಶಸ್ತಿ ಗಳಿಸಿದೆ. ಮಹಾರಾಜ ಕಾಲೇಜು ದ್ವಿತೀಯ, ಮೈಕಾ ಕಾಲೇಜು ತೃತೀಯ ಪ್ರಶಸ್ತಿ ಪಡೆದವು.

ಮಹಾಜನ ಕಾಲೇಜಿಗೆ 22, ಮಹಾರಾಜ ಕಾಲೇಜಿಗೆ 18, ಮೈಕಾ ಕಾಲೇಜಿಗೆ 13 ಪಾಯಿಂಟ್‌ಗಳು ಲಭಿಸಿದವು.

ಮೈಸೂರು ವಿಶ್ವವಿದ್ಯಾನಿಲಯ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಶುಕ್ರವಾರ ನಡೆದ ಸಮಾರೋಪ ಸಮಾರಂಭದಲ್ಲಿ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ. ಮಹದೇವನ್, ಸಿಂಡಿಕೇಟ್ ಸದಸ್ಯೆ ಡಾ. ಚೈತ್ರಾ ನಾರಾಯಣ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಬಹುಮಾನಗಳನ್ನು ವಿತರಿಸಿದರು.

ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಸಿ. ವೆಂಕಟೇಶ್ ಸ್ವಾಗತಿಸಿದರು. ಉಪ ನಿರ್ದೇಶಕ ಡಾ.ಪಿ. ಕೃಷ್ಣಯ್ಯ ಇದ್ದರು. ಸಹಾಯಕ ನಿರ್ದೇಶಕ ಡಾ.ಎಚ್.ಎಸ್. ಕೃಷ್ಣಕುಮಾರ್ ಬಹುಮಾನ ವಿಜೇತರ ಪಟ್ಟಿ ಓದಿದರು. ಯೋಗ ತರಬೇತುದಾರ ಬಿ. ರವಿ ನಿರೂಪಿಸಿದರು. ಕಬ್ಬಡಿ ತರಬೇತುದಾರ ಆರ್. ರಮೇಶ್ ವಂದಿಸಿದರು.



ಅಂತರ ಕಾಲೇಜು ಅಂತರ ವಲಯ ಪುರುಷರ ಕ್ರೀಡಾಕೂಟದಲ್ಲಿ ಮಹಾಜನ ಕಾಲೇಜು ಸಮಗ್ರ ತಂಡ ಪ್ರಶಸ್ತಿ ಪಡೆಯಿತು. ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ. ಮಹದೇವನ್, ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ. ವೆಂಕಟೇಶ್, ಉಪ ನಿರ್ದೇಶಕ ಡಾ.ಪಿ. ಕೃಷ್ಣಯ್ಯ ಇದ್ದಾರೆ.

ಈದ ಮೂರು ದಿನಗಳಿಂದ ನಡೆದ 15 ಪಂಥ್ಯಗಳಲ್ಲಿ 40 ಕಾಲೇಜುಗಳ ಸುಮಾರು 800 ಕ್ರೀಡಾಪಟುಗಳು ಪಾಲ್ಗೊಂಡಿದ್ದರು. ಕ್ರೀಡಾಕೂಟದಲ್ಲಿ ಮೊದಲ ನಾಲ್ಕು ಸ್ಥಾನಗಳನ್ನು ಪಡೆದವರ ವಿವರ ಈ ಕೆಳಕಂಡಂತಿದೆ.

ಬ್ಯಾಡ್ಮಿಂಟನ್: ಸೇಪಿಯಂಟ್- ಮೈಸೂರು, ಪಿಇಎಸ್ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು-ಮಂಡ್ಯ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು- ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ಚನ್ನರಾಯಪಟ್ಟಣ.

ಬಾಲ್ ಬ್ಯಾಡ್ಮಿಂಟನ್: ಮಹಾರಾಜ ಕಾಲೇಜು- ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ಕೆ.ಆರ್. ನಗರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ನಂಜನಗೂಡು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ಭಾರತೀನಗರ

ಬ್ಯಾಸ್ಕೆಟ್ ಬಾಲ್: ಮೈಕಾ-ಮೈಸೂರು, ಮಹಾಜನ-ಮೈಸೂರು, ಪಿಇಎಸ್- ಮಂಡ್ಯ, ಸೆಂಟ್ ಜೋಸೆಫ್- ಹಾಸನ

ಚೆಸ್: ಮಹಾಜನ- ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ನಂಜನಗೂಡು, ಯುವರಾಜ- ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ಕೆ.ಆರ್. ನಗರ

ಕ್ರಿಕೆಟ್: ಜ- ಮೈಸೂರು, ಮಹಾಜನ-ಮೈಸೂರು, ಸರ್ಕಾರಿ ವಿಜ್ಞಾನ ಕಾಲೇಜು-ಹಾಸನ, ಪಿಇಎಸ್- ಮಂಡ್ಯ

ಫುಟ್‌ಬಾಲ್: ಸೆಂಟ್ ಫಿಲೋಮಿನಾ-ಮೈಸೂರು, ಪಿಇಎಸ್-ಮಂಡ್ಯ, ಸೇಪಿಯಂಟ್, ದೇವರಾಜ ಅರಸ್ ಕಾಲೇಜು- ಹುಣಸೂರು

ಹ್ಯಾಂಡ್‌ಬಾಲ್: ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು- ಮೈಸೂರು, ಯುವರಾಜ- ಮೈಸೂರು. ಸೆಂಟ್ ಜೋಸೆಫ್- ಹಾಸನ, ಎಚ್‌ಆರ್‌ಎಚ್‌ಇ- ಹಾಸನ

ಕಬ್ಬಡಿ: ವಿದ್ಯಾವಿಕಾಸ್- ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ಚನ್ನರಾಯಪಟ್ಟಣ, ಎಸ್‌ಎ ಎಫ್‌ಜಿಸಿ- ಚನ್ನರಾಯಪಟ್ಟಣ, ವಿಜಯ ಕಾಲೇಜು- ಪಾಂಡವಪುರ

ಖೋ ಖೋ: ಸರ್ಕಾರಿ ಕಲಾ, ವಾಣಿಜ್ಯ ಮತ್ತು ಪಿಜಿಕಾಲೇಜು-ಹಾಸನ,ಮಹಾರಾಜ-ಮೈಸೂರು, ಜಿಎಫ್‌ಜಿಸಿ- ಕ್ಯಾತನ ಹಳ್ಳಿ, ವಿಶ್ವಕವಿ ಕುವೆಂಪು ಕಾಲೇಜು- ಮೈಸೂರು

ಟೇಬಲ್ ಟೆನ್ನಿಸ್: ಮಹಾಜನ- ಮೈಸೂರು, ಜಿಎಫ್‌ಜಿಸಿ- ಕೆ.ಆರ್. ನಗರ, ಪಿಇಎಸ್- ಮಂಡ್ಯ, ಜಿಎಫ್‌ಜಿಸಿ- ನಂಜನಗೂಡು

ಥ್ರೋಬಾಲ್: ಮಹಾರಾಜ- ಮೈಸೂರು, ಭಾರತೀ ಕಾಲೇಜು- ಭಾರತೀನಗರ, ಜಿಎಫ್‌ಜಿಸಿ- ಗುಂಡ್ಲುಪೇಟೆ, ಜಿಎಫ್‌ಜಿಸಿ-ನಂಜನಗೂಡು

ವಾಲಿಬಾಲ್: ಪಿಜಿಎಸ್‌ಸಿ ಎಂಜಿ- ಮೈಸೂರು, ಮಹಾಜನ- ಮೈಸೂರು, ಎಸ್‌ಎ ಎಫ್‌ಜಿಸಿ- ಚನ್ನರಾಯಪಟ್ಟಣ, ಎಚ್‌ಆರ್‌ಐಎಚ್‌ಇ- ಹಾಸನ.

ಹಾಕಿ: ಡಿಪೌಲ್- ಬೆಳಗೊಳ (ಪ್ರಥಮ), ಮೈಕಾ- ಮೈಸೂರು (ದ್ವಿತೀಯ)

ಟೆನ್ನಿಸ್: ಪಿಜಿಎಸ್‌ಸಿ ಎಂಜಿ- ಮೈಸೂರು (ಪ್ರಥಮ), ಸೆಂಟ್ ಜೋಸೆಫ್- ಹಾಸನ (ದ್ವಿತೀಯ), ಡಿಪೌಲ್- ಬೆಳಗೊಳ (ತೃತೀಯ)

ಸಾಫ್ಟ್‌ಬಾಲ್: ಮೈಕಾ- ಮೈಸೂರು (ಪ್ರಥಮ), ಮಹಾಜನ- ಮೈಸೂರು (ದ್ವಿತೀಯ), ಜೆಎಸ್‌ಎಸ್- ನಂಜನಗೂಡು (ತೃತೀಯ)

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 22 ಜುಲೈ 2023

ಮೈಸೂರು ವಿವಿ ಅಂತರ ಕಾಲೇಜು ಕ್ರೀಡಾಕೂಟ: ಮಹಾಜನ ಕಾಲೇಜಿಗೆ ಸಮಗ್ರ ತಂಡ ಪ್ರಶಸ್ತಿ



ಮೈಸೂರು, ಜು. 21(ಸಿಎನ್)–ಕಳೆದ ಮೂರು ದಿನಗಳಿಂದ ನಡೆಯುತ್ತಿದ್ದ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು, ಅಂತರ ವಲಯ ಪುರುಷರ ಕ್ರೀಡಾಕೂಟದಲ್ಲಿ ಮಹಾಜನ ಕಾಲೇಜು ಸಮಗ್ರ ತಂಡ ಪ್ರಶಸ್ತಿ ಬಾಚಿಕೊಂಡಿದೆ. ಮಹಾರಾಜ ಕಾಲೇಜು ದ್ವಿತೀಯ ಸ್ಥಾನ ಪಡೆದರೆ, ಮೈಕಾ ಕಾಲೇಜು ತೃತೀಯ ಸ್ಥಾನ ಪಡೆದಿದೆ.

ಈ ಕ್ರೀಡಾಕೂಟದಲ್ಲಿ 40 ಕಾಲೇಜುಗಳ ಸುಮಾರು 800 ಕ್ರೀಡಾಪಟುಗಳು ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದರು.

ನಗರದ ಮೈಸೂರು ವಿಶ್ವವಿದ್ಯಾನಿಲಯ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಶುಕ್ರವಾರ ನಡೆದ ಸಮಾರೋಪ ಸಮಾರಂಭದಲ್ಲಿ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ. ಮಹದೇವನ್, ಸಿಂಡಿಕೇಟ್ ಸದಸ್ಯೆ ಡಾ. ಚೈತ್ರಾ ನಾರಾಯಣ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಹುಮಾನ ವಿತರಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಡಾ.ಪಿ. ವೆಂಕಟೇಶ್, ಉಪ ನಿರ್ದೇಶಕ ಡಾ.ಪಿ. ಕೃಷ್ಣಯ್ಯ ಮತ್ತಿತರರು ಉಪಸ್ಥಿತರಿದ್ದರು.

ವಿವಿಧ ಕ್ರೀಡೆಗಳಲ್ಲಿ ಪ್ರಶಸ್ತಿ ಪಡೆದ ಕಾಲೇಜುಗಳ ಪಟ್ಟಿ: ಬ್ಯಾಡ್ಮಿಂಟನ್: ಸೇಪಿಯಂಟ್ ಮೈಸೂರು (ಪ್ರಥಮ), ಪಿಇಎಸ್ ವಿಜ್ಞಾನ ಹಾಗೂ ಕಲಾ ಮತ್ತು ವಾಣಿಜ್ಯ ಕಾಲೇಜು– ಮಂಡ್ಯ (ದ್ವಿತೀಯ), ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು– ಮೈಸೂರು (ತೃತೀಯ).

ಬಾಲ್ ಬ್ಯಾಡ್ಮಿಂಟನ್: ಮಹಾರಾಜ ಕಾಲೇಜು– ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು– ಕೆ.ಆರ್. ನಗರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು– ನಂಜನಗೂಡು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು– ಭಾರತೀನಗರ

ಬ್ಯಾಸ್ಕೆಟ್ ಬಾಲ್: ಮೈಕಾ– ಮೈಸೂರು, ಮಹಾಜನ – ಮೈಸೂರು, ಪಿಇಎಸ್– ಮಂಡ್ಯ, ಸೆಂಟ್ ಜೋಸೆಫ್– ಹಾಸನ

ಚೆಸ್: ಮಹಾಜನ–ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು– ನಂಜನಗೂಡು, ಯುವರಾಜ– ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು– ಕೆ.ಆರ್. ನಗರ.

ಕ್ರಿಕೆಟ್: ಮಹಾರಾಜ–ಮೈಸೂರು, ಮಹಾಜನ–ಮೈಸೂರು, ಸರ್ಕಾರಿ ವಿಜ್ಞಾನ ಕಾಲೇಜು– ಹಾಸನ, ಪಿಇಎಸ್– ಮಂಡ್ಯ

ಫುಟ್‌ಬಾಲ್: ಸೆಂಟ್ ಫಿಲೋಮಿನಾ–ಮೈಸೂರು, ಪಿಇಎಸ್– ಮಂಡ್ಯ ಸೇಪಿಯಂಟ್, ದೇವರಾಜ ಅರಸ್ ಕಾಲೇಜು– ಹುಣಸೂರು.

ಹ್ಯಾಂಡ್‌ಬಾಲ್: ಸೆಂಟ್ ಜೋಸೆಫ್– ಪ್ರಥಮ ದರ್ಜೆ ಕಾಲೇಜು–ಮೈಸೂರು, ಯುವರಾಜ–ಮೈಸೂರು, ಸೆಂಟ್ ಜೋಸೆಫ್– ಹಾಸನ, ಎಚ್‌ಆರ್‌ಐಎಚ್‌ಇ–ಹಾಸನ.

ಕ್ಯುಡೊ: ವಿದ್ಯಾವಿಕಾಸ್– ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು–ಚನ್ನರಾಯಪಟ್ಟಣ, ಎಸ್‌ಎಎಫ್‌ಜಿಸಿ– ಚನ್ನರಾಯಪಟ್ಟಣ, ವಿಜಯ ಕಾಲೇಜು– ಪಾಂಡವಪುರ.

ಖೋಖೋ: ಸರ್ಕಾರಿ ಕಲಾ, ವಾಣಿಜ್ಯ ಮತ್ತು ಪಿಜಿ ಕಾಲೇಜು–ಹಾಸನ, ಮಹಾರಾಜ–ಮೈಸೂರು, ಜಿಎಫ್‌ಜಿಸಿ– ಕೃತಕಹಳ್ಳಿ, ವಿಶ್ವಕವಿ ಕುವೆಂಪು ಕಾಲೇಜು–ಮೈಸೂರು

ಟೇಬಲ್ ಟೆನ್ನಿಸ್: ಮಹಾಜನ–ಮೈಸೂರು, ಜಿಎಫ್‌ಜಿಸಿ–ಕೆ.ಆರ್. ನಗರ, ಪಿಇಎಸ್– ಮಂಡ್ಯ, ಜಿಎಫ್‌ಜಿಸಿ–ನಂಜನಗೂಡು

ಥ್ರೋಬಾಲ್: ಮಹಾರಾಜ–ಮೈಸೂರು, ಭಾರತೀ ಕಾಲೇಜು–ಭಾರತೀನಗರ, ಜಿಎಫ್‌ಜಿಸಿ– ಗುಂಡ್ಲುಪೇಟೆ, ಜಿಎಫ್‌ಜಿಸಿ– ನಂಜನಗೂಡು.

ವಾಲಿಬಾಲ್: ಪಿಜಿಎಸ್‌ಸಿ, ಎಂಜಿ– ಮೈಸೂರು, ಮಹಾಜನ– ಮೈಸೂರು, ಎಸ್‌ಎಎಫ್‌ಜಿಸಿ– ಚನ್ನರಾಯಪಟ್ಟಣ, ಎಚ್‌ಆರ್‌ಐಎಚ್‌ಇ– ಹಾಸನ.

ಹಾಕಿ: ಡಿಪೌಲ್– ಬೆಳಗೊಳ (ಪ್ರಥಮ), ಮೈಕಾ– ಮೈಸೂರು (ದ್ವಿತೀಯ).

ಟೆನಿಸ್: ಪಿಜಿಎಸ್‌ಸಿ ಎಂಜಿ–ಮೈಸೂರು (ಪ್ರಥಮ), ಸೆಂಟ್ ಜೋಸೆಫ್–ಹಾಸನ (ದ್ವಿತೀಯ), ಡಿಪೌಲ್– ಬೆಳಗೊಳ (ತೃತೀಯ).

ಸಾಫ್ಟ್‌ಬಾಲ್: ಮೈಕಾ– ಮೈಸೂರು (ಪ್ರಥಮ), ಮಹಾಜನ–ಮೈಸೂರು (ದ್ವಿತೀಯ), ಜೆಎಸ್‌ಎಸ್–ನಂಜನಗೂಡು (ತೃತೀಯ) ಸ್ಥಾನ ಪಡೆದವು.

MFGE In the Eyes of the Press.....

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶನಿವಾರ • ಜುಲೈ 22, 2023

ಮೈಸೂರು ವಿಶ್ವವಿದ್ಯಾಲಯ ಅಂತರ ಕಾಲೇಜು–ವಲಯ ಪುರುಷರ ಕ್ರೀಡಾಕೂಟ

ಮಹಾಜನ ಕಾಲೇಜಿಗೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ಮಹಾಜನ ಕಾಲೇಜು ತಂಡದವರು ಇಲ್ಲಿ ಶುಕ್ರವಾರ ಮುಕ್ತಾಯವಾದ ಮೈಸೂರು ವಿಶ್ವವಿದ್ಯಾಲಯ ಅಂತರ ಕಾಲೇಜು- ಅಂತರ ವಲಯ ಪುರುಷರ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಗಳಿಸಿದರು. ಮಹಾರಾಜ ಕಾಲೇಜು ದ್ವಿತೀಯ, ಮೈಕಾ ಕಾಲೇಜು ತಂಡ ತೃತೀಯ ಸ್ಥಾನ ಪಡೆಯಿತು.

ಮಹಾಜನ ಕಾಲೇಜಿಗೆ 22, ಮಹಾರಾಜ ಕಾಲೇಜಿಗೆ 18 ಹಾಗೂ ಮೈಕಾ ಕಾಲೇಜಿಗೆ 13 ಪಾಯಿಂಟ್‌ಗಳು ದೊರೆತವು.

ಮೈಸೂರು ವಿಶ್ವವಿದ್ಯಾಲಯ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ. ಮಹದೇವನ್, ಸಿಂಡಿಕೇಟ್ ಸದಸ್ಯೆ ಡಾ. ಚೈತ್ರಾ ನಾರಾಯಣ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಹುಮಾನಗಳನ್ನು ವಿತರಿಸಿದರು.

ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ. ವೆಂಕಟೇಶ್, ಉಪ ನಿರ್ದೇಶಕ ಡಾ.ಪಿ. ಕೃಷ್ಣಯ್ಯ, ಸಹಾಯಕ ನಿರ್ದೇಶಕ ಡಾ.ಎಚ್.ಎಸ್. ಕೃಷ್ಣಕುಮಾರ್, ಯೋಗ ತರಬೇತುದಾರ ಬಿ. ರವಿ, ಕಬಡ್ಡಿ ತರಬೇತುದಾರ ಆರ್. ರಮೇಶ್ ಇದ್ದರು. ವಿವಿಧ 15 ಕ್ರೀಡೆಗಳಲ್ಲಿ 40 ಕಾಲೇಜುಗಳ 800 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕ್ರೀಡಾಕೂಟದಲ್ಲಿ ಮೊದಲ 4 ಸ್ಥಾನಗಳನ್ನು ಪಡೆದವರ ವಿವರ ಇಂತಿದೆ.

ಬ್ಯಾಡ್ಮಿಂಟನ್: ಸೇಪಿಯಂಟ್- ಮೈಸೂರು, ಪಿಇಎಸ್ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು- ಮಂಡ್ಯ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು- ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ಚನ್ನರಾಯಪಟ್ಟಣ.

ಬಾಲ್ ಬ್ಯಾಡ್ಮಿಂಟನ್: ಮಹಾರಾಜ ಕಾಲೇಜು- ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ಕೆ.ಆರ್. ನಗರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ನಂಜನಗೂಡು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ಭಾರತೀನಗರ.

ಬ್ಯಾಸ್ಕೆಟ್ ಬಾಲ್: ಮೈಕಾ- ಮೈಸೂರು, ಮಹಾಜನ- ಮೈಸೂರು, ಪಿಇಎಸ್- ಮಂಡ್ಯ, ಸೇಂಟ್ ಜೋಸೆಫ್- ಹಾಸನ.

ಚೆಸ್: ಮಹಾಜನ- ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ನಂಜನಗೂಡು, ಯುವರಾಜ- ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ಕೆ.ಆರ್. ನಗರ.

ಕ್ರಿಕೆಟ್: ಮಹಾರಾಜ ಕಾಲೇಜು- ಮೈಸೂರು, ಮಹಾಜನ ಕಾಲೇಜು- ಮೈಸೂರು, ಸರ್ಕಾರಿ ವಿಜ್ಞಾನ ಕಾಲೇಜು- ಹಾಸನ, ಪಿಇಎಸ್ ಕಾಲೇಜು- ಮಂಡ್ಯ.

ಟೆಟ್‌ಬಾಲ್: ಸೇಂಟ್ ಫಿಲೋಮಿನಾ- ಮೈಸೂರು, ಪಿಇಎಸ್- ಮಂಡ್ಯ, ಸೇಪಿಯಂಟ್, ದೇವರಾಜ ಅರಸ್ ಕಾಲೇಜು- ಹುಣಸೂರು.

ಹ್ಯಾಂಡ್‌ಬಾಲ್: ಸಂತ ಜೋಸೆಫ್ ಪ್ರಥಮ ದರ್ಜೆ ಕಾಲೇಜು- ಮೈಸೂರು, ಯುವರಾಜ- ಮೈಸೂರು, ಸಂತ ಜೋಸೆಫ್- ಹಾಸನ, ಎಚ್‌ಆರ್‌ಐಎಚ್‌ಇ- ಹಾಸನ.

ಕಬಡ್ಡಿ: ವಿದ್ಯಾವಿಕಾಸ- ಮೈಸೂರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು- ಚನ್ನರಾಯಪಟ್ಟಣ, ಎಸ್‌ಎ ಎಫ್‌ಜಿಸಿ- ಚನ್ನರಾಯಪಟ್ಟಣ. ವಿಜಯ ಕಾಲೇಜು- ಪಾಂಡವಪುರ.

ಕೊಕ್ಕೊ: ಸರ್ಕಾರಿ ಕಲಾ, ವಾಣಿಜ್ಯ ಮತ್ತು ಪಿಜಿ ಕಾಲೇಜು- ಹಾಸನ, ಮಹಾರಾಜ- ಮೈಸೂರು, ಜಿಎಫ್‌ಜಿಸಿ- ಕ್ಯಾತನಹಳ್ಳಿ. ವಿಶ್ವಕವಿ ಕುವೆಂಪು ಕಾಲೇಜು- ಮೈಸೂರು.

ಟೇಬಲ್ ಟೆನಿಸ್: ಮಹಾಜನ- ಮೈಸೂರು, ಜಿಎಫ್‌ಜಿಸಿ- ಕೆ.ಆರ್. ನಗರ, ಪಿಇಎಸ್- ಮಂಡ್ಯ, ಜಿಎಫ್‌ಜಿಸಿ- ನಂಜನಗೂಡು.

ಥ್ರೋಬಾಲ್: ಮಹಾರಾಜ- ಮೈಸೂರು, ಭಾರತೀ ಕಾಲೇಜು- ಭಾರತೀನಗರ, ಜಿಎಫ್‌ಜಿಸಿ- ಗುಂಡ್ಲುಪೇಟೆ. ಜಿಎಫ್‌ಜಿಸಿ- ನಂಜನಗೂಡು.

ವಾಲಿಬಾಲ್: ಪಿಜಿಎಸ್‌ಸಿ ಎಂಜಿ- ಮೈಸೂರು, ಮಹಾಜನ- ಮೈಸೂರು, ಎಸ್‌ಎ ಎಫ್‌ಜಿಸಿ- ಚನ್ನರಾಯಪಟ್ಟಣ, ಎಚ್‌ಆರ್‌ಐಎಚ್‌ಇ- ಹಾಸನ.

ಹಾಕಿ: ಡಿಪೌಲ್- ಬೆಳಗೊಳ (ಪ್ರಥಮ), ಮೈಕಾ- ಮೈಸೂರು (ದ್ವಿತೀಯ).

ಟೆನಿಸ್: ಪಿಜಿಎಸ್‌ಸಿ ಎಂಜಿ- ಮೈಸೂರು (ಪ್ರಥಮ), ಸಂತ ಜೋಸೆಫ್- ಹಾಸನ (ದ್ವಿತೀಯ), ಡಿಪೌಲ್ ಬೆಳಗೊಳ (ತೃತೀಯ).

ಮುಖ್ಯಾಂಶಗಳು

- ಮಹಾರಾಜ ಕಾಲೇಜಿಗೆ ದ್ವಿತೀಯ
- ಮೈಕಾ ಕಾಲೇಜಿಗೆ ತೃತೀಯ ಸ್ಥಾನ
- ಮಿಂಚಿದ ಕ್ರೀಡಾಪಟುಗಳು



ಮೈಸೂರು ವಿಶ್ವವಿದ್ಯಾಲಯ ಅಂತರ ಕಾಲೇಜು–ವಲಯ ಪುರುಷರ ಕ್ರೀಡಾಕೂಟದಲ್ಲಿ ಮಹಾಜನ ಕಾಲೇಜು ಸಮಗ್ರ ತಂಡ ಪ್ರಶಸ್ತಿ ಪಡೆಯಿತು. ಪ್ರೊ.ಕೆ.ಎಂ. ಮಹದೇವನ್, ಡಾ.ಚೈತ್ರಾ ನಾರಾಯಣ್, ಅಂಶಿ ಪ್ರಸನ್ನಕುಮಾರ್, ಡಾ.ಸಿ. ವೆಂಕಟೇಶ್, ಡಾ.ಎ. ಕೃಷ್ಣಯ್ಯ ಇದ್ದಾರೆ

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಶನಿವಾರ 22 ಜುಲೈ 2023
22 JULY 2023

ಮಹಾಜನ ಕಾಲೇಜು ತಂಡ ಟೀಂ ಚಾಂಪಿಯನ್

■ ವಿಜಯವಾಣಿ ಸುದ್ದಿಜಾಲ ಮೈಸೂರು

ಮೈಸೂರು ವಿಶ್ವವಿದ್ಯಾಲಯ ಅಂತರ ಕಾಲೇಜು ಅಂತರ ವಲಯ ಪುರುಷರ ವಿವಿಧ ಗುಂಪು ಸ್ಪರ್ಧೆಗಳ ಕ್ರೀಡಾಕೂಟದಲ್ಲಿ ಸಾರ್ವಭೌಮ ಸಾಧಿಸಿದ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ತಂಡ 'ಟೀಂ ಚಾಂಪಿಯನ್' ಪಟ್ಟ ತನ್ನದಾಗಿಸಿಕೊಂಡಿತು.

» ಮೈಸೂರು ವಿಶ್ವವಿದ್ಯಾಲಯ ಅಂತರ ಕಾಲೇಜು ಅಂತರ ವಲಯ ಕ್ರೀಡಾಕೂಟ

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಶುಕ್ರವಾರ ಮುಕ್ತಾಯಗೊಂಡ ಕ್ರೀಡಾಕೂಟದಲ್ಲಿ ಒಟ್ಟು 22 ಅಂಕಗಳೊಂದಿಗೆ 'ತಂಡ ಸಮಗ್ರ' ಪ್ರಶಸ್ತಿ ಪಡೆಯಿತು. ಅಂತೆಯೇ 18 ಅಂಕಗಳೊಂದಿಗೆ ಮಹಾರಾಜ ಕಾಲೇಜು ತಂಡ ದ್ವಿತೀಯ ಹಾಗೂ 13 ಅಂಕಗಳಿಸಿದ ಮೈಕಾ ಕಾಲೇಜು ತಂಡ ತೃತೀಯ ಸ್ಥಾನ ಪಡೆದವು. ಮೈಸೂರು ವಿವಿಯ ಸ್ಪೋರ್ಟ್ಸ್ ಪೆವಿಲಿಯನ್‌ನ ಒಳಾಂಗಣದಲ್ಲಿ ಶುಕ್ರವಾರ ಬಹುಮಾನ ವಿತರಣಾ ಸಮಾರಂಭ ನೆರವೇರಿತು. ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ.ಮಹದೇವನ್, ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ದೈಹಿಕ ಶಿಕ್ಷಣ ವಿಭಾಗದ ಪ್ರಭಾರ ನಿರ್ದೇಶಕ ಡಾ.ಸಿ.ವೆಂಕ ಟೇಶ್, ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ಇತರರಿದ್ದರು.

ಫಲಿತಾಂಶ: ಬ್ಯಾಡ್ಮಿಂಟನ್‌ನಲ್ಲಿ ಸೇಪಿಯೆಂಟ್ ಕಾಲೇಜು(ಪ್ರಥಮ), ಮಂಡ್ಯದ ಪಿಇಎಸ್(ದ್ವಿತೀಯ), ವಿದ್ಯಾವರ್ಧಕ(ತೃತೀಯ) ಬಹುಮಾನ. ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಮಹಾರಾಜ(ಪ್ರ), ಕೆ.ಆರ್.ನಗರದ ಜಿಎಫ್‌ಜಿಸಿ(ದ್ವಿ), ನಂಜನಗೂಡಿನ ಜಿಎಫ್‌ಜಿಸಿ(ತೃ). ಬಾಸ್ಕೆಟ್ ಬಾಲ್: ಮೈಕಾ(ಪ್ರ), ಮಹಾಜನ(ದ್ವಿ), ಮಂಡ್ಯದ ಪಿಇಎಸ್ (ತೃ). ಚೆಸ್: ಮಹಾಜನ(ಪ್ರ), ನಂಜನಗೂಡಿನ ಜಿಎಫ್‌ಜಿಸಿ(ದ್ವಿ), ಯುವರಾಜ(ತೃ). ಕ್ರಿಕೆಟ್‌ನಲ್ಲಿ ಮಹಾರಾಜ(ಪ್ರ), ಮಹಾಜನ(ದ್ವಿ), ಹಾಸನದ ಸರ್ಕಾರಿ ವಿಜ್ಞಾನ ಕಾಲೇಜು(ತೃ). ಫುಟ್‌ಬಾಲ್‌ನಲ್ಲಿ ಸೇಂಟ್ ಫಿಲೋಮಿನಾ(ಪ್ರ), ಮಂಡ್ಯದ ಪಿಇಎಸ್ (ದ್ವಿ), ಸೇಪಿಯೆಂಟ್(ತೃ). ಹ್ಯಾಂಡ್‌ಬಾಲ್: ಸೇಂಟ್ ಜೋಸೆಫ್(ಪ್ರ), ಯುವರಾಜ(ದ್ವಿ), ಹಾಸನದ ಸೇಂಟ್ ಜೋಸೆಫ್(ತೃ). ಖೋಖೋ: ಹಾಸನದ ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು(ಪ್ರ), ಮಹಾರಾಜ (ದ್ವಿ), ಕ್ಯಾತನಹಳ್ಳಿ(ತೃ). ಸಾಫ್ಟ್‌ಬಾಲ್: ಮೈಕಾ(ಪ್ರ), ಮಹಾಜನ(ದ್ವಿ), ಜೆಎಸ್‌ಎಸ್ ನಂಜನಗೂಡು(ತೃ). ಟೆನಿಸ್: ಪಿಇಎಸ್ ಎಂಜಿ ಮಂಡ್ಯ(ಪ್ರ), ಹಾಸನದ ಸೇಂಟ್ ಜೋಸೆಫ್ (ದ್ವಿ), ಡಿ ಪಾಲ್(ತೃ). ಟೇಬಲ್ ಟೆನಿಸ್‌ನಲ್ಲಿ ಮಹಾಜನ(ಪ್ರ), ಜಿಎಫ್‌ಜಿಸಿ ಕೆ.ಆರ್.ನಗರ(ದ್ವಿ), ಪಿಇಎಸ್ ಮಂಡ್ಯ(ತೃ) ಬಹುಮಾನ ಪಡೆದವು.



ವಿಜಯವಾಣಿ ಚಿತ್ರ

ಪುರುಷರ ಗುಂಪು ಸ್ಪರ್ಧೆಗಳ ಕ್ರೀಡಾಕೂಟದಲ್ಲಿ ಗೆಲುವು ಪಡೆದ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ.ಮಹದೇವನ್, ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ್, ಪತ್ರಕರ್ತ ಅಂಶಿಪ್ರಸನ್ನಕುಮಾರ್, ದೈಹಿಕ ಶಿಕ್ಷಣ ವಿಭಾಗದ ಪ್ರಭಾರ ನಿರ್ದೇಶಕ ಡಾ.ಸಿ.ವೆಂಕಟೇಶ್, ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ಇತರರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 2.7.2023

ಗಾಯದ ಅಪಾಯ ನಿಯಂತ್ರಣಕ್ಕೆ ಹೆಲ್ಮೆಟ್ ಸಹಕಾರಿ

ವರ್ಕ್‌ಶಾಪ್ ಫ್ಯಾಕ್ಟರಿ ಸಂಸ್ಥಾಪಕ ಮುರುಗೇಶ್ ಪ್ರೇಮಕುಮಾರ್ ಅಭಿಮತ | ಮಹಾಜನ ಕಾಲೇಜಿನಲ್ಲಿ ಸಂಚಾರ ಜಾಗೃತಿ

• ಕನ್ನಡಪ್ರಭ ವಾರ್ತೆ ಮೈಸೂರು

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಂಚಾರ ಜಾಗೃತಿ ಸಮಿತಿ, ದೈಹಿಕ ಶಿಕ್ಷಣ ವಿಭಾಗ, ಎನ್‌ಸಿಸಿ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಸಂಚಾರ ಜಾಗೃತಿ ಕಾರ್ಯಕ್ರಮ ನಡೆಯಿತು.

ಸಂಪನ್ಮೂಲ ವ್ಯಕ್ತಿಯಾಗಿದ್ದ ವರ್ಕ್‌ಶಾಪ್ ಫ್ಯಾಕ್ಟರಿ ಸಂಸ್ಥಾಪಕ ಮುರುಗೇಶ್ ಪ್ರೇಮಕುಮಾರ ಮಾತನಾಡಿ, ಮೋಟಾರ್ ಸೈಕಲ್‌ಗಳು, ಸೈಕಲ್‌ಗಳು ಆಥವಾ ಇತರ ದ್ವಿಚಕ್ರ ವಾಹನಗಳನ್ನು ಓಡಿಸುವಾಗ ಹೆಲ್ಮೆಟ್‌ಗಳನ್ನು ಧರಿಸುವುದು ಆತ್ಮಗತ್ಯ ಸಂರಕ್ಷಿತಾ ಕ್ರಮವಾಗಿದ್ದು, ಅದು ಅಪಘಾತದ ಸಂದರ್ಭದಲ್ಲಿ ಜೀವವನ್ನು ಅದರಲ್ಲೂ ಮುಖ್ಯವಾಗಿ ತಲೆಯನ್ನು ರಕ್ಷಿಸಲು ಮತ್ತು ತೀವ್ರ ಗಾಯಗಳ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದರು.



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಂಚಾರ ಜಾಗೃತಿ ಕಾರ್ಯಕ್ರಮ ನಡೆಯಿತು.

ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಭಾರತದಲ್ಲಿ ಪ್ರತಿ ಗಂಟೆಗೆ 47 ಜನ ಮರಣ ಹೊಂದುತ್ತಿದ್ದು, ಪ್ರತಿ 100 ಪುರುಷರಿಗೆ 30 ಮಹಿಳೆಯರು ಅಪಘಾತಕ್ಕೆ ಒಳಗಾಗುತ್ತಿದ್ದಾರೆ. ಈ ರಸ್ತೆ ಅಪಘಾತಗಳಲ್ಲಿ ಪ್ರಮುಖವಾಗಿ ಯುವಕರ ಸಂಖ್ಯೆ ಹೆಚ್ಚಿದ್ದು, ಯುವಜನತೆ ಜಾಗೃತರಾಗಿ ವಾಹನ ಚಲಾಯಿಸಬೇಕಾಗಿದೆ, ರಸ್ತೆ ಅಪಘಾತದಲ್ಲಿ ಮರಣ ಹೊಂದಿದ ತನ್ನದೆ ಕುಟುಂಬದ ವ್ಯಕ್ತಿಯ ನೈಜ್ಯ ಘಟನೆಗಳ ಸಂಕ್ಷಿಪ್ತ ವಿವರವನ್ನು ವಿದ್ಯಾರ್ಥಿಗಳ ಮುಂದಿಟ್ಟರು. ಅಪಘಾತಗಳನ್ನು ತಡೆಗಟ್ಟಲು ಬಳಸಬೇಕಾದ ವಿವಿಧ ಉಪಕರಣಗಳನ್ನು (ವಸ್ತುಗಳು) ವಿದ್ಯಾರ್ಥಿಗಳಿಗೆ ಪರಿಚಯಿಸಿ ಆದರಿಂದಾಗುವ ಅನುಕೂಲಗಳನ್ನು ತಿಳಿಸಿಕೊಟ್ಟರು.

ಜಾಗೃತಿ ಕ್ರಮಗಳು: ಹೆಲ್ಮೆಟ್‌ಗಳನ್ನು ಪ್ರತಿ 4 ವರ್ಷಕೊಮ್ಮೆ ಬದಲಾಯಿಸಬೇಕು, ಸಾಮಾನ್ಯವಾಗಿ ಮನೆಯಿಂದ 5 ಕಿ.ಮೀ ವ್ಯಾಪ್ತಿಯೊಳಗೆ ಅಪಘಾತಗಳು ಕಂಡುಬಂದಿದ್ದು, ಅದಕ್ಕೆ ಪ್ರಮುಖವಾಗಿ ಹೆಲ್ಮೆಟ್ ಧರಿಸದೆ ಇರುವುದೆ ಕಾರಣವಾಗಿದೆ. ದೂರ ಸಂಚಾರಗಳಿಗೆ ರೈಡಿಂಗ್ ಉಪಕರಣಗಳನ್ನು ಬಳಸುವುದು ಉತ್ತಮ. ಕಡಿಮೆ ಸಿಸಿ ಬೈಕ್‌ಗಳನ್ನು ಉಪಯೋಗಿಸುವುದು ಉತ್ತಮ.

ವಿದ್ಯಾರ್ಥಿಗಳಿಗೆ ಸಂಚಾರ ಜಾಗೃತಿ, ಹೆಲ್ಮೆಟ್ ಬಳಕೆ ಮತ್ತು ಟ್ರಾಫಿಕ್ ಜಾಗೃತಿ ಅಂಕಿಅಂಶಗಳ ಕುರಿತು ಅತ್ಯಂತ ನವೀಕೃತ ಮತ್ತು ನಿಖರವಾದ ಮಾಹಿತಿಯೊಂದಿಗೆ ತಿಳಿಸಿದರು.

ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ಮುಖ್ಯಸ್ಥ ಎನ್. ಭಾಸ್ಕರ್, ಎನ್‌ಸಿಸಿ ಮುಖ್ಯಸ್ಥರಾದ ಬಿ.ಆರ್. ನಿಕೆಲ್, ಸಂಚಾರ ಜಾಗೃತಿ ಸಮಿತಿ ಸಂಚಾಲಕರಾದ ಮಧುಸೂದನ್ ಇದ್ದರು ಮತ್ತು ಬೋಧಕ, ಬೋಧಕೇತರ ವರ್ಗ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಆಂದೋಲನ
ದಿನ ಪತ್ರಿಕೆ

ಶುಕ್ರವಾರ, 18 ಆಗಸ್ಟ್ 2023

MAHAJANA EDUCATION SOCIETY (REGD.)

SBRR Mahajana First Grade College (Autonomous)

Affiliated to the University of Mysore & Re-accredited by NAAC with 'A' Grade
College with Potential for Excellence
Jayalakshmipuram, Mysuru – 570 012
Ph: 0821-2512065 Email: principal.fgc@mahajana.edu.in

APPOINTMENT NOTIFICATION

A WALK-IN-INTERVIEW will be conducted for the following temporary Posts at **SBRR Mahajana First Grade College (A), Jayalakshmipuram, Mysore-12**. Candidate should produce Curriculum Vitae, Original documents and a Xerox copy of all marks card and other relevant testimonials along with the Application. Candidates are required to be present **half an hour** before the timings mentioned against their subject for registration and verification of documents.

Sl. No.	Subject	No.of Posts	Date & Time	Venue
1.	Biotechnology	02	28.08.2023 at 11:00am	SBRR Mahajana First Grade College (A) Jayalakshmipuram Mysuru - 570012
2.	Commerce	02	28.08.2023 at 11:30am	
3.	BCA	03	28.08.2023 at 12:00Noon	
4.	Computer Science			
5.	English	01	28.08.2023 at 12:30pm	
6.	Journalism & Mass Communication	02	28.08.2023 at 1:00pm	
7.	Microbiology	02	28.08.2023 at 1:00pm	
8.	Sociology	01	28.08.2023 at 1:30pm	

NON-TEACHING POSTS

1.	Lab Assistant	01	• P.U.C. (Science) / B.Sc. • Proficiency in handling Chemistry Lab. • Previous Experience will be considered	28.08.2023 at 1:30 pm at SBRR Mahajana First Grade College (A)
2.	Superintendent	01	• Any graduate with Computer Knowledge. • Experience will be added qualification • Retired person from Aided Degree college/University/Any Govt. department (Education) is preferred.	

The minimum qualification for the post of Assistant Professor is Postgraduate degree from any recognized university in the concerned subject, with a minimum of 55% aggregate marks with NET/ SLET/ Ph.D. and preferably have teaching experience in degree colleges.

For more details contact 0821-2512065.

Sd/-
(Dr. B.R. Jayakumari)
Principal

Sd/-
(Dr. T. Vijayalakshmi Muralidhar)
Hon. Secretary

Sd/-
(Sri. T. Muralidhar Bhagavat)
President

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 18.8.2023

MAHAJANA EDUCATION SOCIETY (REGD.)

SBRR Mahajana First Grade College (Autonomous)

Affiliated to the University of Mysore & Re-accredited by NAAC with 'A' Grade
College with Potential for Excellence
Jayalakshmipuram, Mysuru – 570 012
Ph: 0821-2512065 Email: principal.fgc@mahajana.edu.in

APPOINTMENT NOTIFICATION

A WALK-IN-INTERVIEW will be conducted for the following temporary Posts at **SBRR Mahajana First Grade College (A), Jayalakshmipuram, Mysore-12**. Candidate should produce Curriculum Vitae, Original documents and a Xerox copy of all marks card and other relevant testimonials along with the Application. Candidates are required to be present **half an hour** before the timings mentioned against their subject for registration and verification of documents.

Sl. No.	Subject	No.of Posts	Date & Time	Venue
1.	Biotechnology	02	28.08.2023 at 11:00am	SBRR Mahajana First Grade College (A) Jayalakshmipuram Mysuru - 570012
2.	Commerce	02	28.08.2023 at 11:30am	
3.	BCA	03	28.08.2023 at 12:00Noon	
4.	Computer Science			
5.	English	01	28.08.2023 at 12:30pm	
6.	Journalism & Mass Communication	02	28.08.2023 at 1:00pm	
7.	Microbiology	02	28.08.2023 at 1:00pm	
8.	Sociology	01	28.08.2023 at 1:30pm	

NON-TEACHING POSTS

1.	Lab Assistant	01	• P.U.C. (Science) / B.Sc. • Proficiency in handling Chemistry Lab. • Previous Experience will be considered	28.08.2023 at 1:30 pm at SBRR Mahajana First Grade College (A)
2.	Superintendent	01	• Any graduate with Computer Knowledge. • Experience will be added qualification • Retired person from Aided Degree college/University/Any Govt. department (Education) is preferred.	

The minimum qualification for the post of Assistant Professor is Postgraduate degree from any recognized university in the concerned subject, with a minimum of 55% aggregate marks with NET/ SLET/ Ph.D. and preferably have teaching experience in degree colleges.

For more details contact 0821-2512065.

Sd/-
(Dr. B.R. Jayakumari)
Principal

Sd/-
(Dr. T. Vijayalakshmi Muralidhar)
Hon. Secretary

Sd/-
(Sri. T. Muralidhar Bhagavat)
President

MFGE In the Eyes of the Press.....

ಅಂಕೋಲಾ
ದಿನ ಪತ್ರಿಕೆ

ಶುಕ್ರವಾರ, 18 ಆಗಸ್ಟ್ 2023



ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಚಿಂತಕ ಡಾ.ಎಸ್.ತುಕಾರಾಮ್ ಅವರು ಧ್ವಜಾರೋಹಣ ನೆರವೇರಿಸಿದರು. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಟಿ.ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ಜಯಲಕ್ಷ್ಮೀ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಡಾ.ಸಿ.ಕೆ. ರೇಣುಕಾರ್ಯ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಎಂ.ಪ್ರಭುಸ್ವಾಮಿ, ಮಹಾಜನ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಎಂ.ಎಸ್.ರಾಜೇಶ್ವರಿ ಅಯ್ಯರ್ ಇತರರು ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 31.8.2023

ಹಣಕಾಸಿನ ಮೌಲ್ಯಮಾಪನ ಕುರಿತು ರಾಷ್ಟ್ರೀಯ ಕಾರ್ಯಾಗಾರ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವ್ಯವಹಾರ ಆಡಳಿತ ವಿಭಾಗವು ಹಣಕಾಸಿನ ಮೌಲ್ಯಮಾಪನ ಮತ್ತು ಮಾಡೆಲಿಂಗ್ ಕುರಿತು ಮೂರು ದಿನದ ರಾಷ್ಟ್ರಮಟ್ಟದ ಕಾರ್ಯಾಗಾರವನ್ನು ಸೆ. 14 ರಿಂದ 16ರವರೆಗೆ ಆಯೋಜಿಸಿದೆ. ಕಾರ್ಯಾಗಾರವು ವಿಶೇಷವಾಗಿ ಶಿಕ್ಷಣ ತಜ್ಞರು, ವೃತ್ತಿಪರರು ಮತ್ತು ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿದೆ. ಚಾಣಕ್ಯ ವಿವಿಯ ಪ್ರಾಧ್ಯಾಪಕ ಡಾ.ವಿ. ರಾಜೇಶ್‌ಕುಮಾರ್, ಫಿನ್‌ಟಾಕ್ ಇನ್ ಸ್ಟಿಟ್ಯೂಟ್ ಆಫ್ ಇಂಡಿಯಾದ ಸಂಸ್ಥಾಪಕ ಡಾ.ಕೆ. ಆರ್. ಶ್ರೀನಿವಾಸ್ ಮೊದಲಾದವರು ಪಾಲ್ಗೊಳ್ಳುವರು.



ಹೊಸ ದಿಗಂತ

ಗುರುವಾರ

28 ಸೆಪ್ಟೆಂಬರ್ 2023

ಭಗತ್‌ಸಿಂಗ್ ಜನ್ಮ ದಿನಾಚರಣೆ



ಮೈಸೂರು; ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ದೇಶಭಕ್ತ ಹಾಗೂ ಕ್ರಾಂತಿಕಾರಿ ನಾಯಕ ಭಗತ್‌ಸಿಂಗ್ ಅವರ 116ನೇ ಜನ್ಮ ದಿನಾಚರಣೆಯನ್ನು ಕಾಲೇಜಿನ ಎನ್‌ಸಿಸಿ ವತಿಯಿಂದ ಆಚರಿಸಲಾಯಿತು. ಭಗತ್‌ಸಿಂಗ್‌ರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಅವರು ಸ್ವಾತಂತ್ರ್ಯಕ್ಕಾಗಿ ನಡೆಸಿದ ಕ್ರಾಂತಿಕಾರಿ ಹೋರಾಟಗಳನ್ನು ಸ್ಮರಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲೆ ಡಾ. ಬಿ. ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥರಾ ದ ಡಾ. ಎಚ್. ಆರ್. ತೀಮ್ಮೆಗೌಡ, ಶೈಕ್ಷಣಿಕ ಡೀನ್ ಡಾ. ಶ್ರೀಧರ್ ಎಚ್, ಎನ್.ಸಿ.ಸಿ. ಇನ್‌ಫೆಂಟ್ರಿ ಮೇಜರ್ ನಿಖಿಲ್ ಬಿ. ಆರ್, ನ್ಯಾಕ್ ಸಂಯೋಜಕಿ ಗೀತಾ .ಡಿ, ಕ್ರೀಡಾ ವಿಭಾಗದ ನಿರ್ದೇಶಕ ಡಾ. ಭಾಸ್ಕರ್. ಹೆಚ್. ಎನ್, ಮತ್ತು ಎನ್.ಸಿ.ಸಿ. ಆರ್ಟಿಲರಿ ಬ್ಯಾಟ್ರಿ ಕ್ಯಾಪ್ಟನ್ ಡಾ. ಇಂದ್ರಾಣಿ ಎಂ. ಆರ್, ಕನ್ನಡ ವಿಭಾಗದ ಡಾ. ವಿನೋದಮ್ಮ, ಭೂಗೋಳ ಶಾಸ್ತ್ರ ವಿಭಾಗದ ಡಾ. ಸೋಮಶೇಖರ್ ಹಾಗೂ ಕಾಲೇಜಿನ ಅಧ್ಯಾಪಕ, ಅಧ್ಯಾಪಕೇತರರು ಉಪಸ್ಥಿತರಿದ್ದರು

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 28.09.2023

ಮಹಾಜನ ಕಾಲೇಜಿನಲ್ಲಿ ಭಗತ್ ಸಿಂಗ್ ಜನ್ಮ ದಿನ



ಮೈಸೂರು: ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ದೇಶಭಕ್ತಿ ಹಾಗೂ ಕ್ರಾಂತಿಕಾರಿ ನಾಯಕ ಭಗತ್‌ಸಿಂಗ್ ಅವರ 116ನೇ ಜನ್ಮ ದಿನಾಚರಣೆಯನ್ನು ಕಾಲೇಜಿನ ಎನ್‌ಸಿಸಿ ಘಟಕದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತೀಮ್ಮೆಗೌಡ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ್, ಎನ್.ಸಿ.ಸಿ ಇನ್ ಫೆನ್ಟ್ರಿ ಮೇಜರ್‌ಬಿ.ಆರ್. ನಿಖಿಲ್, ನ್ಯಾಕ್ ಸಂಯೋಜಕಿ ಡಿ. ಗೀತಾ, ಕ್ರೀಡಾ ವಿಭಾಗದ ನಿರ್ದೇಶಕ ಡಾ.ಎಚ್. ಎನ್. ಭಾಸ್ಕರ್‌ಮತ್ತು ಎನ್.ಸಿ.ಸಿ. ಆರ್ಟಿಲರಿ ಬ್ಯಾಟ್ರಿ ಕ್ಯಾಪ್ ಟನ್ ಡಾ.ಎಂ.ಆರ್. ಇಂದ್ರಾಣಿ, ಕನ್ನಡ ವಿಭಾಗದ ಡಾ. ವಿನೋದಮ್ಮ, ಭೂಗೋಳ ಶಾಸ್ತ್ರ ವಿಭಾಗದ ಡಾ. ಸೋಮಶೇಖರ್‌ಹಾಗೂ ಕಾಲೇಜಿನ ಅಧ್ಯಾಪಕ, ಅಧ್ಯಾಪಕೇತರರು ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಶನಿವಾರ, 23 ಸೆಪ್ಟೆಂಬರ್ 2023

'ಅಂತರಂಗದ ಚೆಲುವಿನ ಮಹಾವಿಮರ್ಶಕ ಜಿಎಚ್ ಎನ್'

ಮಹಾಜನದಲ್ಲಿ 'ಪ್ರೊ.ಜಿ.ಎಚ್.ನಾಯಕ-88 ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಕುರಿತು ರಾಷ್ಟ್ರೀಯ ವಿಚಾರಸಂಕಿರಣ

ಮೈಸೂರು: ಹೊರಗಿನ ಚೆಲುವಿನ ಜೊತೆಗೆ ಅಂತರಂಗದ ಚೆಲುವನ್ನೂ ಉಳಿಸಿಕೊಂಡ ಮಹಾವಿಮರ್ಶಕ ಪ್ರೊ.ಜಿ.ಎಚ್.ನಾಯಕ ಎಂದು ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ವಿದ್ಯಾಸಂಸ್ಥೆಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ, ಬೆಂಗಳೂರಿನ ಅಭಿನವ ಬಳಗದ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ 'ಪ್ರೊ. ಜಿ.ಎಚ್.ನಾಯಕ – 88 ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಆಧುನಿಕ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯ ಪರಂಪರೆಯನ್ನು ಒಳಗೊಡಿಸಿಕೊಂಡ ಕನ್ನಡದ ಕೆಲವೇ ಸಾಹಿತಿಗಳಲ್ಲಿ ಜಿ.ಎಚ್.ನಾಯಕರೂ ಒಬ್ಬರು. ಸಮಾಜದಲ್ಲಿ ಮನುಷ್ಯರ ಮಧ್ಯೆ ಪ್ರೀತಿಯ ಕೊರತೆ, ದ್ವೇಷ, ಅಸೂಯೆ, ಅಸಹನೆ ಎದ್ದು ಕಾಣುವಂತಹ ಪರಿಸ್ಥಿತಿಯಲ್ಲಿ ಪ್ರೀತಿ ಒಂದು ಶಕ್ತಿಯುತ ಮೌಲ್ಯ. ಪ್ರೊ.ಜಿ.ಎಚ್.ನಾಯಕ ಅವರ ಬದುಕು ಬರಹಗಳಿಂದ ಕಲಿಯಬಹುದಾದ ಪಾಠ ಏನೆಂದರೆ, ಮಾನವ



ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ.ಜಿ.ಎಚ್.ನಾಯಕರನ್ನು ಕುರಿತ 'ನ್ಯಾಯ ನಿಷ್ಠುರಿ' ಪುಸ್ತಕವನ್ನು ಲೋಕಾರ್ಪಣೆಗೊಳಿಸಲಾಯಿತು. ಪ್ರೊ.ಜಿ.ಎಚ್.ನಾಯಕರ ಪತ್ನಿ ಮೀರಾ ನಾಯಕ, ಹಿರಿಯ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರೊ.ಎನ್.ಬೋರಲಿಂಗಯ್ಯ, ಡಾ.ಟಿ.ಜಯಲಕ್ಷ್ಮೀ ಮುರಳೀಧರ್ ಇತರರು ಚಿತ್ರದಲ್ಲಿದ್ದಾರೆ.

ಸಂಬಂಧವನ್ನು ಗೌರವ ಘನತೆಗಳಿಂದ ಉಳಿಸಿಕೊಳ್ಳುವುದು. ಪರಸ್ಪರ ಭೇಟಿ, ಮಾತುಕತೆ, ಒಡನಾಟಗಳ ಕೊರತೆ ಇರುವ ಪರಿಸ್ಥಿತಿಯಲ್ಲಿ ಸಂಬಂಧಗಳು ಕ್ಷೀಣಿಸುತ್ತಿದ್ದು, ಇದನ್ನು ಉಳಿಸಿಕೊಳ್ಳಲು ಪ್ರೀತಿಯಿಂದ ಮಾತ್ರ ಸಾಧ್ಯ. ಎಂದಿಗೂ ಸೌಜನ್ಯದ ಎಳೆಯನ್ನು ದಾಟದೆ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದು ಮಾನವೀಯ ಸಂಬಂಧಗಳನ್ನು ಉಳಿಸಿಕೊಂಡು ಬಂದ ಮಹಾ ವಿಮರ್ಶಕ ಪ್ರೊ.ಜಿ.ಎಚ್. ನಾಯಕರು ಎಂದು ನುಡಿದರು.

ಪ್ರೊ.ಜಿ.ಎಚ್.ನಾಯಕರ ಒಡನಾಡಿ ಪ್ರೊ.ಎನ್. ಬೋರಲಿಂಗಯ್ಯ ಮಾತನಾಡಿ, ಜಿ.ಎಚ್.ನಾಯಕರು ವಿಮರ್ಶಯ ಮುತ್ಸದ್ದಿ. ಅವರ ಸಾಹಿತ್ಯದ ಬದುಕನ್ನು ಜೀವಂತವಾಗಿರಿಸಬೇಕಾದರೆ ಅವರ ಸಾಹಿತ್ಯ ಮತ್ತು ವಿಮರ್ಶಯ ಬಗ್ಗೆ ಹೆಚ್ಚಿನ ವಿಚಾರಸಂಕಿರಣಗಳು ನಡೆಯಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಜಿ.ಎಚ್.ನಾಯಕ ಅವರ ಆದರ್ಶಗಳು ಇಂದಿನ ಪೀಳಿಗೆಗೆ ಜೀವನ ಮೌಲ್ಯದ ಪಾಠಗಳಾಗಬೇಕು ಎಂದರು.

> ಸಾಹಿತಿಗಳಿಗಿಂತಲೂ ವಿಮರ್ಶಕರಿಗೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಅಂತಹ ಜವಾಬ್ದಾರಿಯನ್ನು ಅದ್ಭುತವಾಗಿ ನಿಭಾಯಿಸಿದ ಕೀರ್ತಿ ಪ್ರೊ.ಜಿ.ಎಚ್.ನಾಯಕರದ್ದು.
> -ಡಾ.ಟಿ.ಜಯಲಕ್ಷ್ಮೀ ಮುರಳೀಧರ್, ಗೌರವ ಕಾರ್ಯದರ್ಶಿ, ಮಹಾಜನ ವಿದ್ಯಾಸಂಸ್ಥೆ.

ಇದೇ ವೇಳೆ ಪ್ರೊ.ಜಿ.ಎಚ್.ನಾಯಕರನ್ನು ಕುರಿತ 'ನ್ಯಾಯ ನಿಷ್ಠುರಿ' ಪುಸ್ತಕವನ್ನು ಅವರ ಪತ್ನಿ ಮೀರಾ ನಾಯಕ ಅವರು ಲೋಕಾರ್ಪಣೆಗೊಳಿಸಿದರು.

ಪ್ರೊ.ಜಿ.ಎಚ್.ನಾಯಕರ ಪುತ್ರಿ ಕೀರ್ತಿ ನಾಯಕ ಮತ್ತು ಅಳಿಯ ಮದನ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ಜಯಲಕ್ಷ್ಮಿ ಮುರಳೀಧರ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ, ಬೆಂಗಳೂರಿನ ಅಭಿನವ ಪ್ರಕಾಶನದ ನ.ರವಿಕುಮಾರ್ ಹಾಜರಿದ್ದರು.

ಹೊಸ ದಿಗಂತ

ಶುಕ್ರವಾರ, 22 ಸೆಪ್ಟೆಂಬರ್ 2023

ಮಹಾಜನ ಕಾಲೇಜಿನಲ್ಲಿ ಆಯೋಜನೆ

ಇಂದು ವಿಚಾರ ಸಂಕಿರಣ

ಮೈಸೂರು: ಪ್ರೊ. ಜಿ.ಎಚ್ ನಾಯಕ 88 ಎಂಬ ಶೀರ್ಷಿಕೆಯಲ್ಲಿ ಸೆ.22 ರಂದು ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ಎಂಬ ವಿಷಯ ಕುರಿತು ಒಂದು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್ ಜಯಕುಮಾರಿ ತಿಳಿಸಿದರು. ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10 ಗಂಟೆಗೆ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ವಿಚಾರ ಸಂಕಿರಣಕ್ಕೆ ಚಾಲನೆ ನೀಡಲಿದ್ದಾರೆ. ಪ್ರೊ. ಎನ್ ಬೋರಲಿಂಗಯ್ಯ ಸಾಕ್ಷಿ ನುಡಿಗಳನ್ನು ನುಡಿಯಲಿದ್ದು, ಮೀರಾ ನಾಯಕ ಅವರು 'ನ್ಯಾಯ ನಿಷ್ಠುರಿ' ಜಿ.ಎಚ್. ನಾಯಕ, ಶತಮಾನದ ಕನ್ನಡ ಸಾಹಿತ್ಯ : ಜಿ.ಎಚ್ ನಾಯಕ ಕೃತಿಗಳ ಲೋಕಾರ್ಪಣೆ ನೆರವೇರಿಸುತ್ತಾರೆ.

- ಅಂಕಣ 1 ರಲ್ಲಿ ''ಅಂತಃಕರಣದ ಅನುರೂಪ ಜಿ.ಎಚ್ ನಾಯಕ'' ಎಂಬ ಶೀರ್ಷಿಕೆಯಡಿಯಲ್ಲಿ ''ಜಿ.ಎಚ್ ನಾಯಕರಿಂದ ನಾನು ಕಲಿತದ್ದೇನು?'' ಎಂಬ ವಿಷಯ ಕುರಿತು ಜಿ.ಎಚ್ ನಾಯಕರ ಮಗಳು ಕೀರ್ತಿ ನಾಯಕ, ''ಕಲಿಯುತ್ತ ಕಲಿಸಿದ ಪರಿ'' ವಿಷಯ ಕುರಿತು ಪ್ರೊ. ಪಂಡಿತಾರಾಧ್ಯ, ''ನಾಯಕರ ನಿಜದನಿ'' ವಿಷಯ ಕುರಿತು ಪ್ರೊ. ಎಂ ಕೃಷ್ಣೇಗೌಡ ಮಾತನಾಡಲಿದ್ದಾರೆ.
- ಅಂಕಣ 2 ರಲ್ಲಿ ಕನ್ನಡ ಸಾಹಿತ್ಯದಲ್ಲಿ ಮೌಲ್ಯಮಾರ್ಗದ ಮಾದರಿಗಳು ಎಂಬ ವಿಷಯ



ಕುರಿತು ಡಾ. ರಾಜೇಂದ್ರ ಚೆನ್ನಿ ವಿಚಾರಮಂಡನೆ ಮಾಡಲಿದ್ದಾರೆ.

- ಅಂಕಣ 3 ರಲ್ಲಿ ''ಮೌಲ್ಯ ಮಾರ್ಗಗಳು ಸಮಕಾಲೀನತೆ ಮತ್ತು ಸಾರ್ವಕಾಲಿಕತೆ'' ಶೀರ್ಷಿಕೆಯಡಿಯಲ್ಲಿ 'ಸಾಂಸ್ಕೃತಿಕ ಎಚ್ಚರದ ನೆಲೆ' ಡಾ. ವಿಕ್ರಮ ವಿಸಾಜಿ, 'ಸಮುದಾಯ ಪ್ರಜ್ಞೆಯ ನೆಲೆ' ಡಾ. ಸುಭಾಷ್ ರಾಜಮಾನೆ, 'ಸಾಮರಸ್ಯದ ನೆಲೆ' ಡಾ. ಸಿರಾಜ್ ಅಹಮದ್, 'ಸೃಜನಶೀಲ ನೆಲೆ' ಡಾ. ಪಿ. ಚಂದ್ರಿಕಾ, 'ಭಾಷಿಕ ನೆಲೆ' ಪ್ರೊ. ತಮಿಳ್ ಸೆಲ್ವಿ ವಿಚಾರ ಮಂಡನೆ ಮಾಡಲಿದ್ದಾರೆ.
- ಅಂಕಣ 4 ವಿಚಾರ ಸಂಕಿರಣದ ಸಮನ್ವಯ ನುಡಿ ಸಮಾರಂಭ ಸಂಜೆ 4 ಗಂಟೆಗೆ ನಡೆಯಲಿದ್ದು, ಡಾ. ಎಂ.ಎಸ್ ಆಶಾದೇವಿ 'ಸಮನ್ವಯ ನುಡಿ'ಗಳನ್ನಾಡಲಿದ್ದು, ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್ ಜಯಕುಮಾರಿ ಮಾತನಾಡಲಿದ್ದಾರೆ.

ಈ ವಿಚಾರ ಸಂಕಿರಣಕ್ಕೆ ಕನ್ನಡ ನಾಡಿನಾದ್ಯಂತ 250ಕ್ಕೂ ಹೆಚ್ಚು ಕನ್ನಡ ಪ್ರಾಧ್ಯಾಪಕರು, ಸಂಶೋಧಕರು, ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್.ತಿಮ್ಮೇಗೌಡ ಉಪಸ್ಥಿತರಿದ್ದರು.

MFGE In the Eyes of the Press.....

ಹೊಸ ದಿಗಂತ

ಶನಿವಾರ
23 ಸೆಪ್ಟೆಂಬರ್ 2023

ಸಂಬಂಧವನ್ನು ಗೌರವಿಸಿ

ಮೈಸೂರು: ಮಾನವ ಸಂಬಂಧವನ್ನು ಗೌರವ ಘನತೆಗಳಿಂದ ಉಳಿಸಿಕೊಳ್ಳಬೇಕು ಎಂದು ಸಾಹಿತಿ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗವು ಬೆಂಗಳೂರಿನ ಅಭಿನವ ಬಳಗದ ಸಹಯೋಗದೊಂದಿಗೆ 'ಪ್ರೊ. ಜಿ.ಎಚ್. ನಾಯಕ 88 ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆಧುನಿಕ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯ ಪರಂಪರೆಯನ್ನು ಒಳಗೊಡಿಸಿಕೊಂಡ ಕನ್ನಡದ ಕೆಲವೇ ಸಾಹಿತಿಗಳಲ್ಲಿ ಜಿ.ಎಚ್. ನಾಯಕ ಒಬ್ಬರು. ಸಮಾಜದಲ್ಲಿ ಮನುಷ್ಯರ ಮಧ್ಯೆ ಪ್ರೀತಿಯ ಕೊರತೆ, ದ್ವೇಷ, ಅಸಹನೆ, ಅಸೂಯೆ ಎದ್ದುಕಾಣುವಂತಹ ಪರಿಸ್ಥಿತಿಯಲ್ಲಿ ಪ್ರೀತಿ ಒಂದು ಶಕ್ತಿಯುತ ಮೌಲ್ಯ ಎಂದು ನುಡಿದರು. ಪ್ರೊ. ಜಿ.ಎಚ್. ನಾಯಕ ಅವರ ಬದುಕು ಬರಹಗಳಿಂದ ಕಲಿಯಬಹುದಾದ ಪಾಠ ಏನೆಂದರೆ, ಮಾನವ ಸಂಬಂಧವನ್ನು ಗೌರವ ಘನತೆಗಳಿಂದ ಉಳಿಸಿಕೊಳ್ಳುವುದು. ಪರಸ್ಪರ ಭೇಟಿ, ಮಾತುಕತೆ, ಒಡನಾಟಗಳ ಕೊರತೆ ಇರುವ ಪರಿಸ್ಥಿತಿಯಲ್ಲಿ ಸಂಬಂಧಗಳು ಕ್ಷೀಣಿಸುತ್ತಿದ್ದು, ಇದನ್ನು ಉಳಿಸಿಕೊಳ್ಳಲು ಪ್ರೀತಿಯಿಂದ ಮಾತ್ರ ಸಾಧ್ಯ. ಹೊರಗಿನ ಚೆಲುವಿನ ಜೊತೆಗೆ ಅಂತರಂಗದ ಚೆಲುವನ್ನು ಉಳಿಸಿಕೊಂಡ ಮಹಾವಿಮರ್ಶಕ ಪ್ರೊ. ಜಿ.ಎಚ್. ನಾಯಕ. ಇಂತಹ

■ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಬಾಲಸುಬ್ರಹ್ಮಣ್ಯ ಮಾತು

ಸಾಹಿತಿಗಳ ಹೆಸರಿನಲ್ಲಿ ವಿಚಾರ ಸಂಕಿರಣ ನಡೆಯುತ್ತಿರುವುದು ಹೆಮ್ಮೆಯ ವಿಷಯ ಎಂದು ನುಡಿದರು.

ಪ್ರೊ. ಜಿ.ಎಚ್ ನಾಯಕರ ಒಡನಾಡಿ ಪ್ರೊ. ಎನ್. ಬೋರಲಿಂಗಯ್ಯ ಮಾತನಾಡಿ, ಜಿ.ಎಚ್. ನಾಯಕ ಅವರನ್ನು ವಿಮರ್ಶೆಯ ಮುತ್ಸದ್ದಿ ಎಂದು ಬಣ್ಣಿಸಿದರು. ಸಾಹಿತ್ಯದ ಮೂಲಕ ಸ್ನೇಹ ಸಂಪದವನ್ನು ಮೆರೆದವರು. ಅವರ ಸ್ನೇಹದಲ್ಲಿ ನಿಷ್ಕಲ್ಮಶವಾದ ಪ್ರೀತಿ ಹಾಗೂ ವಾತ್ಸಲ್ಯಪೂರಿತ ಹೃದಯವು ಇತ್ತು. ವಿಮರ್ಶಾಣಾ ನೀತಿಯ ನಿಪುಣ ಜಿ.ಎಚ್. ನಾಯಕ. ಅವರು ಸಾಹಿತ್ಯ ಕ್ಷೇತ್ರದಲ್ಲಿ ಬೆಳೆಯುತ್ತಾ, ತಮ್ಮ ವಿಮರ್ಶೆಯನ್ನು ಪರಿಪಕ್ವವಾಗಿಸಿದವರು ಎಂದು ವಿವರಿಸಿದರು.

ಇದೇ ಸಂದರ್ಭದಲ್ಲಿ ಪ್ರೊ. ಜಿ.ಎಚ್. ನಾಯಕರ ಕುರಿತ 'ನ್ಯಾಯ ನಿಷ್ಠುರಿ' ಪುಸ್ತಕವನ್ನು ಅವರ ಧರ್ಮಪತ್ನಿ ಮೀರಾ ನಾಯಕ ಲೋಕಾರ್ಪಣೆಗೊಳಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಬೆಂಗಳೂರಿನ ಅಭಿನವ ಬಳಗದ ನ. ರವಿಕುಮಾರ್, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಪಕ ಡಾ. ವಿನೋದಮ್ಮ, ನಾಗೇಶ ಎಂ ಕಿರಣ್ ಕುಮಾರ್, ಮನೋಜ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 21.09.2023

ನಾಳೆ ಪ್ರೊ.ನಾಯಕ ಕುರಿತು ವಿಚಾರ ಸಂಕಿರಣ

• ಕನ್ನಡಪ್ರಭ ವಾರ್ತೆ ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ ಮತ್ತು ಬೆಂಗಳೂರಿನ ಅಭಿನವ ಸಹಯೋಗದಲ್ಲಿ ಸೆ. 22 ರಂದು ಪ್ರೊ.ಜಿ.ಎಚ್. ನಾಯಕ- 88 ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಿದೆ ಎಂದು ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಎಚ್.ಆರ್. ತಿಮ್ಮೇಗೌಡ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಸಾಹಿತ್ಯ ಸಮಾಜದ ಪ್ರತಿಬಿಂಬವಾಗಿರುವ ಕಾರಣ ಸಾಮಾಜಿಕ ಪಲ್ಲಟಗಳನ್ನು ಅಧ್ಯಯನ ಮಾಡಲು ಸಾಧ್ಯ. ಜಿ.ಎಚ್. ನಾಯಕರು ಬದುಕು ಮತ್ತು ಬರವಣಿಗೆಯಲ್ಲಿ ಸಾಮಾಜಿಕ ಮೌಲ್ಯಗಳಿಗೆ ಹೆಚ್ಚು ಮಹತ್ವ ಕೊಟ್ಟವರು. ವಿಮರ್ಶೆ ಎನ್ನುವುದು ನಾಯಕರಿಗೆ ಕೇವಲ ಸಾಹಿತ್ಯಕ್ಕೆ ಮೀಸಲಾದ ಸಂಗತಿ ಆಗಿರಲಿಲ್ಲ. ಸಂಸ್ಕೃತಿ, ರಾಜಕೀಯ, ಸಾಮಾಜಿಕ ವಿದ್ಯಮಾನಗಳು, ಧಾರ್ಮಿಕ ಆಚರಣೆಗಳು, ವಿಚಾರಗಳು ಎಲ್ಲವನ್ನು ಒಳಗೊಂಡ ಸಮಗ್ರ ನೋಟವಾಗಿತ್ತು. ಹರಿತವಾದ, ನ್ಯಾಯಬದ್ಧವಾದ, ಸಮುದಾಯಗಳ ಸಮಗ್ರದೃಷ್ಟಿ ಧೋರಣೆಯಿಂದ ನೋಡುವ ವಿಧಾನವೇ ವಿಮರ್ಶೆ ಎಂದು ಗಾಢವಾಗಿ ನಂಬಿದ್ದ ನಾಯಕರು ಆ ಧಿಕ್ಕಿನ ಕಡೆಗೆ ಸದಾ ಚಲಿಸಲು ನೋಡುತ್ತಿದ್ದರು. 88 ವರ್ಷಗಳ ತುಂಬು ಬಾಳನ್ನು ಬಾಳಿ ಬದುಕಿಗೆ ವಿದಾಯ ಹೇಳಿದ ಪ್ರೊ. ಜಿ.ಎಚ್. ನಾಯಕರ ಬದುಕನ್ನು ಅವರ ಒಳಬಾಳಿನ ತಿರುಳನ್ನು, ನಿಲುವು ನೋಟಗಳನ್ನು, ಹೋರಾಟದ ಕೆಚ್ಚನ್ನು ಕಂಡವರಿಗೆ ನ್ಯಾಯ ನಿಷ್ಠುರಿ ನಮ್ಮ ನಾಯಕರೇ ಎನಿಸುತ್ತದೆ. ಸೆ. 22 ರಂದು ಬೆಳಿಗ್ಗೆ 10 ಗಂಟೆಗೆ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ವಿಚಾರ ಸಂಕಿರಣಕ್ಕೆ ನುಡಿ ಚಾಲನೆ ನೀಡುವರು. ಪ್ರೊ.ಎನ್. ಬೋರಲಿಂಗಯ್ಯ ಅವರು ಸಾಕ್ಷಿನುಡಿಗಳನ್ನು ನುಡಿಯಲಿದ್ದು, ಮೀರಾ ನಾಯಕ ಅವರು ನ್ಯಾಯ ನಿಷ್ಠುರಿ ಜಿ.ಎಚ್. ನಾಯಕ, ಶತಮಾನದ ಕನ್ನಡ ಸಾಹಿತ್ಯ : ಜಿ.ಎಚ್ ನಾಯಕ ಕೃತಿಗಳ ಲೋಕಾರ್ಪಣೆಗೊಳಿಸುವರು.

ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ ಪಾಲ್ಗೊಳ್ಳುವರು.

ಮೊದಲ ಗೋಷ್ಠಿಯಲ್ಲಿ ಅಂತಃಕರಣದ ಅನುರೂಪ ಜಿ.ಎಚ್. ನಾಯಕ ಎಂಬ ಶೀರ್ಷಿಕೆಯಡಿಯಲ್ಲಿ ಜಿ. ಎಚ್. ನಾಯಕರಿಂದ ನಾನು ಕಲಿತದ್ದೇನು? ಎಂಬ ವಿಷಯ ಕುರಿತು ಜಿ.ಎಚ್. ನಾಯಕರ ಅವರ ಮಗಳು ಕೀರ್ತಿ ನಾಯಕ ಅವರು, ಕಲಿಯುತ್ತ ಕಲಿಸಿದ ಪರಿ ವಿಷಯ ಕುರಿತು ಪ್ರೊ. ಪಂಡಿತಾರಾಧ್ಯ ಅವರು, ನಾಯಕರ ನಿಜದನಿ ವಿಷಯ ಕುರಿತು ಪ್ರೊ. ಎಂ ಕೃಷ್ಣೇಗೌಡ ಮಾತನಾಡುವರು.

ಎರಡನೇ ಗೋಷ್ಠಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಮೌಲ್ಯ ಮಾರ್ಗದ ಮಾದರಿ ಕುರಿತು ಡಾ. ರಾಜೇಂದ್ರ ಚೆನ್ನಿ ಅವರು ವಿಚಾರ ಮಂಡಿಸುವರು. 3ನೇ ಗೋಷ್ಠಿಯಲ್ಲಿ ಮೌಲ್ಯ ಮಾರ್ಗಗಳು ಸಮಕಾಲೀನತೆ ಮತ್ತು ಸಾರ್ವಕಾಲಿಕತೆ ಕುರಿತ ಶೀರ್ಷಿಕೆಯಡಿ ಸಾಂಸ್ಕೃತಿಕ ಎಚ್ಚರದ ನೆಲೆ ಡಾ. ವಿಕ್ರಮ ವಿಸಾಜಿ ಅವರು, ಸಮುದಾಯ ಪ್ರಜ್ಞೆಯ ನೆಲೆ ಡಾ. ಸುಭಾಷ್ ರಾಜಮಾನೆ, ಸಾಮರಸ್ಯದ ನೆಲೆ ಡಾ. ಸಿರಾಜ್ ಅಹಮದ್ ಅವರು, ಸೃಜನಶೀಲ ನೆಲೆ ಡಾ.ಪಿ. ಚಂದ್ರಿಕಾ ಅವರು, ಭಾಷಿಕ ನೆಲೆ ಪ್ರೊ. ತಮಿಳ್ ಸೆಲ್ವಿ ವಿಚಾರ ಮಂಡಿಸುವರು. ಈ ಗೋಷ್ಠಿಯಲ್ಲಿ ಜಿ.ಪಿ. ಬಸವರಾಜು ನಿರ್ವಹಿಸುವರು.

ಸಮನ್ವಯನುಡಿ ಸಮಾರಂಭವು ಸಂಜೆ 4 ಗಂಟೆಗೆ ನಡೆಯಲಿದ್ದು, ಡಾ. ಎಂ.ಎಸ್. ಆಶಾದೇವಿ ಸಮನ್ವಯ ನುಡಿಗಳನ್ನಾಡುವರು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ ಸಾಕ್ಷ್ಯನುಡಿಗಳನ್ನು ನುಡಿಯುವರು.

ಸುದ್ದಿಗೋಷ್ಠಿಯಲ್ಲಿ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಲಿಂಗರಾಜು ಇತರರು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 23.09.2023

ಜೀವನದಲ್ಲಿ ಗೌರವದಿಂದ ಸಂಬಂಧ ಉಳಿಸಿಕೊಳ್ಳಿ

ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಸಲಹೆ | ಜಿ.ಎಚ್. ನಾಯಕ-88 ಕುರಿತಂತೆ ರಾಷ್ಟ್ರೀಯ ವಿಚಾರ ಸಂಕಿರಣ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಮಾಜದಲ್ಲಿ ಮನುಷ್ಯರ ಮಧ್ಯೆ ಪ್ರೀತಿಯ ಕೊರತೆ, ದ್ವೇಷ, ಅಸಹನೆ, ಅಸೂಯೆ ಎದ್ದು ಕಾಣುವಂತಹ ಪರಿಸ್ಥಿತಿಯಲ್ಲಿ ಪ್ರೀತಿ ಒಂದು ಶಕ್ತಿಯುತ ಮೌಲ್ಯ ಎಂದು ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗವು ಬೆಂಗಳೂರಿನ ಅಭಿನವ ಬಳಗದ ಸಹಯೋಗದಲ್ಲಿ ಪ್ರೊ.ಜಿ.ಎಚ್. ನಾಯಕ 88 ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಆಧುನಿಕ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯ ಪರಂಪರೆಯನ್ನು ಒಳಗೊಡಿಸಿಕೊಂಡ ಕನ್ನಡದ ಕೆಲವೇ ಸಾಹಿತಿಗಳಲ್ಲಿ ಜಿ.ಎಚ್. ನಾಯಕ ಅವರು ಒಬ್ಬರು. ಅವರ ಬದುಕು ಬರಹಗಳಿಂದ ಕಲಿಯಬಹುದಾದ ಪಾಠ ಏನೆಂದರೆ, ಮಾನವ ಸಂಬಂಧವನ್ನು ಗೌರವ ಘನತೆಗಳಿಂದ



ಉಳಿಸಿಕೊಳ್ಳುವುದು. ಪರಸ್ಪರ ಭೇಟಿ, ಮಾತುಕತೆ, ಒಡನಾಟಗಳ ಕೊರತೆ ಇರುವ ಪರಿಸ್ಥಿತಿಯಲ್ಲಿ ಸಂಬಂಧಗಳು ಕ್ಷೀಣಿಸುತ್ತಿದ್ದು, ಇದನ್ನು ಉಳಿಸಿಕೊಳ್ಳಲು ಪ್ರೀತಿಯಿಂದ ಮಾತ್ರ ಸಾಧ್ಯ ಎಂದರು.

ಹೊರಗಿನ ಚೆಲುವಿನ ಜೊತೆಗೆ ಅಂತರಂಗದ ಚೆಲುವನ್ನು ಉಳಿಸಿಕೊಂಡ ಮಹಾವಿಮರ್ಶಕ ಪ್ರೊ.ಜಿ.ಎಚ್. ನಾಯಕ. ಇಂತಹ ಸಾಹಿತಿಗಳ ಹೆಸರಿನಲ್ಲಿ ವಿಚಾರ ಸಂಕಿರಣ ನಡೆಯುತ್ತಿರುವುದು ಹೆಮ್ಮೆಯ ವಿಷಯ ಎಂದು ನುಡಿದರು.

ಪ್ರೊ.ಜಿ.ಎಚ್. ನಾಯಕರು ಆಧುನಿಕ ಮನೋಭಾವದವರಾಗಿದ್ದರೂ ಕೂಡ ಅವರು ನಂಬಿರುವ ಮೌಲ್ಯವನ್ನು ಕೊನೆಯವರೆಗೂ ಉಳಿಸಿಕೊಂಡಿದ್ದರು. ನಿಷ್ಠುರವಾಗಿ ತಮ್ಮ ವಿಚಾರಗಳನ್ನು ಬರವಣಿಗೆಯ ರೂಪದಲ್ಲಿ ವ್ಯಕ್ತಪಡಿಸುತ್ತಿದ್ದರು. ಎಂದಿಗೂ ಸೌಜನ್ಯದ ಎಳೆಯನ್ನು ದಾಟದೆ ಮಾನವೀಯ ಮೌಲ್ಯವನ್ನು ಎತ್ತಿಹಿಡಿದು ಮಾನವೀಯ ಸಂಬಂಧಗಳನ್ನು ಉಳಿಸಿಕೊಂಡು ಬಂದ ಮಹಾ ವಿಮರ್ಶಕ ಎಂದು ಅವರು ಹೇಳಿದರು.

ಜಿ.ಎಚ್. ನಾಯಕರ ವಿಚಾರ ಸಂಕಿರಣಕ್ಕೆ ಎರಡು ಮಹತ್ವದ ಆಯಾಮಗಳಿದ್ದು, ಒಂದು ವಿಮರ್ಶೆಯ ಮಹತ್ವ ಮತ್ತೊಂದು ಮಾನವೀಯತೆಯ ಮಹತ್ವವಿದೆ ಎಂದರು.

ಪ್ರೊ.ಜಿ.ಎಚ್. ನಾಯಕರ ಮತ್ತೋರ್ವ ಒಡನಾಡಿ, ಪ್ರೊ.ಎನ್. ಬೋರಲಿಂಗಯ್ಯ ಅವರು ಸಾಕ್ಷಿ ನುಡಿಗಳನ್ನಾಡುತ್ತಾ ಜಿ.ಎಚ್. ನಾಯಕ ಅವರನ್ನು ವಿಮರ್ಶೆಯ ಮುತ್ಸದ್ದಿ ಎಂದು ಬಣ್ಣಿಸಿದರು. ಅವರ ಸಾಹಿತ್ಯದ ಬದುಕನ್ನು ಜೀವಂತವಾಗಿರಿಸಬೇಕಾದರೆ ಅವರ ಸಾಹಿತ್ಯ ಮತ್ತು ವಿಮರ್ಶೆಯ ಬಗ್ಗೆ ಹೆಚ್ಚಿನ ಸಂಖ್ಯೆಯ ವಿಚಾರ ಸಂಕಿರಣ ನಡೆಯಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಕನ್ನಡವನ್ನು ಕಟ್ಟುವ ಮತ್ತು ಬೆಳೆಸುವ ಕೆಲಸವನ್ನು ಮಾಡಬೇಕು. ಜಿ.ಎಚ್. ನಾಯಕ ಅವರ ಆದರ್ಶಗಳು ಇಂದಿನ ಪೀಳಿಗೆಗೆ ಜೀವನ ಮೌಲ್ಯದ ಪಾಠಗಳಾಗಬೇಕು ಎಂದು ಆಶಿಸಿದರು.

ಪ್ರೊ.ಜಿ.ಎಚ್. ನಾಯಕರ ಕುರಿತ ನ್ಯಾಯ ನಿಷ್ಠುರಿ ಪುಸ್ತಕವನ್ನು ಅವರ ಪತ್ನಿ ಮೀರಾ ನಾಯಕ ಲೋಕಾರ್ಪಣೆಗೊಳಿಸಿದರು. ಮೊದಲನೆಯ ಅಂಕಣದಲ್ಲಿ ಜಿ.ಎಚ್. ನಾಯಕರ ಪುತ್ರಿ ಕೀರ್ತಿ ನಾಯಕ ಅವರು, ತಮ್ಮ ತಂದೆಯೊಂದಿಗೆ ಇದ್ದ ಸಂಬಂಧವನ್ನು ನೆನೆಯುತ್ತಾ, ಜಿ.ಎಚ್. ನಾಯಕ ಅವರು ಒಬ್ಬ ತಂದೆಯಾಗಿ ತಮ್ಮ ವಿಚಾರಧಾರೆಗಳನ್ನು ನನ್ನ ಮೇಲೆ ಎಂದಿಗೂ ಬಲವಂತವಾಗಿ ಹೊರಿಸಲಿಲ್ಲ. ನನಗೆ ಬೇಕಾದ ಹಾಗೆ ನನ್ನ ಬದುಕನ್ನು ಕಟ್ಟಿಕೊಳ್ಳಲು ಸ್ವಾತಂತ್ರ್ಯ ನೀಡಿದರು ಎಂದು ನೆನಪಿಸಿಕೊಂಡರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಬೆಂಗಳೂರಿನ ಅಭಿನವ ಬಳಗದ ನ. ರವಿಕುಮಾರ್ ಇದ್ದರು.

MFGE In the Eyes of the Press.....

ಪ್ರತಿನಿಧಿ
...ಇವ ನಮ್ಮವ
ಶನಿವಾರ
ಸೆಪ್ಟೆಂಬರ್23, 2023

ಸಾಹಿತಿ ಡಾ ನರಹಳ್ಳಿ ಬಾಲಸುಬ್ರಹ್ಮಣ್ಯ ಅಭಿಪ್ರಾಯ

ಶಿಕ್ಷಣದಿಂದ ಗೌರವ, ಘನತೆ ಉಳಿಸಿಕೊಳ್ಳಬಹುದು

ಪ್ರತಿನಿಧಿ ವರದಿ ಮೈಸೂರು

ಸಮಾಜದಲ್ಲಿ ಮನುಷ್ಯರ ಮಧ್ಯೆ ಪ್ರೀತಿಯ ಕೊರತೆ, ದ್ವೇಷ, ಅಸಹನೆ, ಅಸೂಯೆ ಎದ್ದು ಕಾಣುವಂತಹ ಪರಿಸ್ಥಿತಿಯಲ್ಲಿ ಜಿ.ಎಚ್. ನಾಯಕ ಅವರ ಪ್ರೀತಿ ಒಂದು ಶಕ್ತಿಯುತ ಮೌಲ್ಯ ಎಂದು ಸಾಹಿತಿ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ರಾಷ್ಟ್ರೀಯ ವಿಚಾರ ಸಂಕಿರಣ

ನಗರದ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಬೆಂಗಳೂರಿನ ಅಭಿನವ ಬಳಗದ ಸಹಯೋಗದೊಂದಿಗೆ ಪ್ರೊ.ಜಿ.ಎಚ್.ನಾಯಕ 88 ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಆಧುನಿಕ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯ ಪರಂಪರೆ ಒಗ್ಗೂಡಿಸಿಕೊಂಡ ಕನ್ನಡದ ಕೆಲವೇ ಸಾಹಿತಿಗಳಲ್ಲಿ ಜಿ.ಎಚ್. ನಾಯಕ ಅವರು ಒಬ್ಬರು. ಪ್ರೊ. ಜಿ.ಎಚ್. ನಾಯಕ ಅವರ



ಬದುಕು ಬರಹಗಳಿಂದ ಕಲಿಯಬಹುದಾದ ಪಾಠ ಏನೆಂದರೆ, ಮಾನವ ಸಂಬಂಧವನ್ನು ಗೌರವ ಘನತೆಗಳಿಂದ ಉಳಿಸಿಕೊಳ್ಳುವುದು. ಪರಸ್ಪರ ಭೇಟಿ, ಮಾತುಕತೆ, ಒಡನಾಟಗಳ ಕೊರತೆ ಇರುವ ಪರಿಸ್ಥಿತಿಯಲ್ಲಿ ಸಂಬಂಧಗಳು ಕ್ಷೀಣಿಸುತ್ತಿದ್ದು, ಇದನ್ನು ಉಳಿಸಿಕೊಳ್ಳಲು ಪ್ರೀತಿಯಿಂದ ಮಾತ್ರ ಸಾಧ್ಯ ಎಂದರು.

ಪ್ರೊ.ಎನ್.ಬೋರಲಿಂಗಯ್ಯ ಮಾತನಾಡಿ, ಜಿ.ಎಚ್.ನಾಯಕ ಅವರನ್ನು ವಿಮರ್ಶೆಯ ಮುತ್ಸದ್ದಿ ಎಂದು ಬಣ್ಣಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯ ಕುಮಾರಿ ಮಾತನಾಡಿ, ಜಿ.ಎಚ್. ನಾಯಕ ಅವರ ಆದರ್ಶಗಳು ಇಂದಿನ ಪೀಳಿಗೆಗೆ ಜೀವನ ಮೌಲ್ಯದ ಪಾಠಗಳಾಗಬೇಕು ಎಂದು ಆಶಿಸಿದರು. ಇದೇ ಸಂದರ್ಭದಲ್ಲಿ ಪ್ರೊ. ಜಿ.ಎಚ್. ನಾಯಕರ ಕುರಿತ ನ್ಯಾಯ ನಿಷ್ಠುರ ಪುಸ್ತಕವನ್ನು ಅವರ ಧರ್ಮಪತ್ನಿ ಮೀರಾ ನಾಯಕ ಲೋಕಾರ್ಪಣೆಗೊಳಿಸಿದರು.

ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿ, ಸಾಹಿತಿಗಳಿಗಿಂತಲೂ ವಿಮರ್ಶಕರಿಗೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಅಂತಹ ಜವಾಬ್ದಾರಿಯನ್ನು ಅದ್ಭುತವಾಗಿ ನಿಭಾಯಿಸಿದ ಕೀರ್ತಿ ಪ್ರೊ. ಜಿ.ಎಚ್. ನಾಯಕರು ಎಂದು ಹೇಳಿದರು. ಜಿ.ಎಚ್ ನಾಯಕರ ಪುತ್ರಿ ಕೀರ್ತಿ ನಾಯಕ ಮಾತನಾಡಿ, ಜಿ.ಎಚ್.ನಾಯಕ ಅವರು ಒಬ್ಬ ತಂದೆಯಾಗಿ ತಮ್ಮ ವಿಚಾರಧಾರೆಗಳನ್ನು ನನ್ನ ಮೇಲೆ ಎಂದಿಗೂ ಬಲವಂತವಾಗಿ ಹೊರಿಸಲಿಲ್ಲ ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್. ಆರ್. ತಿಮ್ಮೇಗೌಡ, ಬೆಂಗಳೂರಿನ ಅಭಿನವ ಬಳಗದ ನ. ರವಿಕುಮಾರ್, ಪ್ರೊ.ಜಿ.ಎಚ್. ನಾಯಕ ಅವರ ಅಳಿಯ ಮಧನ್, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಪಕರಾದ ಡಾ. ವಿನೋದಮ್ಮ, ಎಂ.ನಾಗೇಶ, ಕಿರಣ್ ಕುಮಾರ್, ಮನೋಜ್‌ಕುಮಾರ್ ಭಾಗವಹಿಸಿದ್ದರು. ಕರ್ನಾಟಕ, ಆಂಧ್ರ, ತಮಿಳುನಾಡಿನಿಂದ 300ಕ್ಕೂ ಹೆಚ್ಚು ಕನ್ನಡ ವಿದ್ವಾಂಸರು, ಪ್ರಾಧ್ಯಾಪಕರು, ಸಂಶೋಧಕರು ಪಾಲ್ಗೊಂಡಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಶನಿವಾರ • ಸೆಪ್ಟೆಂಬರ್ 23, 2023

'ಮೌಲ್ಯ ಮಾರ್ಗ ತೋರಿದ ವಿಮರ್ಶಕ'

ಪ್ರೊ.ಜಿ.ಎಚ್.ನಾಯಕ ರಾಷ್ಟ್ರೀಯ ವಿಚಾರ ಸಂಕಿರಣ: ನರಹಳ್ಳಿ ಬಾಲಸುಬ್ರಹ್ಮಣ್ಯ ಅಭಿಮತ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಾಹಿತ್ಯ ವಿಮರ್ಶೆಯನ್ನು ನಿಷ್ಠುರವಾಗಿ ಬರೆದ ಪ್ರೊ. ಜಿ.ಎಚ್.ನಾಯಕ ಸಾಹಿತ್ಯಾಸಕ್ತರಿಗೆ ಮೌಲ್ಯಮಾರ್ಗ ತೋರಿದರು' ಎಂದು ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ನಗರದ ಮಹಾಜನ ವಿದ್ಯಾಸಂಸ್ಥೆಯಲ್ಲಿ ಶುಕ್ರವಾರ ಸಂಸ್ಥೆಯ ಕನ್ನಡ ವಿಭಾಗ ಹಾಗೂ ಅಭಿನವ ಪ್ರಕಾಶನ ಆಯೋಜಿಸಿದ್ದ 'ಪ್ರೊ.ಜಿ.ಎಚ್.ನಾಯಕ ರಾಷ್ಟ್ರೀಯ ವಿಚಾರ ಸಂಕಿರಣ' ಉದ್ಘಾಟಿಸಿ ಮಾತನಾಡಿ, 'ನವ್ಯ ಸಾಹಿತ್ಯ ವಿಮರ್ಶೆಯಲ್ಲಿ ನಾಯಕರ ಕೊಡುಗೆ ಅಪಾರ. ಸೌಜನ್ಯದ ಎಳೆಯನ್ನು ದಾಟದೆ ಮಾನವೀಯ ಮೌಲ್ಯ ಎತ್ತಿ ಹಿಡಿದರು' ಎಂದರು.

'ಆಧುನಿಕ ಮನೋಭಾವ ದವರಾಗಿದ್ದರೂ ನಂಬಿರುವ ಮೌಲ್ಯಗಳನ್ನು ಕೊನೆವರೆಗೂ ಉಳಿಸಿ ಕೊಂಡಿದ್ದರು. ವಿಚಾರಗಳನ್ನು ನಿಷ್ಠುರವಾಗಿ ಓದುಗರಿಗೆ ದಾಟಿಸಿದರು. ವಿಮರ್ಶಾ ಪ್ರಜ್ಞೆಯನ್ನು ನವ ತಲೆಮಾರಿನಲ್ಲಿ ಬೆಳೆಸಿದರು' ಎಂದರು.

ಲೇಖಕ ಪ್ರೊ.ಎನ್. ಬೋರಲಿಂಗಯ್ಯ ಮಾತನಾಡಿ, 'ನಾಯಕರು ವಿಮರ್ಶೆಯ ಮುತ್ಸದ್ದಿ. ದ್ವೇಷ ಬಿಟ್ಟು ಪ್ರೀತಿಯಿಂದ ದೇಶ ಕಟ್ಟುವ ಮನೋಭಾವದ ಅವರ ಸ್ನೇಹದಲ್ಲಿ ನಿಷ್ಕಲ್ಮಶ ಪ್ರೀತಿ ಹಾಗೂ ವಾತ್ಸಲ್ಯವಿತ್ತು' ಎಂದರು.



ಮೈಸೂರಿನ ಮಹಾಜನ ವಿದ್ಯಾಸಂಸ್ಥೆಯಲ್ಲಿ ಶುಕ್ರವಾರ ಆಯೋಜಿಸಿದ್ದ 'ಪ್ರೊ.ಜಿ.ಎಚ್.ನಾಯಕ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾವಚಿತ್ರಕ್ಕೆ ಮೀರಾನಾಯಕ, ಪ್ರೊ.ಎಂ.ಕೃಷ್ಣೇಗೌಡ, ಕೀರ್ತಿ ನಾಯಕ, ಜಯಕುಮಾರಿ, ಪ್ರೊ. ಎನ್.ಬೋರಲಿಂಗಯ್ಯ, ಪ್ರೊ.ನರಹಳ್ಳಿ ಬಾಲಸುಬ್ರಹ್ಮಣ್ಯ ಪುಷ್ಪನಮನ ಸಲ್ಲಿಸಿದರು

'ಸಮುದಾಯ ಪ್ರಜ್ಞೆಯ ನೆಲೆ' ಕುರಿತು ಮಾತನಾಡಿದ ವಿಮರ್ಶಕ ಡಾ.ಸುಭಾಷ್ ರಾಜಮಾನೆ, 'ನಾಯಕರ ವಿಮರ್ಶೆಯಲ್ಲಿ ಒಳನೋಟ ಕಡಿಮೆ. ಅವರು ಪ್ರಜಾಸತ್ತಾತ್ಮಕ ನೆಲೆಯಲ್ಲಿ ವಿಮರ್ಶೆ ನಡೆಸಿದರು. ಹೆಚ್ಚು ವಿವರ ತೆಗೆದುಕೊಳ್ಳುತ್ತಿದ್ದರು. ಜಾತ್ಯತೀತತೆಗೆ ಧರ್ಮನಿರಪೇಕ್ಷ ಅರ್ಥವಿದೆ. ಆದರೆ, ಅದನ್ನು ಒಪ್ಪದ ನಾಯಕರು ಸರ್ವಜನ ಸಮಭಾವ ಎಂಬ ಪದವನ್ನು ಟಂಕಿಸಿದ್ದರು. ಕುವೆಂಪು ಅವರು ಅಂಬೇಡ್ಕರ್ ಮುಖಾಮುಖಿ ಯಾಗದಿದ್ದನ್ನು ನಿಷ್ಠುರವಾಗಿ ಪ್ರಶ್ನೆ ಮಾಡಿದ್ದರು' ಎಂದು ಸ್ಮರಿಸಿದರು.

ಪ್ರೊ.ಎಂ.ಕೃಷ್ಣೇಗೌಡ, 'ವಿಮರ್ಶೆ ತಿದ್ದುಪಡಿಗೆ ಒಳಗಾಗಬೇಕು. ಸಿದ್ಧತೆ ಮತ್ತು ವಿನಯವಿರಬೇಕು. ಸಂವೇದನೆ ಯಲ್ಲಿ ಹೊಸತರ ಹುಡುಕಾಟವಿರಬೇಕು ಎಂದು ನಾಯಕರು ತೋರಿಕೊಟ್ಟರು' ಎಂದರು.

ವಿಮರ್ಶಕ ರಾಜೇಂದ್ರ ಚೆನ್ನಿ, 'ನಾಯಕರು ಕೃತಿ ನಿಷ್ಠವಾದ ವಿಮರ್ಶೆಯ ಮಾರ್ಗದಲ್ಲಿ ಇದ್ದವರು' ಎಂದರೆ, ಲೇಖಕ ಜಿ.ಪಿ.ಬಸವರಾಜು, 'ನಾಯಕರದು ರುಚಿ ಮತ್ತು ನ್ಯಾಯ ನಿಷ್ಠುರತೆಗೆ ಒಪ್ಪುವ ಮೌಲ್ಯವಾಗಿತ್ತು. ಅವರದ್ದು ಕಾರಣವಾದಿ ನಿಲುವು' ಎಂದು ಬಣ್ಣಿಸಿದರು.

ಪ್ರೊ.ಜಿ.ಎಚ್.ನಾಯಕರ ಕುರಿತ 'ನ್ಯಾಯ ನಿಷ್ಠುರಿ' ಪುಸ್ತಕವನ್ನು ಅವರ ಪತ್ನಿ ಮೀರಾ ನಾಯಕ ಬಿಡುಗಡೆ ಮಾಡಿದರು. ಪುತ್ರಿ ಕೀರ್ತಿ ನಾಯಕ ಅವರು ತಂದೆ ಪ್ರೀತಿಯನ್ನು ನೆನೆದರು.

ಪ್ರಾಂಶುಪಾಲೆ ಪ್ರೊ.ಬಿ.ಆರ್. ಜಯಕುಮಾರಿ, ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ ಮುರಳೀಧರ್, ಎಚ್.ಆರ್. ತಿಮ್ಮೇಗೌಡ, ಮದನ್, ವಿನೋದಮ್ಮ, ನಾಗೇಶ, ಕಿರಣ್‌ಕುಮಾರ್, ಮನೋಜ್‌ಕುಮಾರ್ ಇದ್ದರು.

'ಪ್ರತಿ ಬರವಣಿಗೆಯೂ ನೈತಿಕ ಶೋಧ'

'ಜಿ.ಎಚ್.ನಾಯಕರ ಪ್ರತಿ ಬರವಣಿಗೆಯೂ ಜೀವನ್ಮರಣದ ನೈತಿಕ ಶೋಧ. ಕಾವ್ಯ ವಿಮರ್ಶೆಯೇ ಲೋಕ ವಿಮರ್ಶೆ ಎಂಬುದು ಬಲವಾದ ನಂಬಿಕೆಯಾಗಿತ್ತು' ಎಂದು ಮಹಿಳಾ ಚಿಂತಕಿ ಪ್ರೊ. ಎಂ.ಎಸ್.ಆಶಾದೇವಿ ಹೇಳಿದರು.

'ವರಕವಿ ದ.ರಾ.ಬೇಂದ್ರೆ ಅವರು ಕಾವ್ಯ ಬರೆದಂತೆ ವಿಮರ್ಶೆ ಬರೆಯುವುದು ಚಿನ್ನಾಟವಲ್ಲ ಎಂದಿದ್ದರು. ಕನ್ನಡದ ವಿಮರ್ಶೆ ಹದಗೊಳಿಸುವ ಅಗತ್ಯವಿದ್ದ ಕಾಲದಲ್ಲಿ ನಾಯಕರು ವಿಮರ್ಶಾ ಕ್ಷೇತ್ರ ಪ್ರವೇಶ ಮಾಡಿದರು' ಎಂದರು.

'ನಾಯಕರ ಕೊಡುಗೆಗಳೆಂದರೆ ಕೃತಿ ಓದಲು ಬೇಕಾದ ತಯಾರಿ. ಕಟ್ಟಿಕೊಳ್ಳಬೇಕಾದ ಮನಸ್ಥಿತಿಯನ್ನು ಆರ್ಥೈಸಿಕೊಟ್ಟರು. ನಾಯಕರ ನಿಲುವನ್ನು ಕೆಲವು ಸಂದರ್ಭದಲ್ಲಿ ಒಪ್ಪದೇ ಇರಬಹುದು. ಆದರೆ, ಅವರ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡಲಾಗದು' ಎಂದು ನುಡಿದರು.

MFGE In the Eyes of the Press.....

STAR OF MYSORE

Thursday 21st September 2023

'G.H. Nayaka-88' Seminar

Mysuru, Sept. 21 (MTY&DM)- SBRR Mahajana First Grade College, Jayalakshmipuram, Mysuru, in association with Abhinava Samsthe, Bengaluru, will be conducting 'G.H. Nayaka-88,' a National Seminar marking the 88th birth anniversary of late writer G.H. Nayaka, at the College's Vivekananda Hall at 10 am tomorrow (Sept. 22).



G.H. Nayaka

Announcing this at a press meet here yesterday, Mahajana College Kannada Department Head Dr. H.R. Thimmegowda said that the Seminar will feature talks on G.H. Nayaka's writings and social values.

Noted critic Dr. Narahalli Balasubramanya will inaugurate the Seminar. Meera Nayaka will release a book on the occasion. The speakers include Prof. N. Boralingaiah, Dr. T. Vijayalakshmi Muralidhar, M.S. Ashadevi and Dr. B.R. Jayakumari, said Dr. Thimmegowda adding that a few books written by G.H. Nayaka will be released.

College Principal Dr. B.R. Jayakumari and faculty Lingaraju were present.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಜಯ್ಮೆ
ಶನಿವಾರ,23 ಸೆಪ್ಟೆಂಬರ್ 2023

ಸೌಜನ್ಯದ ಗೆರೆ ದಾಟದ ನಿಷ್ಠುರವಾದಿ ಜಿ.ಎಚ್.ನಾಯಕ

ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅಭಿಮತ

■ **ವಿಕ ಸುದ್ದಿಲೋಕ** ಮೈಸೂರು

ಪ್ರೊ.ಜಿ.ಎಚ್.ನಾಯಕ ಅವರು ಸೌಜನ್ಯದ ಗೆರೆ ದಾಟದೇ, ನಿಷ್ಠುರವಾಗಿ ಮಾತನಾಡಿದರೂ, ಎಲ್ಲರನ್ನೂ ಪ್ರೀತಿಸುವ ಶಕ್ತಿ ಬೆಳೆಸಿಕೊಂಡಿದ್ದರು ಎಂದು ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಅಭಿನವ ಪ್ರಕಾಶನದ ವತಿಯಿಂದ ಮಹಾಜನ ವಿದ್ಯಾಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ಪ್ರೊ.ಜಿ.ಎಚ್.ನಾಯಕ-88, ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

''ಸಮಾಜವನ್ನು ಮಾನವೀಯ ಸಂಬಂಧದಿಂದ, ಪ್ರೀತಿಸುವ ಶಕ್ತಿಯಿಂದ ನೋಡಬೇಕು ಎಂದು ಜಿ.ಎಚ್.ನಾಯಕರು ತೋರಿಸಿಕೊಟ್ಟಿದ್ದಾರೆ. ಆದರೆ, ನಮ್ಮ ಸುತ್ತಮುತ್ತ ಇರುವ ನೀಚರು, ಕುಬ್ಜರು, ದುಷ್ಟರು ದ್ವೇಷಿಸುವ ಮನೋಭಾವನೆ ತೋರಿಸುತ್ತಿದ್ದಾರೆ ಹೊರತು, ಪ್ರೀತಿಸುವ ಶಕ್ತಿಯನ್ನಲ್ಲ. ಹಾಗಾಗಿ, ಜಿ.ಎಚ್.ನಾಯಕ್ ಅವರ ಆಶಯದಂತೆ ನಾವು ನಡೆಯಬೇಕು,'' ಎಂದರು.

''ಜಿ.ಎಚ್.ನಾಯಕ್ ಅವರು ಯಾರ ಬಗ್ಗೆಯೂ ನಿರಾಧಾರವಾಗಿ ಮತ್ತು ಲಘುವಾಗಿ ಮಾತನಾಡಿದವರಲ್ಲ. ನಿಷ್ಠುರವಾಗಿ ಮಾತನಾಡಿದರೂ ಮೌಲ್ಯಯುತವಾಗಿತ್ತು. ಅವರನ್ನು ಹತ್ತಿರದಿಂದ ನೋಡಿದವರಿಗೆ ಅವರ ವ್ಯಕ್ತಿತ್ವ ಎಂತಹದ್ದು ಎಂಬುವುದು ಗೊತ್ತಾಗುತ್ತಿತ್ತು,'' ಎಂದು ಹೇಳಿದರು.

ಇದೇ ವೇಳೆ ನ್ಯಾಯ ನಿಷ್ಠುರಿ ಜಿ.ಎಚ್.ನಾಯಕ ಶತಮಾನದ ಕನ್ನಡ ಸಾಹಿತ್ಯ: ಜಿ.ಎಚ್.ನಾಯಕ್ ನುಡಿ ಹೊತ್ತಗೆಯನ್ನು ಮೀರಾ ನಾಯಕ ಲೋಕಾರ್ಪಣೆಗೊಳಿಸಿದರು.

ಕಾರ್ಯಕ್ರಮದಲ್ಲಿ ಪ್ರೊ.ಎನ್.ಬೋರಲಿಂಗಯ್ಯ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಅಭಿನವ ಪ್ರಕಾಶನದ ನ.ರವಿಕುಮಾರ್ ಮತ್ತಿತರರು ಇದ್ದರು.



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ಪ್ರೊ.ಜಿ.ಎಚ್. ನಾಯಕ-88, ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಪುಷ್ಪಾರ್ಚನೆ ಮಾಡಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಗುರುವಾರ 21 ಸೆಪ್ಟೆಂಬರ್ 2023
21 SEPTEMBER 2023

ರಾಷ್ಟ್ರೀಯ ವಿಚಾರ ಸಂಕಿರಣ ನಾಳೆ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಬೆಂಗಳೂರಿನ ಅಭಿನವ ಸಂಸ್ಥೆಯಿಂದ ಸೆ. 22ರಂದು 'ಪ್ರೊ.ಜಿ.ಎಚ್.ನಾಯಕ-88' ನೆನಪಿನಲ್ಲಿ ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ತಿಳಿಸಿದರು.

ಮಹಾಜನ ವಿದ್ಯಾಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಅಂದು ಬೆಳಗ್ಗೆ 10ಕ್ಕೆ ಆಯೋಜಿಸಿರುವ ಕಾರ್ಯಕ್ರಮಕ್ಕೆ ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಚಾಲನೆ ನೀಡಲಿದ್ದಾರೆ. ನುಡಿ

» ಡಾ.ಎಚ್.ಆರ್. ತಿಮ್ಮೇಗೌಡ ಮಾಹಿತಿ

ಹೊತ್ತಗೆಯನ್ನು ಮೀರಾ ನಾಯಕ ಲೋಕಾರ್ಪಣೆ ಗೊಳಿಸುವರು. ಪ್ರಾಧ್ಯಾಪಕ ಪ್ರೊ.ಎನ್.ಬೋರ ಲಿಂಗಯ್ಯ, ಮಹಾ ಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಅಭಿನವ ಸಂಸ್ಥೆಯ ನ. ರವಿಕುಮಾರ್ ಇತರರು ಭಾಗವಹಿಸಲಿದ್ದಾರೆ ಎಂದು ಬುಧವಾರ ಸುದ್ದಿ ಗೋಷ್ಠಿಯಲ್ಲಿ ತಿಳಿಸಿದರು.

ಬಳಿಕ ಅಂತಃಕರಣದ ಅನುರೂಪ ಜಿ.ಎಚ್. ನಾಯಕ ಕುರಿತ ಗೋಷ್ಠಿಯಲ್ಲಿ ಕೀರ್ತಿಶ್ರೀನಾಯಕ, ಪ್ರೊ.ಪಂಡಿತಾರಾಧ್ಯ, ಪ್ರೊ.ಎಂ.ಕೃಷ್ಣೇಗೌಡ, ಡಾ. ವಿನೋದಮ್ಮ ವಿವಿಧ ವಿಷಯ ಮಂಡಿಸುವರು.

ಎರಡನೇ ಗೋಷ್ಠಿಯಲ್ಲಿ ಡಾ.ರಾಜೇಂದ್ರ ಚೆನ್ನಿ, ಜೆ.ಮನೋಜ್‌ಕುಮಾರ್, 3ನೇ ಗೋಷ್ಠಿಯಲ್ಲಿ ಡಾ. ವಿಕ್ರಮ ವಿಸಾಜಿ, ಡಾ.ಸುಭಾಷ್ ರಾಜಮಾನೆ, ಡಾ. ಸಿರಾಜ್ ಅಹಮದ್, ಡಾ.ಪಿ.ಚಂದ್ರಿಕಾ,ಪ್ರೊ. ತಮಿಳ್ ಸೆಲ್ವಿ, ಜಿ.ಪಿ.ಬಸವರಾಜು ಇತರರು ವಿಷಯ ಮಂಡಿಸುವರು. 4ನೇ ಗೋಷ್ಠಿಯಲ್ಲಿ ಡಾ.ಎಂ.ಎಸ್. ಆಶಾದೇವಿ, ಡಾ.ಬಿ.ಆರ್.ಜಯಕುಮಾರಿ ವಿಷಯ ಮಂಡನೆ ಮಾಡಲಿದ್ದಾರೆ ಎಂದು ತಿಳಿಸಿ ದರು. ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಅಭಿನವ ಪ್ರಕಾಶನದ ಪರವಾಗಿ ನಿಂಗರಾಜು ಚಿತ್ತಣ್ಣನವರ್ ಇದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಭಾನುವಾರ 24 ಸೆಪ್ಟೆಂಬರ್ 2023
24 SEPTEMBER 2023

ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಮೆಚ್ಚುಗೆ

ಸಾಹಿತಿ ಪ್ರೊ.ಜಿ.ಎಚ್.ನಾಯಕ ಮಾದರಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಮಾನವ ಸಂಬಂಧಗಳನ್ನು ಘನತೆ ಹಾಗೂ ಗೌರವದಿಂದ ಕಾಣಬೇಕು ಎಂಬ ವಿಚಾರದಲ್ಲಿ ಸಾಹಿತಿ ಪ್ರೊ.ಜಿ.ಎಚ್.ನಾಯಕ ಎಲ್ಲರಿಗೂ ಮಾದರಿ ಎಂದು ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ಮಹಾಜನ ವಿದ್ಯಾಸಂಸ್ಥೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಅಭಿನವ ಸಂಸ್ಥೆ ವತಿಯಿಂದ ಜಯಲಕ್ಷ್ಮೀಪುರಂ ನ ಮಹಾಜನ ವಿದ್ಯಾಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಪ್ರೊ.ಜಿ.ಎಚ್.ನಾಯಕ-88 ಮತ್ತು ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ವಿಷಯದ ಕುರಿತು ಶುಕ್ರವಾರ ಏರ್ಪಡಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದರು. ಪ್ರಸ್ತುತ ಸಮಾಜದಲ್ಲಿ ದ್ವೇಷ, ಅಸಹನೆ ತುಂಬಿಕೊಂಡಿದ್ದು, ಪ್ರೀತಿಸುವ ಗುಣವನ್ನೇ ಮನುಷ್ಯ ಕಳೆದುಕೊಳ್ಳುತ್ತಿದ್ದಾನೆ. ಪ್ರೀತಿ ಒಂದು ಮೌಲ್ಯ ಎಂದು ಜಿ.ಎಚ್. ನಾಯಕರು ಗಾಢವಾಗಿ ನಂಬಿದರು. ಅಲ್ಲದೆ ಅದೇ ರೀತಿ ಬದುಕಿದರು ಎಂದು ಹೇಳಿದರು. ನಾಯಕ ಮತ್ತೊಬ್ಬರ ನಂಬಿಕೆಯನ್ನು ಗೌರವಿಸುವ ಗುಣ ಹೊಂದಿದ್ದರು. ಮತ್ತೊಬ್ಬರ ನಂಬಿಕೆಯನ್ನು ಗೌರವಿಸುವ ಜತೆಗೆ ತಾವು ನಂಬಿದ ತತ್ವ-ಸಿದ್ಧಾಂತಕ್ಕೆ ಅವರು ಬದ್ಧರಾಗಿರುತ್ತಿದ್ದರು. ಇದು ಅವರಲ್ಲಿದ್ದ ಅಪರೂಪದ ಗುಣ. ಅವರು ಎಂದು ಸಹ ಯಾರ ಬಗ್ಗೆಯೂ ಲಘುವಾಗಿ ಮಾತನಾಡಿದ್ದನ್ನು ನಾನು ಕೇಳಿಯೇ ಇಲ್ಲ. ವೇದಿಕೆಯಲ್ಲಿ ಮಾತ್ರವಲ್ಲ ಹೊರಗೂ ಅವರು ಒಂದೇ ರೀತಿಯ ವ್ಯಕ್ತಿತ್ವವನ್ನು ಹೊಂದಿದ್ದರು ಎಂದು ಹೇಳಿದರು. ಪ್ರೊ. ಜಿ.ಎಚ್.ನಾಯಕ ಆಧುನಿಕ ಮನೋಭಾವದವರಾಗಿದ್ದರೂ ಅವರು ನಂಬಿರುವ ಮೌಲ್ಯಗಳನ್ನು ಕೊನೆಯವರೆಗೂ ಉಳಿಸಿಕೊಂಡಿದ್ದರು. ನಿಷ್ಠುರವಾಗಿ ತಮ್ಮ ವಿಚಾರಗಳನ್ನು ಬರವಣಿಗೆಯ ರೂಪದಲ್ಲಿ ವ್ಯಕ್ತಪಡಿಸುತ್ತಿದ್ದರು. ಎಂದಿಗೂ ಸೌಜನ್ಯದ ಎಳೆಯನ್ನು ದಾಟದೆ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿದು ಮಾನವೀಯ ಸಂಬಂಧಗಳನ್ನು ಉಳಿಸಿ ಕೊಂಡು ಬಂದ ಮಹಾ ವಿಮರ್ಶಕ ಎಂದರು. ನಿವೃತ್ತ ಪ್ರಾಧ್ಯಾಪಕ ಪ್ರೊ.ಎನ್.ಬೋರಲಿಂಗಯ್ಯ ಮಾತನಾಡಿ, ಜಿ.ಎಚ್. ನಾಯಕರ ಸಾಹಿತ್ಯದ ಬದುಕನ್ನು ಜೀವಂತವಾಗಿರಿಸಬೇಕಾದರೆ ಅವರ ಸಾಹಿತ್ಯ ಮತ್ತು ವಿಮರ್ಶೆಯ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ವಿಚಾರಸಂಕಿರಣಗಳು ನಡೆಯಬೇಕು ಎಂದರು. ಪ್ರಾಂಶುಪಾಲರಾದ ಡಾ. ಜಯಕುಮಾರಿ ಮಾತನಾಡಿ, ಡಾ.ಜಿ.ಎಚ್. ನಾಯಕ ಅವರು ತಮ್ಮ ಕೃತಿಗಳ ಮೂಲಕ ಜೀವಂತ ವಾಗಿದ್ದಾರೆ. ನಾಯಕ ಅವರ ಆದರ್ಶಗಳು ಇಂದಿನ ಪೀಳಿಗೆಗೆ ಜೀವನ ಮೌಲ್ಯದ ಪಾಠಗಳಾಗಬೇಕು ಎಂದು ಆಶಿಸಿದರು. ನ್ಯಾಯ ನಿಷ್ಠುರಿ ಜಿ.ಎಚ್.ನಾಯಕ ಮತ್ತು ಶತಮಾನದ ಕನ್ನಡ ಸಾಹಿತ್ಯ: ಜಿ.ಎಚ್.ನಾಯಕ ಕೃತಿಗಳನ್ನು ಲೇಖಕಿ ಮೀರಾ ನಾಯಕ್ ಬಿಡುಗಡೆ ಮಾಡಿದರು. ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ, ಅಭಿನವ ಪ್ರಕಾಶನದ ಪ್ರಕಾಶಕ ರವಿಕುಮಾರ್ ಇದ್ದರು.



ವಿಜಯವಾಣಿ

ಜಯಲಕ್ಷ್ಮೀಪುರಂನ ಮಹಾಜನ ವಿದ್ಯಾಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಪ್ರೊ.ಜಿ.ಎಚ್. ನಾಯಕ-88 ಮತ್ತು ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ಕುರಿತು ಆಯೋಜಿಸಿದ್ದ ರಾಷ್ಟ್ರೀಯ ವಿಚಾರಸಂಕಿರಣವನ್ನು ಲೇಖಕಿ ಮೀರಾ ನಾಯಕ್ ಉದ್ಘಾಟಿಸಿದರು. ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ.ಜಯಕುಮಾರಿ, ಪ್ರೊ.ಎನ್. ಬೋರಲಿಂಗಯ್ಯ, ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್ ಇದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 22.9.2023

■ ಮಹಾಜನ ವಿದ್ಯಾಸಂಸ್ಥೆ: ಪ್ರೊ.ಜಿ.ಎಚ್. ನಾಯಕ-ಃ 88, ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟನೆ: ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ನುಡಿ ಹೊತ್ತಿಗೆ ಲೋಕಾರ್ಪಣೆ: ಮೀರಾ ನಾಯಕ, ಜಯಲಕ್ಷ್ಮೀಪುರಂ, ವಿವೇಕಾನಂದ ಸಭಾಂಗಣ, ಬೆಳಗ್ಗೆ 10.

ವಿಜಯವಾಣಿ

ಕನ್ನಡಿಗರ ಧ್ವನಿ

ಶುಕ್ರವಾರ 22 ಸೆಪ್ಟೆಂಬರ್ 2023
22 SEPTEMBER 2023

■ **'ಪ್ರೊ.ಜಿ.ಎಚ್.ನಾಯಕ-88' ಮತ್ತು 'ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳ' ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ.** ಅಭಿನವ ಸಂಸ್ಥೆ. ಅತಿಥಿಗಳು: ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರೊ.ಎನ್.ಬೋರಲಿಂಗಯ್ಯ, ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್. ಸ್ಥಳ: ವಿವೇಕಾನಂದ ಸಭಾಂಗಣ, ಮಹಾಜನ ವಿದ್ಯಾಸಂಸ್ಥೆ, ಜಯಲಕ್ಷ್ಮೀಪುರಂ. ಬೆ.10.

ಪ್ರಜಾವಾಣಿ

ಶುಕ್ರವಾರ • ಸೆಪ್ಟೆಂಬರ್ 22, 2023

ಮಹಾಜನ ವಿದ್ಯಾಸಂಸ್ಥೆ: ಪ್ರೊ. ಜಿ.ಎಚ್.ನಾಯಕ ರಾಷ್ಟ್ರೀಯ ವಿಚಾರ ಸಂಕಿರಣ. ಚಾಲನೆ: ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ. ಸ್ಥಳ: ಕಾಲೇಜಿನ ವಿವೇಕಾನಂದ ಸಭಾಂಗಣ. ಬೆಳಿಗ್ಗೆ 10ರಿಂದ

ಆಂದೋಲನ

ದಿನ ಪತ್ರಿಕೆ

ಶುಕ್ರವಾರ, 22 ಸೆಪ್ಟೆಂಬರ್ 2023

● **ರಾಷ್ಟ್ರೀಯ ವಿಚಾರಸಂಕಿರಣ**

ಬೆಳಿಗ್ಗೆ 10ಕ್ಕೆ, ಮಹಾಜನ ವಿದ್ಯಾಸಂಸ್ಥೆ, ವಿಷಯ–ಪ್ರೊ.ಜಿ.ಎಚ್.ನಾಯಕ–88 ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು, ಉದ್ಘಾಟನೆ–ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿಗಳು–ಮೀರಾ ನಾಯಕ, ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಸ್ಥಳ–ವಿವೇಕಾನಂದ ಸಭಾಂಗಣ, ಮಹಾಜನ ವಿದ್ಯಾಸಂಸ್ಥೆ, ಜಯಲಕ್ಷ್ಮಿಪುರಂ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 22 ಸೆಪ್ಟೆಂಬರ್ 2023

■ ಮಹಾಜನ ವಿದ್ಯಾಸಂಸ್ಥೆ, ಮಹಾಜನ ಪ್ರಥಮ ದರ್ಜೆ ಕಾಲೇಜು: ಪ್ರೊ.ಜಿ.ಎಚ್.ನಾಯಕ–88 ರಾಷ್ಟ್ರೀಯ ವಿಚಾರ ಸಂಕಿರಣ–ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು, ಉದ್ಘಾಟನೆ: ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ. ನುಡಿ ಹೊತ್ತಿಗೆ ನ್ಯಾಯ ನಿಷ್ಠುರಿ ಜಿ.ಎಚ್.ನಾಯಕ ಶತಮಾನದ ಕನ್ನಡ ಸಾಹಿತ್ಯ: ಜಿ.ಎಚ್.ನಾಯಕ ಲೋಕಾರ್ಪಣೆ: ಮೀರಾನಾಯಕ, ಸಾಕ್ಷಿ ನುಡಿ: ಪ್ರೊ.ಬೋರಲಿಂಗಯ್ಯ, ಉಪಸ್ಥಿತರು: ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಡಾ.ಜಯಕುಮಾರಿ, ನುಡಿ ತೋರಣ: ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ನುಡಿ ತಂತು: ಅಭಿನವ ಬೆಂಗಳೂರಿನ ನ.ರವಿಕುಮಾರ್, ಸ್ಥಳ: ವಿವೇಕಾನಂದ ಸಭಾಂಗಣ, ಮಹಾಜನ ವಿದ್ಯಾಸಂಸ್ಥೆ, ಬೆಳಗ್ಗೆ 10ಕ್ಕೆ

MFGE In the Eyes of the Press.....

ಅಂಪೋಲನ
ದಿನಪತ್ರಿಕೆ

ಶನಿವಾರ, 16 ಸೆಪ್ಟೆಂಬರ್ 2023

ಪ್ರಜಾಪ್ರಭುತ್ವ ದಿನಾಚರಣೆ



ಮೈಸೂರು: ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತಕ್ಕೆ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವು ಆಡಳಿತ ಮಾದರಿಯ ಮೂಲಭೂತ ಮೌಲ್ಯಗಳನ್ನು ಎತ್ತಿಹಿಡಿಯಲು ಪ್ರಮುಖ ಜ್ಞಾಪನೆಯಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಹೇಳಿದರು.

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮದಲ್ಲಿ ಭಾರತ ಸಂವಿಧಾನದ ಪ್ರಸ್ತಾವನೆಯ ಬೋಧಿಸಿ ಮಾತನಾಡಿದ ಅವರು, 1997ರ ಸೆ.15ರಂದು ಪ್ರಜಾಪ್ರಭುತ್ವ ಸಾರ್ವತ್ರಿಕ ಘೋಷಣೆಯನ್ನಾಗಿ ಅಂಗೀಕರಿಸಿತು. ಈ ಘೋಷಣೆಯು ಪ್ರಜಾಪ್ರಭುತ್ವದ ತತ್ವ ಹಾಗೂ ಸರ್ಕಾರದ ಮಹತ್ವದ ಬಗ್ಗೆ ವಿವರಿಸುತ್ತದೆ. ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವು ಕ್ರಿಯಾತ್ಮಕ ಪ್ರಜಾಪ್ರಭುತ್ವದ ಪ್ರಾಮುಖ್ಯತೆಯನ್ನು ಅಂಗೀಕರಿಸುವ ದಿನವಾಗಿದೆ ಎಂದು ತಿಳಿಸಿದರು. ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ್, ಉಪನ್ಯಾಸಕರು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 17.09.2023

ಮಹಾಜನ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಯಿತು. ಇದೇ ವೇಳೆ ಸಂವಿಧಾನದ ಪ್ರಸ್ತಾವನೆಯನ್ನು ಪ್ರಾಂಶುಪಾಲರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಓದಿದರು.

ಈ ವೇಳೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವು ಕ್ರಿಯಾತ್ಮಕ ಪ್ರಜಾಪ್ರಭುತ್ವದ ಪ್ರಾಮುಖ್ಯತೆಯನ್ನು ಅಂಗೀಕರಿಸುವ ದಿನವಾಗಿದೆ.

ಇದು ಮೂಲಭೂತವಾಗಿ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಸಂಬಂಧಿಸಿ ದಂತೆ ನಿರ್ಧಾರಗಳನ್ನು ತೆಗೆದುಕೊಂಡು ತನ್ನ ಜನರಿಗೆ ಅಧಿಕಾರ ನೀಡುವುದಾಗಿದೆ ಎಂದು ಹೇಳಿದರು. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ವಾದ ಭಾರತಕ್ಕೆ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವು ಆಡಳಿತ ಮಾದರಿಯ ಮೂಲಭೂತ ಮೌಲ್ಯಗಳನ್ನು ಎತ್ತಿಹಿಡಿಯಲು ಪ್ರಮುಖ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ. ಸಂವಿಧಾನ ರಚನೆಯಲ್ಲಿ ಇದೊಂದು ಚೈತನ್ಯವಾಗಿದೆ ಎಂದರು. ಕಾಲೇಜಿನ ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ವಿವಿಧ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು ಮತ್ತು ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಆಂದೋಲನ
ದಿನ ಪತ್ರಿಕೆ

ಶನಿವಾರ, 9 ಸೆಪ್ಟೆಂಬರ್ 2023

ಕೆಪಿಎಲ್ ಆಟಗಾರ ಎಸ್.ಯು.ಕಾರ್ತಿಕ್ ಅವರಿಗೆ ಸನ್ಮಾನ



ಮೈಸೂರಿನ ಜಯಲಕ್ಷ್ಮಿ ಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನ ಬಿ.ಕಾಂ. ಪದವಿಗೆ ಪ್ರವೇಶಾತಿ ಪಡೆದ ಕೆಪಿಎಲ್ ಕ್ರಿಕೆಟ್ ಆಟಗಾರ ಎಸ್.ಯು.ಕಾರ್ತಿಕ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು: ನಗರದ ಜಯಲಕ್ಷ್ಮಿ ಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನ ಬಿ.ಕಾಂ. ಪದವಿಗೆ ಪ್ರವೇಶಾತಿ ಪಡೆದ ಕೆಪಿಎಲ್ ಕ್ರಿಕೆಟ್ ಆಟಗಾರ ಎಸ್.ಯು.ಕಾರ್ತಿಕ್ ಅವರನ್ನು ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳಿಗಾಗಿ ನಡೆಸಿದ ಎರಡನೇ ದಿನದ ಪೂರ್ವ ಪರಿಚಯ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಪ್ರತಿಭಾವಂತ ಕ್ರಿಕೆಟಿಗರಾದ ಕಾರ್ತಿಕ್ ಅವರು ಕರ್ನಾಟಕ ಪ್ರಿಮಿಯರ್ ಲೀಗ್‌ನ ಪ್ರಸ್ತುತ ಆವೃತ್ತಿಯಲ್ಲಿ ಮೈಸೂರು ವಾರಿಯರ್ಸ್ ತಂಡದ ಪರವಾಗಿ ಆಡುತ್ತಿದ್ದಾರೆ. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ.ಎಚ್.ಎನ್.ಭಾಸ್ಕರ್ ಅವರು ಕಾರ್ತಿಕ್ ಅವರನ್ನು ಸಭಿಕರಿಗೆ ಪರಿಚಯಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡಿ, ಕಾರ್ತಿಕ್ ಪ್ರತಿಭಾ ವಂತ ಆಟಗಾರ. ನಮ್ಮ ಕಾಲೇಜಿನಲ್ಲಿ ಪ್ರವೇಶಾತಿ ಪಡೆದಿರುವುದು ಹೆಮ್ಮೆಯ ವಿಷಯ ಎಂದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ, ಪೂರ್ವ ಪರಿಚಯ ಕಾರ್ಯಕ್ರಮದ ಸಂಯೋಜಕರಾದ ಡಿ.ಗೀತಾ, ಸುನಿಲ್, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಪಿ. ಮಧುಸೂದನ್, ಸಾರ್ವಜನಿಕ ಸಂಪರ್ಕಾಧಿಕಾರಿ ಪೂರ್ಣಿಮಾ ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 11.09.2023

ಅಭಿನಂದನೆ ನಗರದ ಜಯಲಕ್ಷ್ಮೀಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜನೆ

ಕೆಪಿಎಲ್ ಆಟಗಾರರಾದ ಕಾರ್ತಿಕ್‌ಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜಯಲಕ್ಷ್ಮೀಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನ ಬಿ.ಕಾಂ. ಪದವಿಗೆ ಪ್ರವೇಶಾತಿ ಪಡೆದ ಕೆಪಿಎಲ್ ಕ್ರಿಕೆಟ್ ಆಟಗಾರ ಎಸ್ .ಯು. ಕಾರ್ತಿಕ್ ಅವರನ್ನು ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳಿಗಾಗಿ ನಡೆಸಿದ ಎರಡನೆ ದಿನದ ಪೂರ್ವ ಪರಿಚಯ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಪ್ರತಿಭಾವಂತ ಕ್ರಿಕೆಟಿಗರಾದ ಕಾರ್ತಿಕ್ ಅವರು ಕರ್ನಾಟಕ ಪ್ರೀಮಿಯರ್‌ಲೀಗ್ ನ ಪ್ರಸ್ತುತ ಆವೃತ್ತಿಯಲ್ಲಿ ಮೈಸೂರು ವಾರಿಯರ್ಸ್ ತಂಡದ ಪರವಾಗಿ ಆಡುತ್ತಿದ್ದಾರೆ. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಎಚ್.ಎನ್. ಭಾಸ್ಕರ್ ಅವರುಕಾರ್ತಿಕ್‌ಅವರನ್ನುಪರಿಚಯಿಸಿದರು. ಪ್ರಾಂಶುಪಾಲೆ ಡಾ. ಬಿ.ಆರ್.. ಜಯಕುಮಾರಿ ಅವರು ಕಾರ್ತಿಕ್ ಅವರನ್ನು ಸನ್ಮಾನಿಸಿ, ಪ್ರತಿಭಾವಂತ ಆಟಗಾರ ನಮ್ಮ



ಕಾಲೇಜಿಗೆ ಪ್ರವೇಶಾತಿ ಪಡೆದಿರುವುದು ಹೆಮ್ಮೆಯ ವಿಷಯ ಮತ್ತು ಇತರ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಲಿದೆ ಎಂದು ನುಡಿದು, ಅವರಿಗೆ ಶುಭಹಾರೈಸಿದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್. ಆರ್. ತಿಮ್ಮೇಗೌಡ, ಪೂರ್ವಪರಿಚಯ ಕಾರ್ಯಕ್ರಮದ ಸಂಯೋಜಕಿ ಡಿ. ಗೀತಾ ಹಾಗೂ ಸುನಿಲ್, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕಪಿ.ಮಧುಸೂಧನ್,ಸಾರ್ವಜನಿಕ ಸಂಪರ್ಕಾಧಿಕಾರಿ ಪೂರ್ಣಿಮಾ ಇದ್ದರು.

ಎರಡನೆಯ ದಿನದ ಕಾರ್ಯಕ್ರಮದಲ್ಲಿ ಕಾಲೇಜಿನ ಬಿ.ಕಾಂ., ಬಿ.ಎ ಹಾಗೂ ಬಿಬಿಎ ಪ್ರೋಗ್ರಾಂನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ವಿವಿಧ ವಿಭಾಗಗಳ ಮುಖ್ಯಸ್ಥರು, ಸಹಾಯಕ ಪ್ರಾಧ್ಯಾಪಕರು, ಬೋಧಕೇತರ ವರ್ಗದವರು ಹಾಗೂ ಪೋಷಕರು ಇದ್ದರು.

MFGE In the Eyes of the Press.....

ಪ್ರತಿನಿಧಿ
...ಇವ ನಮ್ಮವ

ಶನಿವಾರ
ಸೆಪ್ಟೆಂಬರ್ 9, 2023

ಕ್ರಿಕೆಟ್ ಆಟಗಾರ ಕಾರ್ತಿಕ್‌ಗೆ ಸನ್ಮಾನ



ಪ್ರತಿನಿಧಿ ಫೋಟೋ

ಪ್ರತಿನಿಧಿ ವರದಿ ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನ ಬಿ.ಕಾಂ. ಪದವಿಗೆ ಪ್ರವೇಶಾತಿ ಪಡೆದ ಕೆಪಿಎಲ್ ಕ್ರಿಕೆಟ್ ಆಟಗಾರ ಎಸ್.ಯು.ಕಾರ್ತಿಕ್ ಅವರಿಗೆ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳಿಗಾಗಿ ನಡೆಸಿದ 2ನೇ ದಿನದ ಪೂರ್ವ ಪರಿಚಯ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಪ್ರತಿಭಾವಂತ ಕ್ರಿಕೆಟಿಗರಾದ ಕಾರ್ತಿಕ್ ಕರ್ನಾಟಕ ಪ್ರಿಮಿಯರ್ ಲೀಗ್‌ನ ಪ್ರಸ್ತುತ ಆವೃತ್ತಿಯಲ್ಲಿ ಮೈಸೂರು ವಾರಿಯರ್ಸ್ ತಂಡದ ಪರ ಆಡುತ್ತಿದ್ದಾರೆ. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಎಚ್.ಎನ್.ಭಾಸ್ಕರ್ ಅವರು ಕಾರ್ತಿಕ್ ಅವರನ್ನು ಸಭಿಕರಿಗೆ ಪರಿಚಯಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಆರ್.ಜಯ ಕುಮಾರಿ ಅವರು ಕಾರ್ತಿಕ್ ಅವರನ್ನು ಸನ್ಮಾನಿಸಿ, ಪ್ರತಿಭಾವಂತ ಆಟಗಾರ ನಮ್ಮ ಕಾಲೇಜಿಗೆ ಪ್ರವೇಶಾತಿ ಪಡೆದಿರುವುದು ಹೆಮ್ಮೆಯ ವಿಷಯ ಮತ್ತು ಇತರ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ ವಾಗಲಿದೆ ಎಂದು ಶುಭಹಾರೈಸಿದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಪೂರ್ವಪರಿಚಯ ಕಾರ್ಯಕ್ರಮದ ಸಂಯೋಜಕಿ ಗೀತಾ ಡಿ, ಸುನಿಲ್, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಪಿ. ಮಧುಸೂಧನ್, ಸಾರ್ವಜನಿಕ ಸಂಪರ್ಕಾಧಿಕಾರಿ ಪೂರ್ಣಿಮಾ ವೇದಿಕೆಯಲ್ಲಿ ಉಪಸ್ಥಿತರಿದ್ದರು. 2ನೇ ದಿನದ ಕಾರ್ಯಕ್ರಮದಲ್ಲಿ ಕಾಲೇಜಿನ ಬಿ.ಕಾಂ., ಬಿಎ ಹಾಗೂ ಬಿಬಿಎ ಪ್ರೋಗ್ರಾಂನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ವಿವಿಧ ವಿಭಾಗಗಳ ಮುಖ್ಯಸ್ಥರುಗಳು, ಸಹಾಯಕ ಪ್ರಾಧ್ಯಾಪಕರು, ಬೋಧಕೇತರ ವರ್ಗದವರು ಹಾಗೂ ಪೋಷಕರು ಹಾಜರಿದ್ದರು.

MFGE In the Eyes of the Press.....

ಹೊಸ ದಿಗಂತ

ಬುಧವಾರ
ಸೆಪ್ಟೆಂಬರ್ 27, 2023

ಸೇವೆ ಮಾಡಲು ಅಧಿಕಾರದ ಅವಶ್ಯಕತೆ ಇಲ್ಲ

ಪ್ರತಿನಿಧಿ ವರದಿ ಮೈಸೂರು

ಗ್ರಾಮಗಳಲ್ಲಿ ಸೇವೆ ಮಾಡಲು ಯಾವುದೇ ಅಧಿಕಾರದ ಅವಶ್ಯಕತೆ ಇರುವುದಿಲ್ಲ ಎಂದು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಹೇಳಿದರು.

- ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ ಹೇಳಿಕೆ
- ಮಹಾಜನ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ

ನಗರದ ಮಹಾಜನ ಪ್ರಥಮ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು.

ದೇಶದ ಮಹಾನ್ ವ್ಯಕ್ತಿಗಳಾದ ಗಾಂಧೀಜಿ, ವಿವೇಕಾನಂದರು ರಾಷ್ಟ್ರ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ರಾಷ್ಟ್ರೀಯ ಸೇವಾ ಯೋಜನೆ ಎಂದರೆ ಗ್ರಾಮೀಣ ಅಭಿವೃದ್ಧಿ ಹೇಳಿದರು.

ಮೈಸೂರು ಕೇಂದ್ರ ಮೀಸಲು ಪಡೆಯ ವಿಶ್ರಾಂತ ಐಜಿಪಿ ಕೆ.ಆರ್ಕೇಶ್ ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾದದ್ದು. ಜೀವನದಲ್ಲಿ ಎನ್ಎಸ್ಎಸ್‌ನ ಮೌಲ್ಯಗಳು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ಸಂಸ್ಕೃತಿ ಚಿಂತಕ ಮೊಹಮ್ಮದ್ ಕಲೀಂಉಲ್ಲಾ ಮಾತನಾಡಿ ಎನ್ಎಸ್ಎಸ್ ಮೂಲಕ ಎಷ್ಟೋ ಶಿಲಾಶಾಸನಗಳು ಬೆಳಕಿಗೆ ಬಂದಿವೆ. ಮರೆಯಾಗಿರುವ ಇಂಥಹ ಶಾಸನಗಳು ಗಥಕಾಲದ ಪಲೆಯುಳಿಕೆಯಾಗಿವೆ. ಇವುಗಳನ್ನು ಸಂರಕ್ಷಿಸುವ ಜವಾಬ್ದಾರಿ ಯುವಜನತೆಯ ಮೇಲಿದೆ ಎಂದರು.



ಮೈಸೂರಿನ ಮಹಾಜನ ಪ್ರಥಮ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮವನ್ನು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಉದ್ಘಾಟಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ ಮಾತನಾಡಿದರು.

ಮಹಾಜನ ವಿದ್ಯಾಸಂಸ್ಥೆಯ ಗೌ.ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಪ್ರೊ.ಬಿ.ಕೆ.ಶಿವಣ್ಣ, ಸಂಸ್ಕೃತಿ ಚಿಂತಕ ಮಹಮ್ಮದ್ ಕಲೀಉಲ್ಲಾ, ಡಾ.ಎಂ.ಬಿ. ಸುರೇಶ, ಪ್ರೊ.ಕಾಳಚನ್ನೇಗೌಡ, ವೀರಯ್ಯ ಕಾಲೇಜಿನ ಎನ್ಎಸ್ಎಸ್ ಕಾರ್ಯಕ್ರಮಾಧಿಕಾರಿ ಡಾ.ಜಿ.ದೊಡ್ಡರಸಯ್ಯ, ಸಿ.ಎಸ್.ಸಿದ್ದರಾಜು, ಪ್ರೊ.ಜಿ.ಬಿ.ಶಿವರಾಜು ಇತರರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 28.09.2023

ಎನ್ನೆಸ್ಸೆಸ್ ಭೀಷ್ಮ ಪ್ರೊ.ಬಿ.ಕೆ. ಶಿವಣ್ಣನವರಿಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಎನ್.ಎಸ್.ಎಸ್.ನ ಭೀಷ್ಮ ಪ್ರೊ.ಬಿ.ಕೆ. ಶಿವಣ್ಣ ಅವರನ್ನು ಸನ್ಮಾನಿಸಲಾಯಿತು.

ಸರಳ, ಸಜ್ಜನ ವ್ಯಕ್ತಿಯಾದ ಶಿವಣ್ಣ ಅವರು ಯುವ ಜನತೆಗೆ ಆದರ್ಶ ಪ್ರಾಯರು. ಮಹಾರಾಜ ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲಕರಾಗಿದ್ದ ಪ್ರೊ.ಉ.ಕಾ. ಸುಬ್ಬರಾಯಾಚಾರ್‌ಅವರ ನೇತೃತ್ವದಲ್ಲಿ ಆರಂಭವಾದ ರಾಷ್ಟ್ರೀಯ ಸೇವಾ ಯೋಜನೆಯನ್ನು ಕಟ್ಟಿಬೆಳೆಸಿದ ಕೀರ್ತಿ ಪ್ರೊ.ಬಿ.ಕೆ. ಶಿವಣ್ಣ ಅವರಿಗೆ ಸಲ್ಲುತ್ತದೆ. ರಾಷ್ಟ್ರೀಯ ಸೇವಾ ಯೋಜನೆಗೆ ರೂಪು ರೇಷೆಯನ್ನು ಹಾಕಿಕೊಟ್ಟು ಬೇರೆ ವಿಶ್ವವಿದ್ಯಾನಿಲಯಗಳಿಗೂ ಪ್ರೇರಕರಾದವರು. ಇವರು ಮಹಾತ್ಮ ಗಾಂಧೀಜಿ ಅವರ ಕನಸಿನ ಗ್ರಾಮ ರಾಜ್ಯ ನಿರ್ಮಾಣ ಕಾರ್ಯದಲ್ಲಿ ನಿರಂತರವಾಗಿ ದುಡಿದವರು.

ಸಮಾಜದ ಏಳಿಗೆಗೆ ತನ್ನನ್ನು ತಾನು ಮುಡುಪಾಗಿಸಿದ ಇವರನ್ನು ಹಾಗೂ ಅವರ ಪತ್ನಿ ಅನುಸೂಯ ಅವರನ್ನು ಮಹಾಜನ ವಿದ್ಯಾಸಂಸ್ಥೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ಘಟಕಗಳು ಗೌರವಿಸಿದವು.



ಈ ವೇಳೆ ನಾಗಮಂಗಲದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಮೇರು ವ್ಯಕ್ತಿತ್ವ ಹೊಂದಿರುವ ಶಾಸನಗಳ ಸಂರಕ್ಷಕ ಮಹಮ್ಮದ್ ಕಲೀಂ ಉಲ್ಲಾ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 27 ಸೆಪ್ಟೆಂಬರ್ 2023

ಮಹಾಜನ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಸಂಸ್ಥಾಪನಾ ದಿನಾಚರಣೆ



ಮೈಸೂರು, ಸೆ. 26– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯ ಮತ್ತು ರಾಷ್ಟ್ರೀಯ ಸೇವಾ ಯೋಜನೆ, ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ಕಾಲೇಜು (ಸ್ವಾಯತ್ತ) ಸಹಯೋಗದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಗ್ರಾಮೀಣ ಪುನರ್ ನಿರ್ಮಾಣದಲ್ಲಿ ಯುವ ಜನತೆಯ ಪಾತ್ರ ವಿಷಯ ಕುರಿತು ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗಿತ್ತು.

ಪ್ರಸಿದ್ಧ ವಾಗ್ಮಿಗಳಾದ ಪ್ರೊ. ಎಂ. ಕೃಷ್ಣೇಗೌಡ ಉಪನ್ಯಾಸ ನೀಡುತ್ತಾ, ದೇಶದ ಮಹಾನ್ ವ್ಯಕ್ತಿಗಳಾದ ಗಾಂಧೀಜಿ ಹಾಗೂ ವಿವೇಕಾನಂದರು ರಾಷ್ಟ್ರ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ರಾಷ್ಟ್ರೀಯ ಸೇವಾ ಯೋಜನೆ ಎಂದರೆ ಗ್ರಾಮೀಣ ಅಭಿವೃದ್ಧಿ ಸೇವೆ. ಇದನ್ನು ಮಾಡಲು ಯಾವುದೇ ಅಧಿಕಾರದ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿದರು. ಮುಖ್ಯ ಅತಿಥಿಗಳಾದ ಮೈಸೂರು ಕೇಂದ್ರ ಮೀಸಲು ಪಡೆಯ ವಿಶ್ರಾಂತ ಐಜಿಪಿ ಕೆ. ಅರ್ಕೇಶ್ ಮಾತನಾಡಿ, ರಾಷ್ಟ್ರ ನಿರ್ಮಾಣದಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾದದ್ದು. ಜೀವನದಲ್ಲಿ ಎನ್‌ಎಸ್‌ಎಸ್‌ನ ಮೌಲ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ನಾನು ವೈಯಕ್ತಿಕವಾಗಿ ಎನ್‌ಎಸ್‌ಎಸ್‌ನಲ್ಲಿ ತೊಡಗಿಸಿಕೊಂಡಿದ್ದಕ್ಕೆ ಪೊಲೀಸ್ ವೃತ್ತಿಗೆ ಸಹಕಾರಿಯಾಯಿತು ಎಂದು ಹೇಳಿದರು. ನಾಗಮಂಗಲದ ಸಂಸ್ಕೃತಿ ಚಿಂತಕರಾದ ಮೊಹಮ್ಮದ್ ಕಲೀಂ ಉಲ್ಲಾ ಮಾತನಾಡಿ, ಎನ್‌ಎಸ್‌ಎಸ್‌ನ ಮೂಲಕ ಏಷ್ಟೋ ಶಿಲಾಶಾಸನಗಳು ಬೆಳಕಿಗೆ ಬಂದಿವೆ. ಮರೆಯಾಗಿರುವ ಇಂಥಹ ಶಾಸನಗಳು ಗತಕಾಲದ ಪಳೆಯುಳಿಕೆಯಾಗಿವೆ. ಇವುಗಳನ್ನು ಸಂರಕ್ಷಿಸುವ ಜವಾಬ್ದಾರಿಯುವಜನತೆಯ ಮೇಲಿದೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ ಬಿ. ಆರ್. ಜಯಕುಮಾರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ, ಪ್ರತಿಯೊಬ್ಬ ವಿದ್ಯಾರ್ಥಿಯು ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು, ಆಗ ಮಾತ್ರ ಸಾಮಾಜಿಕ ಜವಾಬ್ದಾರಿಗಳ ಮೂಲಕ ಸದೃಢ ಭಾರತವನ್ನು ಕಟ್ಟಲು ಸಾಧ್ಯ ಎಂದು ಹೇಳಿದರು. ಮಹಾಜನ ವಿದ್ಯಾಸಂಸ್ಥೆಯ ಗೌ. ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್ ಅಧ್ಯಕ್ಷತೆಯನ್ನು ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ. ಹೆಚ್.ಆರ್.ತಿಮ್ಮೇಗೌಡ, ಮೈವಿವಿ ವಿಶ್ರಾಂತ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ. ಬಿ. ಕೆ. ಶಿವಣ್ಣ, ಮೈವಿವಿ ನಿಲಯದ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಎಂ. ಬಿ. ಸುರೇಶ, ಪ್ರೊ. ಕಾಳಚನ್ನೇಗೌಡ, ವೀರಯ್ಯ, ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ.ದೊಡ್ಡರಸಯ್ಯ, ಬಿ. ಸಿದ್ದರಾಜು ಸಿ. ಎಸ್., ಎನ್‌ಎಸ್‌ಎಸ್ ಸ್ವಯಂ ಸೇವಕ-ಸೇವಕಿಯರು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 9.09.2023

ಪದವಿ ವಿದ್ಯಾರ್ಥಿಗಳಿಗೆ ಪರಿಚಯ

ಎಸ್ ಬಿಆರ್‌ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯಕ್ರಮ



• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್ ಬಿಆರ್‌ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಸದಾಗಿ ಪದವಿ ಕಾರ್ಯಕ್ರಮಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪೂರ್ವ ಪರಿಚಯ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಅತ್ಯುನ್ನತ ಶೈಕ್ಷಣಿಕ ಗುಣಮಟ್ಟದಕಾರಣಕ್ಕಾಗಿನಮ್ಮಕಾಲೇಜಿಗೆ ನ್ಯಾಕ್ ನಿಂದ ಎ ಮಾನ್ಯತೆ ಹಾಗೂ ಸ್ವಾಯತ್ತತೆ ದೊರಕಿದೆ. ಇದಕ್ಕೆ ಪೂರಕವಾಗಿ ವಿದ್ಯಾಸಂಸ್ಥೆಯು ಎಲ್ಲಾ ಸವಲತ್ತನ್ನು ಒದಗಿಸುತ್ತಿದೆ. ಎಂದರು. ಆಂಗ್ಲವಿಭಾಗದ ಸಹಾಯಕ ಪ್ರಾಧ್ಯಾಪಕಿ ಹಾಗೂ ನ್ಯಾಕ್ ಸಂಯೋಜಕಿ ಗೀತಾ, ಕಾಲೇಜಿನಇತಿಹಾಸ, ರಚನೆ, ನಿಯಮ, ನಿಬಂಧನೆ, ವಿವಿಧ ಪಠ್ಯಕ್ರಮ, ಸಹಪಠ್ಯ ಚಟುವಟಿಕೆ, ಕೌಶಲ್ಯಾಧಾರಿತ ಕೋರ್ಸುಗಳು ಹಾಗೂ ಶಿಕ್ಷಣದ ಮಹತ್ವವನ್ನು ಪಿಪಿಟಿ ಪ್ರಸ್ತುತಿಗಳಿಂದ ಮತ್ತು ಕೆಲವು ವಿಡಿಯೋಗಳಿಂದ ಪ್ರಸ್ತುತಪಡಿಸಿ ವಿದ್ಯಾರ್ಥಿಗಳಿಗೆ ವಿವರಿಸಿದರು.

ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ ಎನ್‌ಇಪಿಯ ಪ್ರಮುಖ ಅಂಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಕಾಲೇಜಿನ ನೋಡಲ್ ಅಧಿಕಾರಿ ಪರಮೇಶ್ವರ ಹೆಗ್ಡೆ ಬಿಎಸ್ಸಿ ಹಾಗೂ ಬಿಸಿಎ ಪ್ರೋಗ್ರಾಂಗಳ ವಿದ್ಯಾರ್ಥಿಗಳು ತಾವು ವ್ಯಾಸಂಗ ಮಾಡುವ ಹಲವಾರು ಕೋರ್ಸ್‌ಗಳ ಬಗ್ಗೆ ಮತ್ತು ಪರೀಕ್ಷೆಗೆ ಸಂಬಂಧಪಟ್ಟ ಮಾಹಿತಿ ತಿಳಿಸಿದರು.

ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಎಚ್.ಎನ್. ಭಾಸ್ಕರ್, ಪಿ. ಮಧುಸೂದನ್, ಡಾ.ಎಂ.ಆರ್. ಇಂದ್ರಾಣಿ, ಸುನಿತಾ, ಡಾ.ಬಿ.ಆರ್. ಅನಿತಾ ಮೊದಲಾದವರು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 10.09.2023

ಮಕ್ಕಳನ್ನು ಸಂಸ್ಕೃತಿ ಸಂಪನ್ನರನ್ನಾಗಿಯೂ ಮಾಡಿ

ಸಿಸಿಬಿ ಘಟಕದ ಎಸಿಪಿ ಸಂದೇಶ್ ಕುಮಾರ್ ಪೋಷಕರಿಗೆ ಸಲಹೆ | ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪೋಷಕರ ಸಮಾವೇಶ

• ಕನ್ನಡಪ್ರಭ ವಾರ್ತೆ ಮೈಸೂರು

ಮಕ್ಕಳನ್ನು ಏದ್ಯಾವಂತರನ್ನಾಗಿ ಅಷ್ಟೇ ಅಲ್ಲ ಸಂಸ್ಕೃತಿ ಸಂಪನ್ನರನ್ನಾಗಿ ಮಾಡಬೇಕು ಎಂದು ಸಿಸಿಬಿ ಘಟಕದ ಎಸಿಪಿಎಸ್.ಎನ್.ಸ್ಸಂದೇಶ್‌ಕುಮಾರ್‌ಪೋಷಕರಿಗೆ ಸಲಹೆ ನೀಡಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಪೋಷಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಸಮಾಜದಲ್ಲಿ ಬಹಳಷ್ಟು ಗಂಭೀರ ಸಮಸ್ಯೆಗಳು ಎದುರಾಗುತ್ತಿವೆ. ಇದಕ್ಕೆ ಬಲಿಯಾಗುತ್ತಿರುವವರಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅತಿ ಹೆಚ್ಚು. ಇದಕ್ಕೆ ಕಾರಣ ಏನೆಂದು ಹುಡುಕಿದಾಗ ಪೋಷಕರ ಅತಿಯಾದ ಕಾಳಜಿ ಮತ್ತು ನಿರ್ಲಕ್ಷ್ಯವೇ ಕಾರಣ ಎಂದರು.

ಪ್ರತಿಯೊಬ್ಬ ತಂದೆ ತಾಯಿಗೂ ತಮ್ಮ ಮಕ್ಕಳು ತಮ್ಮ ಹಾಗೇ ಜೀವನದಲ್ಲಿ ಕಷ್ಟಪಡದೇ ಸುಖವಾಗಿರಬೇಕು ಎಂಬ ಆಶಯವಿರುತ್ತದೆ. ಆದರೆ, ವಿದ್ಯಾರ್ಥಿ ಜೀವನವೇ ಒಂದು ತಪಸಿನಂತೆ, ಕಷ್ಟಪಟ್ಟು ಓದಿದಾಗ ಮಾತ್ರ ಜೀವನದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಯಶಸ್ಸನ್ನು ಗಳಿಸಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಯ ಬೆಳವಣಿಗೆಯೊಟ್ಟಿಗೆ ಕಾಲೇಜು, ಆಡಳಿತ ಮಂಡಳಿ, ಅಧ್ಯಾಪಕರು ಮತ್ತು ಪೋಷಕರು ಸದಾ ಜೊತೆಗಿರುವ ಕೆಲಸ ಮಾಡಬೇಕಾಗುತ್ತದೆ. ಮಕ್ಕಳನ್ನು ಮುದ್ದಾಗಿ ಸಾಕುವುದಷ್ಟೇ ಅಲ್ಲದೆ ತಪ್ಪು ಮಾಡಿದಾಗ ದಂಡಿಸಿ ಸರಿ ದಾರಿಗೆ ತರುವ ಜವಾಬ್ದಾರಿ ನಮ್ಮದಾಗಿರುತ್ತದೆ ಎಂದು ಅವರು ಹೇಳಿದರು.


ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪೋಷಕರ ಸಮಾವೇಶ ನಡೆಯಿತು.

ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಉತ್ತಮ ಅಂಕಗಳಿಸಲು ಸಜ್ಜುಗೊಳಿಸುವುದರೊಂದಿಗೆ ಅವರಲ್ಲಿ ನಮ್ಮ ಭಾರತೀಯ ಸಂಸ್ಕೃತಿಯನ್ನು ಬೆಳೆಸುವ ಕೆಲಸವನ್ನು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಮಹಾಜನ ಕಾಲೇಜು ವಿದ್ಯಾರ್ಥಿಗಳನ್ನು ಕಲೆ, ಸಾಹಿತ್ಯ, ಕ್ರೀಡೆ ಮತ್ತು ಇನ್ನಿತರ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುವುದರೊಂದಿಗೆ ವಿದ್ಯಾರ್ಥಿಗಳನ್ನು ಸಂಸ್ಕೃತಿ ಸಂಪನ್ನರನ್ನಾಗಿ ರೂಪಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ಇದೇ ವೇಳೆ ಪೋಷಕರ ಕಾರ್ಯಕಾರಿ ಮಂಡಳಿಯ 2023- 24ನೇ ಸಾಲಿಗೆ ಅಧ್ಯಕ್ಷರಾಗಿ ರಂಗರಾಮು, ಕಾರ್ಯದರ್ಶಿ ಸತ್ಯಪ್ರಕಾಶ್, ಸದಸ್ಯರಾಗಿ ನವ್ಯಶ್ರೀ, ಸವಿತಾ, ಭಾರತಿ, ರುದ್ರೇಗೌಡ, ಕರಿಬಸಪ್ಪ ಆಯ್ಕೆಗೊಂಡರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಪೋಷಕರ ಸಂಘದ ಅಧ್ಯಕ್ಷೆ ಪಿ. ಸುಮಲತಾ, ಕಾರ್ಯದರ್ಶಿ ವಿನುತಾ, ರೂಪಶ್ರೀ ಇದ್ದರು. ಅರ್ಚನಾ ಹೆಗ್ಡೆ ಮತ್ತು ತಂಡದವರು ಪ್ರಾರ್ಥಿಸಿದರು. ಡಾ. ವಿನೋದಮ್ಮ ಸ್ವಾಗತಿಸಿದರು. ಡಾ. ಪೂರ್ಣಿಮಾ ವಂದಿಸಿದರು. ಡಾ.ಎಚ್.ಆರ್. ತಿಮ್ಮೇಗೌಡ ನಿರೂಪಿಸಿದರು.

ಪ್ರತಿನಿಧಿ
...ಇವ ನಮ್ಮವ

ಭಾನುವಾರ
ಸೆಪ್ಟೆಂಬರ್ 10, 2023

ಮಕ್ಕಳನ್ನು ಸಂಸ್ಕೃತಿ ಸಂಪನ್ನರನ್ನಾಗಿ ಮಾಡಿ

ಪೋಷಕರ ಸಮಾವೇಶದಲ್ಲಿ ಎಸಿಪಿ ಎಸ್.ಎನ್.ಸಂದೇಶ್‌ಕುಮಾರ್ ಸಲಹೆ

ಪ್ರತಿನಿಧಿ ವರದಿ ಮೈಸೂರು

ಮಕ್ಕಳನ್ನು ಸಂಸ್ಕೃತಿ ಸಂಪನ್ನರನ್ನಾಗಿ ಮಾಡಿ ಎಂದು ಸಹಾಯಕ ಪೊಲೀಸ್ ಆಯುಕ್ತ ಎಸ್.ಎನ್.ಸಂದೇಶ್ ಕುಮಾರ್ ಸಲಹೆ ನೀಡಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) 2023-24ನೇ ಸಾಲಿನ ಪೋಷಕರ ಸಮಾವೇಶದಲ್ಲಿ ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ಬಹಳಷ್ಟು ಗಂಭೀರ ಸಮಸ್ಯೆಗಳು ಎದುರಾಗುತ್ತಿವೆ. ಇದಕ್ಕೆ ಬಲಿಯಾಗುತ್ತಿರುವವರಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅತಿ ಹೆಚ್ಚು ಎಂಬುದನ್ನು ಒಬ್ಬ ಪೊಲೀಸ್ ಅಧಿಕಾರಿಯಾಗಿ ನಾನು ಗುರುತಿಸಿದ್ದೇನೆ.

> ವಿದ್ಯಾಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಸಿಬ್ಬಂದಿವರ್ಗದವರನ್ನು ಅಭಿನಂದನೆ

ಇದಕ್ಕೆ ಕಾರಣ ಏನೆಂದು ಹುಡುಕಿದಾಗ ಪೋಷಕರ ಅತಿಯಾದ ಕಾಳಜಿ ಮತ್ತು ನಿರ್ಲಕ್ಷ್ಯವೇ ಕಾರಣ. ಪ್ರತಿಯೊಬ್ಬ ತಂದೆ-ತಾಯಿಗೂ ತಮ್ಮ ಮಕ್ಕಳು ತಮ್ಮ ಹಾಗೇ ಜೀವನದಲ್ಲಿ ಕಷ್ಟಪಡದೇ ಸುಖವಾಗಿರಬೇಕು ಎಂಬ ಆಶಯ ಏರುತ್ತದೆ. ಆದರೆ ವಿದ್ಯಾರ್ಥಿ ಜೀವನವೇ ಒಂದು ತಪ್ಪಸಿನಂತೆ, ಕಷ್ಟಪಟ್ಟು ಓದಿದಾಗ ಮಾತ್ರ ಜೀವನದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯಶಸ್ಸನ್ನು ಗಳಿಸಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಯು ಬೆಳವಣಿಗೆಯಲ್ಲಿ ಕಾಲೇಜು, ಆಡಳಿತ ಮಂಡಳಿ, ಅಧ್ಯಾಪಕರು, ಪೋಷಕರಾದ ನಾವು ಸದಾ ಜತೆಗಿರುವ ಕೆಲಸ ಮಾಡಬೇಕಾಗುತ್ತದೆ. ಮಕ್ಕಳನ್ನು ಮುದ್ದಾಗಿ ಸಾಕುವುದಷ್ಟೇ ಅಲ್ಲದೆ, ತಪ್ಪು ಮಾಡಿದಾಗ ದಂಡಿಸಿ ಸರಿದಾರಿಗೆ ತರುವ ಜವಾಬ್ದಾರಿ ನಮ್ಮದಾಗಿರುತ್ತದೆ ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮೂರಳೀಧರ್ ಮಾತನಾಡಿ, ನಮ್ಮ ಸಂಸ್ಥೆ ಸ್ವಾಯತ್ತತೆ ಪಡೆದು ನ್ಯಾಕ್‌ನಿಂದ ಎ ಮಾನ್ಯತೆ ಪಡೆದಿದೆ. ಕಾಲೇಜು ಶಿಕ್ಷಣದ ಪಾವಿತ್ರ್ಯತೆ ಉಳಿಸಿಕೊಂಡು ಮೌಲ್ಯಾಧಾರಿತ, ಕೌಶಲಾಧಾರಿತ ಶಿಕ್ಷಣಕ್ಕೆ ಆದ್ಯತೆ ಕೊಡುತ್ತಿದೆ. ಪೋಷಕರು ಮಕ್ಕಳ ಮನಸ್ಸನ್ನು ಅರಿತು ಸ್ನೇಹಿತರಂತೆ ವರ್ತಿಸಿ, ಮಕ್ಕಳು ಕ್ರಿಯಾಶೀಲರಾಗುವತ್ತ ಪ್ರೋತ್ಸಾಹ ನೀಡಬೇಕೆಂದು ಸಲಹೆ ನೀಡಿದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 2023-24ನೇ ಸಾಲಿನ ಪೋಷಕರ ಸಮಾವೇಶವನ್ನು ಸಹಾಯಕ ಪೊಲೀಸ್ ಆಯುಕ್ತ ಎಸ್.ಎನ್.ಸಂದೇಶ್‌ಕುಮಾರ್ ಉದ್ಘಾಟಿಸಿದರು.

> ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಉತ್ತಮ ಅಂಕಗಳಿಸಲು ಸಜ್ಜುಗೊಳಿಸುವುದರೊಂದಿಗೆ ಅವರಲ್ಲಿ ನಮ್ಮ ಭಾರತೀಯ ಸಂಸ್ಕೃತಿಯನ್ನು ಬೆಳೆಸುವ ಕೆಲಸವನ್ನು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಮಹಾಜನ ಕಾಲೇಜು ವಿದ್ಯಾರ್ಥಿಗಳನ್ನು ಕಲೆ, ಸಾಹಿತ್ಯ, ಕ್ರೀಡೆ ಮತ್ತು ಇನ್ನಿತರ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುವುದರೊಂದಿಗೆ ವಿದ್ಯಾರ್ಥಿಗಳನ್ನು ಸಂಸ್ಕೃತಿ ಸಂಪನ್ನರನ್ನಾಗಿ ರೂಪಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ.
> ◂ ಎಸ್.ಎನ್.ಸಂದೇಶ್‌ಕುಮಾರ್
> ಸಹಾಯಕ ಪೊಲೀಸ್ ಆಯುಕ್ತ

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯ ಕುಮಾರಿ ಮಾತನಾಡಿ, ಮಹಾಜನ ಕಾಲೇಜು ನಡೆದು ಬಂದ ದಾರಿ ನೆನೆಯುತ್ತಾ, ಸ್ವಾಯತ್ತ ಸಂಸ್ಥೆಯೊಂದರಲ್ಲಿ ವಿದ್ಯಾಭ್ಯಾಸ ಪಡೆಯುವ ಅನುಕೂಲಗಳನ್ನು ತಿಳಿಸಿದರು.

ಪೋಷಕರ ಸಂಘದ ಅಧ್ಯಕ್ಷೆ ಪಿ.ಸುಮಲತಾ ಮಾತನಾಡಿ, ಒಂದು ವರ್ಷದಿಂದ ಮಹಾಜನ ಕಾಲೇಜಿನ ಎಲ್ಲ ಕಾರ್ಯ ಚಟುವಟಿಕೆಗಳನ್ನು ನಾನು ಗಮನಿಸಿದ್ದೇನೆ. ನನ್ನ ಮಗಳನ್ನು ಉತ್ತಮ ಕಾಲೇಜಿಗೆ ಸೇರಿಸಿದ್ದೇನೆ ಎಂಬ ಹೆಮ್ಮೆ ನನಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಸಿಬ್ಬಂದಿ ವರ್ಗದವರನ್ನು ಅಭಿನಂದಿಸಿದರು. ಮಹಾಜನ ಕಾಲೇಜಿಗೆ ನಮ್ಮ ಉತ್ತರ ಕರ್ನಾಟಕದ ಹತ್ತು ವಿದ್ಯಾರ್ಥಿಗಳನ್ನು ಪ್ರತಿ ವರ್ಷ ಸೇರಿಸುತ್ತೇನೆ ಎಂದು ಭರವಸೆ ನೀಡಿದರು.

ಪೋಷಕರ ಕಾರ್ಯಕಾರಿ ಮಂಡಳಿಯ 2023-24ನೇ ಸಾಲಿಗೆ ಅಧ್ಯಕ್ಷ ರಂಗರಾಮು, ಕಾರ್ಯದರ್ಶಿ ಸತ್ಯಪ್ರಕಾಶ್, ಸದಸ್ಯರಾಗಿ ನವ್ಯಶ್ರೀ, ಸವಿತಾ, ಭಾರತಿ, ರುದ್ರೇಗೌಡ, ಕಬಸಪ್ಪ ಆಯ್ಕೆಗೊಂಡರು.

ಪೋಷಕರ ಸಂಘದ ಸಂಚಾಲಕಿ ಡಾ. ವಿನೋದಮ್ಮ, ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ. ಪೂರ್ಣಿಮಾ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಆರ್ಚನಾ ಹಗ್ಡೆ ಮತ್ತಿತರರಿದ್ದರು.

> ಮಹಾಜನ ಪ್ರಥಮ ದರ್ಜೆ ಸ್ವಾಯತ್ತ ಕಾಲೇಜು ಶೈಕ್ಷಣಿಕ ಸ್ವಾತಂತ್ರ್ಯವನ್ನು ಹೊಂದಿದ್ದು, ವಿದ್ಯಾರ್ಥಿಗಳಿಗೆ ಬೇಕಾಗುವ ಕೌಶಲಾಧಾರಿತ ಮತ್ತು ಡಿಜಿಟಲ್ ಕ್ಷೇತ್ರ ನಿರೀಕ್ಷಿಸುವಂತಹ ಪಠ್ಯಕ್ರಮ ಹೊಂದಿದೆ. ಪೋಷಕರ ಪಾತ್ರ ತಮ್ಮ ಮಕ್ಕಳಿಗೆ ವಿದ್ಯಾಸಂಸ್ಥೆಯೊಂದರಲ್ಲಿ ಪ್ರವೇಶಾತಿ ಪಡೆಯುವುದರೊಂದಿಗೆ ಮುಗಿಯುವುದಿಲ್ಲ. ಅವರು ಕಾಲೇಜಿನೊಂದಿಗೆ ನಿರಂತರ ಸಂಪರ್ಕ ಹೊಂದುವುದು ಅತ್ಯವಶ್ಯಕ. ಚೆಲ್ಲಿದ ಮಕ್ಕಳನ್ನು ಸ್ನೇಹಿತರಂತೆ ಕಾಣುವುದರಿಂದ ಅವರ ದೈನಂದಿನ ಕಾಲೇಜಿನ ಜೀವನದ ಆಗು-ಹೋಗುಗಳ ಬಗ್ಗೆ ತಿಳಿದುಕೊಳ್ಳಬಹುದು. ಕಾಲೇಜಿನ ಪಠ್ಯೇತರ ಕೌಶಲಾಧಾರಿತ ಚಟುವಟಿಕೆಗಳಾದ ಕ್ರೀಡೆ, ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಈ ನಿಟ್ಟಿನಲ್ಲಿ ಪೋಷಕರು ಸಹಕರಿಸಿ ತಮ್ಮ ಮಕ್ಕಳನ್ನು ಪ್ರೋತ್ಸಾಹಿಸಬೇಕು.
> ◂ ಡಾ.ಬಿ.ಆರ್.ಜಯಕುಮಾರಿ ಪ್ರಾಂಶುಪಾಲೆ, ಮಹಾಜನ ಪ್ರಥಮ ದರ್ಜೆ ಕಾಲೇಜು.

> ಸ್ವತಃ ಶಿಲ್ಪಿಯಾದ ನಾನು ಕಲೆಯನ್ನು ಸೃಷ್ಟಿಸಲು ಉತ್ತಮ ಕಲ್ಲುಗಳನ್ನು ಆಯ್ಕೆ ಮಾಡಿಕೊಳ್ಳುತ್ತೇನೆ. ಆದರೆ ಇಲ್ಲಿರುವ ಅಧ್ಯಾಪಕ ಶಿಲ್ಪಿಗಳು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನೂ ಉತ್ತಮ ಪ್ರಜೆಗಳನ್ನಾಗಿ ರೂಪಿಸುತ್ತಿದ್ದಾರೆ. ಕಳೆದ ವರ್ಷ ಕಾಲೇಜಿನಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಸುಮಾರು 180 ವಿದ್ಯಾರ್ಥಿಗಳು ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸವನ್ನು ಪಡೆದುಕೊಂಡಿದ್ದಾರೆ.
> ◂ ಪಿ.ಸುಮಲತಾ
> ಪೋಷಕರ ಸಂಘದ ಅಧ್ಯಕ್ಷೆ.

MFGE In the Eyes of the Press.....

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಧವಾರ • ಸೆಪ್ಟೆಂಬರ್ 13, 2023



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) 2023–24ನೇ ಸಾಲಿನ ಪೋಷಕರ ಸಮಾವೇಶ ನಡೆಯಿತು. ಸಿಸಿಬಿ ಸಹಾಯಕ ಪೊಲೀಸ್ ಆಯುಕ್ತ ಎಸ್.ಎನ್.ಸಂದೇಶ್ ಇದ್ದಾರೆ

'ವಿದ್ಯಾರ್ಥಿ ಜೀವನ ಒಂದು ತಪಸ್ಸು'

ಪ್ರಜಾವಾಣಿ ವಾರ್ತೆ

ಮೈಸೂರು: 'ವಿದ್ಯಾರ್ಥಿ ಜೀವನವೇ ಒಂದು ತಪಸ್ಸಿನಂತೆ. ಕಷ್ಟಪಟ್ಟು ಓದಿದಾಗ ಮಾತ್ರ ಜೀವನದಲ್ಲಿ ಯಶಸ್ಸು ಪಡೆಯಲು ಸಾಧ್ಯ' ಎಂದು ಸಿಸಿಬಿ ಸಹಾಯಕ ಪೊಲೀಸ್ ಆಯುಕ್ತ ಎಸ್. ಎನ್.ಸಂದೇಶ್ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) 2023-24ನೇ ಸಾಲಿನ ಪೋಷಕರ ಸಮಾವೇಶದಲ್ಲಿ ಅವರು ಮಾತನಾಡಿದರು.

'ಪ್ರಸ್ತುತ ಸಮಾಜದಲ್ಲಿ ಬಹಳಷ್ಟು ಗಂಭೀರ ಸಮಸ್ಯೆಗಳು ಎದುರಾಗುತ್ತಿವೆ. ಇದಕ್ಕೆ ಬಲಿಯಾಗುತ್ತಿರುವವರಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು. ಪೋಷಕರ ಅತಿಯಾದ ಕಾಳಜಿ ಮತ್ತು ನಿರ್ಲಕ್ಷ್ಯವೇ ಕಾರಣವಾಗಿದ್ದು, ಪ್ರತಿಯೊಬ್ಬ ತಂದೆ ತಾಯಿಗೂ ಮಕ್ಕಳು ಜೀವನದಲ್ಲಿ ಕಷ್ಟಪಡದೆ ಸುಖವಾಗಿರಬೇಕು ಎಂಬ ಆಶಯವಿರುತ್ತದೆ' ಎಂದರು.

ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಟಿ.ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಬಿ.ಆರ್. ಜಯಕುಮಾರಿ ಮಾತನಾಡಿದರು.

STAR OF MYSORE

Friday 29th September 2023

Mahajana holds parents' meet to foster community engagement



Mysuru, Sept. 29 (BCT)- Mahajana College hosted its Annual Parents' Meet recently, welcoming parents, students, and guests to an evening of insightful discussions and shared visions for the future.

In his address as chief guest, S.N. Sandesh Kumar, Assistant Commissioner of Police (CCB) Mysuru, shed light on the pressing issues faced by today's youth. He emphasised that over-parenting and parental negligence were among the root causes behind these challenges. He stressed the importance of a student's role and their focus on education as the key to success.

Education, in his view, is not merely about academic achievements but also about shaping well-rounded individuals who are academically, physically, mentally, and emotionally strong, with a deep appreciation for culture and moral values. He called for a collective effort involving college administrations, teachers, and parents to ensure the comprehensive development of students.

Furthermore, Sandesh Kumar underscored the need for educational institutions to instil in students a sense of national pride and cultural heritage, making them responsible and socially aware citizens.

P. Sumalatha, President of the Parents' Association, applauded Mahajana College for its commitment to individualised student care and encouraged parents to actively engage with teachers and support their children's participation in college activities.

Principal Dr. B.R. Jayakumari highlighted the institution's academic freedom as an autonomous institution, allowing for industry-oriented and job-oriented syllabi. She underlined that a parent's role extends beyond admission, urging parents to foster a strong relationship with the institution to ensure their children's social and academic growth.

Secretary Dr. T. Vijayalakshmi Muralidhar expressed the management's dedication to student welfare, providing free education for meritorious students and fee concessions for those from defence backgrounds. She encouraged students to take full advantage of the academic and co-curricular opportunities.

The event also saw the selection of office-bearers for the Parents Association 2023-24, who pledged to work closely with the institution for the betterment of students. Office-bearers of Parents Association 2023-24 were chosen on the occasion.

Dr. Vinodamma welcomed the gathering. Dr. S. Poornima proposed a vote of thanks. Dr. H.R. Thimmegowda, HoD, Kannada, was the master of the ceremony. Archana and team rendered invocation.

ವಿಜಯವಾಣಿ

ಕನ್ನಡಿಗರ ಧ್ವನಿ

ಶನಿವಾರ 9 ಸೆಪ್ಟೆಂಬರ್ 2023
9 SEPTEMBER 2023

ಪಾಲಕರ ಸಭೆ: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು. ಅತಿಥಿಗಳು: ಎನ್.ಎನ್.ಸಂದೇಶ್ ಕುಮಾರ್, ಪಿ. ಸುಮಲತಾ ಸ್ಥಳ: ವಿವೇಕಾನಂದ ಸಭಾಂಗಣ, ಕಾಲೇಜು ಆವರಣ, ಜಯಲಕ್ಷ್ಮೀಪುರಂ, ಬೆ.10.30

ಪ್ರಜಾವಾಣಿ

ಶನಿವಾರ • ಸೆಪ್ಟೆಂಬರ್ 9, 2023

ಮಹಾಜನ ವಿದ್ಯಾಸಂಸ್ಥೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ಪೋಷಕರ ಸಮಾವೇಶ, ಉದ್ಘಾಟನೆ- ಎಸ್. ಎನ್.ಸಂದೇಶ್ ಕುಮಾರ್, ಅಧ್ಯಕ್ಷತೆ- ಸುಮಲತಾ.ಪಿ, ಸ್ಥಳ- ವಿವೇಕಾನಂದ ಸಭಾಂಗಣ, ಬೆಳಿಗ್ಗೆ 10.30

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 9 ಸೆಪ್ಟೆಂಬರ್ 2023

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ಪೋಷಕರ ಸಮಾವೇಶ, ಉದ್ಘಾಟನೆ: ಸಹಾಯಕ ಪೊಲೀಸ್ ಆಯುಕ್ತ ಎಸ್.ಎನ್. ಸಂದೇಶ್‌ಕುಮಾರ್, ಅಧ್ಯಕ್ಷತೆ: ಪೋಷಕರ ಸಂಘದ ಅಧ್ಯಕ್ಷರಾದ ಪಿ. ಸುಮಲತಾ, ಉಪಸ್ಥಿತರು: ಮಹಾಜನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಪೋಷಕರ ಸಂಘದ ಕಾರ್ಯದರ್ಶಿ ಕೆ.ಎಸ್.ವಿನಿತಾ, ಸ್ಥಳ: ವಿವೇಕಾನಂದ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

MFGE In the Eyes of the Press.....

ನೇರ.ದಿಟ್ಟ.ನಿರಂತರ

ಬುಧವಾರ 13.09.2023



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಡಿಸ್ಲೆಕ್ಸಿಯಾ ಟ್ ದಿ ಲರ್ನರ್ ಸಂಸ್ಥಾಪಕ ನಿರ್ದೇಶಕಿ ಬಿ. ಸೀಮಂತಿನಿ ಮಾತನಾಡಿದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 14.09.2023

ಮಹಾಜನ ಕಾಲೇಜಿನಲ್ಲಿ ಯೂತೋತ್ಸವ



• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರತಿಭಾ ವೇದಿಕೆ, ಐಕ್ಯೂಎಸಿ ಹಾಗೂ 93.5 ರೆಡ್‌ಎಫ್‌ಎಂ ಸಹಯೋಗದಲ್ಲಿ ಯೂತೋತ್ಸವ ಆಯೋಜಿಸಲಾಗಿತ್ತು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯ ಕುಮಾರಿ ಮಾತನಾಡಿ, ವಿದ್ಯಾರ್ಥಿ ಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆ ಅನಾವರಣಗೊಳಿಸುವ ಈ ಕ್ಷಣ ತುಂಬಾ ಸಂತೋಷ ಮತ್ತು ಸಂಭ್ರಮಿಸುವಂತದ್ದು. ವಿದ್ಯಾರ್ಥಿಗಳಲ್ಲಿನ ವೈವಿಧ್ಯಮಯ ಕಲೆ ಪ್ರೋತ್ಸಾಹಿಸಲು ಈ ವೇದಿಕೆ ಅವಕಾಶ ಕೊಟ್ಟಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯಬೇಕು ಎಂದರು.

ಜೀವನದಲ್ಲಿ ಒಳ್ಳೆಯ ನಡತೆ, ಜ್ಞಾನ, ಮೌಲ್ಯ ಮತ್ತು ಕೌಶಲ್ಯ ಕಲಿಸಿಕೊಟ್ಟ ತಂದೆ, ತಾಯಿ ಹಾಗೂ ಗುರು ಹಿರಿಯರನ್ನು ಎಂದಿಗೂ ಮರೆಯಬಾರದು ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಯು ಜೀವನದಲ್ಲಿ ಒಂದು ಗುರಿಯನ್ನು ಇಟ್ಟುಕೊಂಡು ನಿಮ್ಮಲ್ಲಿರುವ ನ್ಯೂನತೆ ಸರಿಪಡಿಸಿಕೊಂಡು, ಛಲದಿಂದ ಮುನ್ನುಗ್ಗಿ, ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ಕೌಶಲ್ಯದ ಕಡೆಗೆ ಗಮನಹರಿಸಿ, ಅಧ್ಯಾಪಕರ ನಡುವೆ ಒಳ್ಳೆಯ ಸಂಬಂಧ ಬೆಳೆಸಿಕೊಳ್ಳಿ ಎಂದರು.

ಶೈಕ್ಷಣಿಕ ಡೀನ್ಡಾ.ಎಚ್. ಶಶೀಧರ್ ಮಾತನಾಡಿದರು. ಅಧ್ಯಾಪಕೇತರಸಿಬ್ಬಂದಿ ಬಸವರಾಜು ಜನಪದ ಗೀತ ಗಾಯನಕ್ಕೆ ಬಹುಮಾನ ಪಡೆದರು. ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ನಿಹಾರಿಕಾ ಹೆಗಡೆ, ಬಿ. ಮೋಹನ್ರಾಜ್, ಪಲ್ಲವಿ, ಸುಚಿತ್ರಾ ಮತ್ತು ತಂಡದವರು ರೆಡ್‌ಎಫ್ಎಂಡೆಯಿಂದ ಪ್ರಮಾಣ ಪತ್ರ ಪಡೆದರು.

ಕಾರ್ಯಕ್ರಮದಲ್ಲಿ ಎಲ್ಲಾ ವಿಭಾಗದ ಮುಖ್ಯಸ್ಥರು, ಅಧ್ಯಾಪಕರು, ಅಧ್ಯಾಪಕೇತರರು, ಸ್ವಯಂ ಸೇವಕ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 14 ಸೆಪ್ಟೆಂಬರ್ 2023

ಮಹಾಜನ ಕಾಲೇಜಿನಲ್ಲಿ ಯಶಸ್ವಿ 'ಯೂತೋತ್ಸವ'



ಮೈಸೂರು, ಸೆ. 13– ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಈ ವರ್ಷದ ಮೊದಲ ಕಾರ್ಯಕ್ರಮವಾಗಿ ಪ್ರತಿಭಾ ವೇದಿಕೆ, ಐಕ್ಯೂಎಸಿ ಹಾಗೂ 93.5 Red FM ಅವರ ಸಹಯೋಗದೊಂದಿಗೆ 'ಯೂತೋತ್ಸವ'ವನ್ನು ಆಯೋಜಿಸಲಾಗಿತ್ತು. ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ ಮಾತನಾಡುತ್ತಾ, ಈ ಕಾರ್ಯಕ್ರಮ ವಿದ್ಯಾರ್ಥಿಗಳಲ್ಲಿ ಇರುವ ಸುಪ್ತ ಪ್ರತಿಭೆಗಳನ್ನು ಅನಾವರಣಗೊಳಿಸುವ ಈ ಕ್ಷಣ ತುಂಬಾ ಸಂತೋಷ ಹಾಗೂ ಸಂಭ್ರಮಪಡುವಂತಹದ್ದು. ವಿದ್ಯಾರ್ಥಿಗಳಲ್ಲಿರುವ ವೈವಿಧ್ಯಮಯವಾದ ಕಲೆಯನ್ನು ಪ್ರೋತ್ಸಾಹಿಸಲು ಈ ವೇದಿಕೆ ಅವಕಾಶ ಮಾಡಿಕೊಟ್ಟಿದೆ. ವಿದ್ಯಾರ್ಥಿಗಳು ಇದರ ಸದುಪಯೋಗಪಡಿಸಿಕೊಂಡು ತಮ್ಮಲ್ಲಿರುವ ಪ್ರತಿಭೆಯನ್ನು ಬಳಸಿಕೊಂಡು ಜೀವನದಲ್ಲಿ ಉತ್ತಮ ಕಲಾವಿದರಾಗುವಂತೆ ಹಾರೈಸಿದರು.

'ಜೀವನದಲ್ಲಿ ಒಳ್ಳೆಯ ನಡತೆ, ಜ್ಞಾನ, ಮೌಲ್ಯ ಮತ್ತು ಕೌಶಲ್ಯಗಳನ್ನು ಕಲಿಸಿಕೊಟ್ಟ ತಂದೆ, ತಾಯಿ ಹಾಗೂ ಗುರು ಹಿರಿಯರನ್ನು ಎಂದೆಂದಿಗೂ ಮರೆಯಬಾರದು. ಮರೆತರೆ ನೀವು ಎಂದಿಗೂ ನಿಮ್ಮ ಜೀವನದಲ್ಲಿ ಏಳ್ಗೆ ಕಾಣಲು ಸಾಧ್ಯವಿಲ್ಲ. ನೀವು ಯಾವ ವಿಷಯದಲ್ಲಿ ಓದುತ್ತಿದ್ದೀರಿ ಎಂಬುದು ಮುಖ್ಯವಲ್ಲ, ನಿಮ್ಮ ಕೌಶಲ್ಯಾಧಾರಿತ ಜ್ಞಾನ ಎಷ್ಟಿದೆ ಎಂಬುದನ್ನು ಅರಿತು, ಸಮಾಜಕ್ಕೆ ಏನಾದರೂ ಕೊಡುಗೆಗಳನ್ನು ನೀಡಬೇಕು. ವಿದ್ಯಾರ್ಥಿಗಳು ಬರೀ ಓದು, ಪದವಿಯನ್ನು ಗಳಿಸಿದರೆ ಸಾಲದು. ತಮ್ಮಲ್ಲಿ ಹುದುಗಿರುವ ಕೌಶಲ್ಯ, ಪ್ರತಿಭೆಯನ್ನು ಹೊರಹಾಕಿ, ಯಾವುದಾದರೊಂದು ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಶೈಕ್ಷಣಿಕ ಡೀನ್ ಡಾ. ಹೆಚ್. ಶ್ರೀಧರ ಮಾತನಾಡಿ, ಇಂದಿನ ಕಾರ್ಯಕ್ರಮ ತುಂಬಾ ಅರ್ಥಪೂರ್ಣವಾದದ್ದು. ಹೊಸ ಹೊಸ ಪ್ರತಿಭೆಗಳು ಮುನ್ನುಡಿಯನ್ನು ಬರೆಯಲಿ, ಕಲಾ ಜಗತ್ತಿಗೆ ವಿಭಿನ್ನ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಆಯೋಜಿಸಿರುವ ಈ ಅವಕಾಶವನ್ನು ಎಲ್ಲಾ ವಿದ್ಯಾರ್ಥಿಗಳು ಬಳಸಿಕೊಂಡು ಕಾಲೇಜಿಗೆ ಹಾಗೂ ಸಮಾಜಕ್ಕೆ ಕೀರ್ತಿ ತಂದುಕೊಡಬೇಕೆಂಯ ಶುಭಹಾರೈಸಿದರು.

'ಯೂತೋತ್ಸವ'ದಲ್ಲಿ ಭಾವಗೀತೆ, ಜಲನಚಿತ್ರಗೀತೆ, ಸಮೂಹ ನೃತ್ಯ, ಮ್ಯಾಡ್‌ಆ್ಯಡ್ಸ್, ಏಕಪಾತ್ರಾಭಿನಯ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಭಾವಗೀತೆ ಮತ್ತು ಜಲನಚಿತ್ರಗೀತೆ ಸ್ಪರ್ಧೆಯಲ್ಲಿ ಪ್ರಥಮ ವರ್ಷದ ಬಿ.ಎಸ್ಸಿ ವಿದ್ಯಾರ್ಥಿ ಅಕ್ಷೋಭ್ಯ ಪ್ರಥಮ ಬಹುಮಾನ ಪಡೆದುಕೊಂಡರು. ದ್ವಿತೀಯ ವರ್ಷದ ಬಿ.ಎ. ವಿದ್ಯಾರ್ಥಿನಿ ಸಾಗರಿ ಪೊನ್ನಮ್ಮ ದ್ವಿತೀಯ ಬಹುಮಾನ ಪಡೆದರು. ಸಮೂಹ ನೃತ್ಯ ಸ್ಪರ್ಧೆಯಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಪ್ರದ್ಯುಲ್ ಮತ್ತು ತಂಡದವರು ಪ್ರಥಮ ಬಹುಮಾನವನ್ನು ಪಡೆದರು. ಲಕ್ಷ್ಮೀ ಮತ್ತು ತಂಡದವರು ದ್ವಿತೀಯ ಬಹುಮಾನವನ್ನು ಪಡೆದರು. ಮ್ಯಾಡ್ ಆ್ಯಡ್ಸ್ ಮತ್ತು ಏಕಪಾತ್ರಾಭಿನಯ ಸ್ಪರ್ಧೆಯಲ್ಲಿ ಅಂತಿಮ ವರ್ಷದ ಬಿ.ಕಾಂ. ವಿದ್ಯಾರ್ಥಿನಿ ಹಂಸ ಎ.ಎಂ. ಪ್ರಥಮ ಬಹುಮಾನ ಪಡೆದರು. ಹಿರಿಯ ವಿದ್ಯಾರ್ಥಿನಿ ಹಾಗೂ ಡಿಕೆಡಿ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್‌ನಲ್ಲಿ ರನ್ನರ್ ಅಪ್ ಆಗಿದ್ದ ನೃತ್ಯಕಲಾವಿದೆ ಕು. ದಕ್ಷಿತ ಅವರು ನೃತ್ಯ ಪ್ರದರ್ಶನ ನೀಡಿದರು. ಅವರಿಗೆ ಗೌರವ ಕಾಣಿಕೆಯನ್ನು ನೀಡಲಾಯಿತು.

ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನಿಹಾರಿಕಾ ಹೆಗಡೆ, ಮೋಹನ್‌ರಾಜ್ ಬಿ, ಪಲ್ಲವಿ, ಸುಚಿತ್ರ ಮತ್ತು ತಂಡದ ಎಲ್ಲಾ ವಿದ್ಯಾರ್ಥಿಗಳಿಗೆ ರೆಡ್ ಎಫ್‌ಎಂ ಕಡೆಯವರಿಂದ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. 'ಯೂತೋತ್ಸವ್' ಸ್ಪರ್ಧೆಯ ತೀರ್ಪುಗಾರರಾಗಿ ಆರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಎಂ.ಎನ್. ವೆಂಕಟಲಕ್ಷ್ಮೀ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ವಿನೋದಮ್ಮ, ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಹಂಸವೇಣಿ, ಪ್ರತಿಭಾ ವೇದಿಕೆಯ ಸಂಚಾಲಕ ನಾಗೇಶ ಎಂ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ ಉಪಸ್ಥಿತರಿದ್ದರು.

MFGE In the Eyes of the Press.....

ಪ್ರತಿನಿಧಿ
...ಇವ ನಮ್ಮವ
ಗುರುವಾರ
ಸೆಪ್ಟೆಂಬರ್ 14, 2023

ಸುಪ್ತ ಪ್ರತಿಭೆಗಳನ್ನ ಅನಾವರಣಗೊಳಿಸುವ ಕ್ಷಣ ಸಂತಸ ತಂದಿದೆ: ಜಯಕುಮಾರಿ

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಯೂತೋತ್ಸವ

ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಈ ವರ್ಷದ ಮೊದಲ ಕಾರ್ಯಕ್ರಮವಾಗಿ ಪ್ರತಿಭಾ ವೇದಿಕೆ ಮತ್ತು ರೆಡ್‌ಎಫ್ ಎಂ ಸಹಯೋಗದಲ್ಲಿ ಯೂತೋತ್ಸವವನ್ನು ಆಯೋಜಿಸಲಾಗಿತ್ತು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಈ ಕಾರ್ಯಕ್ರಮ ವಿದ್ಯಾರ್ಥಿಗಳಲ್ಲಿ ಇರುವ ಸುಪ್ತ ಪ್ರತಿಭೆಗಳನ್ನ ಅನಾವರಣಗೊಳಿಸುವ ಈ ಕ್ಷಣ ತುಂಬಾ ಸಂತೋಷಹಾಗೂ ಸಂಭ್ರಮ ಪಡುವಂತಹದು. ವಿದ್ಯಾರ್ಥಿಗಳಲ್ಲಿರುವ ವೈವಿಧ್ಯಮಯ ಕಲೆಯನ್ನು ಪ್ರೋತ್ಸಾಹಿಸಲು ಈ ವೇದಿಕೆ ಅವಕಾಶ ಮಾಡಿಕೊಟ್ಟಿದೆ. ವಿದ್ಯಾರ್ಥಿಗಳು ಇದರ ಸದುಪಯೋಗಪಡಿಸಿಕೊಂಡು ತಮ್ಮೊಳಗಿರುವ ಪ್ರತಿಭೆಯನ್ನು ದುಡಿಸಿಕೊಂಡು ಜೀವನದಲ್ಲಿ ಉತ್ತಮ ಕಲಾವಿದರಾಗಬೇಕೆಂದು ಹಾರೈಸಿದರು.

ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ ಮಾತನಾಡಿ, ಇಂದಿನ ಕಾರ್ಯಕ್ರಮ ತುಂಬಾ ಅರ್ಥಪೂರ್ಣವಾದದ್ದು, ಹೊಸ ಹೊಸ ಪ್ರತಿಭೆಗಳು





ಮುನ್ನುಡಿಯನ್ನು ಬರೆಯಲಿ, ಕಲಾ ಜಗತ್ತಿಗೆ ವಿಭಿನ್ನ ಪ್ರತಿಭೆಗಳನ್ನ ಪ್ರೋತ್ಸಾಹಿಸಲು ಆಯೋಜಿಸಿರುವ ಈ ಅವಕಾಶವನ್ನು ಎಲ್ಲ ವಿದ್ಯಾರ್ಥಿಗಳು ಬಳಸಿಕೊಂಡು ಕಾಲೇಜಿಗೆ ಹಾಗೂ ಸಮಾಜಕ್ಕೆ ಕೀರ್ತಿ ತಂದುಕೊಡಬೇಕೆಂದು ಶುಭಹಾರೈಸಿದರು. ಭಾವಗೀತೆ ಮತ್ತು ಚಲನಚಿತ್ರಗೀತೆ ಸ್ಪರ್ಧೆಯಲ್ಲಿ ಪ್ರಥಮ ವರ್ಷದ ಬಿ.ಎಸ್ಸಿ ವಿದ್ಯಾರ್ಥಿ ಅಕ್ಷಿಭ್ಯ ಅವರು ಪ್ರಥಮ, ದ್ವಿತೀಯ ವರ್ಷದ ಬಿ.ಎ. ವಿದ್ಯಾರ್ಥಿನಿ ಸಾಗರಿ ಪೊನ್ನಮ್ಮ ದ್ವಿತೀಯ ಬಹುಮಾನ ಪಡೆದರು.

ಸಮೂಹ ನೃತ್ಯ ಸ್ಪರ್ಧೆಯಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಪ್ರಜ್ವಲ್ ಮತ್ತು ತಂಡದವರು ಪ್ರಥಮ, ಲಕ್ಷ್ಮೀ ಮತ್ತು ತಂಡದವರು ದ್ವಿತೀಯ ಬಹುಮಾನ ಪಡೆದರು.

ಮ್ಯಾಡ್‌ಆಡ್ಸ್ ಮತ್ತು ಏಕಪಾತ್ರಾಭಿನಯ ಸ್ಪರ್ಧೆಯಲ್ಲಿ ಅಂತಿಮ ವರ್ಷದ ಬಿ.ಕಾಂ. ವಿದ್ಯಾರ್ಥಿನಿ ಎ.ಎಂ.ಹಂಸ ಪ್ರಥಮ ಬಹುಮಾನ ಪಡೆದರು. ಹಿರಿಯ ವಿದ್ಯಾರ್ಥಿನಿ ಹಾಗೂ ಡಿಕೆಡಿ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್‌ನಲ್ಲಿ ರನ್ನರ್ ಅಪ್ ಆಗಿದ್ದ ನೃತ್ಯಕಲಾವಿದೆ ಕು. ದಕ್ಷಿತ ಅವರು ನೃತ್ಯ ಪ್ರದರ್ಶನ ನೀಡಿದರು. ಅವರಿಗೆ ಗೌರವ ಕಾಣಿಕೆಯನ್ನು ನೀಡಲಾಯಿತು.

ಅಧ್ಯಾಪಕೇತರ ಸಿಬ್ಬಂದಿ ಬಸವರಾಜು ಅವರು ಜನಪದ ಗೀತ ಗಾಯನಕ್ಕೆ ಕಿರುಕಾಣಿಕೆಯನ್ನು ಪಡೆದುಕೊಂಡರು.

ನಿಹಾರಿಕಾ ಹೆಗಡೆ, ಮೋಹನ್‌ರಾಜ್ , ಪಲ್ಲವಿ, ಸುಚಿತ್ರ ಮತ್ತು ತಂಡದ ಎಲ್ಲಾ ವಿದ್ಯಾರ್ಥಿಗಳಿಗೆ ರೆಡ್‌ಎಫ್ ಕಡೆಯವರಿಂದ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ಯುತೋತ್ಸವ ಸ್ಪರ್ಧೆಯ ತೀರ್ಪುಗಾರರಾಗಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಎಂ. ಎನ್. ವೆಂಕಟಲಕ್ಷ್ಮೀ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ವಿನೋದಮ್ಮ, ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಹಂಸವೇಣಿ, ಪ್ರತಿಭಾ ವೇದಿಕೆಯ ಸಂಚಾಲಕ ನಾಗೇಶ ಎಂ. ಹಾಗೂ ಕನ್ನಡ ವಿಭಾಗದ ಮುಖ್ಯಸ್ಥಡಾ. ಎಚ್.ಆರ್. ತಿಮ್ಮೇಗೌಡ ಉಪಸ್ಥಿತರಿದ್ದರು. ಆರ್.ಜೆ.ರಶ್ಮಿ, ಆರ್.ಜೆ.ದೀಪಕ್, ಆರ್.ಜೆ.ಸುನಿಲ್, ಆರ್.ಜೆ.ಪುನಿತ್ ಯಶಸ್ವಿಯಾಗಿ ನಡೆಸಿಕೊಟ್ಟರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 1.10.2023

ದಿಕ್ಕು ಕಂಡುಹಿಡಿಯಲು ಹಿಂದೆ ನಕ್ಷತ್ರ ಮಾದರಿ ಅನುಸರಣೆ

ಸಂವಾದದಲ್ಲಿ ಖಭೌತ ವಿಜ್ಞಾನ ಸಂಸ್ಥೆ ಕಾಸ್ಮೋಸ್ ಸಹ ಯೋಜನಾಧಿಕಾರಿ ಎನ್ ಅಮೋಘವರ್ಷ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ಹಿಂದಿನ ಕಾಲದಲ್ಲಿ ದಿಕ್ಕುಗಳನ್ನು ಕಂಡುಹಿಡಿಯಲು ಮಾನವರು ನಕ್ಷತ್ರಗಳ ಮಾದರಿಗಳನ್ನು ಅನುಸರಿಸುತ್ತಿದ್ದರು. ಅದರಲ್ಲೂ ಮುಖ್ಯವಾಗಿ ಧ್ರುವ ನಕ್ಷತ್ರದ ದಿಕ್ಕನ್ನು ಮಾದರಿಯಾಗಿಟ್ಟುಕೊಂಡು ಉತ್ತರ ದಿಕ್ಕನ್ನು ಗುರುತಿಸುತ್ತಿದ್ದರು. ನಕ್ಷತ್ರಗಳ ಮೂಲಕವೇ ಕಾಲಕ್ರಮಣಿಕೆಯಉಪಯೋಗಗಳನ್ನುಕಂಡುಕೊಂಡರು ಎಂದು ಭಾರತೀಯ ಖಭೌತ ವಿಜ್ಞಾನ ಸಂಸ್ಥೆ ಕಾಸ್ಮೋಸ್ ಸಹ ಯೋಜನಾಧಿಕಾರಿ ಎನ್. ಅಮೋಘವರ್ಷ ತಿಳಿಸಿದರು. ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಭೌತಶಾಸ್ತ್ರ ವಿಭಾಗ, ಭೂಗೋಳಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಖಗೋಳಶಾಸ್ತ್ರದ ಇತ್ತೀಚಿನ ಪ್ರವೃತ್ತಿಗಳು ಕುರಿತು ಆಯೋಜಿಸಿದ್ದ ಸಂವಾದದಲ್ಲಿ



ಅವರು ಮಾತನಾಡಿದರು.

ಖಗೋಳಶಾಸ್ತ್ರವೆಂಬುದು ಬ್ರಹ್ಮಾಂಡದ ವಿಕಾಸ ಮತ್ತು ಬೆಳವಣಿಗೆಯನ್ನು ಅಧ್ಯಯನ ಮಾಡುವ ವಿಭಾಗವಾಗಿದ್ದು, ಬ್ರಹ್ಮಾಂಡವು ಸುಮಾರು 14 ಶತಕೋಟಿ ವರ್ಷಗಳ ಹಿಂದೆ ರಚನೆಯಾಗಿರುವ ಸಿದ್ಧಾಂತವನ್ನು ಖಗೋಳಶಾಸ್ತ್ರವು ವಿವರಿಸುವ ಕೆಲಸ ಮಾಡುತ್ತದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಎಸ್. ಪೂರ್ಣಿಮಾ, ಭೂಗೋಳಶಾಸ್ತ್ರ ಮುಖ್ಯಸ್ಥ ಡಾ. ಕೆ.ಕೆ. ಸೋಮಶೇಖರ ಇದ್ದರು. ಗಾಯತ್ರಿ ನಿರೂಪಿಸಿದರು.

STAR OF MYSORE

Tuesday 31st October 2023

Session held on trends in Astrophysics at Mahajana



Mysuru, Oct. 31 (BCT)- An interaction session was conducted by the Department of Physics and Geography at SBRR Mahajana First Grade College (Autonomous) in city on the topic 'Recent trends in Astrophysics'.

N. Amoghavarsha, Project Associate-I at COSMOS, Indian Institute of Astrophysics (IIA), Mysuru, was the resource person. He was recognised with the Best Outgoing Student Award in 2022 from St. Joseph's College, Bengaluru. He commenced the session by emphasising the significance of understanding the patterns of stars for navigation, such as the use of the Pole Star for determining North.

He elaborated on the importance of timelines in astronomy and the role of mathematics in this field. Amoghavarsha provided valuable insights into the evolution of the universe and noted that its estimated age is approximately 14 billion years.

He underscored that astrophysics is a scientific discipline that incorporates the methods and principles of physics and chemistry and even some biological tools, in the study of astronomical phenomena. He explained how we can determine the age or lifespan of stars and offered evidence of the universe's expansion.

He also shared that 73 percent of our universe is composed of dark energy, 23% consists of dark matter, and the remaining 4% is made up of normal matter. Amoghavarsha showcased various types of telescopes and stressed their importance in astronomical research.

Furthermore, he discussed recent developments in Indian astronomy, including projects like Chandrayaan-3 and Aditya L-I. He showed video clips of these space missions, offering valuable insights to students and faculty. V. Gayathri from the Department of Physics, welcomed the gathering and S. Poornima proposed a vote of thanks.

ಹೊಸ ದಿಗಂತ

ಗುರುವಾರ
12 ಅಕ್ಟೋಬರ್ 2023

ಭಾರತದ ಅಭಿವೃದ್ಧಿ ಕುರಿತ ಗೋಪಾಲ್ ಸಿಂಗ್ ವಿಶೇಷ ಉಪನ್ಯಾಸ

ಭಾರತದ ಪ್ರಗತಿಗೆ ಆರ್ಥಿಕತೆ ನೆರವು

ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗವು ಆಯೋಜಿಸಿದ್ದ ಭಾರತ, ಚೀನಾ ಅಭಿವೃದ್ಧಿಯ ಸನ್ನಿವೇಶಗಳ ಕುರಿತು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಅರ್ಥಶಾಸ್ತ್ರಜ್ಞ ಡಾ. ಬಿ. ಗೋಪಾಲ್ ಸಿಂಗ್ ವಿಶೇಷ ಉಪನ್ಯಾಸ ನೀಡಿದರು.

20ನೇ ಶತಮಾನದ ನಂತರದಲ್ಲಿ ಏಷ್ಯಾ ಖಂಡದಲ್ಲಿ ಭಾರತ-ಚೀನಾ ಹೊರಹೊಮ್ಮುತ್ತಿರುವ ಆರ್ಥಿಕತೆಯಾಗಿ ನಿಂತಿದೆ. ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ತಂತ್ರಜ್ಞಾನ, ಮೂಲ ಸೌಕರ್ಯಗಳ ಅಭಿವೃದ್ಧಿಯಲ್ಲಿ ಚೀನಾ-ಭಾರತ ಪ್ರಬಲ ಪೈಪೋಟಿಯ ಜೊತೆಗೆ ಬೆಳವಣಿಗೆಯನ್ನು ಹೊಂದುತ್ತಿದ್ದು, ಜಾಗತಿಕ ಮಟ್ಟದಲ್ಲಿ ಸೂಪರ್ ಪವರ್ ಆರ್ಥಿಕತೆಗಳಾಗಿ ಹೊರಹೊಮ್ಮುತ್ತಿವೆ ಎಂದು ಹೇಳಿದರು. ಡಾ. ಸಿಂಗ್ ಅವರು ಭಾರತದಲ್ಲಿನ ಸಾಂಪ್ರದಾಯಿಕ ಮನಸ್ಥಿತಿಯು ಅವರ ಹಿಂದುಳಿಯುವಿಕೆಗೆ ಮುಖ್ಯಕಾರಣ ಎಂಬ ಅಂಶವನ್ನು ಮುಂದಿಟ್ಟರು. ಚೀನಾ ದೇಶ ಅನೇಕ ವಿಚಾರಗಳಲ್ಲಿ ಭಾರತಕ್ಕಿಂತ ಮುಂದುವರೆದಿದೆ. ಆ ದೇಶಕ್ಕೆ ನಾನು ಭೇಟಿ ಇತ್ತಾಗ ಜನರಲ್ಲಿನ ಮುಂದುವರೆದ ಹಾಗೂ ಪ್ರಗತಿಪರ ಯೋಚನೆಗಳೂ ಹಾಗೂ ಕೆಲಸದ ಬಗ್ಗೆ ಅವರಿಗೆ ಇರುವ ಶ್ರದ್ಧೆ ಮತ್ತು ಅರಿವುಗಳು ಇಡೀ ಜಗತ್ತಿನಲ್ಲೇ ಚೈನಾ ದೇಶವು ಮುಂಚೂಣಿಯಲ್ಲಿ ಇರಲು ಕಾರಣ ಎಂಬುದನ್ನು ಒತ್ತಿ ಹೇಳಿದರು.



ಮಿತ್ರತ್ವದ ಭಾವನೆ ಮುಖ್ಯ

ಕೃಷಿ, ಶಿಕ್ಷಣ, ಆರೋಗ್ಯ ಮೂಲ ಸೌಕರ್ಯಗಳನ್ನು ಭಾರತಕ್ಕಿಂತ ಚೀನಾ ಹೆಚ್ಚು ಬಂಡವಾಳ ಹೂಡುತ್ತಿದ್ದು, ಜೀವನದ ನಿರೀಕ್ಷಿತ ಮಟ್ಟದಲ್ಲಿ ಏರಿಕೆ ಕಂಡಿದೆ. ಜೊತೆಗೆ ಭಾರತ ಕೂಡ ಅದನ್ನು ಸಾಧಿಸಲು ಪ್ರಯತ್ನಿಸುತ್ತಿದೆ. ಯಾವುದೇ ನೆರೆಯ ರಾಷ್ಟ್ರದ ಜತೆಗೆ ಸಕಾರಾತ್ಮಕವಾಗಿ ಮತ್ತು ಮಿತ್ರತ್ವದ ಭಾವನೆ ಬೆಳಸಿಕೊಂಡಾಗ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದು ಗೋಪಾಲ್ ಸಿಂಗ್ ಹೇಳಿದರು.

ಸುಮಾರು 100 ಕ್ಕಿಂತಲೂ ಹೆಚ್ಚು ಅರ್ಥಶಾಸ್ತ್ರ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿದ್ಯಾರ್ಥಿಗಳು ಉತ್ಸುಕತೆಯಿಂದ ಭಾರತ-ಚೀನಾಗೆ ಸಂಬಂಧಿಸಿದಂತೆ ಕೆಲವೊಂದು ಅಂಶಗಳನ್ನು ಸಂಪನ್ಮೂಲ ವ್ಯಕ್ತಿಯೊಂದಿಗೆ ಹಂಚಿಕೊಂಡರು. ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ನೀಡಲಾಯಿತು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 13.10.2023

ಅಭಿನಂದನಾರ್ಹ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ. ಬಿ. ಗೋಪಾಲ್ ಸಿಂಗ್

ಸೂಪರ್ ಪವರ್ ಆರ್ಥಿಕತೆ ಸಾಧಿಸುತ್ತಿರುವ ಭಾರತ, ಚೀನಾ

• ಕನ್ನಡಪ್ರಭ ವಾರ್ತೆ ಮೈಸೂರು

20ನೇ ಶತಮಾನದ ನಂತರದಲ್ಲಿ ಏಷ್ಯಾ ಖಂಡದಲ್ಲಿ ಭಾರತ-ಚೀನಾ ಸೂಪರ್ ಪವರ್ ಆರ್ಥಿಕತೆಗಳಾಗಿ ಹೊರಹೊಮ್ಮುತ್ತಿದೆ ಎಂದು ಡಾ. ಬಿ. ಗೋಪಾಲ್ ಸಿಂಗ್ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗವು ಆಯೋಜಿಸಿದ್ದ ಭಾರತ ಚೀನಾ ಅಭಿವೃದ್ಧಿಯ ಸನ್ನಿವೇಶಗಳ ಕುರಿತು ಸಂಪನ್ಮೂಲ ವ್ಯಕ್ತಿಯಾಗಿ ಅವರು ವಿಶೇಷ ಉಪನ್ಯಾಸ ನೀಡಿದರು.

ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ತಂತ್ರಜ್ಞಾನ, ಮೂಲ ಸೌಕರ್ಯಗಳ ಅಭಿವೃದ್ಧಿಯಲ್ಲಿ ಚೀನಾ-ಭಾರತ ಪ್ರಬಲ ಪೈಪೋಟಿಯ ಜೊತೆಗೆ ಬೆಳವಣಿಗೆಯನ್ನು ಹೊಂದುತ್ತಿದ್ದು, ಕೃಷಿ, ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯಗಳಿಗೆ ಭಾರತಕ್ಕಿಂತ ಚೀನಾ



ಹೆಚ್ಚು ಬಂಡವಾಳ ಹೂಡುತ್ತಿದ್ದು, ಜೀವನದ ನಿರೀಕ್ಷಿತ ಮಟ್ಟದಲ್ಲಿ ಏರಿಕೆ ಕಂಡಿದೆ. ಜೊತೆಗೆ ಭಾರತವು ಕೂಡ ಅದನ್ನು ಸಾಧಿಸಲು ಪ್ರಯತ್ನಿಸುತ್ತಿದೆ ಎಂದು ತಿಳಿಸಿದರು.

ಭಾರತದಲ್ಲಿನ ಸಾಂಪ್ರದಾಯಿಕ ಮನಸ್ಥಿತಿಯು ಅವರ ಹಿಂದುಳಿಯುವಿಕೆಗೆ ಮುಖ್ಯಕಾರಣ ಎಂಬ ಅಂಶವನ್ನು ಮುಂದಿಟ್ಟರು. ಚೀನಾ ದೇಶ ಅನೇಕ ವಿಚಾರಗಳಲ್ಲಿ ಭಾರತಕ್ಕಿಂತ ಮುಂದುವರೆದಿದೆ.

ಆ ದೇಶಕ್ಕೆ ನಾನು ಭೇಟಿ ಇತ್ತಾಗ ಜನರಲ್ಲಿನ ಮುಂದುವರೆದ ಹಾಗೂ ಪ್ರಗತಿಪರ ಯೋಚನೆಗಳೂ ಹಾಗೂ ಕೆಲಸದ ಬಗ್ಗೆ ಅವರಿಗೆ ಇರುವ ಶ್ರದ್ಧೆ ಮತ್ತು ಅರಿವುಗಳು ಇಡೀ ಜಗತ್ತಿನಲ್ಲೇ ಚೈನಾ ದೇಶವು ಮುಂಚೂಣಿಯಲ್ಲಿ ಇರಲು ಕಾರಣ ಎಂಬುದನ್ನು ಒತ್ತಿ ಹೇಳಿದರು.

ಯಾವುದೇ ನೆರೆಯ ರಾಷ್ಟ್ರದ ಜೊತೆಗೆ ಸಕಾರಾತ್ಮಕವಾಗಿ ಮತ್ತು ಮಿತ್ರತ್ವದ ಭಾವನೆಗಳನ್ನು ಬೆಳಸಿಕೊಂಡಾಗ ಮಾತ್ರ ದೇಶದ ಪ್ರಗತಿ ಹಾಗೂ ಮಾನವ ಅಭಿವೃದ್ಧಿ ಸಾಧ್ಯ ಎಂಬುದನ್ನು ತಿಳಿಸಿದರು.

ಸುಮಾರು 100 ಕ್ಕಿಂತಲೂ ಹೆಚ್ಚು ಅರ್ಥಶಾಸ್ತ್ರ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿದ್ಯಾರ್ಥಿಗಳು ಉತ್ಸುಕತೆಯಿಂದ ಭಾರತ-ಚೀನಾಗೆ ಸಂಬಂಧಿಸಿದಂತೆ ಕೆಲವೊಂದು ಅಂಶಗಳನ್ನು ಸಂಪನ್ಮೂಲ ವ್ಯಕ್ತಿಯೊಂದಿಗೆ ಹಂಚಿಕೊಂಡರು. ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ನೀಡಲಾಯಿತು.

ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಎಸ್.ಎಂ. ಚಲುವೇಗೌಡ ಅವರು ಕಾರ್ಯಕ್ರಮ ಆಯೋಜಿಸಿದ್ದರು. ಅಧ್ಯಕ್ಷತೆಯನ್ನು ಪ್ರಾಂಶುಪಾಲೆ ಡಾ. ಬಿ. ಆರ್. ಜಯಕುಮಾರಿ ವಹಿಸಿದ್ದರು. ವಿಭಾಗದ ಮುಖ್ಯಸ್ಥೆ ಎಂ.ಎನ್. ವೆಂಕಟಲಕ್ಷ್ಮೀ ಇದ್ದರು. ಪ್ರಾಧ್ಯಾಪಕ ಆರ್. ಸಿದ್ದಪ್ಪ ಸ್ವಾಗತಿಸಿದರು. ಎಸ್.ಎಂ. ಚಲುವೇಗೌಡ ವಂದಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 14.10.2023

ವಿಶೇಷ ಉಪನ್ಯಾಸ ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಡಾ. ಸಪ್ನಾ ಅಭಿಮತ

ಪ್ರಸ್ತುತ ಕಾಲಮಾನದಲ್ಲಿ ಸುಳ್ಳು ಸುದ್ದಿಗಳೇ ವಿಜೃಂಭಿಸುತ್ತಿವೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಪ್ರಸ್ತುತ ಕಾಲಮಾನದಲ್ಲಿ ಸುಳ್ಳು ಸುದ್ದಿಗಳೇ ವಿಜೃಂಭಿಸುತ್ತಿವೆ ಎಂದು ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಡಾ.ಎಂ.ಎಸ್. ಸಪ್ನಾ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ವಿಭಾಗವು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾಧ್ಯಮ ಸಾಕ್ಷರತೆ ಮತ್ತು ನಕಲಿ ವಿಷಯಗಳನ್ನು ಗುರುತಿಸುವಿಕೆ ಕುರಿತು ಮಾತನಾಡಿದ ಅವರು, ಸಾಮಾಜಿಕ ತಾಣಗಳಲ್ಲಿ ದಿನ ನಿತ್ಯ ಸಾವಿರಾರು ಸುದ್ದಿಗಳು ಹರಿದಾಡುತ್ತವೆ. ಇವುಗಳಲ್ಲಿ ನಿಜ ಯಾವುದು ಸುಳ್ಳು ಯಾವುದು ಎಂಬುದನ್ನು ತಿಳಿಯದೇ ನೇರವಾಗಿ ಬಂದ ಸುದ್ದಿಗಳನ್ನು ಸಾಮಾಜಿಕ ತಾಣದಲ್ಲಿ ಹಂಚಿಕೊಳ್ಳಲಾಗುತ್ತಿದೆ. ಇದರಿಂದ ಸಮಾಜದಲ್ಲಿ ಶಾಂತಿ, ನೆಮ್ಮದಿ ಹಾಳಾಗುತ್ತಿದೆ ಎಂದರು.



ಕಾರ್ಯಕ್ರಮದಲ್ಲಿ ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಡಾ. ಸಪ್ನಾ ಮಾತನಾಡಿದರು.

ಕೆಲವೊಂದು ಸಂದರ್ಭದಲ್ಲಿ ಹೆಣ್ಣುಮಕ್ಕಳು ಈ ಸುಳ್ಳು ಸುದ್ದಿ ಜಾಲಕ್ಕೆ ಸಿಲುಕಿ ಆತ್ಮಹತ್ಯೆ ಸಹ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದರೆ ಮಾಧ್ಯಮಗಳ ಪಾತ್ರ ಬಹಳ ಮುಖ್ಯವಾಗುತ್ತಿದೆ. ಬಂದ ಸುದ್ದಿಗಳು ಎಷ್ಟು ಸತ್ಯ ಎಂಬುದನ್ನು ವಿಮರ್ಶಿಸಿ ನಂತರ ಪ್ರಸಾರ ಮಾಡಬೇಕು ಎಂದು ಅವರು ಹೇಳಿದರು.

ಎಐ ತಂತ್ರಜ್ಞಾನದ ಯುಗದಲ್ಲಿ ಸುಳ್ಳು ಸುದ್ದಿಗಳು ಮತ್ತು ಸಮಾಜದಲ್ಲಿ ತಪ್ಪು ಮಾಹಿತಿ ಹರಡುವ ಬಗ್ಗೆ ಜನರು ಮತ್ತು ವಿದ್ಯಾರ್ಥಿಗಳು ಜಾಗೃತರಾಗಿರಬೇಕು. ತಪ್ಪು ಮಾಹಿತಿಯು ಸಮಾಜದಲ್ಲಿ ಹಿಂಸಾಚಾರವನ್ನು ಉಂಟು ಮಾಡುತ್ತದೆ. ವಿದ್ಯಾರ್ಥಿಗಳು ಪ್ರತಿ ಸುದ್ದಿಯನ್ನು ಹರಡುವ ಮೊದಲು ಪರಿಶೀಲಿಸಬೇಕು ಎಂದರು.

ಗೂಗಲ್ ಲೆನ್ಸ್ ನಂತಹ ಇತರ ಆಪ್ ಗಳ ಸಹಾಯದಿಂದ ಫ್ಯಾಕ್ಟ್ ಚೆಕ್ ಹೇಗೆ ಮಾಡಬಹುದು ಎಂಬುದರ ಬಗ್ಗೆ ವಿವರಿಸಿದ ಅವರು, ಸುಮಾರು ಒಂದು ಶತಕೋಟಿ ಜನರು ಗೂಗಲ್ ಅನ್ನು ಬಳಸುತ್ತಿದ್ದಾರೆ. ವಾಟ್ಸಾಪ್‌ನಲ್ಲಿ ಪ್ರತಿದಿನ ನೂರಾರು ಸಂದೇಶಗಳನ್ನು ಕಳುಹಿಸುತ್ತಾರೆ. ಇಲ್ಲಿ ನಕಲಿ ಸುದ್ದಿಗಳನ್ನು ಹರಡುವ ಸಾಧ್ಯತೆಗಳಿವೆ. ಆದ್ದರಿಂದ ಯುವಜನರಿಗೆ ಇದರ ಬಗ್ಗೆ ಅರಿವು ಮೂಡಿಸಲು ಫ್ಯಾಕ್ಟ್ ಶಾಲಾ ತರಬೇತಿ ನೀಡುತ್ತಿದೆ ಎಂದು ಅವರು ಹೇಳಿದರು.

ನಮಗೆ ಬಂದ ಸುದ್ದಿಗಳು ಯಾವ ಸ್ಥಳದಿಂದ ಬಂದಿವೆ, ಯಾವ ದಿನಾಂಕದಲ್ಲಿ ಬಂದಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಇದರಿಂದ ಸುದ್ದಿಯ ಸತ್ಯಾಸತ್ಯತೆ ತಿಳಿಯುತ್ತದೆ ಎಂದು ಫ್ಯಾಕ್ಟ್ ಚೆಕ್ ಮಾಡುವ ವಿಧಾನಗಳನ್ನು ಸಹ ಅವರು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಎಸ್. ಆರ್. ರಮೇಶ್, ಪತ್ರಿಕೋದ್ಯಮ ವಿಭಾಗದ ಸ್ವಾತಿ, ಸ್ವರ್ಣ ಇದ್ದರು. ಲಾವಣ್ಯ ಮತ್ತು ಕಿರಣ್ ನಿರೂಪಿಸಿದರು. ಆತ್ಮ ವಂದಿಸಿದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 13.10.2023



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೈಜಾನ್2ಕೆ23-24ನ್ನು ಪೂಜಾ ಭಾಗವತ ಮಹಾಜನ ಸ್ನಾತಕೋತ್ತರ ಕೇಂದ್ರದ ಎಂಬಿಎ ವಿಭಾಗದ ಮುಖ್ಯಸ್ಥ ಹರೀಶ್ ಮಾಚಯ್ಯ ಉದ್ಘಾಟಿಸಿ ಮಾತನಾಡಿದರು.

ಆಂದೋಲನ
ದಿನ ಪತ್ರಿಕೆ

ಭಾನುವಾರ, 8 ಅಕ್ಟೋಬರ್ 2023

ಮಹಾಜನ ಕಾಲೇಜಿನಲ್ಲಿ ವಾರದ ಸಮಾವೇಶ

ಮೈಸೂರು: ಆಸಕ್ತಿ ಮತ್ತು ಛಲ ಹೊಂದಿದ್ದರೆ ಮಾತ್ರ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ವಾರದ ಸಮಾವೇಶ'ದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನ ಬಹಳ ಅಮೂಲ್ಯವಾದದ್ದು. ಇದನ್ನು ಸರಿಯಾದ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಸಹಾಯಕ ಪ್ರಾಧ್ಯಾಪಕ ಎಂ.ನಾಗೇಶ್, ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ, ಮತ್ತಿತರರು ಹಾಜರಿದ್ದರು.



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ವಾರದ ಸಮಾವೇಶದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅವರನ್ನು ಸನ್ಮಾನಿಸಲಾಯಿತು.

ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ ನಾನು 'ರೀಡರ್ ಇಸ್ ದಿ ಲೀಡರ್' ಎಂಬ ಧ್ಯೇಯ ವಾಕ್ಯವನ್ನು ನನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದಕ್ಕೆ ಇಂದು ಒಬ್ಬ ಸಮರ್ಥ ರಾಜಕೀಯ ನಾಯಕನಾಗಲು ಸಾಧ್ಯವಾಯಿತು.

-ಸಿ.ಎನ್.ಮಂಜೇಗೌಡ, ಸದಸ್ಯರು, ವಿಧಾನಪರಿಷತ್.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 8.10.2023

ವಿದ್ಯಾರ್ಥಿ ಜೀವನ ಅಮೂಲ್ಯವಾದದ್ದು

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಅಭಿಮತ



• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿಗಳ ಜೀವನ ಬಹಳ ಅಮೂಲ್ಯವಾದದ್ದು. ಇದನ್ನು ಸರಿಯಾದ ರೀತಿಯಲ್ಲಿ ಸದುಪಯೋ ಗಪಡಿಸಿ ಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಹೇಳಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್ ಬಿಆರ್‌ಆರ್‌ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಕಾಲೇಜಿನ ವಿದ್ಯಾರ್ಥಿಗಳ ಶಿಸ್ತನ್ನು ಕುರಿತು ಪ್ರಶಂಸಿಸಿದರು. ಸ್ವತಃ ಅವರ ಬಾಲ್ಯದ ಕಡುಕಷ್ಟದ ಜೀವನದ ಬಗ್ಗೆ ಎಳೆ ಎಳೆಯಾಗಿ ವಿವರಿಸಿದರು.

ಓದುವುದಕ್ಕೆ ಬಡತನ ಅಡ್ಡಿಯಾಗು ವುದಿಲ್ಲ ಎಂಬುವುದಕ್ಕೆ ಅವರನ್ನೇ ನಿದರ್ಶನವಾಗಿಟ್ಟುಕೊಂಡು, ಅವರ ಬಾಲ್ಯ ದಲ್ಲಿ ವಿದ್ಯಾಭ್ಯಾಸ ಮಾಡುವಾಗಲೇ ತಂದೆಯನ್ನು ಕಳೆದುಕೊಂಡು ತುಂಬಾ ಚಿಂತಾಜನಕವಾದ ಬದುಕನ್ನು ಸಾಗಿಸಿದ ಕ್ಷಣವನ್ನು ನೆನೆದರು. ಪುಸ್ತಕಗಳನ್ನು ಕೊಳ್ಳಲು ಹಣವಿಲ್ಲದ ಸಂದರ್ಭದಲ್ಲಿ ಇತರ ವಿದ್ಯಾರ್ಥಿಗಳ ಪುಸ್ತಕಗಳನ್ನು ಪಡೆದು ಓದಿ, ನಾನು ಆರಿಸಿಕೊಂಡ ಉದ್ಯೋಗ ಇಂಡಿಯನ್ ಆರ್ಮಿ ಎಂದು ತಿಳಿಸಿದರು.

ಸಾಂಸ್ಕೃತಿಕ, ಕ್ರೀಡೆ ಹಾಗೂ ಇತರೇ ಅಧ್ಯಾಪಕರು ಹಾಗೂ ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ವಾರದ ಸಮಾವೇಶದಲ್ಲಿ ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಂ. ನಾಗೇಶ, ವಾರದ ಸಮಾವೇಶದ ನಿರ್ವಾಹಕ ಸುನೀಲ್ ಹಾಗೂ ವಿದ್ಯಾರ್ಥಿಗಳು ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 9 ಅಕ್ಟೋಬರ್ 2023



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿದ್ದ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರನ್ನು ಸನ್ಮಾನಿಸ ಲಾಯಿತು. ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ನಾಗೇಶ, ವಾರದ ಸಮಾವೇಶದ ನಿರ್ವಾಹಕ ಸುನೀಲ್, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರತಿನಿಧಿ
...ಇವ ನಮ್ಮವ

ಭಾನುವಾರ
ಅಕ್ಟೋಬರ್ 8, 2023

ಜೀವನ ಸದುಪಯೋಗಪಡಿಸಿಕೊಳ್ಳಿ

ಪ್ರತಿನಿಧಿ ವರದಿ ಮೈಸೂರು

ವಿದ್ಯಾರ್ಥಿ ಜೀವನ ಬಹಳ ಅಮೂಲ್ಯವಾದದ್ದು, ಇದನ್ನು ಸರಿ ಯಾದ ರೀತಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

> ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸಲಹೆ

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಮಾತನಾಡಿ, ಕಾಲೇಜಿನ ವಿದ್ಯಾರ್ಥಿಗಳ ಶಿಸ್ತನ್ನು ಕುರಿತು ಪ್ರಶಂಸಿಸಿದರು.

ಓದುವುದಕ್ಕೆ ಬಡತನ ಅಡ್ಡಿಯಾಗುವುದಿಲ್ಲ ಎಂಬುದಕ್ಕೆ ಅವರನ್ನೇ ನಿದರ್ಶನವಾಗಿಟ್ಟು ಕೊಂಡು, ಅವರ ಬಾಲ್ಯದಲ್ಲಿ ವಿದ್ಯಾಭ್ಯಾಸ ಮಾಡುವಾಗಲೇ ತಂದೆ ಕಳೆದುಕೊಂಡು ತುಂಬಾ ಚಿಂತಾಜನಕ ಬದುಕನ್ನು ಸಾಗಿಸಿದ ಕ್ಷಣ ನೆನೆದರು. ಪುಸ್ತಕಗಳನ್ನು ಕೊಳ್ಳಲು ಹಣವಿಲ್ಲದ ಸಂದರ್ಭ ದಲ್ಲಿ ಇತರ ವಿದ್ಯಾರ್ಥಿಗಳ ಪುಸ್ತಕಗಳನ್ನು ಪಡೆದು ಓದಿ, ನಾನು ಆರಿಸಿಕೊಂಡ ಉದ್ಯೋಗ ಇಂಡಿಯನ್ ಆರ್ಮಿ ಎಂದು ತಿಳಿಸಿದರು.

ಆಸಕ್ತಿ ಮತ್ತು ಛಲ ಹೊಂದಿದ್ದರೆ ಜೀವನದಲ್ಲಿ ಏನನ್ನು ಬೇಕಾದರೂ ಸಾಧಿಸಬಹುದು. ಯಾವುದೇ ರಾಜಕೀಯ



ಕುಟುಂಬದ ಹಿನ್ನೆಲೆ ಇಲ್ಲದ ನಾನು, ನನ್ನ ಜೀವನದಲ್ಲಿ ಎಳವಡಿಸಿಕೊಂಡಿದ್ದಕ್ಕೆ ಇಂದು ಒಬ್ಬ ಸಮರ್ಥ ರಾಜಕೀಯ ನಾಯಕನಾಗಿ ಜನ ಸೇವೆಗೆ ಮುಂದಾಗಿರುವುದೇ ನಿದರ್ಶನ ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ್, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಂ.ನಾಗೇಶ, ವಾರದ ಸಮಾವೇಶದ ನಿರ್ವಾಹಕ ಸುನೀಲ್ ಮತ್ತಿತರರಿದ್ದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ

ಭಾನುವಾರ,8 ಅಕ್ಟೋಬರ್ 2023

ಹಠ, ಛಲದಿಂದ ಓದಿ: ಮಂಜೇಗೌಡ ಸಲಹೆ

ವಿಕ ಸುದ್ದಿಲೋಕ ಮೈಸೂರು

ವಿದ್ಯಾರ್ಥಿಗಳು ಹಠ, ಛಲದಿಂದ ಗುರಿ ಇಟ್ಟುಕೊಂಡು ಶ್ರಮಪಟ್ಟು ಓದಿದರೆ ಜೀವನದಲ್ಲಿ ಸಾಧನೆ ಮಾಡಿ ಯಶಸ್ವಿಯಾಗಬಹುದು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರದ ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿ, ''ನಾನು ಓದುವಾಗ ತುಂಬಾ ಕಷ್ಟವಿತ್ತು. ನಿಮಗೆ ಆ ಸಮಸ್ಯೆ ಇಲ್ಲ. ನಾನೊಬ್ಬ ಸೈನಿಕನಾಗಿ ದೇಶಸೇವೆ ಮಾಡಿದ್ದೇನೆ. ಪ್ರತಿಯೊಬ್ಬರು ಸಹ ಅವರದೇ ಆದ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು,'' ಎಂದರು.

''ಇಂದು ಸ್ಪರ್ಧಾತ್ಮಕ ಯುಗದಲ್ಲಿ ಎಷ್ಟು ಓದಿದರೂ ಸಾಲದು, ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಿದರೆ ನಿಮ್ಮ ಜ್ಞಾನ ಹೆಚ್ಚಾಗುತ್ತದೆ. ಅಬ್ದುಲ್ ಕಲಾಂ, ಅಂಬೇಡ್ಕರ್, ವಿಶ್ವೇಶ್ವರಯ್ಯ ಅವರ ಜೀವನ ಚರಿತ್ರೆಗಳನ್ನು ಓದಿಕೊಂಡು ಅವರ ಆದರ್ಶ, ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ. ಕನ್ನಡ ಭಾಷೆಯ ಜತೆಗೆ ಎಲ್ಲಾ ಭಾಷೆಗಳನ್ನು ಕಲಿಯಿರಿ, ದೇಶ ನಾಡು ನುಡಿಯ ಬಗ್ಗೆ ಸ್ವಾಭಿಮಾನಿಗಳಾಗಿರಿ. ನಿಮ್ಮ ಗುರುಗಳು ಹೇಳಿದ್ದನ್ನು ಶ್ರದ್ಧೆಯಿಂದ ಪಾಲಿಸಿ ಜೀವನದಲ್ಲಿ ಯಶಸ್ವಿಯಾಗಿ,'' ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ, ಎನ್‌ಸಿಸಿ ಸಾಧಕರಿಗೆ, ಸಾಂಸ್ಕೃತಿಕವಾಗಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಸಮಾರಂಭದಲ್ಲಿ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಡಾ. ಎಚ್.ಆರ್. ತಿಮ್ಮೇಗೌಡ, ಡಾ. ಎಚ್. ಶ್ರೀಧರ್, ಎನ್.ಸುನೀಲ್ ಇದ್ದರು.



ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರದ ಸಮಾವೇಶದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪಾಲ್ಗೊಂಡಿದ್ದರು.

ಆಂದೋಲನ
ದಿನ ಪತ್ರಿಕೆ

ಶುಕ್ರವಾರ, 13 ಅಕ್ಟೋಬರ್ 2023

ಪಾರಂಪರಿಕ ಕಟ್ಟಡ ಸಂರಕ್ಷಣೆ ಸವಾಲಿನ ಕೆಲಸ: ರಂಗರಾಜು



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್. ರಂಗರಾಜು ಮಾತನಾಡಿದರು.

ಮೈಸೂರು: ಪ್ರಸ್ತುತ ದಿನಗಳಲ್ಲಿ ಪಾರಂಪರಿಕ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿ, ಸಾರ್ವಜನಿಕವಾಗಿ ಅವುಗಳನ್ನು ಸಂರಕ್ಷಿಸಿಕೊಂಡು ಹೋಗುವುದು ಒಂದು ಸವಾಲಿನ ಕೆಲಸವಾಗಿದೆ ಎಂದು ಮೈಸೂರು ವಿವಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್.ರಂಗರಾಜು ಹೇಳಿದರು.

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗದಿಂದ ಆಯೋಜಿಸಿದ್ದ 'ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಮತ್ತು ಸವಾಲುಗಳು' ವಿಷಯ ಕುರಿತ ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮಾನ್ಯವಾಗಿ 100 ವರ್ಷಗಳು ದಾಟಿದ ಯಾವುದೇ ಐತಿಹಾಸಿಕ ಕಟ್ಟಡಗಳನ್ನು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅನುಮೋದನೆಯ ಮೇರೆಗೆ ಅಧಿಕೃತವಾಗಿ ಪಾರಂಪರಿಕ ಕಟ್ಟಡವೆಂದು ಪರಿಗಣಿಸಲಾಗುತ್ತದೆ. ಇದುವರೆಗೂ ಕೇಂದ್ರ ಸರ್ಕಾರದಿಂದ 775 ಸ್ಮಾರಕಗಳು ಹಾಗೂ ರಾಜ್ಯ ಸರ್ಕಾರದಿಂದ 864 ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳೆಂದು ಘೋಷಿಸಲಾಗಿದೆ. ಆದರೆ ಇನ್ನೂ 35,000 ಕಟ್ಟಡಗಳು ಮತ್ತು ಸ್ಮಾರಕಗಳನ್ನು ಪಾರಂಪರಿಕ ಕಟ್ಟಡಗಳೆಂದು ಪರಿಗಣಿಸಲಾಗಿಲ್ಲ ಎಂದು ವಿವರಿಸಿದರು.

ಮೈಸೂರು ನಗರದಲ್ಲಿ ಒಟ್ಟು 234 ಪಾರಂಪರಿಕ ಕಟ್ಟಡಗಳಿದ್ದು, ಇವುಗಳಲ್ಲಿ ಅಂಬಾವಿಲಾಸ ಅರಮನೆ ಸೇರಿದಂತೆ 14 ಅರಮನೆಗಳು, 25 ಮ್ಯೂಸಿಯಂ ಕಟ್ಟಡಗಳನ್ನು ಕಾಣಬಹುದು. ಇವುಗಳಲ್ಲಿ ಕೆಲವು ಕಟ್ಟಡಗಳು ಇಂದಿಗೂ ಆಡಳಿತಾತ್ಮಕ ಕಚೇರಿಗಳಾಗಿ ಬಳಕೆಯಾಗುತ್ತಿವೆ. ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಪಾರಂಪರಿಕ ಕಟ್ಟಡಗಳ ಪಾತ್ರ ನಿರ್ಣಾಯಕ. ಹೀಗಾಗಿ ಪಾರಂಪರಿಕ, ಐತಿಹಾಸಿಕ ಕಟ್ಟಡಗಳು ಮತ್ತು ಸ್ಮಾರಕಗಳು ನಮ್ಮ ನಾಡಿನ ಪರಂಪರೆ ಮತ್ತು ಸಂಸ್ಕೃತಿಯ ಸಂಕೇತವಾಗಿದ್ದು, ಶ್ರೀಮಂತ ಪಾರಂಪರಿಕ ಕಟ್ಟಡಗಳನ್ನು ಉಳಿಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ ಎಂದರು.

ಪ್ರಾಂಶುಪಾಲರಾದ ಡಾ.ಬಿ. ಆರ್. ಜಯಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ್, ಅಧ್ಯಾಪಕರಾದ ಎ.ಆರ್.ನಂದೀಶ, ಎನ್.ಜಯಲಕ್ಷ್ಮೀ ಇತರರು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 13.10.2023

ಪಾರಂಪರಿಕ ಕಟ್ಟಡ ರಕ್ಷಣೆ ಪ್ರತಿಯೊಬ್ಬರ ಹೊಣೆ

ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್. ರಂಗರಾಜು ಅಭಿಮತ | ಪಾರಂಪರಿಕ ಕಟ್ಟಡಗಳ ಸಂರಕ್ಷಣೆ, ಸವಾಲುಗಳು ಕುರಿತು ಉಪನ್ಯಾಸ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದಿಂದ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಮತ್ತು ಸವಾಲುಗಳು ವಿಷಯ ಕುರಿತ ವಿಶೇಷ ಉಪನ್ಯಾಸ ಮತ್ತು ಸಂವಾದ ಆಯೋಜಿಸಲಾಗಿತ್ತು.

ಮೈಸೂರು ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವಅಧ್ಯಯನವಿಭಾಗದನಿವೃತ್ತಪ್ರಾಧ್ಯಾಪಕ ಡಾ.ಎನ್.ಎಸ್. ರಂಗರಾಜು ಮಾತನಾಡಿ, ಪಾರಂಪರಿಕ ಹಾಗೂ ಐತಿಹಾಸಿಕ ಕಟ್ಟಡಗಳು ಮತ್ತು ಸ್ಮಾರಕಗಳು ನಮ್ಮ ನಾಡಿನ ಪರಂಪರೆ ಮತ್ತು ಸಂಸ್ಕೃತಿಯ ಸಂಕೇತವಾಗಿದ್ದು, ಶ್ರೀಮಂತ ಪಾರಂಪರಿಕ ಕಟ್ಟಡ ಉಳಿಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರೀಕರ ಜವಾಬ್ದಾರಿಯಾಗಿದೆ ಎಂದರು.



ಕರ್ನಾಟಕದಲ್ಲಿ ಮೊದಲ ಬಾರಿಗೆ 2004 ರಲ್ಲಿ ಮೈಸೂರು ಮತ್ತು ಶ್ರೀರಂಗಪಟ್ಟಣವನ್ನು ಪಾರಂಪರಿಕ ಸಂರಕ್ಷಿತ ನಗರಗಳೆಂದು ನಂತರ 2014 ರಲ್ಲಿ 14 ಸ್ಥಳಗಳನ್ನು ಪಾರಂಪರಿಕ ಸಂರಕ್ಷಿತ ಪ್ರದೇಶಗಳೆಂದು ರಾಜ್ಯ ಸರ್ಕಾರವು ಘೋಷಿಸಿತು. ಸಾಮಾನ್ಯವಾಗಿ 100 ವರ್ಷ ದಾಟಿದ ಯಾವುದೇ ಐತಿಹಾಸಿಕ ಕಟ್ಟಡವನ್ನು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅನುಮೋದನೆ ಮೇರೆಗೆ ಅಧಿಕೃತವಾಗಿ ಪಾರಂಪರಿಕ ಕಟ್ಟಡ ಎಂದು ಪರಿಗಣಿಸಲಾಗುತ್ತದೆ ಎಂದರು.

ಈವರೆಗೂ ಕೇಂದ್ರ ಸರ್ಕಾರದಿಂದ 775 ಸ್ಮಾರಕ, ಕಟ್ಟಡ ಹಾಗೂ ರಾಜ್ಯ ಸರ್ಕಾರದಿಂದ 864 ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳೆಂದು ಘೋಷಿಸಲಾಗಿದೆ. ಆದರೆ ಇನ್ನೂ 35,000 ಕಟ್ಟಡಗಳು ಮತ್ತು ಸ್ಮಾರಕಗಳು ಪಾರಂಪರಿಕ ಕಟ್ಟಡಗಳೆಂದು ಪರಿಗಣಿಸಲಾಗಿಲ್ಲ ಎಂದು ಅವರು ವಿವರಿಸಿದರು.

ಐತಿಹಾಸಿಕ ಪರಂಪರೆಯಲ್ಲಿನಾಲ್ಕು ವಿಧಗಳಿದ್ದು, ಸಾಂಸ್ಕೃತಿಕ ಪರಂಪರೆ, ಸ್ವಾಭಾವಿಕ ಪರಂಪರೆ, ಪುರಾತತ್ವ ಮತ್ತು ಇತಿಹಾಸ ಪರಂಪರೆ ಹಾಗೂ ಜೀವವೈವಿಧ್ಯ ಪರಂಪರೆ ಎಂದು ವಿಂಗಡಿಸಲಾಗಿದೆ. ಸಾಂಸ್ಕೃತಿಕ ಪರಂಪರೆಯಲ್ಲಿ ಪ್ರಮುಖವಾಗಿ ಮೂರ್ತ ಹಾಗೂ ಅಮೂರ್ತ ಪರಂಪರೆಗಳೆಂದು ವಿಂಗಡಿಸಲಾಗಿದೆ. ನಗರದಲ್ಲಿ ಒಟ್ಟು 234 ಪಾರಂಪರಿಕ ಕಟ್ಟಡಗಳಿದ್ದು, ಇವುಗಳಲ್ಲಿ ಅಂಬಾವಿಲಾಸ ಅರಮನೆ ಸೇರಿದಂತೆ 14 ಅರಮನೆಗಳು, 25 ಮ್ಯೂಸಿಯಂ ಕಟ್ಟಡಗಳನ್ನು ಕಾಣಬಹುದು ಎಂದು ಅವರು ತಿಳಿಸಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಅಧ್ಯಾಪಕ ಎ.ಆರ್. ನಂದೀಶ, ಎನ್. ಜಯಲಕ್ಷ್ಮೀ ಹಾಗೂ ಕಾಲೇಜಿನ ಅಧ್ಯಾಪಕರು ಮತ್ತು ಇತಿಹಾಸ ವಿಭಾಗದ ವಿದ್ಯಾರ್ಥಿಗಳು ಇದ್ದರು.

ಪ್ರತಿನಿಧಿ
...ಇವ ನಮ್ಮವ
ಶುಕ್ರವಾರ
ಅಕ್ಟೋಬರ್ 13, 2023

ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್.ರಂಗರಾಜು ಅಭಿಮತ

ಪರಂಪರೆ ಉಳಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ

ಪ್ರತಿನಿಧಿ ವರದಿ ಮೈಸೂರು

ಪಾರಂಪರಿಕ, ಐತಿಹಾಸಿಕ ಕಟ್ಟಡಗಳು, ಸ್ಮಾರಕಗಳು ನಮ್ಮ ನಾಡಿನ ಪರಂಪರೆ, ಸಂಸ್ಕೃತಿಯ ಸಂಕೇತವಾಗಿದ್ದು, ಶ್ರೀಮಂತ ಪಾರಂಪರಿಕ ಕಟ್ಟಡಗಳನ್ನು ಉಳಿಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರೀಕರ ಜವಾಬ್ದಾರಿ ಎಂದು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್.ರಂಗರಾಜು ಹೇಳಿದರು.

ಮಹಾಜನ ಪ್ರಥಮದರ್ಜೆ ಕಾಲೇಜಿನ ಇತಿಹಾಸ ವಿಭಾಗದಿಂದ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ, ಸವಾಲುಗಳು ಎಂಬ ವಿಷಯ ಕುರಿತ ವಿಶೇಷ ಉಪನ್ಯಾಸ, ಸಂವಾದದಲ್ಲಿ ಮಾತನಾಡಿದರು.

ಕರ್ನಾಟಕದಲ್ಲಿ ಮೊದಲ ಬಾರಿಗೆ 2004ರಲ್ಲಿ ಮೈಸೂರು, ಶ್ರೀರಂಗಪಟ್ಟಣ ನಗರಗಳನ್ನು ಪಾರಂಪರಿಕ ಸಂರಕ್ಷಿತ ನಗರಗಳೆಂದು, ನಂತರ 2014ರಲ್ಲಿ 14 ಸ್ಥಳಗಳನ್ನು ಪಾರಂಪರಿಕ ಸಂರಕ್ಷಿತ ಪ್ರದೇಶಗಳೆಂದು ರಾಜ್ಯ ಸರ್ಕಾರ ಘೋಷಿಸಿತು. ಸಾಮಾನ್ಯವಾಗಿ 100 ವರ್ಷ ದಾಟಿದ ಯಾವುದೇ ಐತಿಹಾಸಿಕ ಕಟ್ಟಡಗಳನ್ನು ರಾಜ್ಯ, ಕೇಂದ್ರ ಸರ್ಕಾರದ ಅನುಮೋದನೆಯ ಮೇರೆಗೆ ಅಧಿಕೃತವಾಗಿ ಪಾರಂಪರಿಕ ಕಟ್ಟಡವೆಂದು ಪರಿಗಣಿಸಲಾಗುತ್ತದೆ. ಇದುವರೆವಿಗೂ ಕೇಂದ್ರ ಸರ್ಕಾರದಿಂದ 775 ಸ್ಮಾರಕ, ಕಟ್ಟಡಗಳು, ರಾಜ್ಯ ಸರ್ಕಾರದಿಂದ 864 ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳೆಂದು ಘೋಷಿಸಲಾಗಿದೆ. ಆದರೆ ಇನ್ನೂ 35,000 ಕಟ್ಟಡ, ಸ್ಮಾರಕಗಳು ಪಾರಂಪರಿಕ ಕಟ್ಟಡಗಳೆಂದು ಪರಿಗಣಿಸಲಾಗಿಲ್ಲ ಎಂದು ವಿವರಿಸಿದರು.



ಮೈಸೂರಿನ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಉಪನ್ಯಾಸ, ಸಂವಾದದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್.ರಂಗರಾಜು ಮಾತನಾಡಿದರು.

ಮುಂದುವರೆದು, ಐತಿಹಾಸಿಕ ಪರಂಪರೆಯಲ್ಲಿ ನಾಲ್ಕು ವಿಧಗಳಿದ್ದು, ಸಾಂಸ್ಕೃತಿಕ ಪರಂಪರೆ, ಸ್ವಾಭಾವಿಕ ಪರಂಪರೆ, ಪುರಾತತ್ವ ಮತ್ತು ಇತಿಹಾಸ ಪರಂಪರೆ, ಜೀವವೈವಿಧ್ಯ ಪರಂಪರೆ ಎಂದು ವಿಂಗಡಿಸಲಾಗಿದೆ. ಸಾಂಸ್ಕೃತಿಕ ಪರಂಪರೆಯಲ್ಲಿ ಪ್ರಮುಖವಾಗಿ ಮೂರ್ತ ಹಾಗೂ ಅಮೂರ್ತ ಪರಂಪರೆಗಳೆಂದು ವಿಂಗಡಿಸಲಾಗಿದೆ. ಮೈಸೂರು ನಗರದಲ್ಲಿ ಒಟ್ಟು 234 ಪಾರಂಪರಿಕ ಕಟ್ಟಡಗಳಿದ್ದು, ಇವುಗಳಲ್ಲಿ ಅಂಬಾವಿಲಾಸ ಅರಮನೆ ಸೇರಿದಂತೆ 14 ಅರಮನೆಗಳು, 25 ಮ್ಯೂಸಿಯಂ ಕಟ್ಟಡಗಳನ್ನು ಕಾಣಬಹುದು. ಇವುಗಳಲ್ಲಿ ಕೆಲವು ಕಟ್ಟಡಗಳು ಹಿಂದಿಗೂ ಆಡಳಿತಾತ್ಮಕ ಕಚೇರಿಗಳಾಗಿ ಬಳಕೆಯಾಗಿವೆ. ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಪಾರಂಪರಿಕ ಕಟ್ಟಡಗಳ ಪಾತ್ರ ನಿರ್ಣಾಯಕ. ಈ ಪಾರಂಪರಿಕ ಕಟ್ಟಡಗಳನ್ನು ಪ್ರಸ್ತುತ ದಿನಗಳಲ್ಲಿ ಪುನರ್‌ಜೀವನಗೊಳಿಸಿ ಸಾರ್ವಜನಿಕರವಾಗಿ ಅವುಗಳನ್ನು ಸಂರಕ್ಷಿಸಿಕೊಂಡು ಹೋಗುವುದು ಒಂದು ಸವಾಲಿನ ಕೆಲಸವಾಗಿದೆ ಎಂದರು.

ನಮ್ಮ ಇತಿಹಾಸ, ಕಲಾ ಶ್ರೀಮಂತಿಕೆ ಪ್ರತಿಬಿಂಬಿಸುವ ಈ ಪಾರಂಪರಿಕ ಕಟ್ಟಡಗಳು ಮೈಸೂರು ನಗರದ ಸೌಂದರ್ಯ ಪ್ರಜ್ಞೆಗೆ ಸಾಕ್ಷಿಯಾಗಿವೆ. ಮೈಸೂರು ಎಂದರೆ ಒಂದು ಸಾಂಸ್ಕೃತಿಕ ನಗರವಲ್ಲದೆ ಪಾರಂಪರಿಕ ನಗರದ ಹೆಗ್ಗಳಿಕೆಗೂ ಪಾತ್ರವಾಗಿದೆ. ನಗರದ ಪಾರಂಪರಿಕ ಕಟ್ಟಡಗಳ ನಿರ್ಮಾಣದಲ್ಲಿ ಮಹಾರಾಜರ ಕೊಡುಗೆ ಅಪಾರ, ಅವಿಸ್ಮರಣೀಯ ಎಂದು ಅಭಿಪ್ರಾಯಪಟ್ಟರು.

ಶ್ರೀರಂಗಪಟ್ಟಣದ ಟಿಪ್ಪು ಕಾಲದ ಮದ್ದು ಗುಂಡುಗಳ ಸಂಗ್ರಹಗಾರ, ಆಧುನಿಕ ತಂತ್ರಜ್ಞಾನ ಬಳಸಿ ಸ್ಥಳಾಂತರಿಸಿದ ವಿವರದಜತೆಸಂಬಂಧಪಟ್ಟಛಾಯಾಚಿತ್ರಗಳನ್ನು ಪ್ರದರ್ಶಿಸಿದರು.

ಪ್ರಾಂಶುಪಾಲೆ ಡಾ. ಜಿ.ಆರ್. ಜಯಕುಮಾರಿ, ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ, ಅಧ್ಯಾಪಕ ಎ.ಆರ್.ನಂದೀಶ, ಎನ್.ಜಯಲಕ್ಷ್ಮಿ ಮತ್ತಿತರರಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಅಕ್ಟೋಬರ್ 13, 2023

'ಪಾರಂಪರಿಕ ಕಟ್ಟಡ ಸಂರಕ್ಷಣೆ ಅಗತ್ಯ'

ಪ್ರಜಾವಾಣಿ ವಾರ್ತೆ

ಮೈಸೂರು: 'ಪಾರಂಪರಿಕ ಕಟ್ಟಡಗಳು ಮತ್ತು ಸ್ಮಾರಕಗಳು ನಮ್ಮ ನಾಡಿನ ಪರಂಪರೆ ಮತ್ತು ಸಂಸ್ಕೃತಿಯ ಸಂಕೇತವಾಗಿದ್ದು, ಅವುಗಳನ್ನು ಉಳಿಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ' ಎಂದು ಇತಿಹಾಸ ತಜ್ಞ ಎನ್.ಎಸ್. ರಂಗರಾಜು ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದಿಂದ 'ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಮತ್ತು ಸವಾಲುಗಳು' ವಿಷಯ ಕುರಿತು ಗುರುವಾರ ಆಯೋಜಿಸಿದ್ದ ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಮೊದಲ ಬಾರಿಗೆ 2004ರಲ್ಲಿ ಮೈಸೂರು ಮತ್ತು ಶ್ರೀರಂಗಪಟ್ಟಣ ನಗರಗಳನ್ನು ಪಾರಂಪರಿಕ ಸಂರಕ್ಷಿತ ನಗರ ಗಳೆಂದು, 2014ರಲ್ಲಿ 14 ಸ್ಥಳಗಳನ್ನು ಪಾರಂಪರಿಕ ಸಂರಕ್ಷಿತ ಪ್ರದೇಶ ಗಳೆಂದು ರಾಜ್ಯ ಸರ್ಕಾರವು ಘೋಷಿಸಿತ್ತು. ಸಾಮಾನ್ಯವಾಗಿ 100 ವರ್ಷ ದಾಟಿದ ಐತಿಹಾಸಿಕ ಕಟ್ಟಡ ಗಳನ್ನು ರಾಜ್ಯ ಸರ್ಕಾರ ಅಥವಾ



ನಮ್ಮ ಇತಿಹಾಸ ಹಾಗೂ ಕಲಾ ಶ್ರೀಮಂತಿಕೆ ಪ್ರತಿಬಿಂಬಿಸುವ ಪಾರಂಪರಿಕ ಕಟ್ಟಡಗಳು ಮೈಸೂರು ನಗರದ ಸೌಂದರ್ಯ ಪ್ರಜ್ಞೆಗೆ ಸಾಕ್ಷಿಯಾಗಿವೆ.
ಎನ್.ಎಸ್. ರಂಗರಾಜು, ಇತಿಹಾಸ ತಜ್ಞ

ಕೇಂದ್ರ ಸರ್ಕಾರದ ಅನುಮೋದನೆಯ ಮೇರೆಗೆ ಅಧಿಕೃತವಾಗಿ ಪಾರಂಪರಿಕ ಕಟ್ಟಡವೆಂದು ಪರಿಗಣಿಸಲಾಗುತ್ತದೆ' ಎಂದು ತಿಳಿಸಿದರು.

'ಇದುವರೆಗೂ ಕೇಂದ್ರ ಸರ್ಕಾರ ದಿಂದ 775 ಸ್ಮಾರಕಗಳು ಮತ್ತು ಕಟ್ಟಡ ಗಳು ಹಾಗೂ ರಾಜ್ಯ ಸರ್ಕಾರದಿಂದ 864 ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳೆಂದು ಘೋಷಿಸಲಾಗಿದೆ. ಆದರೆ, ಇನ್ನೂ 35 ಸಾವಿರ ಕಟ್ಟಡಗಳು ಮತ್ತು ಸ್ಮಾರಕಗಳನ್ನು ಪಾರಂಪರಿಕ ಕಟ್ಟಡಗಳೆಂದು ಪರಿಗಣಿಸಲಾಗಿಲ್ಲ' ಎಂದು ವಿವರಿಸಿದರು.

'ಐತಿಹಾಸಿಕ ಪರಂಪರೆಯಲ್ಲಿ ನಾಲ್ಕು ವಿಧಗಳಿವೆ. ಸಾಂಸ್ಕೃತಿಕ ಪರಂಪರೆ, ಸ್ವಾಭಾವಿಕ ಪರಂಪರೆ, ಪುರಾತತ್ವ ಮತ್ತು ಇತಿಹಾಸ ಪರಂಪರೆ ಹಾಗೂ ಜೀವವೈವಿಧ್ಯ ಪರಂಪರೆ ಎಂದು ವಿಂಗಡಿಸಲಾಗಿದೆ. ಸಾಂಸ್ಕೃತಿಕ ಪರಂಪರೆಯಲ್ಲಿ ಪ್ರಮುಖವಾಗಿ ಮೂರ್ತ, ಅಮೂರ್ತ ಪರಂಪರೆ ಗಳೆಂದು ವಿಂಗಡಿಸಲಾಗಿದೆ. ಮೈಸೂರು ನಗರದಲ್ಲಿ ಒಟ್ಟು 234 ಪಾರಂಪರಿಕ ಕಟ್ಟಡಗಳಿದ್ದು, ಇವುಗಳಲ್ಲಿ ಅಂಬಾ ವಿಲಾಸ ಅರಮನೆ ಸೇರಿದಂತೆ 14 ಅರಮನೆಗಳು, 25 ಮ್ಯೂಸಿಯಂ ಕಟ್ಟಡಗಳಿವೆ. ಇವುಗಳಲ್ಲಿ ಕೆಲವು ಕಟ್ಟಡಗಳು ಆಡಳಿತಾತ್ಮಕ ಕಚೇರಿ ಗಳಾಗಿ ಬಳಕೆಯಾಗಿವೆ' ಎಂದರು.

'ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಪಾರಂಪರಿಕ ಕಟ್ಟಡಗಳ ಪಾತ್ರ ನಿರ್ಣಾಯಕವಾಗಿದೆ. ಅವುಗಳನ್ನು ಪುನರುಜ್ಜೀವನಗೊಳಿಸಿ ಸಾರ್ವಜನಿಕವಾಗಿ ಅವುಗಳನ್ನು ಸಂರಕ್ಷಿಸಿಕೊಂಡು ಹೋಗುವುದು ಸವಾಲಿನ ಕೆಲಸವಾಗಿದೆ' ಎಂದರು.

ಪ್ರಾಂಶುಪಾಲೆ ಬಿ.ಆರ್. ಜಯ ಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ಶೈಕ್ಷಣಿಕ ಡೀನ್ ಶ್ರೀಧರ ಎಚ್, ಅಧ್ಯಾಪಕರಾದ ನಂದೀಶ ಎ.ಆರ್, ಜಯಲಕ್ಷ್ಮಿ ಎನ್. ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಶನಿವಾರ, 14 ಅಕ್ಟೋಬರ್ 2023

ಯುವಜನರು ರಾಜಕೀಯ ಪ್ರವೇಶಿಸಲಿ: ಹರೀಶ್‌ಗೌಡ

ಮಹಾಜನ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟನೆ

ಮೈಸೂರು: ಯುವಜನರು ರಾಜಕೀಯ ಪ್ರವೇಶಿಸಿ ಹದಗೆಟ್ಟ ರಾಜಕೀಯ ವ್ಯವಸ್ಥೆಯನ್ನು ಸರಿಪಡಿಸುವ ಮೂಲಕ ದೇಶವನ್ನು ಉಳಿಸಬೇಕು ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜಕೀಯದಲ್ಲಿ ಆಸಕ್ತಿ ಬೆಳೆಸಿಕೊಂಡರೆ ಮಾತ್ರ ದೇಶದಲ್ಲಿರುವ ವಾಸ್ತವಾಂಶ, ನಮ್ಮ ಮತ್ತು ದೇಶದ ಹಿತ ಕಾಪಾಡುವವರನ್ನು ಗುರುತಿಸಲು ಸಾಧ್ಯವಾಗುತ್ತದೆ ಎಂದರು.

ಇಂದು ರಾಜಕೀಯ ಕ್ಷೇತ್ರಕ್ಕೆ ಯುವಜನರು ಪ್ರವೇಶಿಸುತ್ತಿಲ್ಲ. ಸದ್ಯದ ದೇಶದ ರಾಜಕೀಯ ವ್ಯವಸ್ಥೆಯೇ ಕಲುಷಿತಗೊಂಡಿದೆ. ಇದನ್ನು ಶುಚಿಗೊಳಿಸುವ ಶಕ್ತಿ ಯುವ ಸಮೂಹಕ್ಕೆ ಇದೆ. ಯುವಕರ ಭವಿಷ್ಯವೇ ದೇಶದ ಭವಿಷ್ಯ. ಯುವಜನರು ರಾಜಕಾರಣದಲ್ಲಿ ಪಾಲ್ಗೊಂಡರೆ ದೇಶ ಮತ್ತು ರಾಜ್ಯ ಸುಸ್ಥಿತಿಯಲ್ಲಿ ಇರುತ್ತದೆ. ಹೀಗಾಗಿ ಯುವಕರು ರಾಜಕೀಯ ಪ್ರವೇಶಿಸಬೇಕು ಎಂದು ಸಲಹೆ ನೀಡಿದರು.

ನಟ ನವೀನ್ ಸಜ್ಜು ಮಾತನಾಡಿದರು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ವಿದ್ಯಾರ್ಥಿ ಸಂಸತ್‌ನ ಸದಸ್ಯರುಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಮಹಾಜನ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ವಿದ್ಯಾರ್ಥಿ ಸಂಸತ್ ಸಂಚಾಲಕರಾದ ಡಾ.ಎಂ.ಆರ್.ಇಂದ್ರಾಣಿ, ಪ್ರತಿಭಾ ವೇದಿಕೆ ಸಂಚಾಲಕ ಎಂ.ನಾಗೇಶ ಇತರರು ಹಾಜರಿದ್ದರು.



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಸಮಾರಂಭವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ಖ್ಯಾತ ಹಿನ್ನೆಲೆ ಗಾಯಕ ನವೀನ್ ಸಜ್ಜು , ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಇತರರು ಚಿತ್ರದಲ್ಲಿದ್ದಾರೆ.

ವಿದ್ಯಾರ್ಥಿಗಳನ್ನು ರಂಜಿಸಿದ ನವೀನ್ ಸಜ್ಜು

ಸಮಾರಂಭದಲ್ಲಿ ಖ್ಯಾತ ಹಿನ್ನೆಲೆ ಗಾಯಕ ನವೀನ್ ಸಜ್ಜು ಅವರು ಒಳಿತು ಮಾಡು ಮನುಷ, ಎದೆ ಒಳಗಿನ ತಮ-ತಮ ತಮಟೆ, ಏನ್ ಚಂದನೋತಕೋ, ಎಣ್ಣೆ ನಮ್ದು ಊಟ ನಿಮ್ದು ಸೇರಿದಂತೆ ಇತರೆ ಗೀತೆಗಳನ್ನು ಹಾಡಿ ವಿದ್ಯಾರ್ಥಿಗಳನ್ನು ರಂಜಿಸಿದರು. ವಿದ್ಯಾರ್ಥಿಗಳು ನವೀನ್ ಸಜ್ಜು ಅವರ ಗಾಯನವನ್ನು ಕೇಳಿ ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.



ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ವಿದ್ಯಾರ್ಥಿಗಳ ಚುನಾವಣೆಗಳನ್ನು ಮಾಡುವ ಮೂಲಕ ಒಳ್ಳೆಯ ವಿಚಾರ ತಿಳಿದು ದೇಶವನ್ನು ಕಾಪಾಡಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಕಾಂಗ್ರೆಸ್ ನಾಯಕರು ಆಲೋಚನೆ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಆರೋಗ್ಯಕರವಾದ ಚುನಾವಣೆ ನಡೆಯಬೇಕು.

-ಕೆ.ಹರೀಶ್ ಗೌಡ, ಶಾಸಕ.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 15.10.2023

ಪ್ರತಿಭಾ ವೇದಿಕೆ ಯುವಕರಿಗೆ ಶಾಸಕ ಕೆ. ಹರೀಶ್ ಗೌಡ ಸಲಹೆ

ಹಾಳಾಗಿ ಹೋಗಿರುವ ರಾಜಕೀಯ ವ್ಯವಸ್ಥೆ ಸರಿಪಡಿಸಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಯುವಜನತೆ ರಾಜಕೀಯದಲ್ಲಿ ದೊಡ್ಡಮಟ್ಟದಲ್ಲಿ ಭಾಗವಹಿಸಬೇಕು. ದೇಶದಲ್ಲಿ ಹಾಳಾಗಿರುವ ವ್ಯವಸ್ಥೆಯನ್ನು ಸರಿಪಡಿಸಬೇಕು ಎಂದರೆ ದೇಶವನ್ನು ಉಳಿಸಬೇಕೆಂದರೆ ಯುವಜನತೆಯ ಪಾತ್ರ ಅತ್ಯಂತ ಪ್ರಮುಖ ಎಂದು ಶಾಸಕ ಕೆ. ಹರೀಶ್‌ಗೌಡ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.



ಜೀವನದಲ್ಲಿ ಒಳ್ಳೆಯ ನಡತೆ, ಜ್ಞಾನ, ಮೌಲ್ಯ ಮತ್ತು ಕೌಶಲ್ಯಗಳನ್ನು ಕಲಿಸಿಕೊಟ್ಟ ತಂದೆ, ತಾಯಿ, ಗುರು ಹಿರಿಯರನ್ನು ಎಂದೆಂದಿಗೂ ಮರೆಯಬಾರದು. ಹಿಂದಿನ ಕಾಲದ ವಿದ್ಯಾರ್ಥಿಗಳಲ್ಲಿ ಹೋರಾಟದ ಪ್ರವೃತ್ತಿ ಹೆಚ್ಚಾಗಿತ್ತು. ಆದರೆ ಇಂದಿನ ವಿದ್ಯಾರ್ಥಿಗಳಿಗೆ ರಾಜಕಾರಣದ ಬಗ್ಗೆ ಆಸಕ್ತಿ ಇಲ್ಲ ವಾಗಿದೆ ಎಂದರು. ಯುವಕ- ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕಾರಣದಲ್ಲಿ ಪಾಲ್ಗೊಂಡಾಗ ದೇಶದ ಪ್ರಗತಿ ಸಾಧ್ಯ. ಯುವಶಕ್ತಿ ಮುಂದೆ ಯಾವ ಶಕ್ತಿಯೂ ದೊಡ್ಡ ದಲ್ಲ. ತಾವು ಮತ್ತು ಇತರ ಯುವ ಸಮುದಾಯ ಗೋಕಾಕ್ ಚಳುವಳಿಯಲ್ಲಿ ಭಾಗವಹಿಸಿದ್ದನ್ನು ಸ್ಮರಿಸಿಕೊಂಡು, ಗಾಯಕ ಮತ್ತು ಕನ್ನಡ ಚಲನಚಿತ್ರ ನಟ ನವೀನ್ ಸಜ್ಜುಮಾತನಾಡಿ, ನಾನು ವೇದಿಕೆಗಾಗಿ ಕಷ್ಟಪಡುತ್ತಿದ್ದೆ. ನನ್ನ ಬದುಕಿನಲ್ಲಿ ಕಾಲೇಜು ದಿನಗಳನ್ನ ನೋಡಬಿರುವುದಕ್ಕೆ ಬೇಸರವಿದೆ. ಆದರೆ ನನಗೆ ಆತ್ಮ ತೃಪ್ತಿಇದೆ. ಕಾರಣ ಈ ಬದುಕು ನನಗೆ ಒಂದು ವಿಶ್ವವಿದ್ಯಾ ನಿಲಯ ಕೊಡುವಷ್ಟು ಅನುಭವನ್ನು ಕೊಟ್ಟಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್‌ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ಜೀವನದಲ್ಲಿ ಒಂದು ಗುರಿಯನ್ನು ಇಟ್ಟುಕೊಂಡು, ನಿಮ್ಮಲ್ಲಿರುವ ನ್ಯೂನತೆ ಸರಿಪಡಿಸಿಕೊಂಡು, ಛಲದಿಂದ ಮುನ್ನುಗ್ಗಿ, ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ಕೌಶಲ್ಯದ ಕಡೆಗೆ ಗಮನಹರಿಸಿ. ಅಧ್ಯಾಪಕರ ನಡುವೆ ಒಳ್ಳೆಯ ಸಂಬಂಧ ಬೆಳೆಸಿಕೊಳ್ಳಿ ಎಂದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯ ಕುಮಾರಿ ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಮೂಲಕ ನಾಯಕತ್ವಗುಣ ಬೆಳೆಸಿಕೊಳ್ಳಿ. ನಿಮ್ಮ ಕೌಶಲ್ಯ, ಪ್ರತಿಭೆ ಹೊರಹಾಕಲು ಕಾಲೇಜು ಅವಕಾಶಕಲ್ಪಿಸಿದೆ. ಇದನ್ನುಸದುಪಯೋಗಪಡಿಸಿಕೊಂಡು ಉತ್ತಮ ಪ್ರಜೆಗಳಾಗಿ ಎಂದರು.

ವಿದ್ಯಾರ್ಥಿ ಸಂಸತ್ ಸಂಚಾಲಕ ಡಾ. ಎಂ.ಆರ್. ಕ್ಯಾಪ್ಟನ್ ಇಂದ್ರಾಣಿ ಮಾತನಾಡಿದರು. ಸಂಸದೀಯ ಮಂಡಳಿಯ ಹಿರಿಯ ಸದಸ್ಯ ವಿದ್ಯಾರ್ಥಿಗಳಾದ ಶಶಾಂಕ್ ಎಂ. ಎಸ್. ಗೌಡ, ಕೆ.ಬಿ. ಸುಮಂತ್, ಕೆ.ಎಂ. ಹಂಸ, ಜೆ. ರಕ್,ಇತಾ, ಹರ್ಷಿತಾ ಮತ್ತು ಭಾನುಪ್ರಕಾಸ್ ಅವರನ್ನು ಸನ್ಮಾನಿಸಲಾಯಿತು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಪ್ರತಿಭಾ ವೇದಿಕೆ ಸಂಚಾಲಕ ಎಂ. ನಾಗೇಶ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 29.10.2023

ರಾಮಾಯಣ ನಮ್ಮ ಜೀವನ ಧರ್ಮದ ಗ್ರಂಥ

ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಅಭಿಮತ | ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಲ್ಮೀಕಿ ಜಯಂತಿ

• ಕನ್ನಡಪ್ರಭ ವಾರ್ತೆ ಮೈಸೂರು

ನಮ್ಮ ದೇಶದಲ್ಲಿ ರಾಮಾಯಣ ಜೀವನ ಧರ್ಮದ ಗ್ರಂಥವಾಗಿದೆ. ಈ ಬದುಕಿನ ಧರ್ಮ ಗ್ರಂಥವನ್ನು ನೀಡಿದವರು ವಾಲ್ಮೀಕಿ ಎಂದು ಮಹಾಜನ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ರಾಮಾಯಣದ ಮತ್ತು ಇಡೀ ಭರತ ಖಂಡದ ಎಲ್ಲಾ ಮಹಾಕಾವ್ಯಗಳ ಮೂಲ ಕರ್ತೃ ವಾಲ್ಮೀಕಿ ಎಂದರು.

ಮಗುವಿನಲ್ಲಿ ಅಪಹರಣಕ್ಕೊಳಗಾಗಿ, ಬೇಟೆಗಾರರ ಜೊತೆ ಬೆಳೆದು ಬೇಟೆಗಾರ ವೃತ್ತಿಯನ್ನು ಆರಂಭಿಸಿದ ವಾಲ್ಮೀಕಿ, ನಾರದ ಮಹರ್ಷಿಯನ್ನು ಭೇಟಿ ಮಾಡಿದಾಗ, ರಾಮ ನಾಮವನ್ನು ಉಚ್ಚರಿಸುವಂತೆ ತಿಳಿಸಿದರು. ಆಗ ಅದು ಅವರಿಂದ ಸಾಧ್ಯವಾಗುವುದಿಲ್ಲ. ನಂತರ ಮರಮರ ಎಂದು ರಾಮನಾಮವನ್ನು ಜಪಿಸುವಾಗ ಹುತ್ತ ಬೆಳೆದುಕೊಳ್ಳುತ್ತದೆ. ಸಂಸ್ಕೃತದಲ್ಲಿ ವಲ್ಮೀಕವೆಂದರೆ ಹುತ್ತ. ಹಾಗಾಗಿ ರತ್ನಾಕರರಾಗಿದ್ದ ಅವರು ವಾಲ್ಮೀಕಿ ಆಗುತ್ತಾರೆ. ನಂತರ ಕೊಲ್ಲುವ ಮನಸ್ಥಿತಿಯಿಂದ ಹೊರಬರುತ್ತಾರೆ ಎಂಬ ಕಥೆಯಿದೆ. ಆ ನಂತರ ಅವರು ರಾಮಯಾಣವನ್ನು



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಬರೆಯುವುದಕ್ಕೆ ಆರಂಭಿಸುತ್ತಾರೆ. ಆ ಮೂಲಕ ನಮ್ಮ ಬದುಕನ್ನ ಕಟ್ಟಿಕೊಳ್ಳುವುದಕ್ಕೆ ಬೇಕಾಗಿರುವ ಎಲ್ಲಾ ರೀತಿಯ ಮೌಲ್ಯಗಳನ್ನು, ಸೂಕ್ಷ್ಮ ಸಂವೇದನೆಗಳಿರುವ ರಾಮಾಯಣವನ್ನು ನಮಗೆ ಕೊಟ್ಟಿದ್ದಾರೆ ಎಂದು ಅವರು ವಿವರಿಸಿದರು.

ರಾಮಾಯಣ ಒಂದು ಮಹಾಕಾವ್ಯವಾಗಿ ಭರತ ಖಂಡದಲ್ಲಿ ಎಲ್ಲರ ಬದುಕಿನ ಒಂದು ಸೂತ್ರವಾಗಿದೆ. ನಿರ್ಧಾರಗಳು ಎಷ್ಟು ಮುಖ್ಯವಾಗುತ್ತವೆ, ಯಾವ ಸಂದರ್ಭದಲ್ಲಿ ಯಾವ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೀವಿ, ಅದರಿಂದ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದು ಇದರಿಂದ ತಿಳಿಯುತ್ತದೆ. ಇಡೀ ರಾಮಾಯಣವನ್ನು ನೋಡಿದಾಗ ಒಂದು ಸಮೃದ್ಧವಾದ, ಸಂಪತ್ಭರಿತವಾದ ಜೀವನದ ಅನುಭವ ಇಲ್ಲಿ ಸಿಗುತ್ತದೆ ಎಂದರು. ಜೀವನದಲ್ಲಿ ಒರುವ ಪರಿಸ್ಥಿತಿಗಳನ್ನು ಎದುರಿಸಲು ಬೇಕಾಗಿರುವ ಮಾನಸಿಕ ಸದೃಢತೆ, ಸಂಯಮದ ಬಗ್ಗೆ ತಿಳಿಸುವುದರ ಜೊತೆಗೆ ಜೀವನ ಪ್ರೀತಿ, ಮಾನವೀಯ ಮೌಲ್ಯಗಳು, ಕೌಟುಂಬಿಕ ಸಂಬಂಧಗಳು, ಸಹೋದರ ಸಂಬಂಧಗಳು ಹಾಗೂ ಪ್ರಾಕೃತಿಕ ಸಂಬಂಧಗಳು ಹೇಗೆ ಮನುಷ್ಯನ ಸಂತೋಷದಾಯಕ ಬದುಕಿಗೆ ಕಾರಣವಾಗುತ್ತದೆ ಎಂಬುದನ್ನು ಈ ಅದ್ಭುತ ಕಾವ್ಯದ ವಿಶೇಷ ಎಂದು ಅವರು ಹೇಳಿದರು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ ಮೊದಲಾದವರು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾನುವಾರ 29 ಅಕ್ಟೋಬರ್ 2023

ಬದುಕಿನ ಧರ್ಮ ಗ್ರಂಥ 'ರಾಮಾಯಣ' ಮಹಾಕಾವ್ಯದ ಕರ್ತೃ ವಾಲ್ಮೀಕಿ

ಮೈಸೂರು, ಅ. 28– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಕಾಲೇಜು ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಹಿರಿಯ ಚೈತನ್ಯ, ನಮ್ಮ ಮಹಾಕಾವ್ಯವಾದ ರಾಮಾಯಣ, ಜೊತೆಗೆ ಇಡೀ ಭರತ ಖಂಡದ ಎಲ್ಲಾ ಮಹಾಕಾವ್ಯಗಳ ಮೂಲ ಕರ್ತೃ ವಾಲ್ಮೀಕಿ. ಮಗುವಿನಲ್ಲಿ ಅಪಹರಣಕ್ಕೊಳಗಾಗಿ, ಬೇಟೆಗಾರರ ಜೊತೆ ಬೆಳೆದು, ಬೇಟೆಗಾರ ವೃತ್ತಿಯನ್ನು ಆರಂಭಿಸಿದ ವಾಲ್ಮೀಕಿ ಅವರು, ನಾರದ ಮಹರ್ಷಿಯನ್ನು ಭೇಟಿಯಾದಾಗ, ರಾಮ ನಾಮವನ್ನು ಜಪಿಸುವಂತೆ ತಿಳಿಸಿದರು. ಆಗ ಅದು ಅವರಿಂದ ಸಾಧ್ಯವಾಗುವುದಿಲ್ಲ. ನಂತರ ಮರ ಮರ ಎಂದು ರಾಮ ನಾಮವನ್ನು ಜಪಿಸುವಾಗ ಹುತ್ತ ಬೆಳೆದುಕೊಳ್ಳುತ್ತದೆ. ಸಂಸ್ಕೃತದಲ್ಲಿ ವಲ್ಮೀಕ ಎಂದರೆ ಹುತ್ತ. ಹಾಗಾಗಿ ರತ್ನಾಕರರಾಗಿದ್ದ ಅವರು ವಾಲ್ಮೀಕಿ ಆಗುತ್ತಾರೆ. ಆ ನಂತರ ಅವರು ರಾಮಾಯಣವನ್ನು ಬರೆಯುವುದಕ್ಕೆ ಆರಂಭಿಸುತ್ತಾರೆ. ಆ ಮೂಲಕ ನಮ್ಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಬೇಕಾಗಿರುವ ಎಲ್ಲ ರೀತಿಯ ಮೌಲ್ಯಗಳನ್ನು, ಸೂಕ್ಷ್ಮ ಸಂವೇದನೆಗಳಿರುವ ರಾಮಾಯಣದಲ್ಲಿ ನಮಗೆ ಕೊಟ್ಟಿದ್ದಾರೆ ಎಂದರು.



ಕಾರ್ಯಕ್ರಮದಲ್ಲಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಆರ್. ತಿಮ್ಮೇಗೌಡ, ಇತಿಹಾಸ ವಿಭಾಗದ ಮುಖ್ಯಸ್ಥರು ಮತ್ತು ಶೈಕ್ಷಣಿಕ ಡೀನ್ ಡಾ. ಶ್ರೀಧರ ಎಚ್, ಸಿಬ್ಬಂದಿ ವರ್ಗ ಕಾಲೇಜಿನ ಅಧ್ಯಾಪಕರು ಉಪಸ್ಥಿತರಿದ್ದರು.

MFGE In the Eyes of the Press.....



ಸಂಜೆವಾಣಿ
ದಿನ ಪತ್ರಿಕೆ

ಶುಕ್ರವಾರ, 24 ನವೆಂಬರ್ 2023

- **ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರಸಂಕಿರಣ**

ಬೆಳಿಗ್ಗೆ 10ಕ್ಕೆ, ಮಹಾಜನ ಎಜುಕೇಷನ್ ಸೊಸೈಟಿ, ವಿಷಯ-ಅನ್ವೇಷಣೆ ಸಂಶೋಧನೆ ಕಂಪ್ಯೂಟರ್ ಸೈನ್ಸ್‌ನಲ್ಲಿನ ವಿಧಾನಗಳು, ಉದ್ಘಾಟನೆ-ಎಂಐಟಿ ಸಮೂಹದ ಅಧ್ಯಕ್ಷ ಡಾ.ಎಸ್.ಮುರಳಿ, ಅಧ್ಯಕ್ಷತೆ-ಮಹಾಜನ ಎಜುಕೇಷನ್ ಸೊಸೈಟಿ ಅಧ್ಯಕ್ಷ ಟಿ.ಮುರಳೀಧರ ಭಾಗವತ, ಸ್ಥಳ-ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 24.11.2023

- ಮಹಾಜನ ಪ್ರಥಮ ದರ್ಜೆ ಕಾಲೇಜು: ಕಂಪ್ಯೂಟರ್‌ಸೈನ್ಸ್ ಮೆಥಡಾಲಜಿ ಕುರಿತ ವಿಚಾರ ಸಂಕಿರಣ ಉದ್ಘಾಟನೆ-ಎಂಐಟಿ ಅಧ್ಯಕ್ಷ ಡಾ.ಎಸ್. ಮುರಳಿ, ಮುಖ್ಯ ಅತಿಥಿ- ಡಾ.ಸಿ.ಎನ್. ರವಿಕುಮಾರ್, ಅಧ್ಯಕ್ಷತೆ- ಟಿ. ಮುರಳೀಧರ್‌ಭಾಗವತ್, ಜಯಲಕ್ಷ್ಮೀಪುರಂ, ಬೆಳಗ್ಗೆ 10.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 13 ಅಕ್ಟೋಬರ್ 2023

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಪ್ರತಿಭಾ ವೇದಿಕೆ ಉದ್ಘಾಟನೆ : ಹಿನ್ನೆಲೆ ಗಾಯಕ ನವೀನ್ ಸಜ್ಜು, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಉಪಸ್ಥಿತರು : ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಆಡಳಿತಾಧಿಕಾರಿ ಪ್ರೊ. ಪಿ. ಸರೋಜಮ್ಮ, ನಿರ್ದೇಶಕ ಡಾ. ಸಿ.ಕೆ. ರೇಣುಕಾರ್ಯ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.30ಕ್ಕೆ.

ಹೊಸ ದಿಗಂತ
ಶನಿವಾರ, 25 ನವೆಂಬರ್ 2023

ರಾಷ್ಟ್ರೀಯ ಮಟ್ಟದ ಕಾರ್ಯಾಗಾರ



ಮೈಸೂರು: ನಗರದಎಸ್.ಬಿ.ಆರ್. ಆರ್. ಮಹಾಜನ ಪ್ರಥಮ ದರ್ಜೆಕಾಲೇಜಿನ ಬ್ಯಾಚುಲರ್ಆಫ್‌ಕಂಪ್ಯೂಟರ್‌ಸೈನ್ಸ್ ಅಂಡ್ ಅಪ್ಲಿಕೇಷನ್‌ವಿಭಾಗವು, ''ಮಥೋಡಲೋಜಿಸ್ ಇನ್‌ಕಂಪ್ಯೂಟರ್ ಸೈನ್ಸ್ ಅನ್‌ರ್ಯಾವಲಿಂಗ್ ದಾ ಲೇಟೆಸ್ಟ್‌ಅಡ್ವಾನ್ಸಸ್''ಎಂಬ ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ಕಾರ್ಯಾಗಾರವನ್ನು ಆಯೋಜಿಸಿತ್ತು.

ಮೈಸೂರಿನಎಂ.ಐ.ಟಿ. ಗ್ರೂಪ್‌ನ ಅಧ್ಯಕ್ಷ ಡಾ. ಮುರಳಿ ಎಸ್ ಕಾರ್ಯಾಗಾರವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ''ಸಂಶೋಧನೆಯು ಉತ್ಸಾಹ 'ದಿಂದ ಕೂಡಿರಬೇಕೇ ಹೊರತು ಅನಿವಾರ್ಯವಾಗಿರಬಾರದು''. ಅದಕ್ಕೆ ಉದಾಹರಣೆ ಎಂಬಂತೆ ಪ್ಯಾಡ್‌ಮ್ಯಾನ್ ಎಂದೇ ಪ್ರಖ್ಯಾತಿ ಪಡೆದಿರುವಅರುಣಾಚಲಂ ಮುರುಘಾನಂದರವರು ಸಂಶೋಧಕರಾಗಿ ಮಾಡಿದ ಸಾಧನೆ ಈಗಿನ ಯುವಪೀಳಿಗೆಗೆ ಮಾದರಿಯಾಗಿದೆ ಎಂದರು. ಸಂಶೋಧನೆಯು ಎಂದಿಗೂ ಸಮಾಜಕ್ಕೆ ಯಾವುದಾದರೂ ಒಂದು ರೀತಿಯಲ್ಲಿ ಕೊಡುಗೆಗಳನ್ನು ನೀಡಬೇಕು. ನಿಮ್ಮ ಸಂಶೋಧನೆಯಲ್ಲಿ ಖುಷಿ ಹಾಗೂ ಸಮಾಜಕ್ಕೆಬೇಕಾಗಿರುವ ಒಳ್ಳೆಯ ವಿಚಾರಗಳಿರಬೇಕು. ಕೇವಲ ಹೆಸರಿಗಾಗಿ ಅಥವಾ ಪ್ರಚಾರಕ್ಕಾಗಿ ಮಾಡಬಾರದು.ಅದು ಸಾರ್ವಜನಿಕರಿಗೆ ಸಹಾಯವಾಗುವಂತಹ ಸಂಶೋಧನೆಯಾಗಿರಬೇಕು'' ಎಂದು ಹೇಳಿದರು.

''ಸಂಶೋಧನೆಗೆ ಯಾವುದೇ ಭಾಷೆ ಸೀಮಿತವಾಗಿರುವುದಿಲ್ಲ . ಹಾಗೇ ಯಾವುದೇ ನಿರ್ಬಂಧವಿರುವುದಿಲ್ಲ'' ಎಂದು ಹೇಳಿದರು. ಅರುಣಾಚಲಂ ಮುರುಘಾನಂದರ ಸಂಶೋಧನೆಯಿಂದ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ಕಡಿಮೆ ಬೆಲೆಯಲ್ಲಿ ಸ್ಯಾನಿಟರಿ ಪ್ಯಾಡ್‌ಗಳನ್ನು ಹೇಗೆ ತಲುಪಿಸಬೇಕು ಎಂಬುವುದನ್ನು ಸಮಾಜಕ್ಕೆ ತಿಳಿಸಿಕೊಡುವ ಮೂಲಕ ಮಾದರಿಯಾಗಿದ್ದಾರೆ. ಇದು ನಿಜವಾದ ಸಂಶೋಧನೆಯಾಗಿರುತ್ತದೆ'' ಎಂದು ತಿಳಿಸಿದರು.

''ಒಂದು ಸಂಶೋಧನೆಯಲ್ಲಿಯಾವಾಗಲೂ ನಾವು ಐದು ನಿಯಮಗಳನ್ನು ಅಳವಡಿಸಿಕೊಳ್ಳಬೇಕು.ಅದೇನೆಂದರೆರಿಸರ್ಚ್ ಇಸ್ ಫ್ಯಾಷನ್, ರಿಸರ್ಚ್‌ಇಸ್ ಫ್ಯಾರ್ ಹ್ಯಾಪಿನೆಸ್, ರಿಸರ್ಚ್‌ಇಸ್ ಎ ಸೊಸೈಟಿ, ರಿಸರ್ಚ್‌ಇಸ್‌ಯವೇಲೂಷನ್, ರಿಸರ್ಚ್‌ಇಸ್ ನಾಟ್ ಫಾರ್‌ಪಬ್ಲಿಕೇಷನ್'' ಎಂದು ವಿವರಿಸಿದರು.

ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಎಸ್‌ಜೆಸಿಇ ಕಾಲೇಜಿನ ಕಂಪ್ಯೂಟರ್ ಸೈನ್ಸ್‌ಆಂಡ್‌ಇಂಜಿನಿಯರಿಂಗ್ ಮುಖ್ಯಸ್ಥ ಡಾ. ಸಿ.ಎನ್. ರವಿಕುಮಾರ್ ಮಿತೋಲೋಜಿ ಹಾಗೂ ಚಂದ್ರಯಾನ-3 ಯಶಸ್ಸಿನ ಬಗ್ಗೆ ಮಾತನಾಡಿದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 28 ನವೆಂಬರ್ 2023

ಸಂಶೋಧನೆ ಉತ್ಸಾಹದಿಂದ ಕೂಡಿರಬೇಕೇ ಹೊರತು ಅನಿವಾರ್ಯವಾಗಿರಬಾರದು

ಎಂಐಟಿ ಗ್ರೂಪ್ ಅಧ್ಯಕ್ಷ ಡಾ. ಎಸ್. ಮುರಳಿ ಅಭಿಮತ



ಮೈಸೂರು, ನ.27– ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಬ್ಯಾಚುಲರ್ ಆಫ್ ಕಂಪ್ಯೂಟರ್ ಸೈನ್ಸ್ ಅಂಡ್ ಅಪ್ಲಿಕೇಷನ್ ವಿಭಾಗವು, "ಮೆಥೋಡಲೋಜಿಸ್ ಇನ್ ಕಂಪ್ಯೂಟರ್ ಸೈನ್ಸ್: ಅನ್‌ರ್ಯಾವ ಲಿಂಗ್ ದಾ ಲೇಟೆಸ್ಟ್ ಅಡ್ವಾನ್ಸಸ್" ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ಕಾರ್ಯಾಗಾರವನ್ನು ಆಯೋಜಿಸಿತ್ತು.

ಮೈಸೂರಿನ ಎಂ.ಐ.ಟಿ. ಗ್ರೂಪ್‌ನ ಅಧ್ಯಕ್ಷರಾದ ಡಾ.ಎಸ್.ಮುರಳಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡುತ್ತಾ, ಸಂಶೋಧನೆಯು ಉತ್ಸಾಹದಿಂದ ಕೂಡಿರಬೇಕೇ ಹೊರತು ಅನಿವಾರ್ಯವಾಗಿರಬಾರದು. ಅದಕ್ಕೆ ಉದಾಹರಣೆ ಎಂಬಂತೆ ಪ್ಯಾಡ್‌ಮ್ಯಾನ್ ಎಂದೇ ಪ್ರಖ್ಯಾತಿ ಪಡೆದಿರುವ ಅರುಣಾಚಲಂ ಮುರುಘಾನಂದರವರು ಸಂಶೋಧಕರಾಗಿ ಮಾಡಿದ ಸಾಧನೆ ಈಗಿನ ಯುವಪೀಳಿಗೆಗೆ ಮಾದರಿಯಾಗಿದೆ. ಸಂಶೋಧನೆಯು ಎಂದಿಗೂ ಸಮಾಜಕ್ಕೆ ಯಾವುದಾದರೂ ಒಂದು ರೀತಿಯಲ್ಲಿ ಕೊಡುಗೆಗಳನ್ನು ನೀಡಬೇಕು. ನಿಮ್ಮ ಸಂಶೋಧನೆಯಲ್ಲಿ ಖುಷಿ ಹಾಗೂ ಸಮಾಜಕ್ಕೆ ಬೇಕಾಗಿರುವ ಒಳ್ಳೆಯ ವಿಚಾರಗಳಿರಬೇಕು. ಹಾಗೆ ಸಂಶೋಧನೆ ಎಂಬುದು ಕೇವಲ ಹೆಸರಿಗಾಗಿ ಅಥವಾ ಪ್ರಚಾರಕ್ಕಾಗಿ ಮಾಡಬಾರದು. ಅದು ಸಾರ್ವಜನಿಕರಿಗೆ ಸಹಾಯವಾಗುವಂತಹ ಸಂಶೋಧನೆಯಾಗಿರಬೇಕು ಎಂದು ಹೇಳಿದರು.

ಎಸ್‌ಜೆಸಿಇ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಸಿ.ಎನ್. ರವಿಕುಮಾರ್ ಅವರು ಮಿತೋಲೋಜಿ ಹಾಗೂ ಚಂದ್ರಯಾನ-3 ಯಶಸ್ಸಿನ ಬಗ್ಗೆ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಸ್ವಾಗತಿಸಿದರು. ಪರೀಕ್ಷಾಂಗ ವಿಭಾಗದ ನಿಯಂತ್ರಣಾಧಿಕಾರಿ ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆಯಾದ ಶ್ರೀಮತಿ ಶೃತಿಪೂಣಾಚ್ಚ, ಬ್ಯಾಚುಲರ್ ಆಫ್ ಕಂಪ್ಯೂಟರ್ ಸೈನ್ಸ್ ಅಂಡ್ ಅಪ್ಲಿಕೇಷನ್ ವಿಭಾಗದ ಮುಖ್ಯಸ್ಥರಾದ ರಾಧೇಶ್ ಎ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರರಾದ ಡಾ. ಎಸ್.ಆರ್. ರಮೇಶ್, ವಿಭಾಗದ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿಜಯವಾಣಿ

ಕನ್ನಡಿಗರ ಧ್ವನಿ

ಶುಕ್ರವಾರ 24 ನವೆಂಬರ್ 2023
24 NOVEMBER 2023

■ **ವಿಚಾರ ಸಂಕಿರಣ:** ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ, ಎಸ್‌ಬಿಆರ್‌ಆರ್ ಮಹಾಜನ ಕಾಲೇಜು, ಅತಿಥಿಗಳು: ಡಾ.ಎಸ್. ಮುರುಳಿ, ಡಾ.ಸಿ.ಎನ್.ರವಿಕುಮಾರ್, ಸ್ಥಳ: ಜಯಲಕ್ಷ್ಮೀಪುರಂನ ಕಾಲೇಜು ಸಭಾಂಗಣ, ಬೆ.10

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ನವೆಂಬರ್ 24, 2023

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು; ರಾಷ್ಟ್ರಮಟ್ಟದ ಸೆಮಿನಾರ್, ಉದ್ಘಾಟನೆ- ಎಸ್.ಮುರಳಿ, ಅತಿಥಿ- ಸಿ.ಎನ್.ರವಿಕುಮಾರ್, ಅಧ್ಯಕ್ಷತೆ- ಟಿ.ಮುರಳೀಧರ್ ಭಾಗವತ್, ಸ್ಥಳ- ಕಾಲೇಜು, ಬೆಳಿಗ್ಗೆ 10

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಗುರುವಾರ 30.11.2023

ಇ -ತ್ಯಾಜ್ಯ ಕುರಿತು ಜಾಗೃತಿ



ಮೈಸೂರು: ಪ್ರತಿವರ್ಷ ಇ- ತ್ಯಾಜ್ಯ ದಿಂದಾಗಿ 4500 ರಷ್ಟು ಎಫೆಲ್ ಟವರ್ಗಳು ನಿರ್ಮಾಣವಾಗುತ್ತಿದೆ ಎಂದು ಐಡಬ್ಲ್ಯೂಸಿಎಂಸಿ ನ ಹಿರಿಯ ವ್ಯವಸ್ಥಾಪಕ ಎಂ. ಬಾಲಾಜಿ ತಿಳಿಸಿದರು.

ನಗರದ ಮಹಾಜನ ಕಾಲೇಜಿನಲ್ಲಿ ಇ -ತ್ಯಾಜ್ಯ ಮತ್ತು ಅ ದರ ವಿಲೇವಾರಿ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.. ಜಯಕುಮಾರಿ ಮಾತನಾಡಿ, ಇ -ತ್ಯಾಜ್ಯದಿಂದ ಪರಿಸರಕ್ಕೆ ಹಾನಿಕಾರಕವಾಗಿದ್ದು,ಇ-ತ್ಯಾಜ್ಯ ವಿಲೇವಾರಿಕುರಿತುತಿಳಿದುಕೊಳ್ಳಬೇಕಿದೆ ಎಂದು ಅವರು ಹೇಳಿದರು. ಐಡಬ್ಲ್ಯೂಸಿಎಂಸಿನ ಹಿರಿಯ ವ್ಯವಸ್ಥಾಪಕ ಎಂ. ಬಾಲಾಜಿ, ಇ -ತ್ಯಾಜ್ಯ ಕುರಿತು ಜಾಗೃತಿ ಮೂಡಿಸುತ್ತಿರುವ ಸಾಹಸ್ ಎಂಬ ಎನ್ಜಿಒ ಬಗ್ಗೆ ಮಾಹಿತಿ ನೀಡಿದರು.

ಕಾರ್ಯದರ್ಶಿ ದಿವ್ಯೇಶ್, ಹಿರಿಯ ಯೋಜನಾ ಸಂಯೋಜಕ ಎನ್. ರಾಜು, ಪರಿಸರ ವಿಜ್ಞಾನ ವಿಭಾಗದ ಮುಖ್ಯಸ್ಥೆ ಸುನಿತಾ, ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಕ್ಯಾಪ್ಟನ್ ಇಂದ್ರಾಣಿ, ಎನ್ ಎಸ್ಎಸ್ಕಾರ್ಯಕ್ರಮಾಧಿಕಾರಿ ಡಾ.ಜಿ. ದೊಡ್ಡರಸಯ್ಯ ಮತ್ತು ಡಾ. ಸಿದ್ದರಾಜು ಇದ್ದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಭಾನುವಾರ 26.11.2023



ಜಮ್ಮು ಮತ್ತು ಕಾಶ್ಮೀರದ ರಾಜೌರಿಯ ಉಗ್ರರ ದಾಳಿಗೆ ಬಲಿಯಾದ ಕ್ಯಾಪ್ಟನ್ ಪ್ರಾಂಜಲ್, ಕ್ಯಾಪ್ಟನ್ ಶುಭಂ ಗುಪ್ತ, ಹವಾಲ್ದಾರ್ ಅಬ್ದುಲ ಮಜೀದ್, ಲ್ಯಾನ್ಸ್ ನಾಯಕ್ ಸಂಜಯ್ ಬಿಷ್ತ್ ಮತ್ತು ಪ್ಯಾರಾಟ್ರೂಪರ್ ಸಚಿನ್ ಲಾರ್ ಅವರಿಗೆ ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 27.11.2023

ಜೀವನದಲ್ಲಿ ಪ್ರಮುಖ ಪಾಠ ಕಲಿಯಲು ಎನ್ನೆಸ್ಸೆಸ್

ನಿವೃತ್ತ ಪ್ರಾಧ್ಯಾಪಕ ಪ್ರೊ. ಚಿಕ್ಕ ಕೆಂಪೇಗೌಡ ಅಭಿಮತ | ಮಹಾಜನ ಕಾಲೇಜಿನಲ್ಲಿ ಎನ್ನೆಸ್ಸೆಸ್ ಕಾರ್ಯಕ್ರಮ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಎನ್‌ಎಸ್‌ಎಸ್ ಜೀವನದ ಪಾಠವನ್ನು ಕಲಿಸುತ್ತದೆ. ಪ್ರಾಮಾಣಿಕತೆ, ಸಮಯಪಾಲನೆ ಮತ್ತು ಶಿಸ್ತನ್ನು ಮೈಗೂಡಿಸಿಕೊಳ್ಳಲು ನೆರವಾಗುತ್ತದೆ ಎಂದು ನಿವೃತ್ತ ಪ್ರಾಧ್ಯಾಪಕ ಚಿಕ್ಕ ಕೆಂಪೇಗೌಡ ತಿಳಿಸಿದರು.

ನಗರದ ಮಹಾಜನ ಕಾಲೇಜಿನಲ್ಲಿ ಶನಿವಾರ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಯುವಜನತೆಯ ಪಾತ್ರ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಎನ್‌ಎಸ್‌ಎಸ್ ಉದ್ಯೋಗಾವಕಾಶ, ದೇಶಾಭಿಮಾನ, ಸರಳತೆ, ಸಮಾನತೆ, ನಾಯಕತ್ವ ಗುಣ ಮೊದಲಾದವುಗಳನ್ನು ಪಡೆದುಕೊಳ್ಳಲು ನೆರವಾಗುತ್ತದೆ ಎಂದರು.

ಮಾನವ ಪರಿಸರದ ಶಿಶು, ಮಾನವನ ಜೀವನ ಮತ್ತು ಬೆಳವಣಿಗೆಯ ಮೇಲೆ ಪರಿಸರದ ಪ್ರಭಾವ ದಟ್ಟವಾಗಿದೆ. ಜಾಗತಿಕ ತಾಪಮಾನ ಬಹು ದೊಡ್ಡ ಸಮಸ್ಯೆಯಾಗಿದೆ. ಉತ್ತಮ ಭವಿಷ್ಯ ಹೊಂದಬೇಕಾದರೆ ಯುವಜನತೆಯ ಪಾತ್ರ ಪ್ರಮುಖವಾಗಿದೆ ಎಂದರು.



ದೇಶದಲ್ಲಿ ಅತ್ಯಧಿಕ ಸಂಪನ್ಮೂಲವಿದ್ದರೂ ಅವು ಕಲುಷಿತವಾಗಿವೆ. ಇದರಿಂದ ಸಸ್ಯ ವರ್ಗಗಳು, ಪ್ರಾಣಿ ಪಕ್ಷಿ ಸಂಕುಲಗಳು ಅಳಿವಿನ ಅಂಚಿನಲ್ಲಿದೆ. ಅಲ್ಲದೆ ಜೀವ ಸಂಕುಲಗಳ ಮೇಲೆ ದುಷ್ಪರಿಣಾಮ ಬೀರಿವೆ. ಅರಣ್ಯಗಳ ನಾಶ ನಿರಂತವಾಗಿರುವುದರಿಂದ ವನ್ಯಜೀವಿಗಳ ವಾಸ ಸ್ಥಾನಗಳಿಗೆ ತೊಂದರೆಯಾಗಿದ್ದು, ಅವು ಜನ ವಸತಿ ಪ್ರದೇಶಗಳಿಗೆ ದಾಳಿ ಮಾಡುವಂತೆ ಆಗಿದೆ ಎಂದರು.

ರಾಸಾಯನಿಕಗೊಬ್ಬರಗಳ ಅತಿಯಾದ ಬಳಕೆಯಿಂದ ಭೂಮಿಯ ಫಲವತ್ತತೆ ಕಡಿಮೆಯಾಗಿದ್ದು, ಆಹಾರ ಪದಾರ್ಥಗಳು ವಿಷಪೂರಿತವಾಗುತ್ತಿದೆ. ಆದುದರಿಂದ ಆರೋಗ್ಯಕರ ಆಹಾರ ಬೆಳೆಗಳನ್ನು ಬೆಳೆಯಲು ಸಾವಯವ ಗೊಬ್ಬರಗಳ ಬಳಕೆಗೆ ಹೆಚ್ಚು ಉತ್ತೇಜನ ನೀಡಬೇಕು. ಪರಿಸರವನ್ನು ಸಮತೋಲನದಲ್ಲಿ ಕಾಪಾಡಿಕೊಳ್ಳಬೇಕು ಎಂದರು.

ವಾಯುಮಾಲಿನ್ಯ, ಶಬ್ದಮಾಲಿನ್ಯ, ಜಲಮಾಲಿನ್ಯ, ಭೂಮಾಲಿನ್ಯ ಮೊದಲಾದವುಗಳನ್ನು ನಿಯಂತ್ರಿಸುವಲ್ಲಿ ಯುವಜನತೆಯ ಪಾತ್ರ ಬಹಳ ಮುಖ್ಯ. ದೇಶದಲ್ಲಿ ಜನಸಂಖ್ಯೆ ಹೆಚ್ಚಾಗಿದೆ. ಸಂಪನ್ಮೂಲಗಳು ಕಡಿಮೆಯಾಗುತ್ತಿದೆ ಇದನ್ನು ಸಮತೋಲನಗೊಳಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ತ್ಯಾಜ್ಯಗಳ ನಿರ್ವಹಣೆ, ಪ್ಲಾಸ್ಟಿಕ್ ಬಳಕೆಯ ನಿಷೇದ ಇನ್ನೂ ಮುಂತಾದವುಗಳ ಕುರಿತು ಜನರಲ್ಲಿ ಎನ್‌ಎಸ್‌ಎಸ್ ಸ್ವಯಂ ಸೇವಕರು ಜಾಗೃತಿ ಮೂಡಿಸಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಯಾದ ಡಾ.ಸಿ.ಎಸ್. ಸಿದ್ದರಾಜು ಸ್ವಾಗತಿಸಿದರು. ಡಾ.ಜಿ. ದೊಡ್ಡರಸಯ್ಯ ವಂದಿಸಿದರು. ಸಿ.ಎನ್. ಶಶಾಂಕ್ ನಿರೂಪಿಸಿದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರ • ನವೆಂಬರ್ 26, 2023

'ಎನ್‌ಎಸ್‌ಎಸ್‌ನಿಂದ ಶಿಸ್ತು'



ಮೈಸೂರು: ರಾಷ್ಟ್ರೀಯ ಸ್ವಯಂಸೇವಾ ಯೋಜನೆಯು ವಿದ್ಯಾರ್ಥಿಗಳಲ್ಲಿ ಶಿಸ್ತು, ದೇಶಾಭಿಮಾನ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ಸಹಕಾರಿ ಆಗಿದೆ ಎಂದು ನಿವೃತ್ತ ಪ್ರಾಧ್ಯಾಪಕ ಚಿಕ್ಕಕೆಂಪೇಗೌಡ ಹೇಳಿದರು.

ಮಹಾಜನ ಕಾಲೇಜಿನಲ್ಲಿ ಎನ್‌ಎಸ್‌ಎಸ್ ವಾರ್ಷಿಕ ಕಾರ್ಯಕ್ರಮಗಳ ಉದ್ಘಾಟನೆ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಯುವಜನತೆಯ ಪಾತ್ರ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಾನವ ಪರಿಸರದ ಶಿಶು. ನಮ್ಮ ಮೇಲೆ ಪರಿಸರದ ಪ್ರಭಾವ ದಟ್ಟವಾಗಿದೆ. ನಮ್ಮಲ್ಲಿ ಉತ್ತಮ ನೈಸರ್ಗಿಕ ಸಂಪನ್ಮೂಲ ಇದ್ದರೂ ಅವು ಕಲುಷಿತ ಆಗುತ್ತಿವೆ. ಪರಿಸರ ಸಂರಕ್ಷಣೆಯಲ್ಲಿ ಯುವಜನರ ಪಾತ್ರ ಪ್ರಮುಖವಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಸಿದ್ದರಾಜು, ಜಿ. ದೊಡ್ಡರಸಯ್ಯ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 4.11.2023

ಕಿಣ್ವದ ಚಲನಶಾಸ್ತ್ರ, ಪ್ರತಿಬಂಧಕ ಅಧ್ಯಯನ ಕಾರ್ಯಾಗಾರ



• ಕನ್ನಡಪ್ರಭ ವಾರ್ತೆ ಮೈಸೂರು

ಜೈವಿಕ ರಸಾಯನಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಕಿಣ್ವದ ಚಲನಶಾಸ್ತ್ರ ಮತ್ತು ಪ್ರತಿಬಂಧಕ ಅಧ್ಯಯನಗಳ ಡೇಟಾವನ್ನು ವಿಶ್ಲೇಷಿಸುವ ಕಾರ್ಯಾಗಾರವನ್ನು ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

ಜೆಎಸ್‌ಎಸ್ ಎಐಚ್‌ಇಆರ್ ಜೀವರಸಾಯನಶಾಸ್ತ್ರ ವಿಭಾಗ, ಸ್ಕೂಲ್ ಆಫ್ ಲೈಫ್ ಸೈನ್ಸಸ್ ಸಹಾಯಕ ಪ್ರಾಧ್ಯಾಪಕ ಮತ್ತು ಸಹಾಯಕ ಡೀನ್ ಡಾ. ರಘುರಾಮ್ ಆಚಾರ್ ಮಾತನಾಡಿ, ಕಿಣ್ವಗಳು, ಅದರ ಸ್ವಾಭಾವ ಗುಣಲಕ್ಷಣಗಳು, ನಿರ್ದಿಷ್ಟತೆ ಮತ್ತು ಕಾರ್ಯವಿಧಾನದ ಬಗ್ಗೆ ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಜೈವಿಕರಸಾಯನಶಾಸ್ತ್ರಸಹಾಯಕಪ್ರಾಧ್ಯಾಪಕರಾದ ಆರ್. ಮಾಧುರಿ, ಪಿ. ರಾಧಿಕ ಇದ್ದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಮಂಗಳವಾರ 28.11.2023

ವಿಚಾರ ಸಂಕಿರಣ ಮೈಸೂರು ವಿವಿಯ ಡೀನ್ ಪ್ರೊ.ಡಿ.ಸೋನರ್‌ನಂದಪ್ಪ

ಭಾರತಕ್ಕೆ ತಂತ್ರಜ್ಞಾನ ಬಹಳ ಮುಖ್ಯ



• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗಣಿತಶಾಸ್ತ್ರ ಮತ್ತು ಭೌತಶಾಸ್ತ್ರಗಳಲ್ಲಿನ ಇತ್ತೀಚಿನ ಬೆಳವಣಿಗೆ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿತ್ತು.

ಮೈಸೂರು ವಿವಿಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಡೀನ್ ಪ್ರೊ.ಡಿ. ಸೋನರ್‌ನಂದಪ್ಪ ಅವರು ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ಅಭಿವೃದ್ಧಿ ಹೊಂದುತ್ತಿರುವ ಭಾರತಕ್ಕೆ ತಂತ್ರಜ್ಞಾನ ಬಹಳ ಮುಖ್ಯ. ಆ ನಿಟ್ಟಿನಲ್ಲಿ ಕಬ್ಬಿಣದ ಕಡಲೆಯಂತಿರುವ ಗಣಿತ ಮತ್ತು ಭೌತಶಾಸ್ತ್ರ ವಿಷಯಗಳನ್ನು ಅರ್ಥೈಸುವಲ್ಲಿ ತಂತ್ರಜ್ಞಾನ ಪ್ರಮುಖ ಪಾತ್ರವಹಿಸಿದೆ. ಈ ರೀತಿಯ ತಂತ್ರಜ್ಞಾನ ವಿದ್ಯಾರ್ಥಿಗಳಲ್ಲಿ ಕುತೂಹಲ ಹಾಗೂ ಆಸಕ್ತಿಯನ್ನುಂಟು ಮಾಡುವುದರ ಜೊತೆಗೆ ಹೊಸ ವಿಚಾರ ತಿಳಿಸಿ ಕೊಡುತ್ತಿವೆ ಎಂದರು.

ಹಿರಿಯ ಪ್ರಾಧ್ಯಾಪಕ ಡಾ. ಪ್ರದೀಪ್ ಜಿ. ಸಿದ್ದೇಶ್ವರ್ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ ವಿದ್ಯಾರ್ಥಿಗಳಿಗೆ ವಿಫುಲ ಅವಕಾಶ ನೀಡಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಆಸಕ್ತಿಯ ವಿಷಯಗಳನ್ನು ಆಯ್ದುಕೊಂಡು ಅಭ್ಯಾಸಿಸಬಹುದು. ವಿಜ್ಞಾನ, ವ್ಯವಹಾರ ಹಾಗೂ ಮಾನವಿಕ ವಿಷಯಗಳ ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸುವ ಜೊತೆಗೆ ಅವುಗಳ ಪರಿಚಯವು ಆಗುತ್ತದೆ ಎಂದರು.

ವಿಜ್ಞಾನ ವಿಷಯಗಳನ್ನು ಬಿಎಸ್ಸಿ ವಿದ್ಯಾರ್ಥಿಗಳು ಮಾತ್ರವಲ್ಲದೇ ಯಾವುದೇ ವಿದ್ಯಾರ್ಥಿಗಳು ಕೂಡ ಅಭ್ಯಸಿಸಬಹುದು ಎಂದು ಅವರು ವಿವರಿಸಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಶೈಕ್ಷಣಿಕ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಎಸ್. ಪೂರ್ಣಿಮಾ, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಎಂ.ಪಿ. ಸುಮತಿ, ವಿವಿಧ ವಿಭಾಗದ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಾಗಾರವನ್ನು ಯಶಸ್ವಿಗೊಳಿಸಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಮಂಗಳವಾರ 28 ನವೆಂಬರ್ 2023
28 NOVEMBER 2023

ಭೌತಶಾಸ್ತ್ರ ಅರ್ಥೈಸುವಲ್ಲಿ ತಂತ್ರಜ್ಞಾನ ಪ್ರಮುಖ ಪಾತ್ರ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಕಬ್ಬಿಣದ ಕಡಲೆಯಂತಿರುವ ಗಣಿತ ಮತ್ತು ಭೌತಶಾಸ್ತ್ರ ವಿಷಯಗಳನ್ನು ಅರ್ಥೈಸುವಲ್ಲಿ ತಂತ್ರಜ್ಞಾನ ಪ್ರಮುಖ ಪಾತ್ರವಹಿಸಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನ್ ಪ್ರೊ.ಸೋನರ್ ನಂದಪ್ಪ ಹೇಳಿದರು.

ನಗರದ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಆಯೋಜಿಸಿದ್ದ 'ಗಣಿತಶಾಸ್ತ್ರ ಮತ್ತು ಭೌತಶಾಸ್ತ್ರಗಳಲ್ಲಿನ ಇತ್ತೀಚಿನ ಬೆಳವಣಿಗೆಗಳು' ಕುರಿತು ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಮಾತನಾಡಿ, ಅಭಿವೃದ್ಧಿ ಹೊಂದುತ್ತಿರುವ ಭಾರತಕ್ಕೆ ತಂತ್ರಜ್ಞಾನ ಬಹಳ ಮುಖ್ಯ. ಆ ನಿಟ್ಟಿನಲ್ಲಿ ಗಣಿತ ಮತ್ತು ಭೌತಶಾಸ್ತ್ರ ತಿಳಿದುಕೊಳ್ಳಲು ತಂತ್ರಜ್ಞಾನ ಪ್ರಮುಖ ಪಾತ್ರ ವಹಿಸುತ್ತದೆ. ತಂತ್ರಜ್ಞಾನವು ವಿದ್ಯಾರ್ಥಿಗಳಲ್ಲಿ ಕುತೂಹಲ ಹಾಗೂ ಆಸಕ್ತಿಯನ್ನು ಉಂಟು ಮಾಡುವುದರ ಜತೆಗೆ ಹೊಸ ವಿಚಾರ ತಿಳಿಸಿಕೊಡುತ್ತದೆ ಎಂದರು.

ಹಿರಿಯ ಪ್ರಾಧ್ಯಾಪಕ ಪ್ರೊ.ಪ್ರದೀಪ್ ಜಿ.ಸಿದ್ದೇಶ್ವರ್ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ ವಿದ್ಯಾರ್ಥಿಗಳಿಗೆ ವಿಪುಲ ಅವಕಾಶ ನೀಡಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಆಸಕ್ತಿಯ ವಿಷಯ ಆಯ್ದುಕೊಂಡು ಅಭ್ಯಾಸಿಸಬಹುದು. ವಿಜ್ಞಾನ, ವ್ಯವಹಾರ ಹಾಗೂ ಮಾನವಿಕ ವಿಷಯಗಳ ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸುವುದರ ಜತೆಗೆ ಅವುಗಳ ಪರಿಚಯವು ಆಗುತ್ತದೆ ಎಂದರು. ವಿಜ್ಞಾನ ವಿಷಯಗಳನ್ನು ಬಿಎಸ್ಸಿ ವಿದ್ಯಾರ್ಥಿಗಳು ಮಾತ್ರವಲ್ಲದೇ ಯಾವುದೇ ವಿದ್ಯಾರ್ಥಿಗಳು ಸಹ ಅಭ್ಯಸಿಸಬಹುದು ಎಂದು ವಿವರಿಸಿದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಮಹಾಜನ ವಿದ್ಯಾಸಂಸ್ಥೆಯ ಗೌ.ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಶೈಕ್ಷಣಿಕ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಎಸ್.ಪೂರ್ಣಿಮಾ, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಎಂ.ಪಿ.ಸುಮತಿ ಸೇರಿದಂತೆ 200 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ವಿಜಯವಾಣಿ

ನಗರದ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ವಿಚಾರಸಂಕಿರಣವನ್ನು ಪ್ರೊ.ಸೋನರ್ ನಂದಪ್ಪ ಉದ್ಘಾಟಿಸಿದರು. ಪ್ರೊ.ಪ್ರದೀಪ್ ಜಿ.ಸಿದ್ದೇಶ್ವರ್, ಡಾ. ಬಿ.ಆರ್. ಜಯಕುಮಾರಿ, ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಡಾ. ಎಸ್.ಆರ್.ರಮೇಶ್ ಇನ್ನಿತರರಿದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಸೋಮವಾರ 27.11.2023

■ ಮಹಾಜನ ಪ್ರಥಮ ದರ್ಜೆ ಕಾಲೇಜು: ಮ್ಯಾಥಮ್ಯಾಟಿಕಲ್ ಫಿಜಿಕ್ಸ್ನ ಇತ್ತೀಚಿನ ಬೆಳವಣಿಗೆಗಳು ಕುರಿತ ವಿಚಾರ ಸಂಕಿರಣ, ಮುಖ್ಯ ಅತಿಥಿ- ಡಾ.ಸೋನಾರ್ನಂದಪ್ಪ, ಪ್ರಾಸ್ತಾವಿಕ ಭಾಷಣ- ಡಾ. ಪ್ರದೀಪ್ ಜೆ. ಸಿದ್ದೇಶ್ವರ್, ಅಧ್ಯಕ್ಷತೆ- ಟಿ. ವಿಜಯಲಕ್ಷ್ಮೀ ಭಾಗವತ್, ಅತಿಥಿಗಳು- ಡಾ.ಬಿ.ಆರ್. ಜಯಕುಮಾರಿ, ಡಾ. ಎಸ್.ಆರ್. ರಮೇಶ್, ಜಯಲಕ್ಷ್ಮೀಪುರಂ, ಬೆಳಗ್ಗೆ

ಪ್ರಜಾವಾಣಿ

ಆತ್ಮಸಾಕ್ಷಿಯ ಕನ್ನಡ ದಿನಪತ್ರಿಕೆ

ಸೋಮವಾರ • ನವೆಂಬರ್ 27, 2023

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: 'ಗಣಿತ ಭೌತಶಾಸ್ತ್ರದಲ್ಲಿನ ಇತ್ತೀಚಿನ ಪ್ರವೃತ್ತಿ' ವಿಚಾರ ಸಂಕಿರಣ, ಅಧ್ಯಕ್ಷತೆ- ವಿಜಯಲಕ್ಷ್ಮೀ ಮುರಳೀಧರ್, ಮುಖ್ಯ ಅತಿಥಿ- ಸೋನಾರ್ ನಂದಪ್ಪ, ಸ್ಥಳ: ಜಯಲಕ್ಷ್ಮೀಪುರಂ, ಬೆಳಿಗ್ಗೆ 10

ಆಂದೋಲನ

ದಿನಪತ್ರಿಕೆ

ಸೋಮವಾರ, 27 ನವೆಂಬರ್ 2023

● **ರಾಷ್ಟ್ರ ಮಟ್ಟದ ವಿಚಾರಸಂಕಿರಣ**

ಬೆಳಿಗ್ಗೆ 10ಕ್ಕೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ವಿಷಯ-ಗಣಿತ, ಭೌತಶಾಸ್ತ್ರದ ಇತ್ತೀಚಿನ ಪ್ರವೃತ್ತಿಗಳು, ಮುಖ್ಯಅತಿಥಿ-ಮೈಸೂರು ವಿವಿ ಗಣಿತ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಸೋನರ್ ನಂದಪ್ಪ, ಅಧ್ಯಕ್ಷತೆ-ಮಹಾಜನ ಎಜುಕೇಷನ್ ಸೊಸೈಟಿ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಳೀಧರ, ಸ್ಥಳ-ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ.

MFGE In the Eyes of the Press.....

ಸಂಪದ
ದಿನ ಪತ್ರಿಕೆ

ಶನಿವಾರ, 11 ನವೆಂಬರ್ 2023

ಪುರುಷರ ಕುಸ್ತಿ: ಮಹಾಜನ ಕಾಲೇಜಿಗೆ ಸಮಗ್ರ ಪ್ರಶಸ್ತಿ



ಮೈಸೂರು: ಮೈಸೂರು ವಿವಿಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ನಡೆದ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡ ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಸಿಇಒ ಡಾ.ಎಸ್.ಆರ್.ರಮೇಶ್, ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ, ಡಾ.ಎಚ್.ಎನ್.ಭಾಸ್ಕರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕುಸ್ತಿ ತಂಡದ ನಾಯಕ ಯೋಗೇಶ್ ನಾಯಕ, ಡಿ.ಮೋಹನ್ ಕುಮಾರ್, ಲಾಲು ಪ್ರಸಾದ್, ಕೆ.ಶಶಿಕುಮಾರ್, ಗ್ಯಾಬ್ರಿಲ್, ಎ.ಗಣೇಶ, ಪಿ.ರಾಮು, ಎಸ್.ಮಂಜಣ್ಣ ಮತ್ತಿತರರು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 11.11.2023

ಮಹಾಜನ ಕಾಲೇಜಿಗೆ ಪುರುಷರ ಕುಸ್ತಿ ಸಮಗ್ರ ಪ್ರಶಸ್ತಿ



• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗವು ಆಯೋಜಿಸಿದ್ದ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು 2023-24ನೇ ಸಾಲಿನ ಪುರುಷರ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಪಡೆದಿದೆ. ತಂಡದ ನಾಯಕ ಯೋಗೇಶ್ ನಾಯಕ, ಕುಸ್ತಿಪಟುಗಳಾದ ಡಿ. ಮೋಹನ್ ಕುಮಾರ್, ಲಾಲು ಪ್ರಸಾದ್, ಕೆ. ಶಶಿಕುಮಾರ್, ಗ್ಯಾಬ್ರಿಲ್, ಎ. ಗಣೇಶ, ಪಿ. ರಾಮು, ಎಸ್. ಮಂಚಣ್ಣ ಬಹುಮಾನ ಪಡೆದಿದ್ದಾರೆ. ಇವರನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಡಾ.ಎಚ್.ಎನ್. ಭಾಸ್ಕರ್ ಅಭಿನಂದಿಸಿದ್ದಾರೆ.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 14 ನವೆಂಬರ್ 2023



ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ವತಿಯಿಂದ ಆಯೋಜಿಸಿದ್ದ, ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು 2023–24ನೇ ಸಾಲಿನ ಪುರುಷರ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಪಡೆದುಕೊಂಡಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ಪಿ.ಎಸ್. ಮಧುಸೂಧನ, ದೈಹಿಕ ಶಿಕ್ಷಣ ನಿರ್ದೇಶಕರು, ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು, ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ, ಡಾ.ಎಸ್.ಆರ್.ರಮೇಶ್, ಸಿಇಒ, ಡಾ. ಭಾಸ್ಕರ್ ಹೆಚ್.ಎನ್., ದೈಹಿಕ ಶಿಕ್ಷಣ ನಿರ್ದೇಶಕರು, (ನಿಂತಿರುವವರು): ಮೋಹನ್ ಕುಮಾರ್ ಡಿ, ಲಾಲು ಪ್ರಸಾದ್, ಶಶಿಕುಮಾರ್ ಕೆ, ಗ್ಯಾಬ್ರಿಲ್, ಗಣೇಶ ಎ., ರಾಮು ಪಿ., ಮಂಚಣ್ಣ ಎಸ್. ಹಾಗೂ ತಂಡದ ನಾಯಕ ಯೋಗೇಶ್ ನಾಯಕ ಅವರನ್ನು ಕಾಣಬಹುದು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶನಿವಾರ • ನವೆಂಬರ್ 11, 2023



ಮೈಸೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗ ಆಯೋಜಿಸಿದ್ದ 2023–24ನೇ ಸಾಲಿನ ಅಂತರ ಕಾಲೇಜು ಪುರುಷರ ಕುಸ್ತಿ ಟೂರ್ನಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ತಂಡದವರು ಸಮಗ್ರ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಅವರೊಂದಿಗೆ ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂದನ, ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಟಿ. ವಿಜಯಲಕ್ಷ್ಮಿ ಮುರುಳೀಧರ್, ಸಿಇಒ ಎಸ್.ಆರ್. ರಮೇಶ್ ಹಾಗೂ ಭಾಸ್ಕರ್ ಎಚ್.ಎನ್. ಇದ್ದಾರೆ

STAR OF MYSORE

Sunday 19th November 2023

Winners of MUICT Men Wrestling Overall Championship



SBRR Mahajana First Grade College won the Men Wrestling Overall Championship of MUICT 2023-24 with 21 points. The Tournament was organised by Department of Physical Education, University of Mysore (UoM), Mysuru. Seen are** (sitting from left) **P.S. Madhusudhana, Dr. B.R. Jayakumari, Principal, Dr. T. Vijayalakshmi Muralidhar, Hon. Secretary, MES, Dr. S.R. Ramesh, CEO, Dr. H.N. Bhaskar, Physical Education Director;** (standing) **D. Mohan Kumar, Lalu Prasad, K. Shashikumar, Gabrel, A. Ganesha, P. Ramu, S. Manchanna and Team Captain Yogesh Nayaka.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 19.11.2023

ಮಹಾಜನ ಕಾಲೇಜಿಗೆ ಪ್ರಥಮ ಸ್ಥಾನ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಕ್ರೈಸ್ ಕಾಲೇಜು ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಲಿಬಾಲ್ ತಂಡವು ಊಟಿ ರಸ್ತೆಯಲ್ಲಿರುವ ಜೆಎಸ್ ಎಸ್ ಕಾಲೇಜಿನ ವಿರುದ್ಧ 2-0 ಅಂತರದಲ್ಲಿ ಜಯಶೀಲರಾಗಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಡಾ.ಕೆ.ಕೆ. ಸೋಮಶೇಖರ, ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂಧನ, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಶೈಕ್ಷಣಿಕ ಸಲಹೆಗಾರರಾದ ಡಾ. ಎಸ್. ಆರ್. ರಮೇಶ್, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಎಚ್.ಎನ್. ಭಾಸ್ಕರ್, ತಂಡದ ನಾಯಕ ರಾಹುಲ್ ಬುದ್ಧ, ಸೋಮಶೇಖರ್, ಎನ್. ಆರ್. ತೇಜಸ್, ಜಿ. ಶ್ರೀನಿವಾಸ, ಎಸ್.ಎಸ್. ವಿಕಾಶ್, ಎಸ್. ಅರುಣ್ ಕುಮಾರ್, ಆದರ್ಶ್ ಎನ್. ಗೌಡ, ಎಚ್.ಜೆ. ಕುಶಾಲ್, ಕೆ.ಕೆ. ತುಷಾರ್‌ಗೌಡ, ವರುಣ್ ನಾಯಕ್, ಪವನ್ ಗೌಡ, ಎಸ್. ಸ್ವರೂಪ್ ಕುಮಾರ್, ಡಿ. ಕಾರ್ತಿಕ್ ಇದ್ದಾರೆ.

MFGE In the Eyes of the Press.....

STAR OF MYSORE

Tuesday 21st November 2023

SBRR Mahajana FGC wins Christ Cup Volleyball Tournament



The men's team of SBRR Mahajana First Grade College (FGC), Jayalakshmipuram, defeated JSS College, Ooty Road and emerged winners in the Christ Cup Volleyball Tournament organised by Christ College, Mysuru. Seen in the picture are *(sitting from left)* ***SBRR Mahajana FGC Sports Committee Member Dr. K.K. Somashekar, Physical Education Director P.S. Madhusudhana, Principal Dr. B.R. Jayakumari, Mahajana Education Society Secretary Dr. T. Vijayalakshmi Muralidhar, CEO & Academic Advisor Dr. S.R. Ramesh, Physical Education Director Dr. H.N. Bhaskar and Team Capitan Rahul Budha;*** *(standing from left)* ***Somashekar, N.R. Tejas, G. Srinivasa, S.S. Vikas, S. Arunkumar, Adharsh N. Gowda, H.J. Kushal, K.K. Thushar Gowda, Varun Nayak, Pavan Gowda, S. Swaroopkumar and D. Kartik.***

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 11.11.2023

ಮತದಾನ ಬಗ್ಗೆ ಜಾಗೃತಿ ಜಾಥಾ



• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಚುನಾವಣಾ ಸಾಕ್ಷರತಾ ಸಂಘದಿಂದ ಭಾರತೀಯ ಚುನಾವಣಾ ಆಯೋಗದ ಸೂಚನೆಯ ಮೇರೆಗೆ ಮತದಾನ ಜಾಗೃತಿ ಹಾಗೂ ನೋಂದಣಿ ಪ್ರಕ್ರಿಯೆಯ ಭಾಗವಾಗಿ ಜಾಥಾ ಆಯೋಜನೆ ಮಾಡಲಾಗಿತ್ತು.

ಪ್ರಜಾ ಪ್ರಭುತ್ವದ ವ್ಯವಸ್ಥೆಯಲ್ಲಿ ಮತದಾನ ಮಹತ್ವದ ಪಾತ್ರ ನಿರ್ವಹಿಸುವ ನಿಟ್ಟಿನಲ್ಲಿ ಯುವ ಮತದಾರರು ಮತದಾನದ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಬಹಳ ಮುಖ್ಯವಾಗಿದೆ. ಇದರ ಭಾಗವಾಗಿ ಯುವ ಮತದಾರರ ಹೆಸರು ನೋಂದಣಿ ಮಾಡಿಸಲಿರುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಜಾಥಾವನ್ನು ಆಯೋಜಿಸಲಾಗಿತ್ತು. ಮತದಾನದಂತಹ ಮಹತ್ತರ ಕಾರ್ಯದಿಂದ ಯಾರೊಬ್ಬರು ಹೊರಗುಳಿಯಬಾರದು ಎಂಬುದರ ಬಗ್ಗೆ ಘೋಷಣೆ ಕೂಗುವುದರ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಜಾಥಾವು ಒಂಟಿಕೊಪ್ಪಲು, ವಿನಾಯಕನಗರ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ. ಆರ್. ಜಯಕುಮಾರಿ, ಚುನಾವಣಾ ಸಾಕ್ಷರತಾ ಸಂಘದ ಸಂಚಾಲಕ ಎ.ಆರ್. ನಂದೀಶ್ ಮೊದಲಾದವರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 8.12.2023



ಮಹಾಜನ ಕಾಲೇಜಿನಲ್ಲಿ ಪುಸ್ತಕಗಳ ಪ್ರದರ್ಶನ

ಮೈಸೂರು: ನಗರದ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕೇಂದ್ರ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಕನ್ನಡದಲ್ಲಿ ಜ್ಞಾನಪೀಠ ಪುರಸ್ಕೃತರ ಪುಸ್ತಕಗಳನ್ನು ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಹಾಗೂ ಕನ್ನಡ ರಾಜ್ಯೋತ್ಸವ ಅಂಗವಾಗಿ ಡಿ. 6 ರಿಂದ 13 ರವರೆಗೆ ಪ್ರದರ್ಶಿಸಲಾಗುತ್ತಿದೆ. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಕಾರ್ಯಕ್ರಮ ಉದ್ಘಾಟಿಸಿ ದರು. ಕಾಲೇಜಿನ ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಗ್ರಂಥಪಾಲಕಿ ಎಂ. ವೀಣಾ, ಗ್ರಂಥಾಲಯದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ಆಂದೋಲನ
ದಿನ ಪತ್ರಿಕೆ
ಭಾನುವಾರ, 3 ಡಿಸೆಂಬರ್ 2023

ಪ್ರಾಪಂಚಿಕ ಉಳಿವಿಗೆ ಸುಸ್ಥಿರ ಅಭಿವೃದ್ಧಿ ಅತ್ಯಗತ್ಯ: ಪ್ರೊ.ಎಂ.ಇಂದಿರಾ



ಮೈಸೂರು: ಪ್ರಸ್ತುತ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಉತ್ತಮ ಸಾಮಾಜಿಕ ವಾತಾವರಣವನ್ನು ನಿರ್ಮಾಣ ಮಾಡುವುದು ಅವಶ್ಯ ಎಂದು ಮೈಸೂರು ವಿವಿಯ ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಎಂ.ಇಂದಿರಾ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗ, ಐಕ್ಯೂಎಸಿ ಸಹಯೋಗದಲ್ಲಿ ಕಾಲೇಜಿನಲ್ಲಿ ಆಯೋಜಿಸಿದ್ದ 'ಸುಸ್ಥಿರ - ಅಭಿವೃದ್ಧಿಯ ದೃಷ್ಟಿಕೋನಗಳು' ವಿಷಯ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ಒಳ್ಳೆಯ ಸಮಾಜ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ, ಪ್ರಾಪಂಚಿಕ ಉಳಿವು, ಪರಿಸರ ಸಂರಕ್ಷಣೆ ಮತ್ತು ಆರ್ಥಿಕ ಅಭಿವೃದ್ಧಿಗಳ ಸಾಧನೆಗೆ ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯು ಒಂದು ಉತ್ತಮವಾದ ಚಿಕಿತ್ಸೆಯಾಗಿದೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಸಿಇಒ ಹಾಗೂ ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್.ರಮೇಶ್, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಎಂ.ಎನ್.ವೆಂಕಟಲಕ್ಷ್ಮಿ, ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಪಿ.ಜಿ.ಪುಷ್ಪರಾಣಿ ಹಾಜರಿದ್ದರು.

ಹೊಸ ದಿಗಂತ

ಭಾನುವಾರ
3 ಡಿಸೆಂಬರ್ 2023

ವಿದ್ಯಾರ್ಥಿಗಳಿಗೆ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಎಂ. ಇಂದಿರಾ ಸಲಹೆ

ಸಮಾಜದಲ್ಲಿ ಲಿಂಗತಾರತಮ್ಯ ಕೊನೆಗಾಣಿಸಿ

ಮೈಸೂರು: ಬಡತನ, ಹಸಿವು, ಲಿಂಗತಾರತಮ್ಯ ಮತ್ತು ಅಸಮಾನತೆಯನ್ನು ಕೊನೆಗಾಣಿಸಬೇಕಿದೆ ಎಂದು ಮೈಸೂರು ವಿದ್ಯಾನಿಲಯ ಅರ್ಥಶಾಸ್ತ್ರ ಮತ್ತು ಸಹಕಾರ ಭಾಗದ ನಿವೃತ್ತ ಪ್ರಾಧ್ಯಾಪಕಿ ಪ್ರೊ. ಎಂ. ಇಂದಿರಾ ತಿಳಿಸಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಭಾಗವು ಐಕ್ಯೂಎಸಿ ಸಹಯೋಗದೊಂದಿಗೆ ಸುಸ್ಥಿರ ಅಭಿವೃದ್ಧಿಯ ದೃಷ್ಟಿಕೋನಗಳು ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು. 1920 ರಿಂದ 1990ರ ದಶಕದ ವರೆಗಿನ ಅಭಿವೃದ್ಧಿ ಮಾದರಿಯ ವಿವಿಧ ಬದಲಾವಣೆಯನ್ನು ಹಾಗೂ ಆರ್ಥಿಕ ಅಭಿವೃದ್ಧಿಗೆ 2030ರಲ್ಲಿ ಸಾಧಿಸಬೇಕಾದ ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.



ಗುಣಮಟ್ಟದ ಶಿಕ್ಷಣ

ದೀರ್ಘಕಾಲಿನ ಅವಕಾಶಗಳನ್ನು ಹಾಗೂ ಉತ್ತಮ ಜೀವನ ಮಟ್ಟವನ್ನು ವೃದ್ಧಿಸಲು ಗುಣಮಟ್ಟದ ಶಿಕ್ಷಣವನ್ನು ನೀಡುವುದರ ಮೂಲಕ ಶಾಂತಿಯುತವಾದ ಮತ್ತು ಒಳಗೊಳ್ಳುಕೆಯ ಸಮಾಜವನ್ನು ನಾವು ಸುಸ್ಥಿರ ಅಭಿವೃದ್ಧಿಯ ಮೂಲಕ ಉತ್ತೇಜಿಸಬೇಕು.

ಪ್ರಸ್ತುತ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಉತ್ತಮ ಸಾಮಾಜಿಕ ವಾತಾವರಣವನ್ನು ನಿರ್ಮಾಣ ಮಾಡುವುದು ಅವಶ್ಯಕವೆಂದು ಹೇಳಿದರು. ಆ ನಿಟ್ಟಿನಲ್ಲಿ ಒಳ್ಳೆಯ ಸಮಾಜ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ, ಪ್ರಾಪಂಚಿಕ ಉಳಿವು, ಪರಿಸರದ ಸಂರಕ್ಷಣೆ ಮತ್ತು ಆರ್ಥಿಕ ಅಭಿವೃದ್ಧಿಗಳ ಸಾಧನೆಗೆ ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯು ಒಂದು ಉತ್ತಮವಾದ ಚಿಕಿತ್ಸೆಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಸಿಇಓ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ಅರ್ಥಶಾಸ್ತ್ರ ಭಾಗದ ಮುಖ್ಯಸ್ಥೆ ವೆಂಕಟಲಕ್ಷ್ಮಿ ಎಂ.ಎನ್, ಡಾ. ಪಿ.ಜಿ. ಪುಷ್ಪರಾಣಿ ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 5.12.2023



ಡಾಟಾ ವಿಶ್ಯುಲೈಸೇಷನ್ ಕುರಿತು ಸಂವಾದ

ಮೈಸೂರು: ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಂಪ್ಯೂಟರ್ಸೈನ್ಸ್ ಮತ್ತು ಕಂಪ್ಯೂಟರ್ಅಪ್ಲಿಕೇಷನ್ ವಿಭಾಗ ಮತ್ತು ಐಕ್ಯೂ ಎಸಿ ಸಂಯುಕ್ತ ಆಶ್ರಯದಲ್ಲಿ ಡಾಟಾ ವಿಶ್ಯುಲೈ ಸೇಷನ್ ಅಂಡ್ ರಿಗ್ರೆಸಷನ್ ವಿತ್ ಆರ್‌ಪ್ರೋಗ್ರಾಮಿಂಗ್ ವಿಷಯ ಕುರಿತು ಸಂವಾದಾತ್ಮಕ ಅಧಿವೇಶನ ಏರ್ಪಡಿಸಲಾಗಿತ್ತು. ಸಹಾಯಕ ಪ್ರಾಧ್ಯಾಪಕಿ ಡಾ. ಲಾವಣ್ಯ, ಸಂಪನ್ಮೂಲ ವ್ಯಕ್ತಿಯಾಗಿ ಭಾಷೆ ಕುರಿತು ಕಿರು ಪರಿಚಯ ಮಾಡಿಕೊಟ್ಟರು. ಬಳಿಕ ಸುಮಾರು 100ಕ್ಕಿಂತ ಹೆಚ್ಚು ಬಿಸಿಎ ಅಂತಿಮ ವಿಭಾಗದ ವಿದ್ಯಾರ್ಥಿಗಳು ಪಾಲ್ಗೊಡಿದ್ದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ವಿಭಾಗದ ಸಹಾಯಕ ಪ್ರಾಧ್ಯಾಪಕಿ ಎಂ.ಯು. ಅನುಷಾ ಸ್ವಾಗತಿಸಿದರು. ಅರ್ಚನಾ ವಂದಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 12.12.2023

ಬದಲಾವಣೆ ತರಲು ಜವಾಬ್ದಾರಿ ಅರಿಯಿರಿ

ಪೂಜಾ ಭಗವತ್ ಮೆಮೋರಿಯಲ್ ಮಹಾಜನ ಎಜುಕೇಷನ್ ಸೆಂಟರ್‌ಸಮಾಜ ಕಾರ್ಯದ ಮುಖ್ಯಸ್ಥೆ ಡಾ.ವಿ. ಭಾವನಾ ಸಲಹೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಮಾಜದಲ್ಲಿ ಬದಲಾವಣೆ ತರಬೇಕಾದರೆ ಪ್ರತಿಯೊಬ್ಬ ನಾಗರಿಕರು ತಮ್ಮ ಜವಾಬ್ದಾರಿಯನ್ನು ಅರಿಯಬೇಕು ಎಂದು ಪೂಜಾ ಭಗವತ್ ಮೆಮೋರಿಯಲ್ ಮಹಾಜನ ಎಜುಕೇಷನ್ ಸೆಂಟರ್‌ಸಮಾಜ ಕಾರ್ಯದ ಮುಖ್ಯಸ್ಥೆ ಡಾ.ವಿ. ಭಾವನಾ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಸಬಲೀಕರಣದ ಬದಲಾವಣೆ ಹಾಗೂ ಉದ್ಯಮಶೀಲತೆ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜದ ಸಮಸ್ಯೆಗಳಿಗೆ ಹೇಗೆ ಬದಲಾವಣೆ ತರಬೇಕು, ಆದಕ್ಕೆ ಪರಿಹಾರವನ್ನು



ಸಬಲೀಕರಣದ ಬದಲಾವಣೆ ಹಾಗೂ ಉದ್ಯಮಶೀಲತೆ ಕುರಿತು ಸಂವಾದ ಕಾರ್ಯಕ್ರಮ ನಡೆಯಿತು.

ಹೇಗೆ ಕಂಡುಕೊಳ್ಳುವುದು, ವಿದ್ಯಾರ್ಥಿಗಳಲ್ಲಿ ಕಂಡು ಬರುವ ಸಮಸ್ಯೆಗಳಿಗೆ ಅವರಲ್ಲಿಯೇ ಇರುವ ಪರಿಹಾರ ಮತ್ತು ಸಮಸ್ಯೆಗೆ ಮೂಲ ಕಾರಣದ ಕುರಿತು ಹೇಳಿದರು.

ಸಮಾಜದಲ್ಲಿ ಮುಖ್ಯವಾಗಿ ನಿರುದ್ಯೋಗ ಅನ್ನುವುದುದೊಡ್ಡಸಮಸ್ಯೆಯಾಗಿದ್ದು,ಯುವಜನತೆ ಮೇಲೆ ಹೆಚ್ಚು ಪರಿಣಾಮ ಬೀರುತ್ತಿದೆ. ವೈಯಕ್ತಿಕ ಅನುಭವ, ಶಿಕ್ಷಣ, ಮಾಧ್ಯಮಗಳು ಮತ್ತು ಸಾಮಾಜಿಕ ತಾಣಗಳ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ಅರಿಯಬಹುದು ಎಂದರು.

ಸರ್ಕಾರೇತರ ಸ್ವಯಂ ಸಂಸ್ಥೆಗಳು ಸಮಾಜಕ್ಕೆ ಸೇವೆ ಸಲ್ಲಿಸುತ್ತಿರುವುದು ಒಂದೆಡೆಯಾದರೆ, ಸಮಾಜದಿಂದ ಆ ಸಂಸ್ಥೆಗಳ ಗುರುತಿಸುವಿಕೆ ಆಗುತ್ತಿದೆಯೇ ಎಂದು ಅವಲೋಕಿಸಬೇಕಾಗಿದೆ. ಸರ್ಕಾರೇತರ ಸಂಸ್ಥೆಗಳು ಕೇವಲ ಸನ್ಮಾನ, ಪದಕ ಮತ್ತು ಪ್ರಶಸ್ತಿಗಳಿಗೆ ಸೀಮಿತವಾಗಿರುವುದಿಲ್ಲ. ನಮ್ಮಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಅಭಿವೃದ್ಧಿ ಹೊಂದುವುದು ಸರ್ಕಾರೇತರ ಸಂಸ್ಥೆಗಳ ಗುರಿಯಾಗಬೇಕು. ಇಂತಹ ಕಾರ್ಯಕ್ರಮಗಳಿಂದ ನಮ್ಮ ದೃಷ್ಟಿಕೋನ ಬದಲಾಯಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಲ್ಲಿನ ನ್ಯೂನತೆಗಳನ್ನು ನೀಗಿಸಲು ಸರ್ಕಾರೇತರ ಸಂಸ್ಥೆಗಳು ಹುಟ್ಟಿಕೊಂಡವು. ಸಮಾಜದ ಅಭಿವೃದ್ಧಿಗೆ ಮತ್ತು ಸಮಾನತೆಗಾಗಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಲು ಹಾಗೂ ಸ್ವಾಭಿಮಾನವಾಗಿ ಬದುಕಲು ಸರ್ಕಾರೇತರ ಸಂಸ್ಥೆಗಳು ಸಹಾಯಕವಾಗಿವೆ ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಮಾಜಶಾಸ್ತ್ರವಿಭಾಗದ ಮುಖ್ಯಸ್ಥೆ ಬಿ.ಜಿ. ದೀಪು, ಇತಿಹಾಸ ವಿಭಾಗದ ನಂದೀಶ್ ಮೊದಲಾದವರು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 12 ಡಿಸೆಂಬರ್ 2023

ಸಮಾಜದ ಸಮಸ್ಯೆಗಳಿಗೆ ಸಂಘ-ಸಂಸ್ಥೆಗಳ ಕೊಡುಗೆ ಅಪಾರ

ಸಮಾಜ ಕಾರ್ಯದ ಮುಖ್ಯಸ್ಥೆ ಡಾ.ಭಾವನಾ



ಮೈಸೂರು, ಡಿ. 11– ಮೈಸೂರಿನ ಪೂಜಾ ಭಗವತ್ ಮೆಮೋರಿಯಲ್ ಮಹಾಜನ ಎಜುಕೇಷನ್ ಸೆಂಟರ್‌ನ ಎವಿಸಿ-1ರ ಸಭಾಂಗಣದಲ್ಲಿ ಎಸ್‌ಬಿ ಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ಸಹಭಾಗಿತ್ವದಲ್ಲಿ 'ಸಬಲೀಕರಣದ ಬದಲಾವಣೆ ಹಾಗೂ ಉದ್ಯಮಶೀಲತೆ' ವಿಷಯದ ಕುರಿತು ಸಂವಾದ ಕಾರ್ಯಕ್ರಮ ನಡೆಯಿತು.

ಸಂಪನ್ಮೂಲ ವ್ಯಕ್ತಿಯಾಗಿ, ಪೂಜಾ ಭಗವತ್ ಮೆಮೋರಿಯಲ್ ಮಹಾಜನ ಎಜುಕೇಷನ್ ಸೆಂಟರ್‌ನ ಸಮಾಜ ಕಾರ್ಯದ ಮುಖ್ಯಸ್ಥೆ ಮತ್ತು ಸಹಾಯಕ ಪ್ರಧ್ಯಾಪಕಿ ಡಾ.ಭಾವನಾ ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಸಮಸ್ಯೆಗಳಿಗೆ ಹೇಗೆ ಬದಲಾವಣೆ ತರಬೇಕು, ಅದಕ್ಕೆ ಪರಿಹಾರವನ್ನು ಹೇಗೆ ಕಂಡುಕೊಳ್ಳುವುದು ಎಂದು ತಿಳಿಸಿದರು. ವಿದ್ಯಾರ್ಥಿಗಳಲ್ಲಿ ಕಂಡುಬರುವ ಸಮಸ್ಯೆಗಳಿಗೆ ಅವರಲ್ಲಿಯೇ ಇರುವ ಪರಿಹಾರ ಮತ್ತು ಸಮಸ್ಯೆಗೆ ಮೂಲ ಕಾರಣದ ಕುರಿತು ಪ್ರಸ್ತಾಪಿಸಿದರು. ಸಮಾಜದಲ್ಲಿ ಮುಖ್ಯವಾಗಿ ನಿರುದ್ಯೋಗ ಅನ್ನುವುದು ದೊಡ್ಡ ಸಮಸ್ಯೆಯಾಗಿದ್ದು, ಯುವಜನತೆ ಮೇಲೆ ಹೆಚ್ಚು ಪರಿಣಾಮ ಬೀರುತ್ತಿದೆ. ಸಮಾಜದಲ್ಲಿ ಬದಲಾವಣೆ ತರಬೇಕಾದರೆ ಪ್ರತಿಯೊಬ್ಬ ನಾಗರಿಕರು ತಮ್ಮ ಜವಾಬ್ದಾರಿಯನ್ನು ಅರಿಯಬೇಕು ಎಂದು ತಿಳಿಸಿದರು.

ವೈಯಕ್ತಿಕ ಅನುಭವ, ಶಿಕ್ಷಣ, ಮಾಧ್ಯಮಗಳು ಮತ್ತು ಸಾಮಾಜಿಕ ತಾಣಗಳ ಮೂಲಕ ಸಮಾಜಿಕ ಸಮಸ್ಯೆಗಳನ್ನು ಅರಿಯಬಹುದು. ಆದರೆ, ಇದೆಲ್ಲಕ್ಕಿಂತ ಮುಖ್ಯವಾಗಿ ಡೀಡ್, ಒಡನಾಡಿ, ಚರಕದಂತಹ ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ), ಸಂಘಟನೆಗಳು ಸಾಮಾನ್ಯವಾಗಿ ಸರ್ಕಾರಿ ಅಧಿಕಾರದ ಹೊರಗೆ ಕಾರ್ಯನಿರ್ವಹಿಸುವ ಲಾಭರಹಿತ ಖಾಸಗಿ ಗುಂಪುಗಳಾಗಿರುವುದರಿಂದ ಪಕ್ಷಾತೀತವಾಗಿ ಕೆಲಸ ಮಾಡುತ್ತವೆ ಎಂದು ತಿಳಿಸಿದರು. ಜೊತೆಗೆ ಎನ್‌ಜಿಒಗಳ ರಚನೆ, ಸಂಘಟನೆಯ ದೃಷ್ಟಿ ಮತ್ತು ಅವುಗಳ ಧ್ಯೇಯಗಳ ಬಗ್ಗೆ ವಿವರಿಸಿದರು.

ಸರ್ಕಾರೇತರ ಸ್ವಯಂ ಸಂಸ್ಥೆಗಳು ಸಮಾಜಕ್ಕೆ ಸೇವೆ ಸಲ್ಲಿಸುತ್ತಿರುವುದು ಒಂದೆಡೆಯಾದರೆ, ಸಮಾಜದಿಂದ ಆ ಸಂಸ್ಥೆಗಳ ಗುರುತಿಸುವಿಕೆ ಆಗುತ್ತಿದೆಯೇ ಎಂದು ಅವಲೋಕಿಸಬೇಕಾಗಿದೆ. ಸರ್ಕಾರೇತರ ಸಂಸ್ಥೆಗಳು ಕೇವಲ ಸನ್ಮಾನ, ಪದಕ ಮತ್ತು ಪ್ರಶಸ್ತಿಗಳಿಗೆ ಸೀಮಿತವಾಗಿರುವುದಿಲ್ಲ. ನಮ್ಮಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಅಭಿವೃದ್ಧಿ ಹೊಂದುವುದು ಸರ್ಕಾರೇತರ ಸಂಸ್ಥೆಗಳ ಗುರಿಯಾಗಬೇಕು. ಇಂತಹ ಕಾರ್ಯಕ್ರಮಗಳಿಂದ ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ.ಬಿ.ಆರ್.ಜಯ ಕುಮಾರಿ ವಹಿಸಿದ್ದರು. ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಮತ್ತು ಸಹಾಯಕ ಪ್ರಾಧ್ಯಾಪಕಿಯಾದ ದೀಪು, ಇತಿಹಾಸ ವಿಭಾಗದ ನಂದೀಶ್, ಅಧ್ಯಾಪಕರು, ಅಧ್ಯಾಪಕೇತರರು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 3.12.2023

ಪುರಾಣ ಕಾಲದಿಂದಲೂ ಕನ್ನಡ ಪ್ರಚಲಿತದಲ್ಲಿದೆ

ಜಾನಪದ ತಜ್ಞ ಡಾ.ಪಿ.ಕೆ. ರಾಜಶೇಖರ ಅಭಿಮತ | ಮಹಾಜನ ಕಾಲೇಜಿನಲ್ಲಿ ಸುವರ್ಣ ಕರ್ನಾಟಕ ಸಂಭ್ರಮ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ಕನ್ನಡ ಭಾಷೆಗೆ 5 ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಕ್ರಿಸ್ತ ಪೂರ್ವದಿಂದಲೂ ಕನ್ನಡ ಭಾಷೆ ಬಳಕೆಯಲ್ಲಿದೆ. ರಾಮಾಯಣ, ಮಹಾಭಾರತದ ಕಾಲದಿಂದಲೂ ಕನ್ನಡ ಪ್ರಚಲಿತದಲ್ಲಿದೆ ಎಂದು ಜಾನಪದತಜ್ಞ ಡಾ.ಪಿ.ಕೆ. ರಾಜಶೇಖರ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿದ್ದ ಸುವರ್ಣ ಕರ್ನಾಟಕ ಸಂಭ್ರಮದಲ್ಲಿ ಮಾತನಾಡಿದ ಅವರು, ಶ್ರೀರಾಮನು ಸಹ ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದನು.

ಎಲ್ಲಮ್ಮ/ ರೇಣುಕಾದೇವಿಯ ಮಗ ಪರಶುರಾಮ, ಚಂದ್ರಹಾಸ, ರಾಮಾಯಣದಲ್ಲಿ ಬರುವ ವಾಲಿ, ಸುಗ್ರೀವ, ಆಂಜನೇಯ ಅವರು ಸಹ ಕನ್ನಡಿಗರು. ಮೆಹಂಜೋದಾರೋ ಕಡೆಯಿಂದಲೂ ಬಂದವರಾಗಿದ್ದಾರೆ. ಎಲ್ಲರೂ ಕನ್ನಡ ನಾಡಿನವರು ಎಂದು ಹೇಳಿದರು.



ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಸುವರ್ಣ ಕರ್ನಾಟಕ ಸಂಭ್ರಮ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಹಲವರಿದ್ದರು.

1915ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಸ್ಥಾಪನೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶಗಳಲ್ಲಿ ಕರ್ನಾಟಕದ ಏಕೀಕರಣವು ಪ್ರಧಾನವಾಗಿತ್ತು. ಕರ್ನಾಟಕ ಅಂದು ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ, ಕೊಡಗು, ಮೈಸೂರು ಪ್ರಾಂತ್ಯ, ಮದ್ರಾಸ್ ಕರ್ನಾಟಕಎಂದುವಿಭಾಗವಾಗಿತ್ತು.ಏಕೀಕರಣಕ್ಕಾಗಿ ನಾಡಿನ ಶ್ರೇಷ್ಠ ಸಾಹಿತಿಗಳು ಶ್ರಮಿಸಿದ್ದಾರೆ. ಈ ಸಂಬಂಧಹಲವಾರುಕನ್ನಡಸಾಹಿತ್ಯ ಸಮ್ಮೇಳನಗಳು ಹಾಗೂ ಸಮಿತಿ ಸಭೆಗಳು ನಡೆದು, ಅಲ್ಲಿ ಮಹಿಳೆಯರು ಸಹ ಕರ್ನಾಟಕ ಏಕೀಕರಣಕ್ಕಾಗಿ ಒತ್ತಾಯಿಸಿದ್ದಾರೆ. ಅದರ ಫಲವಾಗಿ ನ.1, 1956ರಲ್ಲಿ ಏಕೀಕರಣವಾಗಿ ಮೈಸೂರು ರಾಜ್ಯವೆಂದು ಹೆಸರಾಯಿತು ಎಂದು ಅವರು ವಿವರಿಸಿದರು.

ಹಲವಾರು ಚಳವಳಿ ಮತ್ತು ಹೋರಾಟಗಳ ನಂತರ ಡಿ. ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನ.1, 1973ರಲ್ಲಿಕರ್ನಾಟಕ ಎಂದು ಅಭಿದಾನವಾಯಿತು. ಈ ನೆಲದಲ್ಲಿ ಜನಿಸಿದ ನಾವುಗಳೇ ಧನ್ಯರು. ಆದ್ದರಿಂದ ನಮ್ಮ ಸ್ಥಳೀಯ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡೋಣ ಎಂದು ಅವರು ಕರೆ ನೀಡಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಸಹಾಯಕ ಪ್ರಾಧ್ಯಾಪಕಿ ಡಾ. ವಿನೋದಮ್ಮ, ಪರೀಕ್ಷಾ ನಿಯಂತ್ರಣಾಧಿಕಾರಿ ಶೃತಿ ಪೂಣಚ್ಚ, ನ್ಯಾಕ್ ಸಂಯೋಜಕಿ ಡಿ. ಗೀತಾ, ಪ್ರತಿಭಾ ವೇದಿಕೆ ಸಂಚಾಲಕರಾದ ಎಂ. ನಾಗೇಶ, ಸಿ.ಎಂ. ಕಿರಣ್ ಕುಮಾರ್, ಜೆ. ಮನೋಜ್ ಕುಮಾರ್ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಭಾನುವಾರ 3 ಡಿಸೆಂಬರ್ 2023

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 50 ಸುವರ್ಣ ಕರ್ನಾಟಕ ಸಂಭ್ರಮ

ಮೈಸೂರು, ಡಿ. 2–ಸುವರ್ಣ ಕರ್ನಾಟಕ ಸಂಭ್ರಮ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಆಚರಿಸಲಾಯಿತು.

ಈ ವೇಳೆ ಜಾನಪದ ತಜ್ಞ ಡಾ.ಪಿ.ಕೆ.ರಾಜಶೇಖರ್ ಮಾತನಾಡಿ, ಕನ್ನಡ ಭಾಷೆಗೆ 5000ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ರಾಮಾಯಣ, ಮಹಾಭಾರತದ ಕಾಲದಿಂದಲೂ ಕನ್ನಡ ಪ್ರಚಲಿತದಲ್ಲಿದೆ. ಶ್ರೀರಾಮನು ಸಹ ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದನು. ಎಲ್ಲಮ್ಮ/ರೇಣುಕಾದೇವಿಯ ಮಗ ಪರಶುರಾಮ, ಚಂದ್ರಹಾಸ, ರಾಮಾಯಣದಲ್ಲಿ ಬರುವ ವಾಲಿ, ಸುಗ್ರೀವ, ಆಂಜನೇಯ ಅವರುಗಳು ಸಹ ಕನ್ನಡಿಗರು. ಇವರೆಲ್ಲಾ ಮೆಹಂಜೋದಾರೋ ಕಡೆಯಿಂದ ಬಂದವರಾಗಿದ್ದಾರೆ.

1915ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಾಪನೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶಗಳಲ್ಲಿ ಕರ್ನಾಟಕದ ಏಕೀಕರಣವು ಪ್ರಧಾನವಾಗಿತ್ತು. ಕರ್ನಾಟಕ ಅಂದು ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ, ಕೊಡಗು, ಮೈಸೂರು ಪ್ರಾಂತ್ಯ, ಮದ್ರಾಸ್ ಕರ್ನಾಟಕ ಎಂದು ವಿಭಾಗವಾಗಿತ್ತು. ಏಕೀಕರಣಕ್ಕಾಗಿ ಅದಕ್ಕಾಗಿ ನಾಡಿನ ಶ್ರೇಷ್ಠ ಸಾಹಿತಿಗಳಾದ ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯ, ಫಗು ಹಳಕಟ್ಟಿ, ಹೆಚ್.ವಿ. ನಂಜುಂಡಯ್ಯ, ಬಿ.ಎಂ.ಶ್ರೀ, ಡಿವಿಜಿ, ಬಿ.ಕೃಷ್ಣಪ್ಪ, ಕುವೆಂಪು, ಬೇಂದ್ರೆ, ಮಾಸ್ತಿ ಮೊದಲಾದವರು ಶ್ರಮಿಸಿದ್ದಾರೆ. ಈ ಸಂಬಂಧ ಹಲವಾರು ಕನ್ನಡ ಸಾಹಿತ್ಯ ಸಮ್ಮೇಳನಗಳು ಹಾಗೂ ಸಮಿತಿ ಸಭೆಗಳು ನಡೆದು ಅಲ್ಲಿ ಮಹಿಳೆಯರು ಸಹ ಕರ್ನಾಟಕ ಏಕೀಕರಣಕ್ಕೆ ಹೋರಾಟ ಮಾಡಿದ್ದಾರೆ. ಅದರ ಫಲವಾಗಿ ನವೆಂಬರ್ 1, 1956ರಲ್ಲಿ ಏಕೀಕರಣವಾಗಿ 'ಮೈಸೂರು ರಾಜ್ಯ'ವೆಂದು ಹೆಸರಾಯಿತು. ಈ ನೆಲದಲ್ಲಿ ಜನಿಸಿದ ನಾವುಗಳೇ ಧನ್ಯರು. ಆದ್ದರಿಂದ ನಮ್ಮ ಸ್ಥಳೀಯ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡೋಣ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ನಾಡು–ನುಡಿ, ಆಹಾರ, ವಾಸ್ತುಶಿಲ್ಪ, ಉಡುಗೆ–ತೊಡುಗೆ, ಕನ್ನಡ ಭಾಷೆಯ ವೈಶಿಷ್ಟತೆಯನ್ನು ಹೊಗಳಿದರು. ಕನ್ನಡದ ನೆಲ, ಜಲವನ್ನು ಉಳಿಸಿ, ಕನ್ನಡವನ್ನು ಪ್ರೀತಿಸಿ, ಅನ್ಯ ಭಾಷೆಯ ಬಂಧುಗಳಿಗೂ ಕನ್ನಡವನ್ನು ಕಲಿಸಿ, ಕನ್ನಡ ಮಾತನಾಡುವುದನ್ನು ಬೆಳೆಸಿ, ಗೌರವಿಸುವ, ಮತ್ತು ಪ್ರೀತಿಸುವ ಮನೋಧರ್ಮವನ್ನು ನಾಡಿನಾದ್ಯಂತ ಪಸರಿಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕನ್ನಡವನ್ನು ನಾವು ಬಳಸಿ, ಬೆಳೆಸಿ ಉಳಿಸಿಕೊಂಡು ಹೋಗಬೇಕು ಎಂದು ತಿಳಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಶೈಕ್ಷಣಿಕ ಡೀನ್, ಡಾ.ಶ್ರೀಧರ ಹೆಚ್, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ವಿನೋದಮ್ಮ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರು ಹಾಗೂ ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರೀಮತಿ ಶೃತಿಪೂಣಚ್ಚ, ಇಂಗ್ಲಿಷ್ ವಿಭಾಗದ ಮುಖ್ಯಸ್ಥರು ಹಾಗೂ ನ್ಯಾಕ್ ಸಂಯೋಜಕಿ ಶ್ರೀಮತಿ ಗೀತಾ ಡಿ, ಕನ್ನಡ ಸಹಾಯಕ ಪ್ರಾಧ್ಯಾಪಕ ಹಾಗೂ ಪ್ರತಿಭಾವೇದಿಕ ಸಂಚಾಲಕ ನಾಗೇಶ ಎಂ, ಸಿ.ಎಂ. ಕಿರಣ್‌ಕುಮಾರ್, ಮನೋಜ್‌ಕುಮಾರ್ ಜೆ, ಎಲ್ಲಾ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಅಧ್ಯಾಪಕೇತರ ವರ್ಗದವರು ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 10.12.2023

ಮಹಾಜನ ಕಾಲೇಜಿನಲ್ಲಿ ಭಾರತೀಯ ಭಾಷಾ ಉತ್ಸವ

• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತೀಯ ಭಾಷಾ ಸಂಸ್ಥಾನ ಮತ್ತು ರಾಷ್ಟ್ರೀಯ ಅನುವಾದ ಮಿಷನ್ ನ ಸಹಯೋಗದೊಂದಿಗೆ ಭಾರತೀಯ ಭಾಷಾ ಉತ್ಸವ- 2023 ಹಮ್ಮಿಕೊಳ್ಳಲಾಗಿತ್ತು.



ಯುಜಿಸಿ ಕೇರ್‌ಜರ್ನಲ್ ಸಂಪಾದಕರಾದ ಡಾ. ತಾರಿಕ್ ಖಾನ್ ಮಾತನಾಡಿ, ಸೆ.28 ರಿಂದ ಡಿ.11 ರವರೆಗೆ 75 ದಿನಗಳ ಕಾಲ ನಡೆಯುವ ಭಾರತೀಯ ಭಾಷಾ ಉತ್ಸವದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ವರ್ಚುವಲ್ ಮೋಡ್ ನಲ್ಲಿ ಮುಂಬೈ ಮೂಲದ ಲೇಖಕಿ ವೈಶಾಲಿ ಶ್ಯಾಫ್ ಮಾತನಾಡಿ, ಕೆಲವು ಭಾಷೆಗಳನ್ನು ಬಳಸದೆ ಇರುವುದರಿಂದ ಭಾಷೆಗಳು ಸಾವನ್ನಪ್ಪುತ್ತಿವೆ. ತಂತ್ರಜ್ಞಾನ ಸರಿಯಾಗಿ ಬಳಸಿದಾಗ ಅಳಿವಿನಂಚಿನಲ್ಲಿರುವ ಭಾಷೆ ಉಳಿಸಲು ಸಹಾಯ ಮಾಡುತ್ತದೆ ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ. ಆರ್. ಜಯಕುಮಾರಿ, ಸಹಾಯಕ ಪ್ರಾಧ್ಯಾಪಕಿ ಡಿ. ಗೀತಾ, ಪರಮೇಶ್ವರ ಹೆಗಡೆ, ಡಾ. ಶ್ರೀನಿವಾಸ್, ಎಂ. ನಾಗೇಶ, ಕಿರಣ ಕುಮಾರ್ ಇದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಭಾಷಾ ಸಂಸ್ಥಾನದ ಸಂಪನ್ಮೂಲ ವ್ಯಕ್ತಿ ಜ್ಞಾನಮೂರ್ತಿ ವಂದಿಸಿದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಭಾನುವಾರ 10 ಡಿಸೆಂಬರ್ 2023

ಮಹಾಜನ ಕಾಲೇಜಿನಲ್ಲಿ 'ಭಾರತೀಯ ಭಾಷಾ ಉತ್ಸವ'



ಮೈಸೂರು, ಡಿ. 9– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತೀಯ ಭಾಷಾ ಸಂಸ್ಥಾನ ಮತ್ತು ರಾಷ್ಟ್ರೀಯ ಅನುವಾದ ಮಿಷನ್‌ನ ಸಹಯೋಗದೊಂದಿಗೆ ಭಾರತೀಯ ಭಾಷಾ ಉತ್ಸವ ಹಮ್ಮಿಕೊಳ್ಳಲಾಗಿತ್ತು.

ಸಭೆಯನ್ನು ಉದ್ದೇಶಿಸಿ ಯುಜಿಸಿ ಕೇರ್ ಜರ್ನಲ್ Translation today ಸಂಪಾದಕ ಡಾ. ತಾರಿಕ್ ಖಾನ್ ಮಾತನಾಡಿ, ಸೆಪ್ಟೆಂಬರ್ 28 ರಿಂದ ಡಿಸೆಂಬರ್ 11 ರವರೆಗೆ 75 ದಿನಗಳ ಕಾಲ ನಡೆಯುವ 'ಭಾರತೀಯ ಭಾಷಾ ಉತ್ಸವ'ದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ವರ್ಚುವಲ್ ಮೋಡ್‌ನಲ್ಲಿ ಸಭೆಯನ್ನು ಕುರಿತು ಮಾತನಾಡಿದ, ಮುಂಬೈ ಮೂಲದ ಲೇಖಕಿ ಮತ್ತು ಅಂಕಣಕಾರರಾದ ಶ್ರೀಮತಿ ವೈಶಾಲಿ ಶ್ರಾಫ್ ಅವರು ಭಾಷೆ, ಅದರ ಹುಟ್ಟು, ಕಲಿಕೆಯ ಘಟಕ, ಕ್ರಾಂತಿ ಮತ್ತು ಸಾವಿನ ಬಗ್ಗೆ ಮಾತನಾಡಿ, ಕೆಲವು ಭಾಷೆಗಳನ್ನು ಬಳಸದೆ ಇರುವುದರಿಂದ ಭಾಷೆಗಳು ಸಾವನ್ನಪ್ಪುತ್ತಿವೆ ಎಂದು ಹೇಳಿ ಅವರು ರಚಿಸಿರುವ 'ತಾತುಂಗ್ ತಾತುಂಗ್' ಕೃತಿಯನ್ನು ಕುರಿತು ವಿವರಿಸುತ್ತಾ, ತಂತ್ರಜ್ಞಾನವನ್ನು ಸರಿಯಾಗಿ ಬಳಸಿದಾಗ, ಅಳಿವಿನಂಚಿನಲ್ಲಿರುವ ಭಾಷೆಯನ್ನು ಉಳಿಸಲು ಸಹಾಯ ಮಾಡುತ್ತದೆ ಎಂದರು. ಭಾರತೀಯ ಭಾಷೆಯು ಕೀಬೋರ್ಡ್‌ಗಳನ್ನು ಬಳಸುವುದು ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಭಾರತೀಯ ಭಾಷೆಗಳನ್ನು ಉಳಿಸಲು ಉತ್ತಮ ಮಾರ್ಗವಾಗಿವೆ ಎಂದು ಮಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ನಿಗದಿತ ಪಠ್ಯಕ್ರಮವನ್ನು ಓದಿದರೆ ಸಾಲದು, ಪಠ್ಯದ ಜೊತೆಗೆ ಸಮಾಜದಲ್ಲಿ ಅತ್ಯುನ್ನತ ಸಾಧನೆ ಮಾಡಿರುವ ವ್ಯಕ್ತಿಗಳ ಜೀವನ ಚರಿತ್ರೆಗಳನ್ನು, ಕಥೆ–ಕಾದಂಬರಿಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು. ವಿದ್ಯಾರ್ಥಿಗಳು ಪ್ರತಿ ಸೆಮಿಸ್ಟರ್‌ಗೆ ಕನಿಷ್ಠ ಒಂದು ಪುಸ್ತಕವನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಬೇರೆ ಬೇರೆ ಭಾಷೆಗಳನ್ನು ಕಲಿತು ನೀವು ಜ್ಞಾನವಂತರಾಗಬೇಕು. ಆದರೆ ಮಾತೃಭಾಷೆಯನ್ನು ಮಾತ್ರ ಯಾವ ಕಾರಣಕ್ಕೂ ಮರೆಯಬಾರದೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಅವರು, ಆಧುನಿಕ ಕಾಲದಲ್ಲಿ ತಂತ್ರಜ್ಞಾನವನ್ನು ಬಳಸಿ ಭಾಷೆಯನ್ನು ಕಲಿಯಬೇಕಾಗಿದೆ. ಆ ನಿಟ್ಟಿನಲ್ಲಿ ತಂತ್ರಜ್ಞಾನವನ್ನು ಬಳಸುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಭಾರತೀಯ ಭಾಷೆಗಳು, ಸಂಪ್ರದಾಯಗಳು ಮತ್ತು ಸಂಸ್ಕೃತಿಯನ್ನು ಕುರಿತು ರಸಪ್ರಶ್ನೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಭಾಷಾ ಸಂಸ್ಥಾನದ ಸಂಪನ್ಮೂಲ ವ್ಯಕ್ತಿ ಜ್ಞಾನಮೂರ್ತಿ ವಂದಿಸಿದರು. ಸಮಾರಂಭದಲ್ಲಿ ಸಹಾಯಕ ಪ್ರಾಧ್ಯಾಪಕರು ಹಾಗೂ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಗೀತಾ ಡಿ, ಹಿಂದಿ ವಿಭಾಗದ ಮುಖ್ಯಸ್ಥ ಪರಮೇಶ್ವರ ಹೆಗಡೆ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ್, ಕನ್ನಡ ಸಹಾಯಕ ಪ್ರಾಧ್ಯಾಪಕರಾದ ನಾಗೇಶ ಎಂ, ಕಿರಣಕುಮಾರ್ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

MFGE In the Eyes of the Press.....

ಸಂಜೀವಿನಿ
ದಿನ ಪತ್ರಿಕೆ

ಭಾನುವಾರ, 28 ಜನವರಿ 2024



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ನಿವೃತ್ತ ಎಸಿಪಿ ಜಿ.ಎನ್.ಮೋಹನ್ ಧ್ವಜಾರೋಹಣ ನೆರವೇರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್.ರಮೇಶ್, ಎನ್.ಸಿ.ಸಿ. ಕಂಪೆನಿ ಅಧಿಕಾರಿ ಮೇಜರ್ ಬಿ.ಆರ್.ನಿಖಿಲ್, ಡಾ.ಎಂ.ಆರ್.ಇಂದ್ರಾಣಿ ಇತರರು ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 28.01.2024

ದೇಶದ ಐಕ್ಯತೆ, ಸಾರ್ವಭೌಮತ್ವ ಎತ್ತಿಹಿಡಿಯಿರಿ

ಯುವ ಜನಾಂಗಕ್ಕೆ ನಿವೃತ್ತ ಎಸಿಪಿ ಜೆ.ಎನ್. ಮೋಹನ್ ಸಲಹೆ | ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗಣರಾಜ್ಯೋತ್ಸವ

• ಕನ್ನಡಪ್ರಭ ವಾರ್ತೆ ಮೈಸೂರು

ಯುವ ಜನಾಂಗ ದೇಶದ ಐಕ್ಯತೆ ಹಾಗೂ ಸಾರ್ವಭೌಮತ್ವವನ್ನು ಎತ್ತಿಹಿಡಿಯಬೇಕಾಗಿದೆ ಎಂದು ನಿವೃತ್ತ ಎಸಿಪಿ ಜೆ.ಎನ್. ಮೋಹನ್ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 75ನೇ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸ್ಮರಿಸಬೇಕು. ಭಾರತ ದೇಶದ ಸುಭದ್ರತೆಗೆ ಸಂವಿಧಾನವೇ ಕಾರಣ. ನಮ್ಮ ಸಂವಿಧಾನ ಎಲ್ಲಾ ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ನೀಡಿದೆ. ಜೊತೆಗೆ ಅದರಂತೆ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದೆ ಎಂದರು.



ದೇಶದ ಸ್ವಾತಂತ್ರ್ಯಕ್ಕಾಗಿ ಸಾಕಷ್ಟು ಜನ ಹೋರಾಡಿ ತಮ್ಮ ಪ್ರಾಣತ್ಯಾಗ ಮಾಡಿದ್ದಾರೆ. ದೇಶ ಎಷ್ಟು ತ್ವರಿತಗತಿಯಲ್ಲಿ ಬೆಳೆಯುತ್ತಿದೆಯೋ ಅಷ್ಟೇ ಅನ್ಯಾಯದ, ಅಕ್ರಮಗಳೂ ನಡೆಯುತ್ತಿವೆ. ಈ ಅವ್ಯವಸ್ಥೆಯನ್ನು ಸರಿಪಡಿಸಬೇಕಾದವರು ವಿದ್ಯಾರ್ಥಿಗಳೇ. ವಿದ್ಯಾರ್ಥಿಗಳೇ ದೇಶದ ಆಸ್ತಿ ಎಂದು ಅವರು ಹೇಳಿದರು.

ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಸಾಕಷ್ಟು ಅವ್ಯವಸ್ಥೆಯ ಸಮಾಜವನ್ನು ಕಾಣುವ ಸಾಧ್ಯತೆ ಇದೆ. ಜೊತೆಗೆ ಸಾಕಷ್ಟು ಸಮಸ್ಯೆ ಮತ್ತು ಸವಾಲುಗಳಿವೆ. ಹೀಗಾಗಿ, ಶ್ರದ್ಧೆಯ ಓದು ನಿಮ್ಮದಾಗಬೇಕು. ವಿದ್ಯಾರ್ಥಿಗಳು ಈಗಿನಿಂದಲೇ ಸಮಯಪ್ರಜ್ಞೆ, ಆರ್ಪಣಾ ಮನೋಭಾವ, ಪ್ರಾಮಾಣಿಕತೆ, ಬದ್ಧತೆ, ಕರ್ತವ್ಯ ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕು. ಸಣ್ಣ ಕೆಲಸವಾದರೂ ಶ್ರದ್ಧೆಯಿಂದ ಮಾಡಬೇಕು ಎಂದು ಅವರು ಸಲಹೆ ನೀಡಿದರು.

ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಯಾವುದೇ ಅನ್ಯಾಯವಾದಾಗ ಅದನ್ನು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ವಾಗ್ವಾದ ನಡೆದಾಗ ಸಂಘರ್ಷ ತಡೆಯಲು ಮೌನವಾಗಿರುವುದು ಒಳಿತು. ಆದರೆ, ಕೆಲವು ಸಂದರ್ಭಗಳಲ್ಲಿ ಮೌನ ಸಹ ಅನ್ಯಾಯಕ್ಕೆ ಕಾರಣವಾಗುತ್ತದೆ. ಸಮಾಜಕ್ಕೆ ಅನ್ಯಾಯವಾಗುತ್ತಿದ್ದರೂ ಮೌನವಾಗಿರುವುದು ಸರಿಯಲ್ಲ ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಎನ್.ಸಿ.ಸಿ. ಅಧಿಕಾರಿಗಳಾದ ಬಿ.ಆರ್. ನಿಖಿಲ್, ಡಾ.ಎಂ.ಆರ್. ಇಂದ್ರಾಣಿ, ಫ್ಲೈಯಿಂಗ್ ಆಫೀಸರ್ ಡಾ.ಪಿ.ಜಿ. ಪುಷ್ಪರಾಣಿ, ಅಂಗ ಸಂಸ್ಥೆಗಳ ಮುಖ್ಯಸ್ಥರು ಇದ್ದರು. ಡಾ.ಎಚ್.ಆರ್. ತಿಮ್ಮೇಗೌಡ ವಂದಿಸಿದರು. ಎನ್. ಸುನೀಲ್ ನಿರೂಪಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 31.01.2024

ಮಹಾಜನ ಕಾಲೇಜಿನಲ್ಲಿ ಸರ್ವೋದಯ ದಿನಾಚರಣೆ



ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸರ್ವೋದಯ ದಿನವನ್ನು ಮಂಗಳವಾರ ಆಚರಿಸಲಾಯಿತು. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರನ್ನು ನೆನೆಯುತ್ತಾ, ಮೌನಾಚರಣೆಯ ಮೂಲಕ ಗೌರವ ಸಲ್ಲಿಸಲಾಯಿತು.

ಈ ವೇಳೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಮಹಾತ್ಮ ಗಾಂಧೀಜಿಯವರು ಜೀವನದುದ್ದಕ್ಕೂ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಸಮಾನತೆ, ಶಿಕ್ಷಣ, ಅಸ್ಪೃಶ್ಯತೆ ನಿವಾರಣೆಗಾಗಿ ಶ್ರಮಪಟ್ಟಿದ್ದಾರೆ. ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟು ತನು, ಮನಗಳನ್ನು ತ್ಯಾಗ ಮಾಡಿದರು ಎಂದು ಸ್ಮರಿಸಿದರು.

ಗಾಂಧೀಜಿಯವರ ನೇತೃತ್ವದಲ್ಲಿ ಸಾವಿರಾರು ಜನ ತಮ್ಮ ದೇಶದ ಸ್ವಾತಂತ್ರ್ಯ ಹಾಗೂ ಸ್ವರಾಜ್ಯಕ್ಕಾಗಿ ಹೋರಾಡಿ ಹುತಾತ್ಮರಾದರು. ಗಾಂಧೀಜಿ ಅವರ ಚಳವಳಿಗಳು ರಾಷ್ಟ್ರಾದ್ಯಂತ ಪಸರಿಸಿ, ಅಸಂಖ್ಯಾತ ರಾಷ್ಟ್ರ ಪ್ರೇಮಿಗಳನ್ನು ಒಗ್ಗೂಡಿಸಿತು. ಧರ್ಮ ಸಹಿಷ್ಣುತೆ, ಶಾಂತಿ, ಅಹಿಂಸೆ, ಸ್ವರಾಜ್ಯ, ಸತ್ಯಾಗ್ರಹ ಮೂಲಮಂತ್ರಗಳೊಂದಿಗೆ ಕೊನೆವರೆಗೂ ಹೋರಾಡಿದರು ಎಂದರು. ಕಾಲೇಜಿನ ಅಧ್ಯಾಪಕರು ಇದ್ದರು.

MFGE In the Eyes of the Press.....

ಆರೋಗ್ಯ
ದಿನ ಪತ್ರಿಕೆ

ಶನಿವಾರ, 13 ಜನವರಿ 2024

'ಯುವಶಕ್ತಿಯ ಮಹತ್ವ ಸಾರಿದ್ದ ಸ್ವಾಮಿ ವಿವೇಕಾನಂದರು'

ರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ಡಾ.ಬಿ.ಆರ್.ಜಯಕುಮಾರಿ



ಮೈಸೂರು: ಸ್ವಾಮಿ ವಿವೇಕಾನಂದರ ಉತ್ಸಾಹದ ಶಕ್ತಿ ಎಂದರೆ ಯುವಕರು. ಯುವಶಕ್ತಿಯ ಮಹತ್ವವನ್ನು ಭಾರತವಲ್ಲದೆ, ಇಡೀ ವಿಶ್ವಕ್ಕೆ ಸಾರಿದವರು ಸ್ವಾಮಿ ವಿವೇಕಾನಂದರು ಎಂದು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ತಿಳಿಸಿದರು.

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎನ್ ಎಸ್ಎಸ್ ಘಟಕದ ವತಿಯಿಂದ ಶುಕ್ರವಾರ ನಡೆದ ರಾಷ್ಟ್ರೀಯ ಯುವ ದಿನ, ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರು, ಪ್ರತಿಯೊಬ್ಬ ಮನುಷ್ಯನನ್ನೂ ಯಾವುದು ಪರಿಪೂರ್ಣತೆಯ ಹಾಗೂ ಮಾನವೀಯತೆಯ ಕಡೆಗೆ ಕರೆದೊಯ್ಯುತ್ತದೆಯೋ ಅದು ನಿಜವಾದ ಶಿಕ್ಷಣ ಎಂದಿದ್ದರು ಎಂದು ಸ್ಮರಿಸಿದರು.

ಎನ್ ಎಸ್ ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ.ಜಿ.ದೊಡ್ಡರಸಯ್ಯ, ಡಾ.ಸಿ.ಎಸ್.ಸಿದ್ದರಾಜು, ರಾಷ್ಟ್ರೀಯ ಸೇವಾ ಯೋಜನಾ ಘಟಕಗಳ ಸ್ವಯಂಸೇವಕ, ಸೇವಕಿಯರು, ಅಧ್ಯಾಪಕರು, ಅಧ್ಯಾಪಕೇತರ ವರ್ಗದವರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

13.01.2024

ಮಹಾಜನ ಕಾಲೇಜಿನಲ್ಲಿ ವಿವೇಕಾನಂದರ ಜಯಂತಿ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಜ. 12 ರಂದು ರಾಷ್ಟ್ರೀಯ ಯುವ ದಿನದ ಅಂಗವಾಗಿ ಸ್ವಾಮಿ ವಿವೇಕಾನಂದರ ಜಯಂತಿ ಆಚರಿಸಲಾಯಿತು.

ಈ ವೇಳೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ವಿವೇಕಾನಂದರ ಉತ್ಸಾಹದ ಶಕ್ತಿ ಎಂದರೆ ಯುವಕರು, ಅವರ ದೊಡ್ಡ ಕನಸು ಯುವ ಶಕ್ತಿ. ಯುವಶಕ್ತಿಯ ಮಹತ್ವವನ್ನು ಭಾರತವಲ್ಲದೇ ಇಡೀ ವಿಶ್ವಕ್ಕೆ ಸಾರಿದವರು ಸ್ವಾಮಿ ವಿವೇಕಾನಂದರು. ವಿವೇಕಾನಂದರು ಪ್ರತಿಯೊಬ್ಬ ಮನುಷ್ಯನನ್ನು ಪರಿಪೂರ್ಣತೆ ಹಾಗೂ ಮಾನವೀಯತೆಯ ಕಡೆಗೆ ಕರೆದೊಯ್ಯುತ್ತದೆಯೋ ಅದು ನಿಜವಾದ ಶಿಕ್ಷಣ ಎಂದರು.

ಅಂತಹ ಶಿಕ್ಷಣವನ್ನು ಪಡೆದ ಯುವಕರು ತಮ್ಮ ಬಗ್ಗೆ ಮೊದಲು ನಂಬಿಕೆ ಇಡಬೇಕು. ನಮ್ಮ ಆಲೋಚನೆಗಳು ಸ್ಪಷ್ಟವಾಗಿರಬೇಕು.

ಪ್ರತಿಯೊಬ್ಬವ್ಯಕ್ತಿಯು ತಾನು ಚಿಂತಿಸುವ ಚಿಂತನೆಗಳ ಮೇಲೆ ಸಮಾಜ ಮತ್ತು ರಾಷ್ಟ್ರ ನಿಂತಿದೆ. ಬದುಕು ಮತ್ತು ಜೀವನ ಅವರ ಚಿಂತಿಸುವ ಚಿಂತನೆಗಳ ಮೇಲೆ ನಿರ್ಧಾರವಾಗುತ್ತದೆ. ಹಾಗಾಗಿ ನಮ್ಮ ಆಲೋಚನೆಗಳು ಸ್ಪಷ್ಟವಾಗಿದ್ದಾಗ ಮಾತ್ರ ಗುರಿಯು ಸ್ಪಷ್ಟವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಜಿ. ದೊಡ್ಡರಸಯ್ಯ ಸ್ವಾಗತಿಸಿದರು. ಡಾ.ಸಿ.ಎಸ್. ಸಿದ್ದರಾಜು ವಂದಿಸಿದರು. ಘಟಕಗಳ ಸ್ವಯಂ ಸೇವಕ, ಸೇವಕಿಯರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 29.02.2024

ಅಂತರ ಕಾಲೇಜು ಸಾಹಿತ್ಯಕ, ಸಾಂಸ್ಕೃತಿಕ ಸ್ಪರ್ಧೆ: ಮಹಾಜನ ಕಾಲೇಜಿಗೆ ಪ್ರಶಸ್ತಿ



• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರುವಿಶ್ವವಿದ್ಯಾನಿಲಯಆಯೋಜಿಸಿದ್ದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರತಿಭಾ ವೇದಿಕೆಯ ವಿದ್ಯಾರ್ಥಿಗಳು ಭಾಗವಹಿಸಿ ಸಮೂಹ ಗಾಯನದಲ್ಲಿ ದ್ವಿತೀಯ ಸ್ಥಾನ, ಪಾಶ್ಚಾತ್ಯ ಸಂಗೀತ ತೃತೀಯ ಸ್ಥಾನ, ಭಾಷಣ ಸ್ಪರ್ಧೆಯಲ್ಲಿ ತೃತೀಯ ಸ್ಥಾನ, ಶಾಸ್ತ್ರೀಯ ನೃತ್ಯದಲ್ಲಿ ತೃತೀಯ ಸ್ಥಾನ ಗಳಿಸಿರುತ್ತಾರೆ.

ವಿಜೇತ ವಿದ್ಯಾರ್ಥಿಗಳಾದ ಪಿ.ಬಿ. ಅಕ್ಷೋಭ್ಯ ಭಟ್, ಶುಭಾಷಿತ, ಹರ್ಷಿತಾ, ಸಾಗರಿಪೊನ್ನಮ್ಮ, ನಿಹಾರಿಕ ಹೆಗ್ಡೆ, ಕೆ.ಎಂ. ಹಂಸ, ಮೋಹನ್ರಾಜ್ ಅವರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಪ್ರತಿಭಾ ವೇದಿಕೆ ವತಿಯಿಂದ ಅಭಿನಂದಿಸಲಾಯಿತು.

ಪ್ರತಿಭಾ ವೇದಿಕೆಯ ಸಹ ಸಂಚಾಲಕಿ ಎನ್.ಸಿ. ಹಂಸವೇಣಿ, ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ, ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ ಮತ್ತು ಪ್ರತಿಭಾ ವೇದಿಕೆ ಸಂಚಾಲಕ ಎಂ.ನಾಗೇಶ ಇತರರು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 29 ಫೆಬ್ರವರಿ 2024



ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ, ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರತಿಭಾ ವೇದಿಕೆಯ ವಿದ್ಯಾರ್ಥಿಗಳು ಭಾಗವಹಿಸಿ ಸಮೂಹ ಗಾಯನದಲ್ಲಿ ದ್ವಿತೀಯ ಸ್ಥಾನ, ಪಾಶ್ಚಾತ್ಯ ಸಂಗೀತ ತೃತೀಯ ಸ್ಥಾನ, ಭಾಷಣ ಸ್ಪರ್ಧೆಯಲ್ಲಿ ತೃತೀಯ ಸ್ಥಾನ, ಶಾಸ್ತ್ರೀಯ ನೃತ್ಯದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ಪ್ರತಿಭಾ ವೇದಿಕೆಯ ಸಹ ಸಂಚಾಲಕರಾದ ಶ್ರೀಮತಿ ಹಂಸವೇಣಿ ಎನ್.ಸಿ., ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮತ್ತು ಪ್ರತಿಭಾ ವೇದಿಕೆ ಸಂಚಾಲಕರಾದ ನಾಗೇಶ ಎಂ, (ಎಡದಿಂದ ಬಲಕ್ಕೆ ನಿಂತಿರುವವರು): ಪಿ.ಬಿ.ಅಕ್ಷೋಭ್ಯಭಟ್, ಶುಭಾಷಿತ, ಹರ್ಷಿತಾ, ಸಾಗರಿಪೊನ್ನಮ್ಮ, ನಿಹಾರಿಕಹೆಗ್ಡೆ, ಹಂಸ ಕೆ.ಎಂ. ಮತ್ತು ಮೋಹನ್‌ರಾಜ್ ಅವರನ್ನು ಕಾಣಬಹುದು.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 26 ಫೆಬ್ರವರಿ 2024

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆ

10,300 ಅಭ್ಯರ್ಥಿಗಳ ಪೈಕಿ 4,075 ಮಂದಿ ಗೈರು

ಮೈಸೂರು, ಫೆ. 25(ಆರ್‌ಕೆ)– ಮೈಸೂರಿನ 21 ಕೇಂದ್ರಗಳಲ್ಲಿ ಇಂದು ನಡೆದ ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ಗಳ ನೇಮಕಾತಿ ಪರೀಕ್ಷೆಗೆ 6,225 ಮಂದಿ ಅಭ್ಯರ್ಥಿಗಳು ಹಾಜರಾಗಿದ್ದರು.

ಒಟ್ಟು 10,300 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದರಾದರೂ, ಆ ಪೈಕಿ ಕೇವಲ 6,225 ಮಂದಿ ಹಾಜರಾಗಿ ಲಿಖಿತ ಪರೀಕ್ಷೆ ಎದುರಿಸಿದ್ದು, 4,075 ಅಭ್ಯರ್ಥಿ ಗಳು ಗೈರು ಹಾಜರಾದರು. ಬೆಳಗ್ಗೆ 11ರಿಂದ ಮಧ್ಯಾಹ್ನ 12.30 ಗಂಟೆವರೆಗೆ ನಡೆದ ಪರೀಕ್ಷೆಗೆ ಭಾರಿ ಪೊಲೀಸ್ ಭದ್ರತೆ ಒದಗಿಸಿ ಕಟ್ಟೆಚ್ಚರ ವಹಿಸಲಾಗಿತ್ತು.

ಪ್ರತೀ ಪರೀಕ್ಷಾ ಕೇಂದ್ರಗಳಲ್ಲಿ 20 ಅಭ್ಯರ್ಥಿಗೊಬ್ಬರಂತೆ ಕೊಠಡಿ ಮೇಲ್ವಿ ಚಾರಕರು, ಓರ್ವ ಪ್ರಾಂಶುಪಾಲ, ಕಚೇರಿ ಸಹಾಯಕರು ಹಾಗೂ ಮಿನಿಸ್ಟೀರಿಯಲ್ ಸಿಬ್ಬಂದಿಯನ್ನು ನೇಮಿಸಿ ಯಾವುದೇ ಅಕ್ರಮಗಳು ನಡೆಯದಂತೆ ಕಟ್ಟುನಿಟ್ಟಾಗಿ



ಪಾರದರ್ಶಕತೆಯಿಂದ ಪರೀಕ್ಷೆ ನಡೆಸಲಾಯಿತು.

ನೋಂದಾಯಿತ ಎಲ್ಲಾ ಅಭ್ಯರ್ಥಿಗಳ ಬಯೋಮೆಟ್ರಿಕ್ ಮಾಹಿತಿ ಪಡೆದು ಕೇಂದ್ರಕ್ಕೆ ಪ್ರವೇಶ ನೀಡಿ ಸಿಸಿ ಕ್ಯಾಮರಾ ಕಣ್ಗಾವಲಿನಲ್ಲಿ ನಡೆದ ಪರೀಕ್ಷಾ ಪ್ರಕ್ರಿಯೆಗೆ ಓಎಂಆರ್ ಶೀಟ್ ತಂದು ವಾಪಸ್ ಖಜಾನೆಗೆ ಹಿಂದಿರುಗುವವರೆಗೂ ವಿಡಿಯೋ ರೆಕಾರ್ಡ್ ಮಾಡಲಾಯಿತು.

ಅರ್ಧ ತೋಳಿನ ಶರ್ಟ್, ಚಪ್ಪಲಿ ತೊಟ್ಟು ಬರುವುದು ಕಡ್ಡಾಯ ಎಂದು ಮೊದಲೇ ಪ್ರಕಟಿಸಿದ್ದರಿಂದ ಯಾರೂ ತುಂಬು ತೋಳಿನ ಶರ್ಟ್ ಧರಿಸಿ ಬಂದಿರಲಿಲ್ಲ. ಮಹಿಳಾ ಅಭ್ಯರ್ಥಿಗಳು ಮಾಂಗಲ್ಯ ಸರ ಮತ್ತು ಕಾಲುಂಗುರ ಹೊರತುಪಡಿಸಿ ಬೇರೆ ಆಭರಣ ತೊಟ್ಟು ಪರೀಕ್ಷೆಗೆ ಬರುವುದನ್ನು ನಿಷೇಧಿಸ ಲಾಗಿತ್ತಲ್ಲದೇ, ಇಎಸ್‌ಟಿ ತಜ್ಞರು ಪ್ಯಾರಾ ಮೆಡಿಕಲ್ ಸಿಬ್ಬಂದಿ ಅಭ್ಯರ್ಥಿಗಳ ಕಿವಿ, ಕುತ್ತಿಗೆ ಭಾಗ ಪರೀಕ್ಷಿಸಿ ಬ್ಲೂಟೂತ್ ಹಾಗೂ ಇನ್ನಿತರ ಉಪಕರಣ ಅಳವಡಿಸಿಕೊಳ್ಳು ವುದನ್ನು ತಪಾಸಣೆ ಮಾಡಿದರು.

ಮೊಬೈಲ್ ಫೋನ್, ವಾಚು, ಉಂಗುರ, ಓಲೆ, ಆಭರಣ ಇತ್ಯಾದಿ ಬೆಲೆಬಾಳುವ ವಸ್ತು ಡೆಪಾಸಿಟ್ ಮಾಡುವುದನ್ನು ಕಾಯಲು ಪ್ರತೀ ಪರೀಕ್ಷಾ ಕೇಂದ್ರಗಳಲ್ಲಿ ಸುರಕ್ಷತಾ ವ್ಯವಸ್ಥೆ ಮಾಡಲಾಗಿತ್ತು.

ಇದೇ ಪ್ರಥಮ ಬಾರಿ ಓಎಂಆರ್ ಶೀಟ್‌ಗಳಲ್ಲಿ ಅಭ್ಯರ್ಥಿಗಳ ನೋಂದಣಿ ಸಂಖ್ಯೆ ಮುದ್ರಿಸಲಾಗಿತ್ತಲ್ಲದೇ, ಖಾಲಿ ಬಾಕ್ಸ್‌ನಲ್ಲೂ ಆ ಅಭ್ಯರ್ಥಿಯು ನೋಂದಣಿ ಸಂಖ್ಯೆ ಬರೆಯಬೇಕೆಂದು ಕಡ್ಡಾಯಗೊಳಿ ಸಲಾಗಿತ್ತು. ಪರೀಕ್ಷಾ ಕರ್ತವ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು, ಸಿಬ್ಬಂದಿಗಳಿಂದ "ಸದರಿ ಕೇಂದ್ರದಲ್ಲಿ ನಮ್ಮ ಮಕ್ಕಳು, ಸಂಬಂಧಿಗಳು ಪೊಲೀಸ್ ಕಾನ್‌ಸ್ಟೇಬಲ್ ಪರೀಕ್ಷೆ ಬರೆಯುತ್ತಿಲ್ಲ" ಎಂದು ಮುಚ್ಚಳಿಕೆ ಬರೆಸಿಕೊಳ್ಳಲಾಗಿತ್ತು.

ಪ್ರತೀ ಪರೀಕ್ಷಾ ಕೇಂದ್ರಗಳ ಮುಂದೆ "ಪಾರದರ್ಶಕತೆಯಿಂದ ಕಟ್ಟುನಿಟ್ಟಾಗಿ ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆ ನಡೆಸಲಾಗುತ್ತಿದೆ. ಆದಾಗ್ಯೂ ಹಣ ಪಡೆದು ಅಕ್ರಮ, ಭ್ರಷ್ಟಾಚಾರದಲ್ಲಿ ತೊಡಗಿದ ವಿಷಯ ತಿಳಿದುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರಬೇಕು" ಎಂಬ ಫಲಕ ಅಳವಡಿಸಲಾಗಿತ್ತು.

ಒಟ್ಟಾರೆ ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಡಿಸಿಪಿಗಳಾದ ಎಂ. ಮುತ್ತು ರಾಜ್, ಎಸ್. ಜಾಹ್ನವಿ, ಎಸಿಪಿಗಳಾದ ಎಸ್.ಜಿ. ಗಜೇಂದ್ರಪ್ರಸಾದ್, ಶಾಂತ ಮಲ್ಲಪ್ಪ, ಸಂದೇಶ್‌ಕುಮಾರ್ ಅವರ ಮೇಲ್ವಿಚಾರಣೆಯಲ್ಲಿ ಪ್ರತೀ ಕೇಂದ್ರಕ್ಕೆ ಒಬ್ಬರು ಇನ್ಸ್‌ಪೆಕ್ಟರ್, ಇಬ್ಬರು ಸಬ್ ಇನ್ಸ್ ಪೆಕ್ಟರ್‌ಗಳು ಕಟ್ಟುನಿಟ್ಟಾಗಿ ಯಾವುದೇ ಗೊಂದಲವಿಲ್ಲದಂತೆ ಶಾಂತಿಯುತವಾಗಿ ಪರೀಕ್ಷೆ ಮುಕ್ತಾಯಗೊಂಡಿತು.

STAR OF MYSORE

Sunday 25th February 2024

Police Constables recruitment exam in city

4,075 skip exam

Out of 10,300 aspirants only 6,225 appear



Candidates making last minute preparations at SBRR Mahajana College in city this morning.

Mysuru, Feb. 25 (RK&DM)- As many as 6,225 candidates appeared for the written exam for recruitment of Civil Police Constables (men and women) held at 21 centres across the city this morning.

A total of 10,300 candidates had qualified for the exam, out of which only 6,225 appeared, while 4,075 candidates remained absent. The exam was held from 10 am to 11.30 am under tight Police security at all the centres. The exam was held under strict supervision and the candidates were asked to strictly adhere to the dress code for the exam.

Each exam centre had an invigilator for every 20 candidates. All the candidates were allowed entry to their exam centre after a thorough biometric screening. In case of biometric failure, the manual procedure was followed to screen candidates.

Also, the candidates were thoroughly checked for the dress code (only half-sleeve shirt for male aspirants and no shoes. Barring mangalasutra and toe ring, no other jewellery for female candidates).

The examinees were required to hand over their personal belongings and electronic gadgets such as wrist watches, mobile phones etc., to the exam staff at the designated spot outside the centres.

(See EXAM on page 5)

Police Constables recruitment exam held in city amid tight screening





(Continued from page 1)

All the exam staff at the centres were asked to give a prior written undertaking that no candidates, who are kith and kin or their relatives or known to them, are appearing at their assigned centre.

Perhaps for the first time, the OMR sheet of candidates had the roll number of candidates printed on it and the candidates too were asked to write their roll number inside the adjacent box space on the OMR sheet as part of double confirmation.

What is interesting is that apart from deployment of general doctors and para-medical staff for meeting any medical emergencies, ENT specialists were deputed at all centres to specifically check the ears and neck of candidates for any sophisticated electronic gadgets such as ear phones, bluetooths etc.

This measure was said to be taken after the incident where a candidate wrote a similar recruitment exam using bluetooth clandestinely at a Kalaburagi centre a few months ago.

Top Police Officers from all Sub-Divisions, Police Stations and other designated officers visited all the exam centres in order to ensure smooth and fair conduct of the exam, with all security measures in place.

ಆಂದೋಲನ
ದಿನ ಪತ್ರಿಕೆ
ಶನಿವಾರ, 24 ಫೆಬ್ರವರಿ 2024

'ಕಾಲಹರಣ ಮಾಡಬೇಡಿ, ಓದಿನತ್ತ ಗಮನಕೊಡಿ'

ಸಂವಾದ ಕಾರ್ಯಕ್ರಮದಲ್ಲಿ ಚಿಂತಕ ಶಂಕರ ದೇವನೂರು ಕಿವಿಮಾತು

ಮೈಸೂರು: ವಿದ್ಯಾರ್ಥಿಗಳು ಬಣ್ಣದ ಗುಳ್ಳೆಗಳ ಹವ್ಯಾಸದಲ್ಲಿ ಕಾಲಹರಣ ಮಾಡದೆ ಜ್ಞಾನಾರ್ಜನೆಗೆ ದಾಸರಾಗಬೇಕು. ನಿಮ್ಮ ತಂದೆ-ತಾಯಿಯರು ಪಟ್ಟ ಪರಿಶ್ರಮ ವ್ಯರ್ಥ ಮಾಡದೆ ಒಳ್ಳೆಯ ವಿದ್ಯಾಭ್ಯಾಸ ಪಡೆದುಕೊಂಡು ಅವರ ಕನಸನ್ನು ನನಸಾಗಿಸಬೇಕು ಎಂದು ಚಿಂತಕ ಶಂಕರ ದೇವನೂರು ಹೇಳಿದರು.

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್ ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎವಿಸಿ-3 ಸಭಾಂಗಣದಲ್ಲಿ ಕನ್ನಡ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ 'ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ವಿಷಯ ಕುರಿತು ಮಾತನಾಡಿದ ಅವರು, ಅವಿರತ ಶ್ರಮ, ಅಚಲವಾದ ಗುರಿ ಹಾಗೂ ಸತತ ಸಾಧನೆ, ಕನಸುಗಳನ್ನು ನನಸು ಮಾಡಲು ಸಹಾಯವಾಗುತ್ತವೆ ಎಂದರು.

ಶರಣ-ಸಂತರ ವಚನಗಳು ಬದುಕಿನ ದಿಕ್ಕನ್ನೇ ಬದಲಾಯಿಸುತ್ತವೆ. ಇಂದು ಸಂಸ್ಕಾರ, ಸಾಹಿತ್ಯ ಹಾಗೂ ಅಧ್ಯಾತ್ಮದ ಕಡೆಗೆ ಶರಣಾಗಬೇಕಾಗಿದೆ. ಒಳ್ಳೆಯವರಾಗಿ ಬದುಕಿ, ಜ್ಞಾನ ಸಂಪಾದಿಸಿ. ನೀವು ಹುಟ್ಟಿದ ಊರು, ಶಿಕ್ಷಣ ಪಡೆದ ಸಂಸ್ಥೆ ಹಾಗೂ ತಂದೆ-ತಾಯಂದಿರು ಹೆಮ್ಮೆಪಡುವಂತಹ ಸಭ್ಯ ನಾಗರಿಕರಾಗಿರಿ ಎಂದು ಅವರು ಸಲಹೆ ನೀಡಿದರು.

ಉನ್ನತ ಶಿಕ್ಷಣವೆಂದರೆ ಕೇವಲ ಮಾಹಿತಿ ಸಂಗ್ರಹಿಸುವುದಷ್ಟೇ ಅಲ್ಲ, ಅದು ಜೀವನದಲ್ಲಿ ಸಾಮರಸ್ಯದಿಂದ ಬದುಕುವುದನ್ನು ಕಲಿಸುತ್ತದೆ. ಶಿಕ್ಷಣದ ಮಹತ್ವ ಬೇರ್ಪಡಿಸು ವುದಲ್ಲ. ಸೇರಿಸುವುದು. ವಿದ್ಯಾರ್ಥಿಗಳಲ್ಲಿರುವ ಅಜ್ಞಾನ ವನ್ನು ದೂರಮಾಡಿ. ಅವರಲ್ಲಿಸುಪ್ತವಾಗಿರುವ ಪ್ರತಿಭೆಯನ್ನು ಅನಾವರಣ ಗೊಳಿಸಿ, ನೈಪುಣ್ಯ ವರ್ಧನೆಗೆಅವಕಾಶಮಾಡಿಕೊಡುವಂತಹದು ಗುರುಗಳ ಹೊಣೆಗಾರಿಕೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಂಕರ್ ದೇವನೂರು, ಅನಸೂಯ ದಂಪತಿಯನ್ನು ಸನ್ಮಾನಿಸಲಾಯಿತು. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಸಹ ಪ್ರಾಧ್ಯಾಪಕರಾದ ಡಾ.ವಿನೋದಮ್ಮ, ಎಂ.ನಾಗೇಶ್, ಸಿ.ಎಂ.ಕಿರಣ್‌ಕುಮಾರ್, ಮನೋಜ್‌ಕುಮಾರ್, ವಿದ್ಯಾರ್ಥಿನಿ ನಾಗಶ್ರೀ ಇತರರು ಹಾಜರಿದ್ದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎವಿಸಿ-3 ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿಂತಕ ಶಂಕರ ದೇವನೂರು, ಅನಸೂಯ ದಂಪತಿಯನ್ನು ಸನ್ಮಾನಿಸಲಾಯಿತು. ಡಾ.ಬಿ.ಆರ್.ಜಯಕುಮಾರಿ, ಡಾ.ಎಚ್.ಆರ್.ತಿಮ್ಮೇಗೌಡ, ಡಾ.ವಿನೋದಮ್ಮ ಇತರರು ಚಿತ್ರದಲ್ಲಿದ್ದಾರೆ.

ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಜ್ಞಾನ, ಧೈರ್ಯ ಸಾಮರ್ಥ್ಯ, ಕೌಶಲ, ಪರಿಶ್ರಮ ಮತ್ತು ಏಕಾಗ್ರತೆ, ಸಮಯ ಪ್ರಜ್ಞೆಯನ್ನು ರೂಢಿಸಿಕೊಂಡು ವಿವೇಕವನ್ನು ಬೆಳೆಸಿಕೊಳ್ಳಬೇಕು.
-ಶಂಕರ್ ದೇವನೂರು, ಚಿಂತಕ.

MFGE In the Eyes of the Press.....

ಹೊಸ ದಿಗಂತ

ಶನಿವಾರ, 24 ಫೆಬ್ರವರಿ 2024

ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯ ಕುರಿತು ಸಂವಾದ ಕಾರ್ಯಕ್ರಮ

ಮಕ್ಕಳು ಜ್ಞಾನಾರ್ಜನೆಯ ದಾಸರಾಗಬೇಕು

ಮೈಸೂರು: ವಿದ್ಯಾರ್ಥಿಗಳು ಜ್ಞಾನಾರ್ಜನೆಗೆ ದಾಸರಾಗಬೇಕು ಎಂದು ಆಧ್ಯಾತ್ಮಿಕಚಿಂತಕ ಶಂಕರದೇವನೂರು ಹೇಳಿದರು.

ಎಸ್.ಬಿ.ಆರ್.ಆರ್. ಮಹಾಜನ ಪ್ರಥಮದರ್ಜಿಕಾಲೇಜಿನಲ್ಲಿ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ವಚನ ಸಾಹಿತ್ಯದಲ್ಲಿಜೀವನ ಮೌಲ್ಯಗಳು ಎಂಬ ವಿಷಯಕುರಿತು ನಡೆದ ವಿದ್ಯಾರ್ಥಿಗಳೊಂದಿಗಿನ ಸಂವಾದಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಈ ನೆಲದ ಸಾಮರ್ಥ್ಯವನ್ನು ಅರಿತು ಪ್ರಕೃತಿಯೊಂದಿಗೆ ಅನುಸಂಧಾನ ಮಾಡಿಕೊಂಡಾಗ ಮಾತ್ರ, ಅವರು ತಮ್ಮ ಗುರಿಯನ್ನು ತಲುಪಲು ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳ ಗುರಿ ಅಚಲವಾಗಿರಬೇಕು. ಯಾವುದನ್ನು ನೋಡಬೇಕು ಎಂದರು.

ವಿದ್ಯಾರ್ಥಿಯ ಕಾಲ ಎಂದರೆ, ಜ್ಞಾನ ಸಂಗ್ರಹಣೆಯ ಕಾಲ. ಆದ್ದರಿಂದ ಬುದ್ಧಿಯನ್ನು ಮಸೆದು ಭಾವವನ್ನು ಕಡೆದು ತತ್ವಜ್ಞಾನ ಬದುಕನು ಅರಿಯಬೇಕು. ಬಣ್ಣದ ಗುಳ್ಳೆಗಳ ಹವ್ಯಾಸದಲ್ಲಿ ಕಾಲಹರಣ ಮಾಡಬಾರದು ಎಂಬ ಕುವೆಂಪು ಅವರ ನುಡಿಗಳನ್ನು ಉಲ್ಲೇಖಿಸಿದರು. ಯಾವಕಡೆಗೆ ಹೋದರೆ ಬದುಕು ಹಾಳಾಗುತ್ತದೆಯೋ ಅಂತಹ ಕಡೆ ಗಮನಹರಿಸಬಾರದು.

ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಸಹ ಕನ್ನಡ ಪ್ರಾಧ್ಯಾಪಕರಾದ ಡಾ. ವಿನೋದಮ್ಮ, ಶಂಕರ್‌ದೇವನೂರು ಪತ್ನಿ ಅನಸೂಯ, ನಾಗೇಶ ಎಂ, ಕಿರಣ್ ಕುಮಾರ್ ಸಿ.ಎಂ, ಮನೋಜ್‌ಕುಮಾರ್‌ಜೆ, ನಾಗಶ್ರೀ, ನಿಂಗೇಗೌಡ ಇದ್ದರು.



ಪ್ರತಿಭೆ ಅನಾವರಣಗೊಳಿಸಿ

ಉನ್ನತ ಶಿಕ್ಷಣವೆಂದರೆ ಕೇವಲ ಮಾಹಿತಿ ಸಂಗ್ರಹಿಸುವುದಷ್ಟೇ ಅಲ್ಲ,ಅದು ಜೀವನದಲ್ಲಿ ಸಾಮರಸ್ಯದಿಂದ ಬದುಕುವುದನ್ನು ತಿಳಿಸುತ್ತದೆ. ಶಿಕ್ಷಣದ ಮಹತ್ವ ಬೇರ್ಪಡಿಸುವುದಲ್ಲ ಸೇರ್ಪಡಿಸುವುದು ಎಂದ ಆಧ್ಯಾತ್ಮಿಕಚಿಂತಕ ಶಂಕರದೇವನೂರುಮ, ವಿದ್ಯಾರ್ಥಿಗಳಲ್ಲಿರುವ ಅಜ್ಞಾನವನ್ನು ದೂರ ಮಾಡಿ, ಅವರಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಅನಾವರಣಗೊಳಿಸಿ, ನೈಪುಣ್ಯವರ್ಧನೆಗೆ ಅವಕಾಶ ಮಾಡಿಕೊಡುವಂತಹದು ಗುರುಗಳ ಹೊಣೆಗಾರಿಕೆಯಾಗಿದೆ ಎಂದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 24.02.2024

ವಿದ್ಯಾರ್ಥಿಗಳು ಜ್ಞಾನಾರ್ಜನೆಗೆ ದಾಸರಾಗಬೇಕು

ಆಧ್ಯಾತ್ಮಿಕ ಚಿಂತಕ ಶಂಕರ ದೇವನೂರು ಸಲಹೆ | ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕುರಿತು ಸಂವಾದ ಕಾರ್ಯಕ್ರಮ

• ಕನ್ನಡಪ್ರಭ ವಾರ್ತೆ ಮೈಸೂರು

ವಿದ್ಯಾರ್ಥಿಗಳು ಜ್ಞಾನಾರ್ಜನೆಗೆ ದಾಸರಾಗಬೇಕು. ವಿದ್ಯಾರ್ಥಿಯ ಕಾಲ ಎಂದರೆ ಜ್ಞಾನ ಸಂಗ್ರಹಣೆಯ ಕಾಲ. ಆದ್ದರಿಂದ ಬುದ್ಧಿಯನ್ನು ಮಸೆದು ಭಾವವನ್ನು ಕಡೆದು ತತ್ವಜ್ಞರ ಬದುಕನು ಅರಿಯಬೇಕು ಎಂದು ಆಧ್ಯಾತ್ಮಿಕ ಚಿಂತಕ ಶಂಕರ ದೇವನೂರು ತಿಳಿಸಿದರು.

ನಗರದಮಹಾಜನಪ್ರಥಮದರ್ಜೆ ಕಾಲೇಜಿನಲ್ಲಿ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಶುಕ್ರವಾರ ಆಯೋಜಿಸಿದ್ದ ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕುರಿತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಮ್ಮ ಬದುಕು ಎಂಬ ಅಭ್ಯುದಯದ ಬೇರಿಗೆ ಬಿಸಿ ನೀರನ್ನು ಎರೆಯಬಾರದು. ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಜ್ಞಾನ, ದೇಹದ ಸಾಮರ್ಥ್ಯ, ಕೌಶಲ್ಯ, ಪರಿಶ್ರಮ



ಮತ್ತು ಏಕಾಗ್ರತೆ, ಸಮಯ ಪ್ರಜ್ಞೆ ರೂಢಿಸಿಕೊಂಡು ವಿವೇಕವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ಅರಿತು ಪ್ರಕೃತಿಯೊಂದಿಗೆ ಅನುಸಂಧಾನ ಮಾಡಿಕೊಂಡಾಗ ಮಾತ್ರ ಅವರು ತಮ್ಮ ಗುರಿಯನ್ನು ತಲುಪಲು ಸಾಧ್ಯ. ಹೀಗಾಗಿ, ವಿದ್ಯಾರ್ಥಿಗಳ ಗುರಿ ಅಚಲವಾಗಿರಬೇಕು. ಯಾವುದನ್ನು ನೋಡಬೇಕು, ಯಾವುದನ್ನು ನೋಡಬಾರದು ಎಂಬ ವಿವೇಕ ಇರಬೇಕು ಎಂದರು.

ಉನ್ನತ ಶಿಕ್ಷಣವೆಂದರೆ ಕೇವಲ ಮಾಹಿತಿ ಸಂಗ್ರಹಿಸುವುದಷ್ಟೇ ಅಲ್ಲ, ಅದು ಜೀವನದಲ್ಲಿ ಸಾಮರಸ್ಯದಿಂದ ಬದುಕುವುದನ್ನು ತಿಳಿಸುತ್ತದೆ. ಶಿಕ್ಷಣದ ಮಹತ್ವ ಬೇರ್ಪಡಿಸುವುದಲ್ಲ ಸೇರ್ಪಡಿಸುವುದು. ವಿದ್ಯಾರ್ಥಿಗಳಲ್ಲಿರುವ ಅಜ್ಞಾನವನ್ನು ದೂರ ಮಾಡಿ, ಅವರಲ್ಲಿ ಸುಪ್ತವಾಗಿರುವಪ್ರತಿಭೆಯನ್ನು ಅನಾವರಣಗೊಳಿಸಿ, ನೈಪುಣ್ಯ ವರ್ಧನೆಗೆ ಅವಕಾಶ ಮಾಡಿಕೊಡುವಂತಹದು ಗುರುಗಳ ಹೊಣೆಗಾರಿಕೆಯಾಗಿದೆ ಎಂದು ಅವರು ಹೇಳಿದರು.

ಮೊಬೈಲ್ ಅನ್ನು ಸದ್ಬಳಕೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಸದಾ ಬೇರೆಯವರಿಗೆ ಆವಲಂಬಿತರಾಗಿ ಬದುಕಬಾರದು.

ವಿದ್ಯಾರ್ಥಿಗಳ ಸಾಧನೆಯ ಗುರಿ ಸತತವಾಗಿರಬೇಕು, ಕಂಡಂತಹ ಕನಸುಗಳನ್ನು ನನಸಾಗಿಸಿಕೊಳ್ಳಬೇಕು. ಗುರಿ ಗುರ್ತವಾಗಿರಲಿ, ಸಾಧನೆ ಸತತವಾಗಿರಲಿ ಎಂದರು.

ಇದೇ ವೇಳೆ ಶಂಕರ್ ದೇವನೂರು ಮತ್ತು ಅನಸೂಯ ದಂಪತಿಯನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಸಹ ಪ್ರಾಧ್ಯಾಪಕಿ ಡಾ. ವಿನೋದಮ್ಮ, ಸಹಾಯಕ ಪ್ರಾಧ್ಯಾಪಕರಾದ ಎಂ. ನಾಗೇಶ, ಸಿ.ಎಂ. ಕಿರಣ್ ಕುಮಾರ್, ಜೆ. ಮನೋಜ್ ಕುಮಾರ್, ನಾಗಶ್ರೀ ಮೊದಲಾದವರು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾನುವಾರ 25 ಫೆಬ್ರವರಿ 2024

ವಿದ್ಯಾರ್ಥಿಗಳ ಗುರಿ ಅಚಲವಾಗಬೇಕು

ಮೈಸೂರು,ಫೆ.24–ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ 'ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ವಿಷಯ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಆಧ್ಯಾತ್ಮಿಕ ಚಿಂತಕರು ಹಾಗೂ ನಿವೃತ್ತ ಮುಖ್ಯ ಅಭಿಯಂತರರು ಆದ ಶಂಕರ ದೇವನೂರು ಮಾತನಾಡುತ್ತಾ, ಒಂದು ಮಲ್ಲಿಗೆಯ ಬಳ್ಳಿ ಒಂದು ವರ್ಷದ ಸಾಧನೆಯನ್ನು ತನ್ನ ಒಂದು ಮೊಗ್ಗಿನಲ್ಲಿ ಕೂಡಿಟ್ಟು ಆ ಮೊಗ್ಗು ಕಾಲಾಂತರದಲ್ಲಿ ಅರಳಿ ಹೂವಾಗಿ ತನ್ನ ಸೌಂದರ್ಯ ಹಾಗೂ ಸುವಾಸನೆಯ ಮೂಲಕ ತನ್ನ ಸುತ್ತಲಿನ ವಾತಾವರಣವನ್ನು ಸುಗಂಧಗೊಳಿಸುತ್ತದೆ ಹಾಗೆಯೇ ವಿದ್ಯಾರ್ಥಿಗಳು ಈ ನೆಲದ ಸಾಮರ್ಥ್ಯವನ್ನು ಅರಿತು ಪ್ರಕೃತಿಯೊಂದಿಗೆ ಅನುಸಂಧಾನ ಮಾಡಿಕೊಂಡಾಗ ಮಾತ್ರ ಅವರು ತಮ್ಮ ಗುರಿಯನ್ನು ತಲುಪಲು ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳ ಗುರಿ ಅಚಲವಾಗಿರಬೇಕು. ಯಾವುದನ್ನು ನೋಡಬೇಕು, ಯಾವುದನ್ನು ನೋಡಬಾರದು ಎಂಬ ವಿವೇಕ ಇರಬೇಕು ಎಂಬುದನ್ನು ಅಲ್ಲಮನ ವಚನವೊಂದಿಗೆ ವಿವರಿಸಿದರು.

ವಿದ್ಯಾರ್ಥಿಗಳು ಜ್ಞಾನಾರ್ಜನೆಗೆ ದಾಸರಾಗಬೇಕು. ವಿದ್ಯಾರ್ಥಿಯ ಕಾಲ ಎಂದರೆ, ಜ್ಞಾನ ಸಂಗ್ರಹಣೆಯ ಕಾಲ. ಆದ್ದರಿಂದ ಬುದ್ಧಿಯನ್ನು ಮಸೆದು ಭಾವವನ್ನು ಕಡೆದು ತತ್ವಜ್ಞರ ಬದುಕನು ಅರಿಯಬೇಕು. ಬಣ್ಣದ ಗುಳ್ಳೆಗಳ ಹವ್ಯಾಸದಲ್ಲಿ ಕಾಲಹರಣ ಮಾಡಬಾರದು ಎಂಬ ಕುವೆಂಪು ಅವರ ನುಡಿಗಳನ್ನು ಉಲ್ಲೇಖಿಸಿದರು. ಯಾವ ಕಡೆಗೆ ಹೋದರೆ ಬದುಕು ಹಾಳಾಗುತ್ತದೆಯೋ ಅಂತಹ ಕಡೆ ಗಮನಹರಿಸಬಾರದು. ತಮ್ಮ ಬದುಕು ಎಂಬ ಅಭ್ಯುದಯದ ಬೇರಿಗೆ ಬಿಸಿನೀರನ್ನು ಎರೆಯಬಾರದು. ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಜ್ಞಾನ, ದೇಹದ ಸಾಮರ್ಥ್ಯ, ಕೌಶಲ್ಯ, ಪರಿಶ್ರಮ ಮತ್ತು ಏಕಾಗ್ರತೆ, ಸಮಯ ಪ್ರಜ್ಞೆಯನ್ನು ರೂಢಿಸಿಕೊಂಡು ವಿವೇಕವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಉನ್ನತ ಶಿಕ್ಷಣವೆಂದರೆ ಕೇವಲ ಮಾಹಿತಿ ಸಂಗ್ರಹಿಸುವುದಷ್ಟೇ ಅಲ್ಲ, ಅದು ಜೀವನದಲ್ಲಿ ಸಾಮರಸ್ಯದಿಂದ ಬದುಕುವುದನ್ನು ತಿಳಿಸುತ್ತದೆ. ಶಿಕ್ಷಣದ ಮಹತ್ವ ಬೇರ್ಪಡಿಸುವುದಲ್ಲ ಸೇರ್ಪಡಿಸುವುದು. ವಿದ್ಯಾರ್ಥಿಗಳಲ್ಲಿರುವ ಅಜ್ಞಾನವನ್ನು ದೂರಮಾಡಿ, ಅವರಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಅನಾವರಣಗೊಳಿಸಿ, ನೈಪುಣ್ಯವರ್ಧನೆಗೆ ಅವಕಾಶ ಮಾಡಿಕೊಡುವಂತಹದು ಗುರುಗಳ ಹೊಣೆಗಾರಿಕೆಯಾಗಿದೆ ಎಂದರು.

ಮೊಬೈಲ್ ಅನ್ನು ಸದ್ಬಳಕೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಸದಾ ಬೇರೆಯವರಿಗೆ ಅವಲಂಬಿತರಾಗಿ ಬದುಕಬಾರದು ಎಂಬುದನ್ನು ಆಕಸ್ಮಿಕ ಅಪಘಾತದಿಂದ ತನ್ನ ಬಲಗೈ ಕಳೆದುಕೊಂಡರೂ, ತನ್ನ ಎಡಗೈ ಒಂದರಿಂದಲೇ ವಿದ್ಯಾಭ್ಯಾಸವನ್ನು ಮುಂದುವರೆಸಿ 2012ರಲ್ಲಿ ಯುಪಿಎಸ್‌ಸಿ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮಂಡ್ಯ ಜಿಲ್ಲೆಯ ನಾಗಮಂಗಲದ ಶಿವರಾಮೇಗೌಡ ಮತ್ತು ಶ್ರೀಮತಿ ರತ್ನಮ್ಮ ದಂಪತಿ ಪುತ್ರ ಗಿರೀಶ್ ಅವರು ಆಂಧ್ರದ ಕರ್ನೂಲ್‌ನಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ನೈಜ್ಯ ಘಟನೆಯನ್ನು ಉಲ್ಲೇಖಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಶಂಕರ್ ದೇವನೂರು ಮತ್ತು ಶ್ರೀಮತಿ ಅನಸೂಯ ದಂಪತಿಗಳನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಸಹ ಕನ್ನಡ ಪ್ರಾಧ್ಯಾಪಕ ಡಾ.ವಿನೋದಮ್ಮ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಆಧ್ಯಾತ್ಮಿಕ ಚಿಂತಕ ಶಂಕರ ದೇವನೂರು ಅಭಿಮತ



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ, ಐಕ್ಯೂಎಸಿ ಸಹಯೋಗದೊಂದಿಗೆ 'ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ವಿಷಯ ಕುರಿತು ನಡೆದ ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಶಂಕರ್ ದೇವನೂರು, ಶ್ರೀಮತಿ ಅನಸೂಯ ದಂಪತಿಯನ್ನು ಸನ್ಮಾನಿಸಲಾಯಿತು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಶನಿವಾರ 24 ಫೆಬ್ರವರಿ 2024
24 FEBRUARY 2024

ವಿದ್ಯಾರ್ಥಿಗಳು ವಿವೇಕ ಬೆಳೆಸಿಕೊಳ್ಳಲಿ

ಮೈಸೂರು: ವಿದ್ಯಾರ್ಥಿಗಳು ಜ್ಞಾನ, ದೇಹದ ಸಾಮರ್ಥ್ಯ, ಕೌಶಲ, ಪರಿಶ್ರಮ, ಏಕಾಗ್ರತೆ, ಸಮಯ ಪ್ರಜ್ಞೆಯನ್ನು ರೂಢಿಸಿಕೊಂಡು ವಿವೇಕ ಬೆಳೆಸಿಕೊಳ್ಳಬೇಕು ಎಂದು ಆಧ್ಯಾತಿಕ ಚಿಂತಕ ಶಂಕರ್ ದೇವನೂರು ಹೇಳಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ 'ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ಕುರಿತು ಶುಕ್ರವಾರ ಆಯೋಜಿಸಿದ್ದ ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ಈ ನೆಲದ ಸಾಮರ್ಥ್ಯವನ್ನು ಅರಿತು ಪ್ರಕೃತಿಯೊಂದಿಗೆ ಅನುಸಂಧಾನ ಮಾಡಿಕೊಂಡಾಗ ಮಾತ್ರ ತಮ್ಮ ಗುರಿ ತಲುಪಲು ಸಾಧ್ಯ. ವಿದ್ಯಾರ್ಥಿಗಳ ಗುರಿ ಅಚಲವಾಗಿರಬೇಕು. ಉನ್ನತ ಶಿಕ್ಷಣ ಜೀವನದಲ್ಲಿ ಸಾಮರಸ್ಯದಿಂದ ಬದುಕುವುದನ್ನು ತಿಳಿಸುತ್ತದೆ ಎಂದರು. ವಿದ್ಯಾರ್ಥಿ ಗಳು ಜ್ಞಾನಾರ್ಜನೆಗೆ ದಾಸರಾಗಬೇಕು. ವಿದ್ಯಾರ್ಥಿಯ ಕಾಲ ಎಂದರೆ ಜ್ಞಾನ ಸಂಗ್ರಹಣೆಯ ಕಾಲ. ಆದ್ದರಿಂದ ಬುದ್ಧಿಯನ್ನು ಮಸೆದು ಭಾವವನ್ನು ಕಡೆದು ತತ್ವಜ್ಞರ ಬದುಕನ್ನು ಅರಿಯಬೇಕು ಎಂದರು.

» ಆಧ್ಯಾತಿಕ ಚಿಂತಕ ಶಂಕರ್ ದೇವನೂರು ಸಲಹೆ

ಶಂಕರ್ ದೇವನೂರು ಮತ್ತು ಅನಸೂಯ ದಂಪತಿಯನ್ನು ಸನಾನಿಸಲಾಯಿತು. ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್.ತಿಮ್ಮೇಗೌಡ, ಸಹ ಕನ್ನಡ ಪ್ರಾಧ್ಯಾಪಕಿ ಡಾ. ವಿನೋದಮ್ಮ, ಸಹಾಯಕ ಕನ್ನಡ ಪ್ರಾಧ್ಯಾಪಕ ಎಂ.ನಾಗೇಶ್, ಸಿ.ಎಂ.ಕಿರಣ್‌ಕುಮಾರ್, ಜಿ.ಮನೋಜ್ ಕುಮಾರ್, ನಾಗಶ್ರೀ ಇತರರಿದ್ದರು.



ಮಹಾಜನ ಕಾಲೇಜಿನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಆಧ್ಯಾತಿಕ ಚಿಂತಕ ಶಂಕರ್ ದೇವನೂರು, ಅವರ ಪತ್ನಿ ಅನಸೂಯ ಅವರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ, ಡಾ. ಎಚ್.ಆರ್. ತಿಮ್ಮೇಗೌಡ, ಡಾ. ವಿನೋದಮ್ಮ ಇತರರಿದ್ದರು.

MFGE In the Eyes of the Press.....

ಆಂದೋಲನ
ದಿನಪತ್ರಿಕೆ
ಶನಿವಾರ, 24 ಫೆಬ್ರವರಿ 2024

'ವಿಶ್ರಾಂತಿ ಇಲ್ಲದ ಓದಿನಿಂದ ಏಕಾಗ್ರತೆಗೆ ಹಾನಿ'

ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳು ಮತ್ತು ಅವಕಾಶಗಳು ವಿಷಯ ಕುರಿತ ಕಾರ್ಯಾಗಾರದಲ್ಲಿ ಡಾ.ಶಿವಕುಮಾರ್

ಮೈಸೂರು: ವಿಶ್ರಾಂತಿ ಇಲ್ಲದೆ ನಿರಂತರವಾಗಿ ಅಧ್ಯಯನ ಮಾಡುವುದು ಅಷ್ಟು ಒಳ್ಳೆಯದಲ್ಲ. ಇದರಿಂದ ಏಕಾಗ್ರತೆಗೆ ಹಾನಿಯುಂಟು ಮಾಡುವ ಸಾಧ್ಯತೆ ಹೆಚ್ಚಿದೆ. ಅಲ್ಲದೆ, ನೆನಪಿನ ಶಕ್ತಿ ಕುಂದುತ್ತದೆ. ಹೀಗಾಗಿ ಪ್ರತಿ ಗಂಟೆಗೊಮ್ಮೆ ಕೆಲ ಕಾಲ ವಿರಾಮ ತೆಗೆದುಕೊಳ್ಳುವುದು ಉತ್ತಮ ಎಂದು ಅಕ್ಕ ಐಎಎಸ್ ಅಕಾಡೆಮಿ ಸಂಸ್ಥಾಪಕ ಡಾ. ಶಿವಕುಮಾರ್ ಅಭಿಪ್ರಾಯಪಟ್ಟರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಹಾಗೂ ಅಕ್ಕ ಐಎಎಸ್ ಅಕಾಡೆಮಿಯವರ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳು ಮತ್ತು ಅವಕಾಶಗಳು ಎಂಬ ವಿಷಯ ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಾವ ವಿಷಯಗಳಲ್ಲಿ ಹೆಚ್ಚು ಬಲವಾಗಿದ್ದೀರಿ, ದುರ್ಬಲರಾಗಿ ದ್ದೀರಿ ಎಂಬ ಅಂಶಗಳನ್ನು ಪಟ್ಟಿ ಮಾಡಿಕೊಂಡು ಅಧ್ಯಯನ ನಡೆಸಬೇಕು. ಅನ್ವಯ ಮಾದರಿಯ ಪ್ರಶ್ನೆಗಳು ಪರೀಕ್ಷೆಯಲ್ಲಿ ಹೆಚ್ಚು ಕೇಳುವುದರಿಂದ ಓದಿದ ವಿಷಯಗಳನ್ನು ಪ್ರಚಲಿತ ವಿದ್ಯಮಾನ ಮತ್ತು ಸುತ್ತಮುತ್ತ ನಡೆಯುವ ಸಂಗತಿಗಳೊಂದಿಗೆ ಸಮೀಕರಿಸಿ ಅನ್ವಯಿಸಿಕೊಳ್ಳಬೇಕು ಎಂದರು.

ಇಂದು ಇಂಜಿನಿಯರಿಂಗ್, ಮೆಡಿಕಲ್ ಮತ್ತಿತರ ವೃತ್ತಿಪರ ಕೋರ್ಸ್‌ಗಳನ್ನು ಹೊರತುಪಡಿಸಿ ಇತರೆ ಕೋರ್ಸ್‌ಗಳ ವಿದ್ಯಾರ್ಥಿಗಳನ್ನು ಸಮಾಜ ನಿಷ್ಪಯೋಜಕರು ಎನ್ನುವ ರೀತಿ ನೋಡು ತ್ತದೆ. ಆದರೆ, ಕೇಂದ್ರ ಮತ್ತು ರಾಜ್ಯ ಲೋಕಸೇವಾ ಆಯೋಗಗಳು ಹಾಗೂ ಬ್ಯಾಂಕಿಂಗ್ ವಲಯ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಉನ್ನತ ಸ್ಥಾನಕ್ಕೇರುವ ಅವಕಾಶ ಎಲ್ಲಾ ರೀತಿಯ ವಿದ್ಯಾರ್ಥಿಗಳಿಗೂ ಮುಕ್ತವಾಗಿದೆ ಎಂದು ಹೇಳಿದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಹಾಗೂ ಅಕ್ಕ ಐಎಎಸ್ ಅಕಾಡೆಮಿ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳು ಮತ್ತು ಅವಕಾಶಗಳು ಎಂಬ ವಿಷಯ ಕುರಿತ ಕಾರ್ಯಾಗಾರವನ್ನು ಅಕ್ಕ ಐಎಎಸ್ ಅಕಾಡೆಮಿ ಸಂಸ್ಥಾಪಕ ಡಾ.ಶಿವಕುಮಾರ್ ಉದ್ಘಾಟಿಸಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿದರು. ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಸಿ ಘಟಕದ ಸಂಚಾಲಕರಾದ ಡಿ.ಗೀತಾ, ಇತಿಹಾಸ ವಿಭಾಗದ ಡೀನ್ ಡಾ.ಎಚ್. ಶ್ರೀಧರ್, ಅಧ್ಯಾಪಕ ವರ್ಗ ಹಾಗೂ ಸಿಬ್ಬಂದಿವರ್ಗ, ಅಕ್ಕ ಐಎಎಸ್ ಅಕಾಡೆಮಿ ಸಿಬ್ಬಂದಿಗಳು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 24.02.2024

ದೈಹಿಕ ನ್ಯೂನತೆ ಸಾಮರ್ಥ್ಯಕ್ಕೆ ಅಡ್ಡಿಯಾಗದಿರಲಿ

ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಡಾ. ಶಿವಕುಮಾರ್ ಅಭಿಮತ | ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲು, ಅವಕಾಶ ಕಾರ್ಯಾಗಾರ

• ಕನ್ನಡಪ್ರಭ ವಾರ್ತೆ ಮೈಸೂರು

ನಮ್ಮ ದೈಹಿಕಕ್ಕೆ ಇರುವ ನ್ಯೂನತೆ ನಮ್ಮ ಸಾಮರ್ಥ್ಯಕ್ಕೆ ಎಂದೂ ತೊಂದರೆಯಾಗಬಾರದು. ಆ ನ್ಯೂನತೆಯಿಂದ ನಮ್ಮ ಶಕ್ತಿ ಸಾಮರ್ಥ್ಯಕ್ಕೆ ಯಾವುದೇ ದೋಷವಿಲ್ಲ. ನಮ್ಮ ನ್ಯೂನತೆ ದೈಹಿಕವಾಗಿ ಅಷ್ಟೇ ವಿನಹ ನಮ್ಮ ಚೈತನ್ಯಕ್ಕಲ್ಲ ಎಂದು ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಮತ್ತು ನಿರ್ದೇಶಕ ಡಾ. ಶಿವಕುಮಾರ್ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗ, ಎಂಟ್ರಿ ಟು ಸರ್ವೀಸ್, ಐಕ್ಯೂಎಸಿ ಹಾಗೂ ಅಕ್ಕ ಐಎಎಸ್ ಅಕಾಡೆಮಿ ಸಹಯೋಗದೊಂದಿಗೆ ಶುಕ್ರವಾರ ಆಯೋಜಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳು ಮತ್ತು ಅವಕಾಶಗಳು ಕುರಿತ ಒಂದು ದಿನದ ಕಾರ್ಯಾಗಾರವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿಯಾಗಿ ನಿರ್ದಿಷ್ಟ ಮನೋಭಾವ, ದೃಢಸಂಕಲ್ಪ ಮತ್ತು ಸಮಯ ಪ್ರಜ್ಞೆಯ ಮೂಲಕ ಈಗಿನಿಂದಲೇ ಪರಿಶ್ರಮಪಡಬೇಕು. ಪದವಿ ಕಾಲೇಜುಗಳಲ್ಲಿ ಗುರುಗಳು ಮಾಡುವ ಪಾಠಗಳನ್ನು ಶಿಷ್ಯರು ಆಲಿಸಿ, ಚೆನ್ನಾಗಿ ಅಭ್ಯಾಸ ಮಾಡಿ ವರ್ಷಾಂತ್ಯದಲ್ಲಿ ಬರುವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಂಕಪಟ್ಟಿಯನ್ನು ಪಡೆಯುತ್ತಾರೆ. ಆದರೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಾವುದೇ ರೀತಿಯ ಅಂಕಪಟ್ಟಿ ಇರುವುದಿಲ್ಲ. ನೀವು ಉತ್ತೀರ್ಣರಾದಲ್ಲಿ ನಿಮಗೆ ಉದ್ಯೋಗಾವಕಾಶ ಲಭಿಸುತ್ತವೆ. ಇಲ್ಲದಿದ್ದರೆ ಮರಳಿ ಯತ್ನಿಸಬೇಕು ಎಂದು ಅವರು ಹೇಳಿದರು.

ಹೀಗಾಗಿ, ನೀವು ಪದವಿಯಲ್ಲಿ ಓದುವಂತಹ ಮನೋಭಾವವೇ ಬೇರೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಓದುವ ಮನೋಭಾವವೇ ಬೇರೆಯಾಗಿರುತ್ತದೆ. ಹೀಗಾಗಿ, ನೀವು ಪದವಿ ಅಭ್ಯಾಸದಲ್ಲಿ ಇರಬೇಕಾದರೆ, ಸ್ಪರ್ಧಾತ್ಮಕ ಪರೀಕ್ಷೆಗಳತ್ತಾ ಅಭ್ಯಾಸಗಳನ್ನು ಪ್ರಾರಂಭಿಸಬೇಕು. ನಮಗೆ ಸಿಗುವ 24 ಗಂಟೆಗಳಲ್ಲಿ ಕನಿಷ್ಠ 3 ಗಂಟೆಗಳಾದರೂ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಮುಡಿಪಿಟ್ಟು ಅಭ್ಯಾಸ ಮಾಡಬೇಕು. ಅದರಂತೆ ದಿನಚರಿ ರೂಪಿಸಿ ಅದನ್ನು ಮೀರದಂತೆ ಪಾಲಿಸಬೇಕು ಎಂದು ಅವರು ಸಲಹೆ ನೀಡಿದರು.

ನಾವು ಕೇವಲ ವಿದ್ಯಾರ್ಥಿಯಾಗಿದ್ದಾಗ ಮಾತ್ರ ಓದಲು ಸಾಧ್ಯ. ನಮ್ಮ ವಿದ್ಯಾಭ್ಯಾಸ ಕೇವಲ 15 ರಿಂದ 25 ವರ್ಷದವರೆಗೆ ಮಾತ್ರ. ತದನಂತರ ನಮ್ಮೆಲ್ಲಿ ಓದುವ ಆಸಕ್ತಿ ಕ್ಷೀಣವಾಗುತ್ತದೆ. ಆ ವಯಸ್ಸಿನಲ್ಲಿ ನಾವು ಶ್ರಮವಹಿಸಿದ್ದಲ್ಲಿ ಮಾತ್ರ ಮುಂದಿನ 50- 60 ವರ್ಷಗಳು ನೆಮ್ಮದಿಯ ಜೀವನವನ್ನು ಸಾಗಿಸಬಹುದು.' ಆದ್ದರಿಂದ ಓದುವ ಅವಕಾಶ ಮತ್ತು ಸಮಯ ಎರಡನ್ನು ವ್ಯರ್ಥ ಮಾಡಬಾರದು ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ನಿತ್ಯ ಪರಿವರ್ತನಶೀಲವಾದ ಬದುಕಿನೊಳಗೆ ಆಯಾಯ ಕಾಲ ಘಟಕ್ಕೆ ಬರುವಂತಹ ಸವಾಲುಗಳನ್ನು, ಹೊಸತನವನ್ನು ಮೈಗೂಡಿಸಿಕೊಳ್ಳುತ್ತ, ಅದನ್ನು ಎದುರಿಸಲು ಬೇಕಾದ ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗಿ ರೂಪಿಸುವ ಹಿನ್ನೆಲೆಯ ನಿರಂತರವಾದ ಕಲಿಕೆಯೊಳಗಿದ್ದೇವೆ ಎಂದು ಹೇಳಿದರು.

ಯಾರು ಅಂತಹ ವಿಚಾರಗಳನ್ನು ಬದುಕಿನೊಳಗೆ ಸಕಾರಾತ್ಮಕವಾಗಿ ತೆಗೆದುಕೊಳ್ಳುತ್ತಾರೆ ಅಂತಹವರು ಸ್ಪಷ್ಟವಾಗಿ ಬದುಕಲು ಸಾಧ್ಯ. ಜೀವಂತಿಕೆ ಇರಬೇಕಾದಲ್ಲಿ ನಾವು ಯಾವಾಗಲೂ ಕ್ರಿಯಾಶೀಲರಾಗಬೇಕು. ಚಿಂತನೆ, ಕುತೂಹಲ ಮತ್ತು ಚಟುವಟಿಕೆ ನಮ್ಮಲ್ಲಿ ನಿರಂತರವಾಗಿರಬೇಕು ಎಂದರು.

ಕಾಲೇಜಿನ ತೃತೀಯ ಸಲಹೆಗಾರ ಡಾ.ಎಸ್. ಆರ್. ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ತೃತೀಯ ಡೀನ್ ಡಾ.ಎಚ್. ಶ್ರೀಧರ, ಐಕ್ಯೂಎಸಿ ಸಂಚಾಲಕಿ ಡಿ. ಗೀತಾ, ಸಂಪನ್ಮೂಲ ವ್ಯಕ್ತಿಗಳಾದ ಎಂ. ಮುನಿರಾಜು, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಇತಿಹಾಸ ಸಹಾಯಕ ಪ್ರಾಧ್ಯಾಪಕ ಎ.ಆರ್. ನಂದೀಶ ಮೊದಲಾದವರು ಇದ್ದರು.



ಮೈಸೂರಿನ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳು ಮತ್ತು ಅವಕಾಶಗಳು ಕುರಿತ ಕಾರ್ಯಾಗಾರವನ್ನು ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಡಾ. ಶಿವಕುಮಾರ್ ಉದ್ಘಾಟಿಸಿದರು.

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಭಾನುವಾರ 25.02.2024



ಮೈಸೂರು ವಿವಿ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು 2023- 24ನೇ ಸಾಲಿನ ಪುರುಷರ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಪಡೆದಿದ್ದಾರೆ. ವಿಜೇತರನ್ನು ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಸಿಇಒ ಡಾ.ಎಸ್.ಆರ್. ರಮೇಶ್, ಡಾ. ಎಚ್.ಎನ್. ಭಾಸ್ಕರ್ಅಭಿನಂದಿಸಿದ್ದಾರೆ.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾನುವಾರ 25 ಫೆಬ್ರವರಿ 2024

ಮಹಾಜನ ಕಾಲೇಜಿಗೆ ಪುರುಷರ ಕುಸ್ತಿ ಸಮಗ್ರ ಪ್ರಶಸ್ತಿ



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮೈಸೂರು ವತಿಯಿಂದ ಆಯೋಜಿಸಿದ್ದ, ಮೈಸೂರು ವಿವಿ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು 2023–24ನೇ ಸಾಲಿನ ಪುರುಷರ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಪಡೆದುಕೊಂಡಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ಪಿ.ಎಸ್.ಮಧುಸೂಧನ, ದೈಹಿಕ ಶಿಕ್ಷಣ ನಿರ್ದೇಶಕರು, ಡಾ.ಬಿ.ಆರ್.ಜಯಕುಮಾರಿ, ಪ್ರಾಂಶುಪಾಲರು, ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ, ಡಾ.ಎಸ್.ಆರ್.ರಮೇಶ್, ಸಿಇಓ, ಡಾ.ಭಾಸ್ಕರ್, ದೈಹಿಕ ಶಿಕ್ಷಣ ನಿರ್ದೇಶಕರು. (ನಿಂತಿರುವವರು): ಸಚಿನ್, ಲಾಲು ಪ್ರಸಾದ್, ಮಂಚಣ್ಣ, ಡಿ.ಮೋಹನ್‌ಕುಮಾರ್ ಅವರನ್ನು ಕಾಣಬಹುದು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 29.02.2024

ಅಂತರ ಕಾಲೇಜು ಮಹಿಳೆಯರ ಥ್ರೋಬಾಲ್ ಪಂದ್ಯಾವಳಿ: ಮಹಾಜನ ಕಾಲೇಜಿಗೆ ಪ್ರಥಮ ಸ್ಥಾನ

• ಕನ್ನಡಪ್ರಭ ವಾರ್ತೆ
ಮೈಸೂರು



ಸೆಂಟ್ ಜೋಸೆಫ್ ಮಹಿಳೆಯರ ಪ್ರಥಮ ದರ್ಜೆ ಕಾಲೇಜು ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯಲ್ಲಿ ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು ಭಾಗವಹಿಸಿ ಪ್ರಥಮ ಸ್ಥಾನಗಳಿಸಿದೆ. ಕ್ರೀಡಾಪಟುಗಳನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಅಭಿನಂದಿಸಲಾಯಿತು. ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂಧನ, ಶೈಕ್ಷಣಿಕ ಡೀನ್ ಡಾ. ಎಚ್. ಶ್ರೀಧರ, ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ, ತಂಡದ ನಾಯಕಿ ಪರಿಣಿತ, ಕೆ. ಸೋಮಶೇಖರ್, ಕನ್ನಿಕಾ, ಲೇನಿಟಾ, ಸಂಜನಾ, ಭೂಮಿಕಾ ಪಟೇಲ್, ಸಂಗೀತ, ಕವಿತಾ ಹಾಗೂ ಸಾಗರಿ ಪೊನ್ನಮ್ಮ ಇದ್ದಾರೆ.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 29 ಫೆಬ್ರವರಿ 2024



ಸೆಂಟ್‌ಜೋಸೆಫ್ ಮಹಿಳೆಯರ ಪ್ರಥಮ ದರ್ಜೆ ಕಾಲೇಜಲ್ಲಿ ಆಯೋಜಿಸಿದ್ದ, ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯಲ್ಲಿ, ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು ಭಾಗವಹಿಸಿ ಪ್ರಥಮ ಸ್ಥಾನಗಳಿಸಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂದನ, ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ತಂಡದ ನಾಯಕಿ ಪರಿಣಿತ, (ಎಡದಿಂದ ಬಲಕ್ಕೆ ನಿಂತಿರುವವರು): ಸೋಮಶೇಖರ್ ಕೆ, ಕನ್ನಿಕಾ, ಲೇನಿಟಾ, ಸಂಜನಾ, ಭೂಮಿಕಾ ಪಟೇಲ್, ಸಂಗೀತ, ಕವಿತಾ ಹಾಗೂ ಸಾಗರಿ ಪೊನ್ನಮ್ಮ ಅವರನ್ನು ಕಾಣಬಹುದು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 16.02.2024

ಕ್ರಿಕೆಟ್ ಪಂದ್ಯಾವಳಿಯಲ್ಲಿ ತೃತೀಯ ಸ್ಥಾನ



ಮೈಸೂರು: ತಮಿಳುನಾಡಿನ ಅಲಗಪ್ಪ ವಿಶ್ವವಿದ್ಯಾನಿಲಯ ಆಯೋಜಿಸಿದ್ದ ಮಹಿಳೆಯರ ಅಂತರ ವಿಶ್ವವಿದ್ಯಾನಿಲಯ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ವಿವಿ ಮಹಿಳೆಯರ ಕ್ರಿಕೆಟ್ ತಂಡವು ತೃತೀಯ ಸ್ಥಾನ ಪಡೆದು, ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯದಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆದಿದೆ. ಇದರಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ನಿರೀಕ್ಷಾ, ತಾಸಿ ಹಾಗೂ ದಕ್ಷಿತಾ ಭಾಗವಹಿಸಿದ್ದರು. ಇವರನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂಧನ, ಡಾ.ಎಚ್.ಎನ್. ಭಾಸ್ಕರ್ ಅಭಿನಂದಿಸಿದ್ದಾರೆ.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 16 ಫೆಬ್ರವರಿ 2024

ಮೈಸೂರು ವಿವಿ ಮಹಿಳೆಯರ ಕ್ರಿಕೆಟ್ ತಂಡಕ್ಕೆ ತೃತೀಯ ಸ್ಥಾನ



ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ವಿವಿ ಮಹಿಳೆಯರ ಕ್ರಿಕೆಟ್ ತಂಡ ತೃತೀಯ ಸ್ಥಾನ ಗಳಿಸಿದೆ.

ಮೈಸೂರು, ಫೆ. 15–ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ತಂಡವು ತೃತೀಯ ಸ್ಥಾನಗಳಿಸಿದೆ.

ತಮಿಳುನಾಡಿನ ಹಲಗಪ್ಪ ವಿಶ್ವವಿದ್ಯಾನಿಲಯ ಆಯೋಜಿಸಿದ್ದ, ಮಹಿಳೆಯರ ಅಂತರ ವಿಶ್ವವಿದ್ಯಾನಿಲಯ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ತಂಡವು ತೃತೀಯ ಸ್ಥಾನ ಪಡೆದಿದ್ದು, ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯದಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆದಿದೆ. ಇದರಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಮೂವರು ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಅವರಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದ ಮತಿಯಿಂದ ಅಭಿನಂದಿಸಲಾಯಿತು.

ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ.ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಹೆಚ್.ಎನ್. ಭಾಸ್ಕರ್ ಇತರರು ಉಪಸ್ಥಿತರಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಫೆಬ್ರುವರಿ 16, 2024



ತಮಿಳುನಾಡಿನ ಹಳಗಪ್ಪ ವಿಶ್ವವಿದ್ಯಾಲಯ ಈಚೆಗೆ ಆಯೋಜಿಸಿದ್ದ ಅಂತರ ವಿಶ್ವವಿದ್ಯಾಲಯ ಕ್ರಿಕೆಟ್ ಟೂರ್ನಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಮಹಿಳೆಯರ ಕ್ರಿಕೆಟ್ ತಂಡ ಮೂರನೇ ಸ್ಥಾನ ಗಳಿಸಿ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದೆ. ಮೈಸೂರು ವಿ.ವಿ. ಯನ್ನು ಪ್ರತಿನಿಧಿಸಿದ ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ತಂಡದ ಕ್ರಿಕೆಟ್ ಪಟುಗಳಾದ ನಿರೀಕ್ಷಾ, ತಾಸಿ, ದಕ್ಷಿತಾ ಅವರನ್ನು ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂದನ, ಗೌರವ ಕಾರ್ಯದರ್ಶಿ ಟಿ.ವಿಜಯಲಕ್ಷ್ಮಿ, ಪ್ರಾಂಶುಪಾಲೆ ವಿಜಯಕುಮಾರಿ, ಎಚ್.ಎನ್. ಭಾಸ್ಕರ್ ಅಭಿನಂದಿಸಿದರು

STAR OF MYSORE

Sunday 18th February 2024

Excel in Women's Cricket Tourney



Mysore University Women's Cricket Team bagged third place in the Inter-University Women's Cricket Tournament organised by Halagappa University, Tamil Nadu. The team is qualified to participate in All India Inter-University Tournament. Seen in the picture are the students of SBRR Mahajana First Grade College, Jayalakshmipuram, who were part of the Mysore University team — *(standing from left)* ***Niriksha, Thasi and Dakshitha — with*** *(sitting from left)* ***P.S. Madhusudhana, PE Director, Dr. T. Vijayalakshmi Muralidhar, Secretary, Mahajana Education Society, Dr. B.R. Jayakumari, Principal and Dr. H.N. Bhaskar, PE Director.***

ಹೊಸ ದಿಗಂತ
ಗುರುವಾರ 21 ಮಾರ್ಚ್ 2024

ಮಹಿಳಾ ದಿನಾಚರಣೆ ಪ್ರಯುಕ್ತ ಸಂವಾದ ಕಾರ್ಯಕ್ರಮ

ಆರೋಗ್ಯದ ಬಗ್ಗೆ ಮಹಿಳೆಯರಿಗೆ ಜಾಗೃತಿ

ಮೈಸೂರು: ವಿಜ್ಞಾನ ವಿಭಾಗ, ಸ್ಪರ್ಶ್, ಮಹಿಳಾ ಸಬಲೀಕರಣ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪೌಷ್ಟಿಕತೆ ಮತ್ತು ನಿಮ್ಮ ಯಶಸ್ಸು ಮತ್ತು ಮಹಿಳಾ ಆರೋಗ್ಯ ಮತ್ತು ಹಾರ್ಮೋನ್ ನಿಯಂತ್ರಣ ಎಂಬ ವಿಷಯಗಳನ್ನು ಕುರಿತು ಸಂವಾದಾತ್ಮಕ ಚರ್ಚೆ ಆಯೋಜಿಸಲಾಗಿತ್ತು.



ಸ್ಥಾಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ನ್ಯೂಟ್ರಿಷನ್ ಮತ್ತು ಡಯಟ್ ಸಲ್ಯೂಷನ್ಸ್‌ನ ಕೌನ್ಸಿಲರ್ ಡಾ. ಸುಷ್ಮಾ ಅಪ್ಪಯ್ಯ, ''ಪೌಷ್ಟಿಕತೆ ಮತ್ತು ನಿಮ್ಮ ಯಶಸ್ಸು'' ಎಂಬ ವಿಷಯ ಕುರಿತು ಮಾತನಾಡಿದರು. ಸ್ಥೂಲಕಾಯತೆ, ಅಧಿಕ ತೂಕ, ರಕ್ತದೊತ್ತಡ, ಸಿಹಿಚ್‌ಡಿ, ಹಾರ್ಮೋನ್‌ಗಳ ಅಸಮತೋಲನ, ಕ್ಯಾನ್ಸರ್, ಮಾನಸಿಕ ಒತ್ತಡ ಮತ್ತು ಪೋಷಕಾಂಶಗಳ ಕೊರತೆಯ ಬಗ್ಗೆಯೂ ತಿಳುವಳಿಕೆ ಮೂಡಿಸಿದರು. ಪ್ರಪಂಚದಾದ್ಯಂತದ ಅಂಕಿಅಂಶಗಳ ಪ್ರಕಾರ ಯುವ ವಯಸ್ಕರಲ್ಲಿ ಆತಂಕ ಮತ್ತು ಖಿನ್ನತೆಯ ಅಸ್ವಸ್ಥತೆಯು ಹೆಚ್ಚಾಗಿ ಕಂಡುಬಂದಿರುತ್ತದೆ ಎಂದು ತಿಳಿಸಿದರು. ಯುವ ಪೀಳಿಗೆಯನ್ನು ಯಶಸ್ಸಿನ ಹಾದಿಯಲ್ಲಿ ಕೊಂಡೊಯ್ಯಲು ಯುವತಿಯರಿಗೆ ಒತ್ತಡ ನಿರ್ವಹಣೆ ಮತ್ತು ಉತ್ತಮ ಜೀವನಶೈಲಿಯ ಹಾದಿಯಲ್ಲಿ ಸಾಗುವಂತೆ ಜಾಗೃತಿ ಮೂಡಿಸಿ ಸೂಕ್ತ ಸಲಹೆಗಳನ್ನು ಪ್ರಸ್ತಾಪಿಸಿದರು.

ಬೋಧಕ ಮತ್ತು ಬೋಧಕೇತರ ಸಿಬ್ಬಂದಿವರ್ಗದವರಿಗಾಗಿ ನಡೆದ ಅಧಿವೇಶನದಲ್ಲಿ ವೃತ್ತಿಪರ ಮಹಿಳೆಯರ ಆರೋಗ್ಯ ಮತ್ತು ಅದಕ್ಕೆ ಪ್ರಭಾವ ಬೀರುವ ಅಂಶಗಳನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದವರು ತಿಳಿಸಿದರು. ದೀರ್ಘಕಾಲದ ಬೆನ್ನುನೋವು, ಸ್ಥೂಲಕಾಯತೆ, ಮಧುಮೇಹ, ಅಧಿಕ ರಕ್ತದೊತ್ತಡ, ಕೊಲೆಸ್ಟಾಲ್, ಪಿಸಿಓಎಸ್, ಥೈರಾಯಿಡ್‌ಗಳಂತಹ ಸಮಸ್ಯೆಗಳು ಇತ್ತೀಚ್ಚಿನ ದಿನಗಳಲ್ಲಿ ವೃತ್ತಿಪರ ಮಹಿಳೆ ಮತ್ತು ಪುರುಷರಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆ ಎಂದು ತಿಳಿಸಿದರು.

ಇದರೊಂದಿಗೆ ಅಸಮತೋಲಿತ ಪೋಷಣೆಯ ಬಗ್ಗೆ ಅಧಿವೇಶನವನ್ನು ಕೇಂದ್ರೀಕರಿಸುತ್ತ, ಅದಕ್ಕೆ ಕಾರಣವಾಗುವ ಎಲ್ಲಾ ಪ್ರಭಾವದ ಅಂಶಗಳ ಬಗ್ಗೆ ಜಾಗೃತಿ ಮೂಡಿಸಿದರು. ಯಾವ ಆಹಾರ ತೆಗೆದುಕೊಳ್ಳಬೇಕು? ಹೇಗೆ ತೆಗೆದುಕೊಳ್ಳಬೇಕು? ಯಾವಾಗ ತೆಗೆದುಕೊಳ್ಳಬೇಕು? ಎಷ್ಟು ತೆಗೆದುಕೊಳ್ಳಬೇಕು ಎಂಬ ಅರಿವಿನ ಪ್ರಾಮುಖ್ಯತೆಯನ್ನು ವಿವರಿಸಿದರು. ಅಂತಿಮವಾಗಿ ಅವರು ಹಾರ್ಮೋನ್ ಅಸಮತೋಲನ ಮತ್ತು ಅದರ ನಿಯಂತ್ರಣದ ಕುರಿತು ಒಳನೋಟಗಳನ್ನು ನೀಡಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 22.03.2024

ಮಹಾಜನ ಕಾಲೇಜಿನಲ್ಲಿ ಮಹಿಳಾ ದಿನ: ಸಂವಾದ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್.ಬಿ.ಆರ್.ಆರ್.ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿಜ್ಞಾನ ವಿಭಾಗ, ಸ್ಪರ್ಶ, ಮಹಿಳಾ ಸಬಲೀಕರಣ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಪೌಷ್ಟಿಕತೆ ಮತ್ತು ನಿಮ್ಮ ಯಶಸ್ಸು ಮತ್ತು ಮಹಿಳಾ ಆರೋಗ್ಯ ಮತ್ತು ಹಾರ್ಮೋನ್ ನಿಯಂತ್ರಣ ಕುರಿತು ಸಂವಾದಾತ್ಮಕ ಚರ್ಚೆ ಆಯೋಜಿಸಲಾಗಿತ್ತು.



ಸಂಪನ್ಮೂಲ ವ್ಯಕ್ತಿಯಾಗಿದ್ದ ನ್ಯೂಟ್ರಿಷಿಯನ್ ಮತ್ತು ಡಯಟ್ಸಲ್ಟೆಷನ್ಸ್ಟ ಕೌನ್ಸಿಲರ್‌ಡಾ. ಸುಷ್ಮಾ ಅಪ್ಪಯ್ಯ ಮಾತನಾಡಿ, ಉತ್ತಮ ನಾಳೆಗಾಗಿ ಜೀವನಶೈಲಿ ಮತ್ತು ಆಹಾರ ಪದ್ಧತಿಗಳ ಪ್ರಭಾವದ ಮೇಲೆ ಬೆಳಕು ಚೆಲ್ಲಿದರು. ಸ್ಥೂಲಕಾಯತೆ, ಅಧಿಕ ತೂಕ, ರಕ್ತದೊತ್ತಡ, ಸಿ.ಎಚ್.ಡಿ, ಹಾರ್ಮೋನ್ ಗಳ ಅಸಮತೋಲನ, ಕ್ಯಾನ್ಸರ್, ಮಾನಸಿಕ ಒತ್ತಡ ಮತ್ತು ಪೋಷಕಾಂಶಗಳ ಕೊರತೆಯ ಕುರಿತು ಅರಿವು ಮೂಡಿಸಿದರು.

ನಂತರ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಸಂವಾದ ನಡೆಸಿ, ದೀರ್ಘಕಾಲದ ಬೆನ್ನುನೋವು, ಸ್ಥೂಲಕಾಯತೆ, ಮಧುಮೇಹ, ಅಧಿಕ ರಕ್ತದೊತ್ತಡ, ಕೊಲೆಸ್ಟಾಲ್, ಪಿ.ಸಿ.ಒ.ಎಸ್, ಥೈರಾಯಿಡ್ ನಂತಹ ಸಮಸ್ಯೆ ಇತ್ತೀಚ್ಚಿನ ದಿನಗಳಲ್ಲಿ ವೃತ್ತಿಪರ ಮಹಿಳೆ ಮತ್ತು ಪುರುಷರಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆ ಎಂದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಐಕ್ಯೂಎಸಿ ಸಂಚಾಲಕಿ ಡಿ.. ಗೀತಾ ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 21 ಮಾರ್ಚ್ 2024

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ; ಅರ್ಥಪೂರ್ಣ ವಿಷಯಗಳ ಸಂವಾದ





ಮೈಸೂರು,ಮಾ.20–ವಿಜ್ಞಾನ ವಿಭಾಗ, ಸ್ವರ್ಣ, ಮಹಿಳಾ ಸಬಲೀಕರಣ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಎಸ್‌ಬಿ ಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ (ಸ್ವಾಯತ್ತ) ಪೌಷ್ಟಿಕತೆ ಮತ್ತು ನಿಮ್ಮ ಯಶಸ್ಸು ಮತ್ತು ಮಹಿಳಾ ಆರೋಗ್ಯ ಮತ್ತು ಹಾರ್ಮೋನ್ ನಿಯಂತ್ರಣ ವಿಷಯಗಳನ್ನು ಕುರಿತು ಸಂವಾದಾತ್ಮಕ ಚರ್ಚೆಯನ್ನು ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಡಾ.ಸುಷ್ಮಾ ಅಪ್ಪಯ್ಯ, ಕೌನ್ಸಿಲರ್ ಮತ್ತು Golz – ನ್ಯೂಟ್ರಿಷನ್ ಮತ್ತು ಡಯಟ್ ಸಲ್ಯೂಷನ್ಸ್, ರೂಪನಗರ, ಮೈಸೂರು. ಅಧಿವೇಶನವನ್ನು ಎರಡು ಅವಧಿಗಳಲ್ಲಿ ನಡೆಸಲಾಯಿತು. ಪ್ರಾಂಶುಪಾಲರಾದ ಡಾ.ಬಿ.ಆರ್‌ಜಯಕುಮಾರಿ, ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಡಿ.ಗೀತಾ ಉಪಸ್ಥಿತಿಯಲ್ಲಿ, ಕಾರ್ಯಾಗಾರವನ್ನು ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಪ್ರಿಯಾಂಕ ಶೆಣೈ ಪ್ರಾರ್ಥನೆ ಮೂಲಕ ಪ್ರಾರಂಭಿಸಿದರು.

ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸ್ಪಂದನಾ ಸ್ವಾಗತಿಸಿದರು.

ಜೈವಿಕ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ವಿ.ರಮ್ಯ ಸಂಪನ್ಮೂಲ ವ್ಯಕ್ತಿಗಳ ಕಿರು ಪರಿಚಯವನ್ನು ನೀಡಿದರು. ಜೈವಿಕ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಪಿ.ರಾಧಿಕಾ ಸಂಪೂರ್ಣ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

MFGE In the Eyes of the Press.....

STAR OF MYSORE

Sunday 24th March 2024

Interactive talk at SBRR Mahajana First Grade College

Empowering women through health awareness, wellness



Dr. Sushma Appaiah

Mysuru, Mar. 24 (BCT)- In an endeavour to promote health awareness and empower women. the Department of Sciences. SPARSH. Women Empowerment and Internal Quality & Assessment Cell (IQAC) had jointly organised an interactive talk on 'nutrition and your success: Let's talk' and 'women health and hormonal regulation' at SBRR Mahajana First Grade College. Jayalakshmipuram, recently.

Dr. Sushma Appaiah, Counsellor and Founder of Golz - Nutrition and Diet Solutions, Roopanagar, served as the resource person. The programme comprised two sessions catering to different segments of the audience.

Session 1: Exclusively for female students, focused on the theme of nutrition and success. Dr. Sushma addressed the young women, emphasising the importance of self-care and self-love through healthy nutrition practices. She discussed various aspects such as non-communicable and communicable diseases, lifestyle impacts and dietary patterns affecting health.

Additionally, she provided insights into managing obesity. underweight, cardiovascular diseases, hypertension, hormonal imbalance, cancer, stress and nutrient deficiency diseases.

Dr. Sushma also shared strategies for stress management and maintaining a healthy lifestyle, drawing from global statistics on anxiety and depressive disorders among young adults. The session aimed to



empower young women to make informed choices for their well-being and success.

Session 2: Targeted teaching and non-teaching staff, focusing on gender sensitisation and holistic health. Dr. Sushma addressed common health issues faced by working men and women, including chronic backache, obesity, diabetes, hypertension, high cholesterol, PCOS and thyroid disorders.

She highlighted the significance of balanced nutrition, providing guidance on dietary habits and addressing misconceptions. Moreover, she shed light on hormonal imbalance and regulation, emphasising the importance of self-care. The session encouraged dialogue and interaction between participants, fostering a supportive environment for health awareness and empowerment.

The workshop commenced with a prayer led by Priyanka Shenoy, Head, Dept. of Biotechnology and a welcome note by N. Spandana, Head, Dept. of Microbiology. The event was hosted by P. Radhika, Assistant Professor, Department of Biochemistry. Zuha, Assistant Professor, Department of Microbiology, proposed a vote of thanks. Principal Dr. B.R. Jayakumari, IQAC coordinator D. Geeta, HoDs, staff and students were present.

ಆಂದೋಲನ
ದಿನ ಪತ್ರಿಕೆ

ಶುಕ್ರವಾರ, 29 ಮಾರ್ಚ್ 2024

'ತರಗತಿಯೊಳಗಿನ ಜ್ಞಾನಕ್ಕಿಂತ ಪ್ರಪಂಚದ ಜ್ಞಾನವಿರಬೇಕು'

ಮಹಾಜನದಲ್ಲಿ 'ರೇಡಿಯೋ ಮಾಧ್ಯಮದ ಸವಾಲುಗಳು ಮತ್ತು ಅವಕಾಶಗಳು' ಕುರಿತು ವಿಶೇಷ ಉಪನ್ಯಾಸ

ಮೈಸೂರು: ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ತರಗತಿಯೊಳಗಿನ ಜ್ಞಾನಕ್ಕಿಂತ, ಪ್ರಪಂಚದ ಜ್ಞಾನವಿರಬೇಕು ಎಂದು ಮೈಸೂರು ಆಕಾಶವಾಣಿಯ ಕಾರ್ಯನಿರ್ವಾಹಕ ಅಬ್ದುಲ್ ರಶೀದ್ ಹೇಳಿದರು.

ನಗರದ ಜಯಲಕ್ಷ್ಮಿ ಪುರಂನಲ್ಲಿರುವ ಎಸ್ ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ ಗುರುವಾರ ಆಯೋಜಿಸಿದ್ದ 'ರೇಡಿಯೋ ಮಾಧ್ಯಮದ ಸವಾಲುಗಳು ಮತ್ತು ಅವಕಾಶಗಳು' ಎಂಬ ವಿಷಯ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಯುವ ಜನತೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್ಸ್ಟಾಗ್ರಾಮ್‌ನಲ್ಲಿ ಹೆಚ್ಚಿನ ಸಮಯ ವ್ಯರ್ಥ ಮಾಡುತ್ತಿದ್ದಾರೆ. ಇದರಿಂದ ಮಾನಸಿಕ ಅಸ್ವಸ್ಥತೆಗೆ ಒಳಗಾಗುತ್ತಿದ್ದಾರೆ. ಹಾಗೇ ಇದರಿಂದ ಕಣ್ಣಿನ ದೃಷ್ಟಿಯೂ ಹಾಳಾಗುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪರ್ಯಾಯವಾಗಿ ರೇಡಿಯೋ ಹೆಚ್ಚು ಆರೋಗ್ಯಕರ ಮಾಧ್ಯಮವಾಗಿದೆ. ಹಾಗಾಗಿ, ಎಲ್ಲರೂ ರೇಡಿಯೋ ಕೇಳಲೇಬೇಕಾಗಿದೆ ಎಂದು ಸಲಹೆ ನೀಡಿದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮೈಸೂರು ಆಕಾಶವಾಣಿಯ ಕಾರ್ಯನಿರ್ವಾಹಕ ಅಬ್ದುಲ್ ರಶೀದ್ ಮಾತನಾಡಿದರು.

ರೇಡಿಯೋದ ಮೂರು ಮುಖ್ಯ ಧ್ಯೇಯಗಳೆಂದರೆ, ಮಾಹಿತಿ, ಶಿಕ್ಷಣ ಮತ್ತು ಮನರಂಜನೆಯಾಗಿದೆ. ಆದರಲ್ಲೂ ವೆಬ್ ರೇಡಿಯೋಗಳನ್ನು ನಮ್ಮ ಲ್ಯಾಪ್‌ಟಾಪ್‌ಗಳ ಸಹಾಯದಿಂದ ಮತ್ತು ಎಲ್ಲಿ ಬೇಕಾದರೂ ಕುಳಿತು ನಮ್ಮ ಮೊಬೈಲ್‌ಗಳ ಮೂಲಕ ಧ್ವನಿಯನ್ನು ಮುದ್ರಿಸಿ, ಅದರಲ್ಲೇ ಸಂಪಾದಿಸಿ ಪ್ರಸಾರ ಮಾಡಬಹುದಾಗಿದೆ. ಈ ಮೂಲಕ ನಮ್ಮ ಧ್ವನಿಯಿಂದ ಜಗತ್ತಿನಾದ್ಯಂತ ಜನರನ್ನು ತಲುಪಬಹುದಾಗಿದೆ ಎಂದು ತಿಳಿಸಿದರು.

ಆಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಪತ್ರಿಕೋದ್ಯಮ ವಿಭಾಗವಾದ ವಿಭಾಗವಾಗಿದ್ದು, ವಿದ್ಯಾರ್ಥಿಗಳಿಗೆ ಈ ರೀತಿ ಕಾರ್ಯಕ್ರಮಗಳು ಅವಶ್ಯ ಹಾಗೂ ಉಪಯುಕ್ತವಾಗಿರುತ್ತವೆ ಎಂದರು.

ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಎಚ್.ಜೆ.ಸ್ವಾತಿ. ಸಹಾಯಕ ಪ್ರಾಧ್ಯಾಪಕರಾದ ಸ್ವರ್ಣ, ಪತ್ರಿಕೋದ್ಯಮ ವಿಭಾಗದ ತಂತ್ರಜ್ಞಾನ ನಿರ್ವಾಹಕ ರಾಜೇಂದ್ರ ಪ್ರಸಾದ್ ಇತರರು ಹಾಜರಿದ್ದರು.

> ರೇಡಿಯೋ ಮಾಧ್ಯಮದಲ್ಲಿರುವ ಸವಾಲುಗಳು, ಅಡೆತಡೆಗಳಿಗಿಂತ ಅಲ್ಲಿರುವ ಅವಕಾಶ ಹಾಗೂ ಸ್ವಾತಂತ್ರ್ಯದ ಬಗ್ಗೆ ಗಮನಹರಿಸಬೇಕು. ಒಂದು ರೇಡಿಯೋ ಮಾಧ್ಯಮವು ಕಡಿಮೆ ಬಂಡವಾಳ ಮತ್ತು ಕಡಿಮೆ ಸಮಯದಲ್ಲಿ ನಡೆಸಬಹುದಾಗಿದೆ.
>
> -ಅಬ್ದುಲ್ ರಶೀದ್, ಮೈಸೂರು ಆಕಾಶವಾಣಿಯ ಕಾರ್ಯನಿರ್ವಾಹಕ.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 29.03.2024

'ರೇಡಿಯೋ ಆರೋಗ್ಯಕರ ಮಾಧ್ಯಮ'



• **ಕನ್ನಡಪ್ರಭ ವಾರ್ತೆ** ಮೈಸೂರು

ರೇಡಿಯೋ ಆರೋಗ್ಯಕರ ಮಾಧ್ಯಮವಾಗಿದ್ದು, ಈಗಿನ ವಯೋಮಾನದ ಜನರು, ಯವಜನತೆರೇಡಿಯೋಕಡೆಗೆಬರಬೇಕಾಗಿದೆ ಎಂದು ಮೈಸೂರು ಆಕಾಶವಾಣಿಯ ಕಾರ್ಯನಿರ್ವಾಹಕ ಹಾಗೂ ಸಾಹಿತಿ ಅಬ್ದುಲ್ ರಶೀದ್ ಕರೆ ನೀಡಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗವು ಐಕ್ಯೂಎಸಿಯ ಸಹಯೋಗದೊಂದಿಗೆ ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ರೇಡಿಯೋ ಮಾಧ್ಯಮದ ಸವಾಲುಗಳು ಮತ್ತು ಅವಕಾಶಗಳು ಕುರಿತು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ತಾಣಗಳಾದ ಫೇಸ್ ಬುಕ್, ಇನ್‌ಸ್ಟಾಗ್ರಾಮ್ ನಂತಹದಕ್ಕೆ ಹೆಚ್ಚಿನ ಸಮಯ ವ್ಯರ್ಥ ಮಾಡುತ್ತಿದ್ದಾರೆ. ಇದರಿಂದ ಮಾನಸಿಕ ಅಸ್ವಸ್ಥತೆಗೆ ಒಳಗಾಗುತ್ತಿದ್ದಾರೆ. ಹಾಗೇ ಇದರಿಂದ ಕಣ್ಣಿನ ದೃಷ್ಟಿಯೂ ಹಾಳಾಗುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಪರ್ಯಾಯವಾಗಿರೇಡಿಯೋ ಹೆಚ್ಚು ಆರೋಗ್ಯಕರ ಮಾಧ್ಯಮವಾಗಿದೆ. ಹೀಗಾಗಿ ಎಲ್ಲರೂ ರೇಡಿಯೋ ಕೇಳುವಂತೆ ಅವರು ತಿಳಿಸಿದರು.

ರೇಡಿಯೋದ ಮೂರು ಮುಖ್ಯ ಧ್ಯೇಯಗಳೆಂದರೆ ಮಾಹಿತಿ, ಶಿಕ್ಷಣ ಮತ್ತು ಮನರಂಜನೆ ಆಗಿದೆ. ವೆಬ್ ರೇಡಿಯೋಗಳನ್ನು ನಮ್ಮ ಲ್ಯಾಪ್ ಟಾಪ್ ಗಳ ಸಹಾಯದಿಂದ ಮತ್ತು ಎಲ್ಲಿ ಬೇಕಾದರೂ ಕೂತು ನಮ್ಮ ಮೊಬೈಲ್ ಗಳ ಮೂಲಕ ಧ್ವನಿಯನ್ನು ಮುದ್ರಿಸಿ, ಅದರಲ್ಲೇ ಸಂಪಾದಿಸಿ ಪ್ರಸಾರ ಮಾಡಬಹುದಾಗಿದೆ. ಈ ಮೂಲಕ ನಮ್ಮ ಧ್ವನಿಯಿಂದ ಜಗತ್ತಿನಾದ್ಯಂತ ಜನರನ್ನು ತಲುಪಬಹುದಾಗಿದೆ ಎಂದರು. ರೇಡಿಯೋ ಮಾಧ್ಯಮದಲ್ಲಿರುವ ಸವಾಲುಗಳು, ಅಡೆತಡೆಗಳಿಗಿಂತ ಅಲ್ಲಿರುವ ಅವಕಾಶ, ಸ್ವಾತಂತ್ರ್ಯದ ಬಗ್ಗೆ ಗಮನ ಹರಿಸಬೇಕು ಎಂದರು. ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಎಚ್.ಜೆ. ಸ್ವಾತಿ, ಸಹಾಯಕ ಪ್ರಾಧ್ಯಾಪಕಿ ಸ್ವರ್ಣ, ತಂತ್ರಜ್ಞಾನ ನಿರ್ವಾಹಕ ರಾಜೇಂದ್ರ ಪ್ರಸಾದ್ ಇದ್ದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶನಿವಾರ • ಮಾರ್ಚ್ 30, 2024

ರೇಡಿಯೊ ಆರೋಗ್ಯಕರ ಮಾಧ್ಯಮ: ಅಬ್ದುಲ್ ರಶೀದ್ ಅಭಿಮತ

ಪ್ರಜಾವಾಣಿ ವಾರ್ತೆ



ಅಬ್ದುಲ್ ರಶೀದ್

ಮೈಸೂರು: 'ರೇಡಿಯೊ ಆರೋಗ್ಯಕರ ಮಾಧ್ಯಮ ವಾಗಿದ್ದು, ಕಡಿಮೆ ಬಂಡವಾಳ, ಕಡಿಮೆ ಸಮಯದಲ್ಲಿ ನಡೆಸಬಹುದಾಗಿದೆ. ಯುವಜನರು ಇದರತ್ತ ಗಮನ ಹರಿಸಬೇಕು' ಎಂದು ಮೈಸೂರು ಆಕಾಶವಾಣಿಯ ಕಾರ್ಯ ನಿರ್ವಾಹಕ ಅಬ್ದುಲ್ ರಶೀದ್ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ರೇಡಿಯೊ ಮಾಧ್ಯಮದ ಸವಾಲು, ಅವಕಾಶಗಳು' ಕುರಿತು ಉಪನ್ಯಾಸ ನೀಡಿದರು.

'ಈಚಿನ ದಿನಗಳಲ್ಲಿ ಯುವಜನರು ಸಾಮಾಜಿಕ ಮಾಧ್ಯಮಗಳನ್ನು ಅತಿಯಾಗಿ ಬಳಸುತ್ತಿದ್ದು, ಇದರಿಂದ ಮಾನಸಿಕ ಅಸ್ವಸ್ಥತೆಗೆ ಒಳಗಾಗುತ್ತಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪರ್ಯಾಯವಾಗಿ ರೇಡಿಯೊ ಹೆಚ್ಚು ಆರೋಗ್ಯಕರ ಮಾಧ್ಯಮವಾಗಿದೆ' ಎಂದರು.

ಕಾಲೇಜಿನ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಎಚ್.ಜೆ. ಸ್ವಾತಿ, ಸಹಾಯಕ ಪ್ರಾಧ್ಯಾಪಕರಾದ ಸ್ವರ್ಣ, ತಂತ್ರಜ್ಞಾನ ನಿರ್ವಾಹಕ ರಾಜೇಂದ್ರ ಪ್ರಸಾದ್ ಇದ್ದರು.

ಆಂಪೋಲ
ದಿನ ಪತ್ರಿಕೆ

ಸೋಮವಾರ, 18 ಮಾರ್ಚ್ 2024

'ಮಾನವನ ಅಭಿವೃದ್ಧಿಗೆ ಶಿಕ್ಷಣ, ಸಾಹಿತ್ಯ ಅತ್ಯಗತ್ಯ'

ವಾರದ ಸಮಾವೇಶದಲ್ಲಿ ಮೈವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ ಅಭಿಮತ

ಮೈಸೂರು: ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣ ಮತ್ತು ಸಾಹಿತ್ಯ ಅತ್ಯಗತ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯ ನಿವೃತ್ತ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ ತಿಳಿಸಿದರು.

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಾರದ ಸಮಾವೇಶದಲ್ಲಿ ಮಾತನಾಡಿದ ಅವರು,

ಶೈಕ್ಷಣಿಕ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು ಮೊದಲಾದ ಎಲ್ಲಾ ಕ್ಷೇತ್ರಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಗೌರವಿಸುವುದರ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಾತಾವರಣವನ್ನು ಈ ವಾರದ ಸಮಾವೇಶ ಕಲ್ಪಿಸಿಕೊಟ್ಟಿದ್ದು, ಇನ್ನಿತರೆ ಕಾಲೇಜುಗಳಿಗೆ ಮಾದರಿಯಾಗಿದೆ. ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಸ್ತು, ಪ್ರಾಮಾಣಿಕತೆ, ನಾಯಕತ್ವದ ಗುಣ ಹಾಗೂ ಜ್ಞಾನ ದಾಸೋಹವನ್ನು ಕಲಿಸುತ್ತಾ ಸಮಾಜಕ್ಕೆ ಉತ್ತಮ ನಾಗರಿಕರನ್ನು ಕೊಡುಗೆಯಾಗಿ ನೀಡುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರದ ಸಮಾವೇಶದಲ್ಲಿ ಮೈಸೂರು ವಿವಿಯ ನಿವೃತ್ತ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ ಅವರನ್ನು ಸನ್ಮಾನಿಸಲಾಯಿತು. ಡಾ.ಬಿ.ಆರ್.ಜಯಕುಮಾರಿ, ಡಾ.ಎಚ್.ಶ್ರೀಧರ, ಡಾ.ಎಚ್.ಆರ್.ತಿಮ್ಮೇಗೌಡ ಚಿತ್ರದಲ್ಲಿದ್ದಾರೆ.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿದರು. ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್.ತಿಮ್ಮೇಗೌಡ, ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಎನ್. ಸುನಿಲ್ ಇತರರು ಹಾಜರಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 19 ಮಾರ್ಚ್ 2024

ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣ, ಸಾಹಿತ್ಯ ಅವಶ್ಯ



ಮೈಸೂರು,ಮಾ.18–ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಎಸ್.ಬಿ. ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾರದ ಸಮಾವೇಶ ಆಯೋಜಿಸಲಾಗಿತ್ತು.

ಸಮಾವೇಶದಲ್ಲಿ ಮುಖ್ಯ ಅತಿಥಿ ಗಳಾಗಿದ್ದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ. ಸಿ.ನಾಗಣ್ಣ ಮಾತನಾಡಿ, ಮಹಾಜನ ವಿದ್ಯಾಸಂಸ್ಥೆ ಒಂದು ಐತಿಹಾಸಿಕ ಮಹಾ ವಿದ್ಯಾಮಂದಿರ. ಇದರ ನಿಕಟಪೂರ್ವ ಅಧ್ಯಕ್ಷ ರಾಗಿದ್ದ ದಿ. ಆರ್. ವಾಸುದೇವಮೂರ್ತಿ ಅವರು ಕೈಗಾರಿಕೋದ್ಯಮಿಗಳು ಮಾತ್ರವಲ್ಲದೆ, ಶ್ರೇಷ್ಠ ಶಿಕ್ಷಣ ತಜ್ಞರೂ ಆಗಿದ್ದರು. ಅವರು ಮಹಾಜನ ಶಿಕ್ಷಣ ಸಂಸ್ಥೆಯನ್ನು ಸಮರ್ಥವಾಗಿ ಕಟ್ಟಿ ಬೆಳೆಸಿದ್ದಾರೆ ಎಂದರು.

ಮಾನವನ ಅಭಿವೃದ್ಧಿಗೆ ಶಿಕ್ಷಣ ಮತ್ತು ಸಾಹಿತ್ಯ ಅತ್ಯಗತ್ಯ. ಈ ನಿಟ್ಟಿನಲ್ಲಿ ಅನೇಕ ಮಹನೀಯರು ಸಮಾಜಕ್ಕೆ ಬೆಳಕಾಗಿದ್ದಾರೆ ಎಂದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಪ್ರೊ.ಸಿ.ನಾಗಣ್ಣ ಅವರನ್ನು ಅಭಿನಂದಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥ, ಶೈಕ್ಷಣಿಕ ಡೀನ್ ಡಾ.ಹೆಚ್. ಶ್ರೀಧರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಎನ್. ಸುನಿಲ್ ಮತ್ತಿತರರು ಉಪಸ್ಥಿತರಿದ್ದರು

ಹೊಸ ದಿಗಂತ
ಶುಕ್ರವಾರ, 8 ಮಾರ್ಚ್ 2024

ರಾಷ್ಟ್ರಮಟ್ಟದ ಕಾರ್ಯಾಗಾರದಲ್ಲಿ ಪ್ರೊ.ಲೋಕನಾಥ್ ಅಭಿಪ್ರಾಯ

ಸಮಾಜದ ನಿರ್ಮಾಣಕ್ಕೆ ಸಂಶೋಧನೆ ಅಗತ್ಯ

ಮೈಸೂರು: ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಬಹು ಆಯಾಮದ ಸಂಶೋಧನೆ ಅಗತ್ಯವಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಲೋಕನಾಥ್ ಎನ್. ಕೆ.ಹೇಳಿದರು.

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಮಾನವಿಕ ವಿಭಾಗಗಳಾದ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಸಮಾಜಶಾಸ್ತ್ರ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಆಯೋಜಿಸಿದ್ದ ''ಮುಂದುವರೆದ ಸಂಶೋಧನಾ ವಿಧಾನಗಳು ಮತ್ತು ಮಾರ್ಗಗಳು'' ಎಂಬ ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಉನ್ನತ ಶಿಕ್ಷಣದಲ್ಲಿ ಸಂಶೋಧನೆಯು ಪ್ರಮುಖವಾದ ಅಂಗವಾಗಿದ್ದು, ಅದು ವಿವಿಧ ಆಯಾಮಗಳಲ್ಲಿ ಸತ್ಯಶೋಧನೆಗೆ ಹೆಚ್ಚು ಒತ್ತುಕೊಡುವುದರ ಮೂಲಕ ಉತ್ತಮವಾದ ಸಮಾಜವನ್ನು ನಿರ್ಮಾಣ ಮಾಡಲು ಶ್ರಮಿಸಬೇಕು. ಜೊತೆಗೆ ನಾವು ಆಯ್ಕೆ ಮಾಡುವ ಸಂಶೋಧನಾ ವಿಷಯಗಳು ಸಮಾಜಕ್ಕೆ ಕೊಡುಗೆ ನೀಡುವಂತಿರಬೇಕು ಎಂದು ತಿಳಿಸಿದರು.

ಮುಖ್ಯಭಾಷಣಕಾರರಾಗಿ ಆಗಮಿಸಿದ್ದ, ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಸಮಿತಿ ನಿರ್ದೇಶಕ ಪ್ರೊ. ಆನಂದ್ ಡಿ. ಮಾತನಾಡಿ, ಇಂದಿನ



ತಾಂತ್ರಿಕ ಯುಗದಲ್ಲಿ ಯುವ ಸಂಶೋಧಕರಲ್ಲಿ ವೈಜ್ಞಾನಿಕ ಆಲೋಚನೆಗಳನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಮಾನವಿಕ ವಿಷಯಗಳಾದ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ ಹಾಗೂ ಸಮಾಜಶಾಸ್ತ್ರದಂತಹ ಬಹು ಆಯಾಮದ ಸಾಮಾಜಿಕ ವಿಜ್ಞಾನದ ಸಂಶೋಧನಾ ಚರ್ಚೆಗಳು ಮುಖ್ಯವಾಗಿದ್ದು, ಇವುಗಳಿಂದಮಾನವೀಯತೆಯ ಮೌಲ್ಯಗಳು, ತತ್ವ ಮತ್ತು ಸಿದ್ಧಾಂತಗಳನ್ನು ಸಂಶೋಧನಾರ್ಥಿ ಅಳವಡಿಸಿಕೊಂಡು ಸಮಾಜದಲ್ಲಿರುವ ಬಡತನ, ಸಾಮಾಜಿಕ ಅನ್ಯಾಯಗಳನ್ನು ಸರಿಪಡಿಸುವಲ್ಲಿ ಸಂಖ್ಯಾಶಾಸ್ತ್ರ ಮತ್ತು ಗಣಿತಶಾಸ್ತ್ರದ ಅಂಕಿ-ಅಂಶಗಳ ಮೂಲಕ ಸಮಸ್ಯೆಗಳನ್ನು ದಾಖಲೆಗಳ ಮೂಲಕ ತಿಳಿಯಪಡಿಸುತ್ತಾ, ಸಮಾಜದ ಒಳಿತಿಗೆ ಸದಾ ಶ್ರಮಿಸಲು ಮುಂದಾಗಬೇಕೆಂದು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಸಿ.ಕೆ. ರೇಣುಕಾರ್ಯ, ಮಹಾಜನ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಸರೋಜಮ್ಮ,ಐಕ್ಯೂಎಸಿ ಸಂಚಾಲಕಿ ಗೀತಾ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸೋಮಶೇಖರ್, ಶೈಕ್ಷಣಿಕ ಡೀನ್ ಡಾ. ಶ್ರೀಧರ ಎಚ್, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ವೆಂಕಟಲಕ್ಷ್ಮಿ ಎಂ.ಎನ್, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ದೀಪು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 7.03.2024

ಬಹು ಆಯಾಮದ ಸಂಶೋಧನೆ ಅತೀ ಅಗತ್ಯ

ಇದರಿಂದ ಆರೋಗ್ಯಕರ ಸಮಾಜದ ನಿರ್ಮಾಣ ಸಾಧ್ಯ: ರಾಷ್ಟ್ರೀಯ ಕಾರ್ಯಾಗಾರದಲ್ಲಿ ಪ್ರೊ.ಎನ್.ಕೆ. ಲೋಕನಾಥ್

• ಕನ್ನಡಪ್ರಭ ವಾರ್ತೆ ಮೈಸೂರು

ಸಂಶೋಧನೆಗಳು ವಿವಿಧ ಆಯಾಮಗಳಲ್ಲಿ ಸತ್ಯ ಶೋಧನೆಗೆ ಹೆಚ್ಚು ಆದ್ಯತೆ ನೀಡುವ ಮೂಲಕ ಉತ್ತಮ ಸಮಾಜವನ್ನು ನಿರ್ಮಿಸಲು ಶ್ರಮಿಸುತ್ತವೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ತಿಳಿಸಿದರು.

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮದರ್ಜೆ ಕಾಲೇಜಿನಮಾನವಿಕವಿಭಾಗಗಳಾದ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಸಮಾಜ ಶಾಸ್ತ್ರ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದಮುಂದುವರೆದಸಂಶೋಧನಾ ವಿಧಾನಗಳು ಮತ್ತು ಮಾರ್ಗಗಳು ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಉನ್ನತ ಶಿಕ್ಷಣದಲ್ಲಿ ಸಂಶೋಧನೆಯು ಪ್ರಮುಖವಾದಅಂಗವಾಗಿದ್ದು,ಅದುವಿವಿಧಆಯಾಮಗಳಲ್ಲಿ ಸತ್ಯಶೋಧನೆಗೆ ಹೆಚ್ಚು ಒತ್ತುಕೊಡುವುದರ ಮೂಲಕ ಉತ್ತಮವಾದ ಸಮಾಜವನ್ನು ನಿರ್ಮಾಣ ಮಾಡಲು ಶ್ರಮಿಸಬೇಕು. ಜೊತೆಗೆ ನಾವು ಆಯ್ಕೆ ಮಾಡುವ ಸಂಶೋಧನಾ ವಿಷಯಗಳು ಸಮಾಜಕ್ಕೆ ಕೊಡುಗೆ ನೀಡುವಂತಿರಬೇಕು ಎಂದು ಅವರು ತಿಳಿಸಿದರು.

ಮುಖ್ಯ ಭಾಷಣಕಾರರಾಗಿದ್ದ ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ. ಆನಂದ್ ಮಾತನಾಡಿ, ಇಂದಿನ ತಾಂತ್ರಿಕ ಯುಗದಲ್ಲಿ ಯುವ ಸಂಶೋಧಕರಲ್ಲಿ ವೈಜ್ಞಾನಿಕ ಆಲೋಚನೆ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಮಾನವಿಕ ವಿಷಯಗಳಾದ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ ಹಾಗೂ ಸಮಾಜಶಾಸ್ತ್ರದಂತಹ ಬಹು ಆಯಾಮದ ಸಾಮಾಜಿಕ ವಿಜ್ಞಾನದ ಸಂಶೋಧನಾ ಚರ್ಚೆಗಳು ಮುಖ್ಯ ಎಂದರು.

ಇವುಗಳಿಂದ ಮಾನವೀಯತೆಯ ಮೌಲ್ಯಗಳು, ತತ್ವಗಳು ಮತ್ತು ಸಿದ್ಧಾಂತ ಸಂಶೋಧನಾರ್ಥಿಗಳು ಅಳವಡಿಸಿಕೊಂಡು ಸಮಾಜದಲ್ಲಿರುವ ಬಡತನ, ಸಾಮಾಜಿಕಅನ್ಯಾಯಸರಿಪಡಿಸುವಲ್ಲಿಸಂಖ್ಯಾಶಾಸ್ತ್ರ ಮತ್ತು ಗಣಿತಶಾಸ್ತ್ರದ ಆಂಕಿ-ಅಂಶಗಳ ಮೂಲಕ ಸಮಸ್ಯೆಗಳನ್ನು ದಾಖಲೆಗಳ ಮೂಲಕ ತಿಳಿಯಪಡಿಸುತ್ತಾ, ಸಮಾಜದ ಒಳಿತಿಗೆ ಸದಾ ಶ್ರಮಿಸಲು ಮುಂದಾಗಬೇಕು. ಇದಕ್ಕೆ ಸಂಶೋಧನೆಗಳು ಜ್ಞಾನದ ವಿಕಾಸ ಮತ್ತು ನವಪ್ರವರ್ತನೆಗಳಿಗೆ ಹೆಚ್ಚು ಒತ್ತು ಕೊಡುವಂತಿರಬೇಕು ಎಂದು ಅವರು ವಿವರಿಸಿದರು.

ಅಧ್ಯಕ್ಷತೆವಹಿಸಿದ್ದವಹಿಸಿದ್ದಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಇಂದಿನ ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಸಂಶೋಧನೆಗಳು ನೇರವಾಗಿ ಸಮಸ್ಯೆಗಳನ್ನು ಬಗೆಹರಿಸುವಂತಿರಬೇಕು ಎಂದರು.

ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಸಿ.ಕೆ. ರೇಣುಕಾರ್ಯ, ಮಹಾಜನ ವಿದ್ಯಾ ಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಐಕ್ಯೂಎಸಿಸಂಚಾಲಕಿ ಡಿ. ಗೀತಾ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ. ಸೋಮಶೇಖರ್ ಇದ್ದರು. ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರಸ್ವಾಗತಿಸಿದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ಎನ್. ವೆಂಕಟಲಕ್ಷ್ಮಿ ಕಾರ್ಯಾಗಾರದಕುರಿತು ಪರಿಚಯಿಸಿದರು. ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ದೀಪು ವಂದಿಸಿದರು. ಡಾ.ಎಂ.ಆರ್. ಇಂದ್ಯಾನಿ ನಿರೂಪಿಸಿದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಾಗಾರವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟಿಸಿದರು. ಡಾ.ಡಿ. ಆನಂದ್, ಪ್ರೊ.ಪಿ.ಸರೋಜಮ್ಮ, ಪ್ರೊ.ಸಿ.ಕೆ. ರೇಣುಕಾರ್ಯ, ಡಾ.ಬಿ.ಆರ್. ಜಯಕುಮಾರಿ ಮೊದಲಾದವರು ಇದ್ದಾರೆ.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ

ಗುರುವಾರ,7 ಮಾರ್ಚ್ 2024

ಸಂಶೋಧನೆಗಳು ಸಮಾಜಕ್ಕೆ ಕೊಡುಗೆ ನೀಡಲಿ

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹೇಳಿಕೆ

ವಿಕ ಸುದ್ದಿಲೋಕ ಮೈಸೂರು

ಸಂಶೋಧನೆಗಳು ಸಮಾಜಕ್ಕೆ ಕೊಡುಗೆ ನೀಡುವಂತಿರಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹೇಳಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಶಿಕ್ಷಣ ಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ, ಅರ್ಥಶಾಸ್ತ್ರ ಭೂಗೋಳಶಾಸ್ತ್ರ ಮತ್ತು ಸಮಾಜಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಮುಂದುವರಿದ ಸಂಶೋಧನಾ ವಿಧಾನಗಳು ಮತ್ತು ಮಾರ್ಗಗಳು ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

''ಉನ್ನತ ಶಿಕ್ಷಣದಲ್ಲಿ ಸಂಶೋಧನೆ ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ಸತ್ಯ ಶೋಧನೆಗೆ ಹೆಚ್ಚು ಒತ್ತು ಕೊಡುವುದರ ಮೂಲಕ ಉತ್ತಮ ಸಮಾಜ ನಿರ್ಮಾಣ ಮಾಡಲು ಶ್ರಮಿಸಬೇಕು,'' ಎಂದು ಸಲಹೆ ನೀಡಿದರು.



ನಗರದ ಮಹಾಜನ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಕಾರ್ಯಾಗಾರವನ್ನು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಸಮಿತಿ ನಿರ್ದೇಶಕ ಪ್ರೊ.ಡಿ.ಆನಂದ್ ಮಾತನಾಡಿ,''ಸಂಶೋಧನೆಗಳು ಸಮಾಜದ ಒಳಿತಿಗೆ, ಅಭಿವೃದ್ಧಿಗೆ ಪೂರಕವಾಗಿರಬೇಕು,'' ಎಂದರು.

''ಸಂಶೋಧನೆಗಳು ಜ್ಞಾನದ ವಿಕಾಸ ಮತ್ತು ನವಪ್ರವರ್ತನೆಗಳಿಗೆ ಹೆಚ್ಚು ಒತ್ತು ಕೊಡುವಂತಿರಬೇಕು,'' ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ''ಇಂದಿನ ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಸಂಶೋಧನೆಗಳು ನೇರವಾಗಿ ಸಮಸ್ಯೆಗಳನ್ನು ಬಗೆಹರಿಸುವಂತಿರಬೇಕು,'' ಎಂದರು. ಇದೇ ವೇಳೆ ಅರ್ಥಶಾಸ್ತ್ರ ವಿಭಾಗದ ಕೌಟಿಲ್ಯ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು.

ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾರ್ಯ, ಮಹಾಜನ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಐಕ್ಯೂಎಸಿ ಸಂಚಾಲಕಿ ಡಿ.ಗೀತಾ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ. ಸೋಮಶೇಖರ್, ಶೈಕ್ಷಣಿಕ ಡೀನ್ ಡಾ. ಎಚ್.ಶ್ರೀಧರ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ಎನ್.ವೆಂಕಟಲಕ್ಷ್ಮೀ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ದೀಪು, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ ಇದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ
ಗುರುವಾರ 7 ಮಾರ್ಚ್ 2024
7 MARCH 2024

ಮೈವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ | ರಾಷ್ಟ್ರ ಮಟ್ಟದ ಕಾರ್ಯಾಗಾರ

ಸಂಶೋಧನೆಗಳು ಸಮಾಜಕ್ಕೆ ಕೊಡುಗೆ ನೀಡುವಂತಿರಲಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ವಿಶ್ವವಿದ್ಯಾಲಯ ಸೇರಿದಂತೆ ಇನ್ನಿತರ ಸಂಸ್ಥೆಗಳಿಂದ ನಡೆಯುವ ಸಂಶೋಧನೆ ಗಳು ಸಮಾಜಕ್ಕೆ ಕೊಡುಗೆ ನೀಡುವಂತಿರಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಹೇಳಿದರು.

ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ವಿದ್ಯಾಸಂಸ್ಥೆಯ ವಿವೇಕಾನಂದ ಭವನದಲ್ಲಿ ಬುಧವಾರ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಸಮಾಜಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಮುಂದುವರಿದ ಸಂಶೋಧನಾ ವಿಧಾನಗಳು ಮತ್ತು ಮಾರ್ಗಗಳ ವಿಷಯ ಕುರಿತ ಒಂದು ದಿನದ ರಾಷ್ಟ್ರ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಉನ್ನತ ಶಿಕ್ಷಣದಲ್ಲಿ ಸಂಶೋಧನೆ ಪ್ರಮುಖ ಅಂಗವಾಗಿದ್ದು, ಅದು ವಿವಿಧ ಆಯಾಮಗಳಲ್ಲಿ ಸತ್ಯಶೋಧನೆಗೆ ಹೆಚ್ಚು ಒತ್ತು ಕೊಡುವುದರ ಮೂಲಕ ಉತ್ತಮ ಸಮಾಜ ನಿರ್ಮಾಣ ಮಾಡಲು ಶ್ರಮಿಸಬೇಕು. ಸಂಶೋಧನೆಗಳಿಂದ ಯಾವುದೇ ತೊಂದರೆಯಾಗ ಬಾರದೆಂದು ಹೇಳಿದರು.

ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಸಮಿತಿ ನಿರ್ದೇಶಕ ಪ್ರೊ.ಡಿ.ಆನಂದ್ ಮಾತನಾಡಿ, ಇಂದಿನ ತಾಂತ್ರಿಕ ಯುಗದಲ್ಲಿ ಯುವ ಸಂಶೋಧಕರಲ್ಲಿ ವೈಜ್ಞಾನಿಕ ಆಲೋಚನೆಗಳನ್ನು ಗಟ್ಟಿಗೊಳಿಸುವ



ವಿಜಯವಾಣಿ

ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿದ್ದ ಕಾರ್ಯಾಗಾರವನ್ನು ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು. ಪ್ರೊ.ಡಿ.ಆನಂದ್, ಡಾ.ಬಿ.ಆರ್.ಜಯಕುಮಾರಿ, ಪ್ರೊ.ಸಿ.ಕೆ.ರೇಣುಕಾರ್ಯ, ಪ್ರೊ.ಪಿ.ಸರೋಜಮ್ಮ ಇತರರಿದ್ದರು.

ನಿಟ್ಟಿನಲ್ಲಿ ಮಾನವಿಕ ವಿಷಯಗಳಾದ ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ ಹಾಗೂ ಸಮಾಜಶಾಸ್ತ್ರದಂತಹ ಬಹು ಆಯಾಮದ ಸಾಮಾಜಿಕ ವಿಜ್ಞಾನದ ಸಂಶೋಧನಾ ಚರ್ಚೆಗಳು ಮುಖ್ಯ ಎಂದು ಅಭಿಪ್ರಾಯಪಟ್ಟರು. ಇವುಗಳಿಂದ ಮಾನವೀಯ ಮೌಲ್ಯಗಳು, ತತ್ವಗಳು ಮತ್ತು ಸಿದ್ಧಾಂತಗಳನ್ನು ಸಂಶೋಧನಾರ್ಥಿಗಳು ಅಳವಡಿಸಿಕೊಂಡು ಸಮಾಜದಲ್ಲಿ ರುವ ಬಡತನ, ಸಾಮಾಜಿಕ ಅನ್ಯಾಯಗಳನ್ನು ಸರಿಪಡಿಸುವಲ್ಲಿ ಸಂಖ್ಯಾಶಾಸ್ತ್ರ ಮತ್ತು ಗಣಿತಶಾಸ್ತ್ರದ ಆಂಕಿ-ಅಂಶಗಳ ಮೂಲಕ ಸಮಸ್ಯೆಗಳನ್ನು ತಿಳಿಯಪಡಿಸಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಳ್ಳ ಬೇಕು. ಸಂಶೋಧನೆಗಳು ಜ್ಞಾನದ ವಿಕಾಸ ಮತ್ತು ನವಪ್ರವರ್ತನೆ ಗಳಿಗೆ ಹೆಚ್ಚು ಒತ್ತು ಕೊಡುವಂತಿರಬೇಕು. ವಿದ್ಯಾರ್ಥಿಗಳು ಕೈಗೊಳ್ಳುವ ಸಂಶೋಧನೆ ಗಳು ಸಮಾಜದ ಒಳಿತಿಗೆ, ಅಭಿವೃದ್ಧಿಗೆ ಪೂರಕವಾಗಿರಬೇಕು ಎಂದರು. ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಇಂದಿನ ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಸಂಶೋಧನೆಗಳು ನೇರವಾಗಿ ಸಮಸ್ಯೆಗಳನ್ನು ಬಗೆಹರಿಸುವಂತಿರಬೇಕು. ಮೌಲ್ಯಯುತ ಸಂಶೋಧನೆಗಳ ಕಡೆಗೆ ಹೆಚ್ಚು ಗಮನ ನೀಡಬೇಕಿದೆ ಎಂದು ಹೇಳಿದರು.

ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ. ರೇಣುಕಾರ್ಯ, ಮಹಾಜನ ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಐಕ್ಯೂಎಸಿ ಸಂಚಾಲಕಿ ಡಿ.ಗೀತಾ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ.ನೋಮಶೇಖರ್, ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ಎನ್. ವೆಂಕಟಲಕ್ಷ್ಮೀ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ದೀಪು, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಇತರರು ಇದ್ದರು.

ಅರ್ಥಶಾಸ್ತ್ರ ವಿಭಾಗದ ಕೌಟಿಲ್ಯ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು. ಕಾರ್ಯಾಗಾರದಲ್ಲಿ ವಿವಿಧ ವಿಭಾಗದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 6.03.2024

■ **ಮಹಾಜನ ಪ್ರಥಮ ದರ್ಜೆ ಕಾಲೇಜು:** ಸಂಶೋಧನಾ ವಿಧಾನಗಳು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ- ಮೈವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಮುಖ್ಯ ಅತಿಥಿ- ಟಿ. ಮುರಳೀಧರ ಭಾಗವತ್, ದಿಕ್ಸೂಚಿ ಭಾಷಣ- ಪ್ರೊ.ಡಿ. ಆನಂದ್, ಅಧ್ಯಕ್ಷತೆ- ಟಿ. ವಿಜಯಲಕ್ಷ್ಮೀ ಮುರಳೀಧರ್, ಉಪಸ್ಥಿತಿ- ಡಾ.ಬಿ.ಆರ್. ಜಯಕುಮಾರಿ, ಡಾ.ಸಿ.ಕೆ. ರೇಣುಕಾರ್ಯ, ಜಯಲಕ್ಷ್ಮೀಪುರಂ, ವಿವೇಕಾನಂದ ಸಭಾಂಗಣ, ಬೆಳಗ್ಗೆ 10.15.

ಆಂದೋಲನ

ದಿನ ಪತ್ರಿಕೆ

ಬುಧವಾರ, 6 ಮಾರ್ಚ್ 2024

● **ಒಂದು ದಿನದ ರಾಷ್ಟ್ರೀಯ ವಿಚಾರಸಂಕಿರಣ**

ಬೆಳಿಗ್ಗೆ 10.15ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಸಮಾಜ ಶಾಸ್ತ್ರ ವಿಭಾಗ, ವಿಷಯ-ಮುಂದುವರಿದ ಸಂಶೋಧನಾ ವಿಧಾನಗಳು, ಉದ್ಘಾಟನೆ-ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿ-ಮಹಾಜನ ಎಜುಕೇಶನ್ ಸೊಸೈಟಿಯ ಅಧ್ಯಕ್ಷ ಟಿ.ಮುರಳೀಧರ ಭಾಗವತ್ತ, ಅಧ್ಯಕ್ಷತೆ-ಗೌರವ ಕಾರ್ಯದರ್ಶಿ ಡಾ.ಟಿ.ವಿಜಯ ಲಕ್ಷ್ಮಿ ಮುರಳೀಧರ್, ಸ್ಥಳ-ವಿವೇಕಾನಂದ ಭವನ, ಮಹಾಜನ ಪಿಯು ಕಾಲೇಜು ಆವರಣ, ಜಯಲಕ್ಷ್ಮಿಪುರಂ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 6 ಮಾರ್ಚ್ 2024

■ **ಮಹಾಜನ ಪ್ರಥಮ ದರ್ಜೆ ಕಾಲೇಜು, ಇತಿಹಾಸ, ಅರ್ಥಶಾಸ್ತ್ರ, ಭೂಗೋಳಶಾಸ್ತ್ರ, ಸಮಾಜಶಾಸ್ತ್ರ ಅಧ್ಯಯನ ವಿಭಾಗಗಳು :** ಅಡ್ವಾನ್ಸ್ಡ್ ರಿಸರ್ಚ್ ಮೆಥಡ್ಸ್ ಅಂಡ್ ಅಪ್ರೋಚಸ್ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಮಹಾಜನ ಎಜುಕೇಷನ್ ಸೊಸೈಟಿ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಪ್ರಾಸ್ತಾವಿಕ ನುಡಿ : ಮೈಸೂರು ವಿವಿ ಸಿಡಿಸಿ ನಿರ್ದೇಶಕ ಪ್ರೊ. ಡಿ. ಆನಂದ್, ಅಧ್ಯಕ್ಷತೆ : ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಬಿ.ಆರ್. ಜಯಕುಮಾರಿ, ನಿರ್ದೇಶಕ ಡಾ. ಸಿ.ಕೆ. ರೇಣುಕಾರ್ಯ, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 10.15ಕ್ಕೆ.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 17.03.2024

ಎನ್ನೆಸ್ಸೆಸ್‌ನಿಂದ ಸಾಮಾಜಿಕ ಸೇವೆ ಮಹತ್ವ ಅರಿವು

ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಶೈಕ್ಷಣಿಕ ಸಲಹೆಗಾರ ಡಾ. ಎಸ್. ತುಕಾರಾಂ | ಮಹಾಜನ ಕಾಲೇಜಿನ ಎನ್ನೆಸ್ಸೆಸ್ ಸಮಾರೋಪ

• ಕನ್ನಡಪ್ರಭ ವಾರ್ತೆ ಮೈಸೂರು

ಸಾಮಾಜಿಕ ಸೇವೆಯ ಮಹತ್ವವನ್ನು ರಾಷ್ಟ್ರೀಯ ಸೇವಾ ಯೋಜನೆಯು ಪ್ರಾಯೋಗಿಕವಾಗಿ ಕಲಿಸಿಕೊಡುತ್ತದೆ ಸಮಾಜ ಕಲ್ಯಾಣ ಇಲಾಖೆಯ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಶೈಕ್ಷಣಿಕ ಸಲಹೆಗಾರ ಡಾ. ಎಸ್. ತುಕಾರಾಂ ಹೇಳಿದರು.

ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಘಟಕಗಳ ವತಿಯಿಂದ ಟಿ. ನರಸೀಪುರ ತಾಲೂಕಿನ ಲಕ್ಷ್ಮೀಪುರ ಗ್ರಾಮದಲ್ಲಿ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಜೀವನದಲ್ಲಿ ಕೆಲವು ವಿಚಾರಗಳು ಬರುತ್ತವೆ-ಹೋಗುತ್ತವೆ. ಆದರೆ ಮನುಷ್ಯ ಸದೃಢವಾಗಿ ನಿಲ್ಲಬೇಕು. ಎನ್.ಎಸ್.ಎಸ್ ದೈನಂದಿನ ಬದುಕಿನಲ್ಲಿ ಸಮಯಪಾಲನೆ, ಶಿಸ್ತು, ಒಗ್ಗಟ್ಟು, ಸಾಮಾಜಿಕ ಸೇವೆಯ ಮಹತ್ವ ಸ್ವಚ್ಛತೆ ಹೀಗೆ ಅನೇಕ ವಿಚಾರಗಳನ್ನು ಕಲಿಸಿಕೊಡುತ್ತದೆ ಎಂದು ಜೀವನದ ಮೌಲ್ಯ ಹಾಗೂ ಹಳ್ಳಿಯ ಮಹತ್ವ ಕುರಿತು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು.



ಲಕ್ಷ್ಮೀಪುರದ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕ ಎಂ.ಎಸ್. ಮೋಹನ್ ಕುಮಾರ್‌ಮಾತನಾಡಿ, ಮಹಾಜನ ಸಂಸ್ಥೆಯು ಶೈಕ್ಷಣಿಕವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿ ವಿದ್ಯಾರ್ಥಿಗಳನ್ನು ತೊಡಗಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯಂತಹ ಅನೇಕ ಚಟುವಟಿಕೆಗಳಿಗೂ ಮಹತ್ವ ನೀಡುತ್ತಾ ಬಂದಿದೆ. ಮುಂದುವರೆದು, ಗ್ರಾಮದ ಸ್ವಚ್ಛತೆ, ಆರೋಗ್ಯಕರ ಆಹಾರ ಮತ್ತು ವೈದ್ಯಕೀಯ ತಪಾಸಣೆಯ ಜೊತೆಗೆ ಅನೇಕ ಮನರಂಜನೆಯ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಸಂತಸ ತಂದಿದೆ ಎಂದರು.

ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಸಲಹಾ ಸಮಿತಿ ಸದಸ್ಯರಾದ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಆರ್. ತಿಮ್ಮೇಗೌಡ ಮಾತನಾಡಿ, ಉತ್ತಮ ವಿದ್ಯಾಭ್ಯಾಸ ಹಾಗೂ ಉನ್ನತ ಅಧಿಕಾರಿಗಳಾಗಿ ಸಮಾಜಸೇವೆ ಮಾಡಬೇಕೆಂದು ಗ್ರಾಮದ ಜನರಿಗೆ ಮತ್ತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ ಅವರು ಗ್ರಾಮಸ್ಥರನ್ನು ಹಾಗೂ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಯುವಕ-ಯುವತಿಯರು ಶಿಕ್ಷಣದಿಂದ ದೂರ ಉಳಿಯದಿರಿ ಹಾಗೂ ಉತ್ತಮ ವಿದ್ಯಾಭ್ಯಾಸವನ್ನು ಪಡೆದು ಉತ್ತಮ ಜೀವನ ರೂಪಿಸಿಕೊಂಡು ಹೆತ್ತವರಿಗೆ ಹಾಗೂ ದೇಶಕ್ಕೆ ಆಸ್ತಿಯಾಗಿರಿ ಎಂದು ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಂ. ನಾಗೇಶ್, ಬಿಸಿಎ ವಿಭಾಗದ ಸಹಾಯಕಪ್ರಾಧ್ಯಾಪಕಿಸುಭಾಷಿನಿ,ಪತ್ರಿಕೋದ್ಯಮ ವಿಭಾಗದ ರಾಜೇಂದ್ರ ಪ್ರಸಾದ್, ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು, ಸ್ವಯಂ ಸೇವಕ-ಸೇವಕಿಯರು, ವಿದ್ಯಾರ್ಥಿಗಳು ಇದ್ದರು.

ಕಾರ್ಯಕ್ರಮಾಧಿಕಾರಿಗಳಾದ ಡಾ.ಜಿ. ದೊಡ್ಡರಸಯ್ಯ ಮತ್ತು ಶಿಬಿರಾರ್ಥಿಗಳು ಹಾಗೂ ಗ್ರಾಮದ ಯಜಮಾನರು, ಎನ್.ಎಸ್.ಎಸ್. ಶಿಬಿರದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಗಣ್ಯರು ಹಾಗೂ ಗ್ರಾಮಸ್ಥರನ್ನು ಎನ್.ಎಸ್.ಎಸ್. ಘಟಕದ ವತಿಯಿಂದ ಸನ್ಮಾನಿಸಲಾಯಿತು. ಏಳು ದಿನಗಳು ನಡೆದ ಎನ್.ಎಸ್.ಎಸ್. ಶಿಬಿರದಲ್ಲಿ ಸ್ವಯಂಸೇವಕರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿತ್ತು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಹಾಗೂ ಅತ್ಯುತ್ತಮ ತಂಡಗಳಿಗೆ ಬಹುಮಾನ ವಿತರಿಸಿತು. ಲಕ್ಷ್ಮೀಪುರ ಗ್ರಾಮಸ್ಥರು ಮಹಾಜನ ಕಾಲೇಜಿನ ಎನ್.ಎಸ್.ಎಸ್. ಘಟಕಕ್ಕೆ ಪಾರಿತೋಷಕ ನೀಡಿ ಗೌರವಿಸಿದರು.

ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಗಳಾದ ಸಿ.ಎಸ್. ಸಿದ್ದರಾಜು ವಂದಿಸಿದರು. ಲಕ್ಷ್ಮೀಪುರ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 3.7.2023

ರಂಗಭೂಮಿ ನಾಟಕಕ್ಕೆ ಭಾವನೆ ಜೊತೆ ಬೆರೆಯುವ ಶಕ್ತಿಯಿದೆ

ರಂಗಭೂಮಿ ಕಲಾವಿದೆ ಗೀತಾ ಮೋಂಟಡ್ಕ ಅಭಿಮತ



• **ಕನ್ನಡಪ್ರಭ ವಾರ್ತೆ** ಮೈಸೂರು

ಸಿನಿಮಾಗಳು ಕೇವಲ ಮನರಂಜನೆಗೆ ಸೀಮಿತವಾದರೆ, ನಾಟಕ ಅಥವಾ ರಂಗಭೂಮಿ ಜನರ ಜೀವನದ ಹಾಗೂ ಭಾವನೆಗಳ ಜೊತೆ ಬೆರೆಯುವ ಶಕ್ತಿಯಿದೆ ಎಂದು ಹಿರಿಯ ರಂಗಭೂಮಿ ಕಲಾವಿದೆ ಗೀತಾ ಮೋಂಟಡ್ಕ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರತಿಭಾ ವೇದಿಕೆ, ಸಾರಾಂತ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿದ್ದ ರಂಗನೋಟ ಎಂಬ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಂಗಭೂಮಿಗೆ ಮತ್ತು ನಾಟಕ ಕ್ಷೇತ್ರಕ್ಕೆ ಸೇರಲು ಹೋದಾಗ ಸಮಾಜ ನೋಡುವ ರೀತಿಯೇ ಬೇರೆ, ಅದರಲ್ಲೂ ಹೆಣ್ಣುಮಕ್ಕಳು ಸೇರಲು ಕಷ್ಟವಾಗಿದೆ ಎಂದು ಹೇಳಿದರು.

ಸಿನಿಮಾ ಹಾಗೂ ಕಿರುತೆರೆ ಹಣ ಮಾಡಲು ಮತ್ತು ಪ್ರಸಿದ್ಧಿಯಾಗಲು ಅವಕಾಶ ನೀಡುತ್ತದೆ. ಆದರೆ, ನಾಟಕದಲ್ಲಿ ಮನುಷ್ಯನ ಭಾವನೆಯನ್ನು ನಡವಳಿಕೆಯನ್ನು ವ್ಯಕ್ತಪಡಿಸಲು, ಆತ್ಮವಿಮರ್ಶೆ ಮಾಡಿಕೊಳ್ಳಲು ಜೊತೆಗೆ ಜನರಿಗೆ ಅರಿವಿಲ್ಲದ ವಿಷಯವನ್ನು ಹೇಳಿಕೊಡುವುದರ ಮೂಲಕ ಅರಿವು ಮೂಡಿಸುವ ವೇದಿಕೆಯಾಗಿದೆ ಎಂದರು.

ಮನುಷ್ಯನ ಎಲ್ಲಾ ಭಾವನೆಗಳನ್ನು ಕೇವಲ ಕಣ್ಣುಗಳ ನೋಟದಿಂದ ಕಂಡು ಹಿಡಿಯಲು ಸಾಧ್ಯ. ನಾಟಕದಲ್ಲಿ ಕಲಾವಿದನ ಶರೀರ ಹಾಗೂ ಶಾರೀರ ಮಹತ್ವದ ಪಾತ್ರ ವಹಿಸುತ್ತದೆ. ನಟರಿಗೆ ಏಕಾಗ್ರತೆ, ನೋಡುವ ನೋಟ, ಗ್ರಹಿಕೆ ಹಾಗೂ ಆಂಗಿಕ ಅಭಿನಯ ಮುಖ್ಯ ಎಂದು ಅವರು ತಿಳಿಸಿದರು.

ಇದೇ ವೇಳೆ ಪ್ರಾಣಿ ಪಕ್ಷಿಗಳು, ಸಂಗೀತ ವಾದ್ಯ ಹಾಗೂ ಇತರೆ ಮಿಮಿಕ್ರಿಗಳ ಮೂಲಕ ವಿದ್ಯಾರ್ಥಿಗಳನ್ನು ಗೀತಾ ಮೋಂಟಡ್ಕ ಅವರು ಮನರಂಜಿಸಿದರು. ಸುಪ್ರೀತ್ ಎಸ್. ಭಾರದ್ವಾಜ್ ಮತ್ತು ತಂಡದವರು ರಂಗಗೀತೆಗಳನ್ನು ಹಾಡಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ , ಪ್ರತಿಭಾ ವೇದಿಕೆ ಸಂಚಾಲಕ ಎಂ. ನಾಗೇಶ್, ಸಾರಂತದ ಸಂಚಾಲಕ ರಾಧೇಶ್ ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಭಾನುವಾರ, 3 ಮಾರ್ಚ್ 2024

ಸರಸ್ವತಿ ವಾಸುದೇವಮೂರ್ತಿ ಅವರಿಗೆ ಶ್ರದ್ಧಾಂಜಲಿ

ಮೈಸೂರು: ಮಹಾಜನ ಶಿಕ್ಷಣ ಸಂಸ್ಥೆ ಜ್ಞಾನಮುಖಿಯಾದ ಶಿಕ್ಷಣ ಸಂಸ್ಥೆಯಾಗಿ ರೂಪುಗೊಳ್ಳುವಲ್ಲಿ ಆರ್. ವಾಸುದೇವಮೂರ್ತಿ ಅವರ ಪರಿಶ್ರಮ ಎಷ್ಟಿದೆಯೋ, ಅಷ್ಟೇ ಪರಿಶ್ರಮ ಹಾಗೂ ಜವಾಬ್ದಾರಿ ಅವರ ಪತ್ನಿ ಆರ್.ವಿ.ಸರಸ್ವತಿ ಅವರದ್ದಾಗಿತ್ತು ಎಂಬುದನ್ನು ನಾವೆಲ್ಲರೂ ಸ್ಮರಿಸಬೇಕಾಗಿದೆ ಎಂದು ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಹೇಳಿದರು.

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಮಹಾಜನ ವಿದ್ಯಾ ಸಂಸ್ಥೆಯ ಮಾರ್ಗದರ್ಶಿಗಳು ಮತ್ತು ಅಧ್ಯಕ್ಷರಾಗಿದ್ದ ಹಿರಿಯ ಚೇತನ, ದಿ. ಆರ್.ವಾಸುದೇವಮೂರ್ತಿ ಅವರ ಪತ್ನಿ ಆರ್.ವಿ.ಸರಸ್ವತಿ ವಾಸುದೇವಮೂರ್ತಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು.

ವಾಸುದೇವಮೂರ್ತಿ ಅವರ ಸಮಾಜಮುಖಿ ಕಾರ್ಯದಲ್ಲಿ ಸರಸ್ವತಿ ಅವರು ಎಲೆಮರೆಯ ಕಾಯಿಯಾಗಿ ಕೌಟುಂಬಿಕವಾಗಿ ದುಡಿದದ್ದು



ಹೊರನೋಟಕ್ಕೆ ಕಾಣುವುದಿಲ್ಲ. ವಾಸುದೇವಮೂರ್ತಿ ಅವರ ಕಾರ್ಯದಕ್ಷತೆಯ ಹಿಂದೆ, ಕುಟುಂಬದ ಒಳಗೆ ಒಂದು ಜೀವಂತಿಕೆಯ ವಾತಾವರಣವನ್ನು ಇಟ್ಟುಕೊಂಡು, ಕುಟುಂಬ ಹಾಗೂ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬಂದ ಸರಸ್ವತಿ ಅವರ ಪಾತ್ರ ದೊಡ್ಡದು ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್.ತಿಮ್ಮೇಗೌಡ ಮಾತನಾಡಿ, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿದ್ದ ದಿ.ಆರ್. ವಾಸುದೇವಮೂರ್ತಿ ಅವರ ಪತ್ನಿ ಆರ್.ವಿ.ಸರಸ್ವತಿ ವಾಸುದೇವಮೂರ್ತಿ ಅವರ ಅಗಲಿಕೆಯಿಂದ ಸಂಸ್ಥೆಗೆ ಅಪಾರ ನಷ್ಟ ಉಂಟಾಗಿದೆ ಎಂದರು.

ಸಿಇಒ ಡಾ.ಎಸ್.ಆರ್.ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ, ಎಲ್ಲಾ ವಿಭಾಗಗಳ ಮುಖ್ಯಸ್ಥರು ಹಾಗೂ ಅಧ್ಯಾಪಕರು, ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 8.03.2024

ನುಡಿನಮನ ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮ

ಆರ್.ವಿ. ಸರಸ್ವತಿ ವಾಸುದೇವಮೂರ್ತಿಗೆ ಅಶ್ರುತರ್ಪಣ

• ಕನ್ನಡಪ್ರಭ ವಾರ್ತೆ ಮೈಸೂರು

ಮಹಾಜನ ವಿದ್ಯಾಸಂಸ್ಥೆಯ ಮಾರ್ಗದರ್ಶಿಗಳು ಮತ್ತು ಅಧ್ಯಕ್ಷರಾಗಿದ್ದ ಆರ್. ವಾಸುದೇವಮೂರ್ತಿ ಅವರ ಪತ್ನಿ ಆರ್.ವಿ. ಸರಸ್ವತಿ ವಾಸುದೇವಮೂರ್ತಿ ಅವರ ಅಗಲಿಕೆಗೆ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕ, ಅಧ್ಯಾಪಕೇತರ ಸಿಬ್ಬಂದಿ ವರ್ಗದವರು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಇತಿಹಾಸವನ್ನು ತಿಳಿಯದೆ ಮುಂದಿನದನ್ನು ತಿಳಿಯಲು ಸಾಧ್ಯವಿಲ್ಲ. ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳು ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಮಹತ್ವವಾಗಿದೆ. ಹಾಗಾಗಿ ಆರ್.ವಿ. ಸರಸ್ವತಿ ವಾಸುದೇವಮೂರ್ತಿ ಅವರನ್ನು ನೆನೆವು



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆರ್.ವಿ. ಸರಸ್ವತಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮಾಡಿಕೊಳ್ಳಲು ಕಾರಣವೇನೆಂದರೆ, ಮೂಲಕ ಸುಂದರ ಭವಿಷ್ಯ ಕಟ್ಟಕೊಡುವಲ್ಲಿ ಅಸಂಖ್ಯಾತ ವಿದ್ಯಾರ್ಥಿಗಳಿಗೆ ಶಿಕ್ಷಣದ ಹಾಗೂ ಅಸಂಖ್ಯಾತ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಟ್ಟು ಅವರ ಜೀವನ ಸುಲಲಿತವಾಗಿ ನಡೆಯುತ್ತಿದೆ ಎಂದರೆ ಒಬ್ಬ ಪುರುಷನ ಯಶಸ್ಸಿನ ಹಿಂದೆ ಒಬ್ಬ ಹೆಣ್ಣು ಹೆಂಡತಿ, ತಾಯಿ ಇರುವುದನ್ನು ಯಾರೂ ಎಂದು ಮರೆಯಬಾರದು ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ ಮಾತನಾಡಿ, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷರಾಗಿದ್ದ ದಿವಂಗತ ಆರ್. ವಾಸುದೇವಮೂರ್ತಿ ಅವರ ಪತ್ನಿ ಆರ್.ವಿ. ಸರಸ್ವತಿ ವಾಸುದೇವಮೂರ್ತಿ ಅವರ ಅಗಲಿಕೆಯಿಂದ ಸಂಸ್ಥೆಗೆ ಅಪಾರ ನಷ್ಟವಾಗಿದೆ. 93 ವರ್ಷಗಳ ಸಾರ್ಥಕ ಜೀವನವನ್ನು ಸಾಗಿಸಿ ವಯೋಸಹಜವಾಗಿ ನಮ್ಮನ್ನು ಅಗಲಿದ್ದಾರೆ. ಆರ್.ವಿ. ಸರಸ್ವತಿ ಅವರದು ಆದರ್ಶ ದಾಂಪತ್ಯ,. ಆವರಿಗೆ ಬೆನ್ನೆಲುಬಾಗಿ ನಿಂತ ಸಾತ್ವಿಕ ವ್ಯಕ್ತಿತ್ವ ಹೊಂದಿದವರು. ಶಿಕ್ಷಣವನ್ನು ಬಂಡವಾಳ ಮಾಡಿಕೊಂಡಿರುವ ಈ ಹೊತ್ತಿನಲ್ಲಿ ಶಿಕ್ಷಣವನ್ನು ಜನತೆಯ ಉದ್ಧಾರಕ್ಕಾಗಿ ವಿನಿಯೋಗ ಮಾಡಿದ ಸಾರ್ಥಕ ಸಾಧಕರು. ಆರ್. ವಾಸುದೇವಮೂರ್ತಿ ಹಾಗೂ ಸರಸ್ವತಿ ಅವರು. ಶ್ರೀಮಂತಿಕೆಯೊಳಗೆ ಇದ್ದರೂ ಸರಳತೆಗೆ ಹೆಸರಾದ್ದರು. ರಟ್ಟೇಹಳ್ಳಿ ರಾಮಪ್ಪನವರು ಕಟ್ಟಿದ ಮಹಾಜನ ವಿದ್ಯಾಸಂಸ್ಥೆಯನ್ನು ಆರ್. ವಾಸುದೇವಮೂರ್ತಿ ಅವರು ಬೆಳಸುವಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ಮಾಡಿದವರು ಸರಸ್ವತಿ ಅವರು ಎಂದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ.ಎಸ್. ಆರ್. ರಮೇಶ್, ಕೃಷ್ಣಕ ಡೀನ್ ಡಾ. ಎಚ್. ಶ್ರೀಧರ, ಎಲ್ಲಾ ವಿಭಾಗಗಳ ಮುಖ್ಯಸ್ಥರು ಹಾಗೂ ಅಧ್ಯಾಪಕರು, ಅಧ್ಯಾಪಕೇತರರು ಇದ್ದರು.

ಆಂದೋಲನ
ದಿನ ಪತ್ರಿಕೆ

ಭಾನುವಾರ, 24 ಮಾರ್ಚ್ 2024

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾರದ ಸಮಾವೇಶ



ಮೈಸೂರು: ತೀರ್ಥ ಕ್ಷೇತ್ರಗಳನ್ನು ಸುತ್ತುವುದರ ಬದಲು ಜನ್ಮಕೊಟ್ಟ ತಂದೆ, ತಾಯಿಯರನ್ನು ಪ್ರೀತಿ ಮತ್ತು ಕಾಳಜಿಯಿಂದ ನೋಡಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಯ ಜನ್ಮಸಿದ್ಧ ಕರ್ತವ್ಯವಾಗಿದೆ ಎಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕ ಡಾ.ಶಂಕರ ಬಿದರಿ ತಿಳಿಸಿದರು.

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ನಡೆದ ವಾರದ ಸಮಾವೇಶದಲ್ಲಿ ಮಾತನಾಡಿದ ಅವರು, ಸ್ವತಂತ್ರ ಭಾರತ ಹಲವು ಧರ್ಮ, ಜಾತಿ, ಭಾಷೆ ಮತ್ತು ಸಂಸ್ಕೃತಿಗಳನ್ನು ಒಳಗೊಂಡಿದ್ದು, ವೈವಿಧ್ಯತೆಯಿಂದ ಕೂಡಿದೆ. ಆದ್ದರಿಂದ ಕೋಟ್ಯಂತರ ಸಂಖ್ಯೆಯಲ್ಲಿರುವ ನಾವೆಲ್ಲರೂ ಭಾರತೀಯರು ಎಂಬ ಭಾವನೆಯನ್ನು ಸದಾ ಹೊಂದಿರಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಶಂಕರ ಬಿದರಿ ಹಾಗೂ ಗುರು ದ್ರೋಣಾಚಾರ್ಯ ಎಜುಕೇಟರ್ ಆಫ್ ದಿ ಇಯರ್-2023 ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದ ಡಾ.ಕ್ಯಾಪ್ಟನ್ ಇಂದ್ರಾಣಿ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಎನ್‌ಸಿಸಿ ಅಧಿಕಾರಿ ಡಾ.ಪಿ.ಜಿ.ಪುಷ್ಪರಾಣಿ, ಎನ್.ಸುನಿಲ್ ಇತರರು ಹಾಜರಿದ್ದರು.

ಉದಯವಾಣಿ

ದಿನಪತ್ರಿಕೆ

ಬುಧವಾರ, 27 ಮಾರ್ಚ್ 2024



ಚಿನ್ನದ ಪದಕ ಪುರಸ್ಕೃತ ವಿದ್ಯಾರ್ಥಿಗೆ ಸನ್ಮಾನ...ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ಸ್ನಾತಕೋತ್ತರ ಪದವಿಯ ಇತಿಹಾಸ ವಿಷಯದಲ್ಲಿ ಅತಿ ಹೆಚ್ಚು ಅಂಕಗಳೊಂದಿಗೆ 5 ಚಿನ್ನದ ಪದಕಗಳನ್ನು ಪಡೆದ ಮೈಸೂರಿನ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಹಿರಿಯ ವಿದ್ಯಾರ್ಥಿ ಶಾಬಜ್‌ಖಾನ್ ಅವರನ್ನು ಇತಿಹಾಸ ವಿಭಾಗದ ವತಿಯಿಂದ ಅಭಿನಂದಿಸಲಾಯಿತು. ನಿವೃತ್ತ ಪೊಲೀಸ್ ಮಹಾನಿರ್ದೇಶಕ ಡಾ.ಶಂಕರ ಬಿದರಿ, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ ಮತ್ತು ವಿಭಾಗದ ಅಧ್ಯಾಪಕರು ಹಾಜರಿದ್ದರು.

ಹೊಸ ದಿಗಂತ

ಭಾನುವಾರ, 24 ಮಾರ್ಚ್ 2024

ಸರ್ಕಾರದಿಂದ ಶಿಕ್ಷಣಕ್ಕೆ ಹೆಚ್ಚಿನ ಒತ್ತು

ಮೈಸೂರು: ಭಾರತ ನನ್ನದು ಎಂಬ ಹೆಮ್ಮೆ ಪ್ರತಿಯೊಬ್ಬವಿದ್ಯಾರ್ಥಿಗೂಇರಬೇಕು ಎಂದು ರಾಜ್ಯ ನಿವೃತ್ತ ಡಿಜಿಪಿ ಡಾ. ಶಂಕರ್ ಬಿದರಿ ಹೇಳಿದರು.

ನಗರದಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ವಿಶ್ವದಲ್ಲೇ ಭಾರತಕ್ಕೆ ಅದರಲ್ಲೂ ಕರ್ನಾಟಕದ ಮೈಸೂರಿಗೆ ಒಂದು ಐತಿಹಾಸಿಕವಾದ ಸಂಸ್ಕೃತಿ ಮತ್ತು ಪರಂಪರೆ ಇದೆ.

ಆಂದಿನಮೈಸೂರುಸಂಸ್ಥಾನಕ್ಕೆರಾಜ ಒಡೆಯರು, ಜಯಚಾಮರಾಜ ಒಡೆಯರು ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳು ವಿಶ್ವಮಟ್ಟದಲ್ಲಿ ಗಮನಸೆಳೆದಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ. ಸಮಾಜದಲ್ಲಿ ಹಿಂದುಳಿದ ವರ್ಗಗಳಿಗೆ, ತಳಸಮುದಾಯದವರಿಗೆ ಶಿಕ್ಷಣದಲ್ಲಿ ಹಾಗೂ ಸರ್ಕಾರದ ಸೇವೆಯಲ್ಲಿ ಮಿಸಲಾತಿ ಸೌಲಭ್ಯಗಳನ್ನು ನೀಡುವುದರ ಮೂಲಕ ಸಮಾಜದ ಸರ್ವಾಂಗೀಣ ಬೆಳವಣಿಗೆಗೆ ಮೈಸೂರು ಅರಸರ ಕೊಡುಗೆ ಅಪಾರವಾಗಿದೆ ಎಂದರು.

ಸ್ವತಂತ್ರ್ಯ ಭಾರತವಿವಿಧ ಧರ್ಮ, ಜಾತಿ, ಭಾಷೆಮತ್ತು ಸಂಸ್ಕೃತಿಗಳನ್ನು ಒಳಗೊಂಡಿದ್ದು, ವೈವಿಧ್ಯತೆಯಿಂದ ಕೂಡಿದೆ. ಆದ್ದರಿಂದ ಕೋಟ್ಯಾಂತರ ಸಂಖ್ಯೆಯಲ್ಲಿರುವ 'ನಾವೆಲ್ಲರೂ ಭಾರತೀಯರು ಎಂಬ ಭಾವನೆಯನ್ನು ಸದಾ ಹೊಂದಿರಬೇಕು. ಜೊತೆಗೆ ಭಾವೈಕ್ಯತೆಯಿಂದ ಕೂಡಿರಬೇಕು ಎಂದು ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿದರು. ಯುವಜನತೆ ಸದಾ ಶಾಂತಿ, ಸೌಹಾರ್ದತೆಯಿಂದ ನಡೆದುಕೊಂಡಾಗ ಮಾತ್ರ ಸಶಕ್ತ ಸಮೃದ್ಧ ಸಮಾಜವನ್ನು ಸೃಷ್ಟಿಸಲು ಸಾಧ್ಯವೆಂದರು.



ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 25.03.2024

ಸಶಕ್ತ ಸಮಾಜಕ್ಕೆ ಸೌಹಾರ್ದತೆ ಅತ್ಯಗತ್ಯ: ಶಂಕರ್ ಬಿದರಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಯುವಜನತೆ ಸದಾ ಶಾಂತಿ, ಸೌಹಾರ್ದತೆಯಿಂದ ನಡೆದುಕೊಂಡಾಗ ಮಾತ್ರ ಸಶಕ್ತ ಸಂಮೃದ್ಧ ಸಮಾಜವನ್ನು ಸೃಷ್ಟಿಸಲು ಸಾಧ್ಯ ಎಂದು ನಿವೃತ್ತ ಡಿಜಿಪಿ ಡಾ. ಶಂಕರ್‌ಬಿದರಿ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಮಾತನಾಡಿದ ಅವರು, ಸ್ವತಂತ್ರ್ಯ ಭಾರತ ಹಲವು ಧರ್ಮ, ಜಾತಿ, ಭಾಷೆ ಮತ್ತು ಸಂಸ್ಕೃತಿಗಳನ್ನು ಒಳಗೊಂಡಿದ್ದು, ವೈವಿಧ್ಯತೆಯಿಂದ ಕೂಡಿದೆ. ಆದ್ದರಿಂದ ಕೋಟ್ಯಾಂತರ ಸಂಖ್ಯೆಯಲ್ಲಿರುವ ನಾವೆಲ್ಲರೂ ಭಾರತೀಯರು ಎಂಬ ಭಾವನೆಯನ್ನು ಸದಾ ಹೊಂದಿರಬೇಕು. ಜೊತೆಗೆ ಭಾವೈಕ್ಯತೆಯಿಂದ ಕೂಡಿರಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ಡಾ.ಎಂ.ಆರ್. ಇಂದ್ರಾಣಿ, ಬಿ.ಆರ್. ನಿಖಿಲ್ ಇದ್ದರು.



ಡಾ.ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಡಾ.ಪಿ.ಜಿ. ಪುಷ್ಪರಾಣಿ ವಂದಿಸಿದರು. ಎನ್. ಸುನಿಲ್ ನಿರೂಪಿಸಿದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 27.03.2024



ಮೈಸೂರು ವಿವಿ ಎಂ.ಎ. ಇತಿಹಾಸ ವಿಷಯದಲ್ಲಿ ಅತಿ ಹೆಚ್ಚು ಅಂಕಗಳೊಂದಿಗೆ 5 ಚಿನ್ನದ ಪದಕಗಳನ್ನು ಪಡೆದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಹಿರಿಯ ವಿದ್ಯಾರ್ಥಿ ಶಾಬಜ್ ಖಾನ್ ಅವರನ್ನು ನಿವೃತ್ತ ಐಪಿಎಸ್ ಅಧಿಕಾರಿ ಡಾ. ಶಂಕರ್‌ಬಿದರಿ ಅಭಿನಂದಿಸಿದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಇದ್ದಾರೆ.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 27 ಮಾರ್ಚ್ 2024



ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ. ಸ್ನಾತಕೋತ್ತರ ಪದವಿಯ ಇತಿಹಾಸ ವಿಷಯದಲ್ಲಿ ಅತೀ ಹೆಚ್ಚು ಅಂಕಗಳೊಂದಿಗೆ ಐದು ಚಿನ್ನದ ಪದಕಗಳನ್ನು ಪಡೆದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಹಿರಿಯ ವಿದ್ಯಾರ್ಥಿ ಶಾಬಜ್ ಖಾನ್ ಅವರನ್ನು ಇತಿಹಾಸ ವಿಭಾಗದ ವತಿಯಿಂದ ವಾರದ ಸಮಾವೇಶದಲ್ಲಿ ಅಭಿನಂದಿಸಲಾಯಿತು. ಈ ವೇಳೆ ನಿವೃತ್ತ ಐಪಿಎಸ್ ಅಧಿಕಾರಿ ಡಾ.ಶಂಕರ್ ಬಿದರಿ, ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಹೆಚ್.ಶ್ರೀಧರ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿನಿಧಿ
...ಇವ ನಮ್ಮವ

ಭಾನುವಾರ
ಮಾರ್ಚ್ 24, 2024

ಶಾಂತಿಯಿಂದ ಸಮೃದ್ಧ ಸಮಾಜ ನಿರ್ಮಾಣ

ಪ್ರತಿನಿಧಿ ವರದಿ ಮೈಸೂರು

ಯುವಜನರು ಶಾಂತಿ, ಸೌಹಾರ್ದತೆಯಿಂದ ನಡೆದುಕೊಂಡಾಗ ಮಾತ್ರ ಸಶಕ್ತ, ಸಂಮೃದ್ಧವಾಗಿರುವ ಸಮಾಜವನ್ನು ನಿರ್ಮಿಸಲು ಸಾಧ್ಯ ಎಂದು ನಿವೃತ್ತ ಡಿಜಿಪಿ ಶಂಕರ ಬಿದರಿ ಹೇಳಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್ ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ವಾರದ ಸಮಾವೇಶದಲ್ಲಿ ಮಾತನಾಡಿದರು. ಯುವಜನತೆ ಶಾಂತಿ, ಸೌಹಾರ್ದತೆಯಿಂದ ನಡೆದುಕೊಂಡಾಗ ಸಶಕ್ತ, ಸಂಮೃದ್ಧ ಸಮಾಜವನ್ನು ನಿರ್ಮಾಣ ಮಾಡುವುದು ಸಾಧ್ಯವಿದೆ. ಪ್ರಜಾಪ್ರಭುತ್ವದಲ್ಲಿ ಉತ್ತಮ ನಾಯಕತ್ವದ ಗುಣಗಳನ್ನು ಅರಿತುಕೊಳ್ಳುವುದು ಯುವ ಜನತೆಯ ಪ್ರಮುಖ ಕರ್ತವ್ಯವಾಗಿದೆ. ಅಲ್ಲದೇ ಯುವಜನತೆ ಮತದಾನದ ಹಕ್ಕನ್ನು ಅತ್ಯಂತ ಪ್ರಾಮಾಣಿಕವಾಗಿ ಚಲಾಯಿಸುವ ಹೊಣೆಗಾರಿಕೆಯನ್ನು ವಿದ್ಯಾರ್ಥಿಗಳು ಹೊಂದಿರಬೇಕಿದೆ ಎಂದ ಅವರು, ಇದರ ಜೊತೆಗೆ ವಿದ್ಯಾರ್ಥಿಗಳು ಭಾವೈಕ್ಯತೆಯಿಂದ ಕೂಡಿರಬೇಕಿದೆ ಎಂದರು.

ನಿವೃತ್ತ ಡಿಜಿಪಿ ಶಂಕರ್ ಬಿದರಿ, ಡಾ. ಕ್ಯಾಪ್ಟನ್ ಇಂದ್ರಾಣಿ ಅವರುಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಮತ್ತಿತರರು ಇದ್ದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ವಾರದ ಸಮಾವೇಶದಲ್ಲಿ ಶಂಕರ್ ಬಿದರಿ ಅವರನ್ನು ಸನ್ಮಾನಿಸಲಾಯಿತು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶನಿವಾರ • ಮಾರ್ಚ್ 30, 2024



ಮೈಸೂರು ವಿಶ್ವವಿದ್ಯಾಲಯದ ಎಂ.ಎ ಇತಿಹಾಸದಲ್ಲಿ ಐದು ಚಿನ್ನದ ಪದಕ ಪಡೆದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಹಳೆಯ ವಿದ್ಯಾರ್ಥಿ ಶಾಬಾಜ್ ಖಾನ್ ಅವರನ್ನು ಇತ್ತೀಚೆಗೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಶಂಕರ ಬಿದರಿ ಅಭಿನಂದಿಸಿದರು. ಪ್ರಾಂಶುಪಾಲೆ ಬಿ.ಆರ್.ಜಯಕುಮಾರಿ, ಸಿಇಒ ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಎಚ್.ಶ್ರೀಧರ ಹಾಜರಿದ್ದರು

ಆಂದೋಲನ
ದಿನ ಪತ್ರಿಕೆ

ಶನಿವಾರ, 23 ಮಾರ್ಚ್ 2024

ಮಹಾಜನ ಕಾಲೇಜಿನಲ್ಲಿ ಚರ್ಮದ ಆರೈಕೆ ಬಗ್ಗೆ ಜಾಗೃತಿ



ಮೈಸೂರು: ಯುವಿ ಕಿರಣಗಳು ಅಕಾಲಿಕ ವಯಸ್ಸಾಗುವಿಕೆ ಮತ್ತು ಚರ್ಮದ ಹಾನಿಯನ್ನು ಉಂಟು ಮಾಡುತ್ತದೆ. ಆದ್ದರಿಂದ ಸಾಕಷ್ಟು ಎಸ್‌ಪಿಎಫ್ ಇರುವ ಸನ್‌ಸ್ಕ್ರೀನ್ ಬಳಸುವುದು ಅನಿವಾರ್ಯವಾಗಿದೆ ಎಂದು ಬೃಂದಾವನ ಆಸ್ಪತ್ರೆಯ ಕನ್ಸಲ್ಟೆಂಟ್ ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್ ಡಾ.ಧಾರಿಣಿ ಶಶಾಂಕ್ ತಿಳಿಸಿದರು.

ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಕ್ಷೇಮ ಕೇಂದ್ರದ ವತಿಯಿಂದ ನಡೆದ 'ಚರ್ಮದ ಆರೈಕೆ' ವಿಷಯ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೀವ ಸತ್ವಗಳು, ಖನಿಜಗಳು ಮತ್ತು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿರುವ ಸಮತೋಲಿತ ಆಹಾರವನ್ನು ಸೇವಿಸಬೇಕು. ಇಂತಹ ಆಹಾರಗಳು ಆರೋಗ್ಯಕರ ಚರ್ಮಕ್ಕೆ ಸಹಕಾರಿಯಾಗಿವೆ ಎಂದರು.

ವೃತ್ತಿಪರ ಮೌಲ್ಯಮಾಪನ ಮತ್ತು ವೈಯಕ್ತಿಕಗೊಳಿಸಿದ ಚಿಕಿತ್ಸಾ ಯೋಜನೆಗಳಿಗಾಗಿ ಚರ್ಮರೋಗ ತಜ್ಞರು ಅಥವಾ ಟ್ರೈಕೊಲಾಜಿಸ್ಟ್‌ಗಳನ್ನು ಸಂಪರ್ಕಿಸುವುದು ಅತ್ಯವಶ್ಯ. ಪಿಆರ್‌ಪಿ ಅಥವಾ ಲೇಸರ್ ಚಿಕಿತ್ಸೆಗಳಂತಹ ಸುಧಾರಿತ ಚಿಕಿತ್ಸೆಗಳನ್ನು ಬಳಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕ್ಷೇಮ ಕೇಂದ್ರದ ಸಂಚಾಲಕರಾದ ಡಾ.ಎಸ್.ಪೂರ್ಣಿಮಾ, ಸಹ ಸಂಚಾಲಕರಾದ ವಿ.ರಮ್ಯಾ, ಅಧ್ಯಾಪಕರು ಮತ್ತು ಅಧ್ಯಾಪಕೇತರರು ಹಾಗೂ ಸುಮಾರು 90ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 23.03.2024

ಸಮತೋಲಿತ ಆಹಾರಗಳು ಆರೋಗ್ಯಕರ ಚರ್ಮಕ್ಕೆ ಸಹಕಾರಿ

ಬೃಂದಾವನ ಆಸ್ಪತ್ರೆಯ ಸರ್ಜನ್ ಡಾ. ಧಾರಿಣಿ ಶಹಾಂಕ್

• **ಕನ್ನಡಪ್ರಭ ವಾರ್ತೆ** ಮೈಸೂರು

ಜೀವಸತ್ವಗಳು, ಖನಿಜಗಳು ಮತ್ತು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿರುವ ಸಮತೋಲಿತ ಆಹಾರವನ್ನು ಸೇವಿಸಬೇಕು. ಇಂಥಹ ಆಹಾರಗಳು ಆರೋಗ್ಯಕರ ಚರ್ಮಕ್ಕೆ ಸಹಕಾರಿಯಾಗಿದೆ ಎಂದು ಬೃಂದಾವನ ಆಸ್ಪತ್ರೆಯ ಕನ್ಸಲ್ಟೆಂಟ್ ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್ ಡಾ. ಧಾರಿಣಿ ಶಹಾಂಕ್ ತಿಳಿಸಿದರು.



ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆರೋಗ್ಯ, ನೈರ್ಮಲ್ಯ ಮತ್ತು ಕ್ಷೇಮ ಕೇಂದ್ರವು ಆಯೋಜಿಸಿದ್ದ ಚರ್ಮದ ಆರೈಕೆ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶುಷ್ಕತೆಯನ್ನು ತಡೆಗಟ್ಟಲು ಚರ್ಮವನ್ನು ಹೈಡ್ರೀಕರಿಸಬೇಕು ಎಂದರು.

ನಿಯಮಿತ ಶುಚಿಗೊಳಿಸುವಿಕೆಯಿಂದ ಕೊಳಕು, ಎಣ್ಣೆ ಮತ್ತು ಕಲ್ಮಶಗಳನ್ನು ತೆಗೆದು ಹಾಕಬಹುದು. ರಂಧ್ರಗಳ ದಟ್ಟಣೆಯನ್ನು ತಡೆಗಟ್ಟುವುದು ಹಾಗೂ ಮೊಡವೆಗಳ ಪ್ರಭಾವದ ಬಗ್ಗೆ ವಿವರಿಸಿದ ಅವರು, ಯುವಿ ಕಿರಣಗಳು ಅಕಾಲಿಕ ವಯಸ್ಸಾಗುವಿಕೆ ಮತ್ತು ಚರ್ಮದ ಹಾನಿಯನ್ನು ಉಂಟು ಮಾಡುತ್ತದೆ. ಆದ್ದರಿಂದ ಸಾಕಷ್ಟು ಎಸ್.ಪಿ.ಎಫ್. ಇರುವ ಸನ್ ಸ್ಕ್ರೀನ್ ಬಳಸುವುದು ಅನಿವಾರ್ಯವಾಗಿದೆ ಎಂದು ಹೇಳಿದರು.

ವಿವಿಧ ಆಂತರಿಕ ಮತ್ತು ಬಾಹ್ಯ ಅಂಶಗಳಿಂದ ಪ್ರಭಾವಿತವಾಗಿರುತ್ತದೆ. ತ್ವರಿತವಾಗಿ ಔಷಧೀಯ ಚಿಕಿತ್ಸೆ ನೀಡುವುದರಿಂದ ಉರಿಯೂತ, ತುರಿಕೆ ಮತ್ತು ಕೂದಲು ಉದುರುವಿಕೆಯನ್ನು ಕಡಿಮೆ ಮಾಡುತ್ತದೆ. ವೃತ್ತಿಪರ ಮೌಲ್ಯಮಾಪನ ಮತ್ತು ವೈಯಕ್ತಿಕಗೊಳಿಸಿದ ಚಿಕಿತ್ಸಾ ಯೋಜನೆಗಳಿಗಾಗಿ ಚರ್ಮರೋಗತಜ್ಞರು ಅಥವಾ ಟ್ರೈಕೊಲಾಜಿಸ್ಟ್‌ಗಳನ್ನು ಸಂಪರ್ಕಿಸುವುದು ಅತ್ಯವಶ್ಯಕ. ಪಿ.ಆರ್.ಪಿ ಅಥವಾ ಲೇಸರ್ ಚಿಕಿತ್ಸೆಗಳಂತಹ ಸುಧಾರಿತ ಚಿಕಿತ್ಸೆಗಳನ್ನು ಬಳಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಅವರು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕ್ಷೇಮ ಕೇಂದ್ರದ ಸಂಚಾಲಕಿ ಡಾ.ಎಸ್. ಪೂರ್ಣಿಮಾ, ಸಹ ಸಂಚಾಲಕಿ ವಿ. ರಮ್ಯಾ ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 23 ಮಾರ್ಚ್ 2024

ಚರ್ಮದ ಆರೈಕೆ ಕುರಿತು ಜಾಗೃತಿ ಕಾರ್ಯಕ್ರಮ



ಮೈಸೂರು, ಮಾ. 22– ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆರೋಗ್ಯ ನೈರ್ಮಲ್ಯ ಮತ್ತು ಕ್ಷೇಮ ಕೇಂದ್ರದ ವತಿಯಿಂದ 'ಚರ್ಮದ ಆರೈಕೆ' ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್ ಮತ್ತು ಸಂಪನ್ಮೂಲ ವ್ಯಕ್ತಿ ಡಾ. ಧಾರಿಣಿ ಶಹಾಂಕ್ ಮಾತನಾಡುತ್ತಾ, ಚರ್ಮದ ವಿವಿಧ ಪದರಗಳು ಮತ್ತು ಅದರ ಪಾತ್ರದ ಬಗ್ಗೆ ವಿವರಿಸಿದರು. ನಿಯಮಿತ ಶುಚಿಗೊಳಿಸುವಿಕೆಯಿಂದ ಕೊಳಕು, ಎಣ್ಣೆ ಮತ್ತು ಕಲ್ಮಶಗಳನ್ನು ತೆಗೆದುಹಾಕಬಹುದು. ರಂಧ್ರಗಳ ದಟ್ಟಣೆಯನ್ನು ತಡೆಗಟ್ಟುವುದು ಹಾಗೂ ಮೊಡವೆಗಳ ಪ್ರಭಾವದ ಬಗ್ಗೆ ವಿವರಿಸಿದರು.

ಯುವಿ ಕಿರಣಗಳು ಅಕಾಲಿಕ ವಯಸ್ಸಾಗುವಿಕೆ ಮತ್ತು ಚರ್ಮದ ಹಾನಿಯನ್ನು ಉಂಟುಮಾಡುತ್ತದೆ. ಆದ್ದರಿಂದ ಸಾಕಷ್ಟು ಎಸ್‌ಪಿಎಫ್ ಇರುವ ಸನ್‌ಸ್ಕ್ರೀನ್ ಬಳಸುವುದು ಅನಿವಾರ್ಯವಾಗಿದೆ. ಜೀವ ಸತ್ವಗಳು, ಖನಿಜಗಳು ಮತ್ತು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿರುವ ಸಮತೋಲಿತ ಆಹಾರವನ್ನು ಸೇವಿಸಬೇಕು. ಇಂಥಹ ಆಹಾರಗಳು ಆರೋಗ್ಯಕರ ಚರ್ಮಕ್ಕೆ ಸಹಕಾರಿಯಾಗಿದೆ ಹಾಗೂ ಶುಷ್ಕತೆಯನ್ನು ತಡೆಗಟ್ಟಲು ಚರ್ಮವನ್ನು ಹೈಡ್ರೀಕರಿಸಬೇಕು ಎಂದು ತಿಳಿಸಿದರು. ಕೂದಲು ಉದುರುವಿಕೆ ಮತ್ತು ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆಗಳು ಸಂಕೀರ್ಣವಾದ ಪರಸ್ಪರ ಸಂಪರ್ಕಗಳನ್ನು ಹಂಚಿಕೊಳ್ಳುತ್ತವೆ. ವಿವಿಧ ಆಂತರಿಕ ಮತ್ತು ಬಾಹ್ಯ ಅಂಶಗಳಿಂದ ಪ್ರಭಾವಿತವಾಗಿರುತ್ತದೆ. ತ್ವರಿತವಾಗಿ ಔಷಧೀಯ ಚಿಕಿತ್ಸೆ ನೀಡುವುದರಿಂದ ಉರಿಯೂತ, ತುರಿಕೆ ಮತ್ತು ಕೂದಲು ಉದುರುವಿಕೆಯನ್ನು ಕಡಿಮೆ ಮಾಡುತ್ತದೆ.

ವೃತ್ತಿಪರ ಮೌಲ್ಯಮಾಪನ ಮತ್ತು ವೈಯಕ್ತಿಕಗೊಳಿಸಿದ ಚಿಕಿತ್ಸಾ ಯೋಜನೆಗಳಿಗಾಗಿ ಚರ್ಮರೋಗ ತಜ್ಞರು ಅಥವಾ ಟ್ರೈಕೋಲಾಜಿಸ್ಟ್‌ಗಳನ್ನು ಸಂಪರ್ಕಿಸುವುದು ಅತ್ಯವಶ್ಯಕ. ಪಿಆರ್‌ಪಿ ಅಥವಾ ಲೇಸರ್ ಚಿಕಿತ್ಸೆಗಳಂತಹ ಸುಧಾರಿತ ಚಿಕಿತ್ಸೆಗಳನ್ನು ಬಳಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ವಹಿಸಿದ್ದರು. ಕ್ಷೇಮ ಕೇಂದ್ರದ ಸಂಚಾಲಕಿ ಡಾ.ಎಸ್.ಪೂರ್ಣಿಮಾ ಸ್ವಾಗತಿಸಿದರು. ಕ್ಷೇಮ ಕೇಂದ್ರದ ಸಹ ಸಂಚಾಲಕಿ ಶ್ರೀಮತಿ ರಮ್ಯ.ವಿ ಸೇರಿದಂತೆ ಅಧ್ಯಾಪಕರು ಮತ್ತು ಅಧ್ಯಾಪಕೇತರರು ಹಾಗೂ ಸುಮಾರು 90ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 19.03.2024

ಮಹಾಜನ ಕಾಲೇಜುಗಳಿಂದ ಆಕಾಶ ವೀಕ್ಷಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಭೌತಶಾಸ್ತ್ರ,ಗಣಿತಶಾಸ್ತ್ರ ಮತ್ತು ಭೂಗೋಳಶಾಸ್ತ್ರ ವಿಭಾಗಗಳು ಜಂಟಿಯಾಗಿ ಜಗದೀಶ್ ಪ್ರಸಾದ್ ಸ್ಟೇಡಿಯಂನಲ್ಲಿ ತನ್ನ ಬಹು ನಿರೀಕ್ಷಿತ ಸ್ಕೈ ವಾಚ್ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಖಗೋಳಶಾಸ್ತ್ರಜ್ಞ ಎನ್. ಅಮೋಘವರ್ಷ ಅವರ ಪರಿಣತಿಯಿಂದ ರಾತ್ರಿಯ ಆಕಾಶವು ಕೌತುಕದಿಂದ ಕೂಡಿತ್ತು. ಅವರ ಮಾರ್ಗದರ್ಶನದಲ್ಲಿ ಭಾಗವಹಿಸಿದವರು ದೂರದರ್ಶಕಗಳ ಮೂಲಕ ಆಕಾಶದ ಅದ್ಭುತಗಳ ವೀಕ್ಷಣೆಗಳಿಗೆ ಸಾಕ್ಷಿಯಾದರು.

ಅಮೋಘ ವರ್ಷ ಅವರು ನಾಲ್ಕನೇ ಸೆಮಿಸ್ಟರ್. ವಿದ್ಯಾರ್ಥಿ ಅಭಯ್ ಮುರಳೀಧರ್‌ಜೊತೆಗೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ಚಂದ್ರನ ಸೃಷ್ಟಿ, ಭವ್ಯವಾದ ಗುರು ಮತ್ತು ಅದರ ಚಂದ್ರಗಳು,ಅದ್ಭುತ ನಕ್ಷತ್ರಗಳ ಸಮೂಹ ಮತ್ತು ಅಲೌಕಿಕ ಓರಿಯನ್ ನೆಬ್ಯುಲಾವನ್ನು ವೀಕ್ಷಿಸಲು ಅನುಕೂಲ ಮಾಡಿಕೊಟ್ಟರು. ಈ ಕಾರ್ಯಕ್ರಮವು ಬ್ರಹ್ಮಾಂಡದ ರಹಸ್ಯಗಳ ಬಗ್ಗೆ ಒಂದು ಸುಂದರ ನೋಟವನ್ನು ನೀಡಿತು

ಚಂದ್ರನ ನೋಟ

ಟೆಲಿಸ್ಕೋಪ್ ನ ಮಸೂರದ ಮೂಲಕ,



ಭಾಗವಹಿಸಿದವರು ಚಂದ್ರನ ಸಂಕೀರ್ಣ ವೈಶಿಷ್ಟ್ಯಗಳನ್ನು ಕಂಡು ಆಶ್ಚರ್ಯಚಕಿತರಾದರು.ಅದರ ಒರಟಾದ ಭೂ ಪ್ರದೇಶ ಮತ್ತು ಪ್ರಾಚೀನ ಕುಳಿಗಳನ್ನು ಅನಾವರಣಗೊಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ, ಅಧ್ಯಾಪಕರಾದ ಡಾ.ಎಸ್. ಪೂರ್ಣಿಮಾ, ಡಾ.ಎಂ.ಪಿ. ಸುಮತಿ, ಡಾ.ಕೆ.ಕೆ. ಸೋಮಶೇಖರ್, ಎಂ.ಎಸ್. ಶ್ರೀಮತಿ, ವಿ. ಗಾಯತ್ರಿ ಮತ್ತು ಎಲ್. ನಿರಂಜನ್ ಪಾಲ್ಗೊಂಡಿದ್ದರು.

MFGE In the Eyes of the Press.....

STAR OF MYSORE

Thursday 21st March 2024

Sky watch at Mahajana unveils celestial wonders

Mysuru, Mar. 21 (BCT)- SBRR Mahajana First Grade College (Autonomous), Mysuru, hosted a captivating sky watch event on Mar. 14 at its Jagadeesh Prasad Stadium, drawing crowds eager to explore the cosmos.

Organised jointly by the Physics, Mathematics and Geography Departments, the event featured N. Amoghavarsha, Project Associate-I, Cosmology Education and Research Training Centre (COSMOS), Indian Institute of Astrophysics, Mysuru, guiding participants through a mesmerising journey of celestial wonders.

Under Amoghavarsha's expert guidance, attendees, including students and faculty members, peered through telescopes to behold the marvels of the night sky.

Highlights included intricate features of the Moon, revealing its rugged terrain and ancient craters, accompanied by insightful commentary on the geological history of Earth's natural satellite, the majestic Jupiter and its moons, offering a glimpse into the gas giant's swirling clouds and colourful bands, along with the captivating dance of its four largest moons: Io, Europa, Ganymede and Callisto.





This apart, participants saw a dazzling cluster of stars, captivating them with its sheer brilliance and showcasing the diversity and beauty of cosmos. The grand finale was the Orion Nebula, a celestial nursery where stars are born, mesmerising attendees with swirling clouds of gas and dust, illustrating the perpetual cycle of creation and destruction in the cosmos.

The event proved to be both visually stunning and educational, fostering a sense of curiosity and wonder among participants. Through the collaborative efforts of the Departments involved and the guidance of Amoghavarsha and student facilitator Abhay Muralidhar, attendees gained invaluable insights into the workings of the universe.

Principal Dr. B.R. Jayakumari and faculty members Dr. S. Poornima, Dr. M.P. Sumathi, Dr. S. Somashekar, V. Gayathri, and L. Niranjan joined participants in unravelling the mysteries hidden in the vast expanse above, making the event a success.

ಆಂದೋಲನ
ದಿನಪತ್ರಿಕೆ

ಮಂಗಳವಾರ, 5 ಮಾರ್ಚ್ 2024

ಕ್ರಿಕೆಟ್: ಮಹಾಜನ ಕಾಲೇಜು ಪ್ರಥಮ



ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ನಡೆದ ಪುರುಷರ ಅಂತರ ಕಾಲೇಜು ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಗಳಿಸಿದೆ.

ವಿಜೇತ ಸ್ಟೀಫನ್ ಅಲಿ(ನಾಯಕ), ಎಂ.ಕನಿಷ್ಕ್, ಎಸ್.ಚೇತನ್, ಭುವನೇಶ್ವರ್ ಪಿ.ನಾಯಕ್, ಕಿಶೋರ್, ರಾಜಶೇಖರ ಸ್ವಾಮಿ, ಎಲ್.ಎನ್.ಆರ್ಯನ್, ಕಿಶೋರ್, ಜೆ.ಕೌಶಿಕ್, ಎಸ್.ಯು. ಕಾರ್ತಿಕ್, ಸೋಹನ್ ಪಿ ಹೆಗ್ಡೆ, ಸಂಜು ದಬ್ಲಾಪುರ್, ಉಮೇಶ್, ಎನ್.ಚಂದನ್, ಕೆ.ಜತನ್, ಎನ್.ಟಿ.ಶ್ರೀವತ್ಸ, ಎಸ್. ಸುಮನ್, ನಿಖಿತ್‌ಗೌಡ ಅವರನ್ನು ಕಾಲೇಜಿನ ಪ್ರಾಂಶುಪಾಲರು, ಆಡಳಿತ ಮಂಡಳಿ ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಅಭಿನಂದಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಬಿ. ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರರು ಹಾಗೂ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್. ಆರ್.ರಮೇಶ್, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಎಚ್.ಎನ್ .ಭಾಸ್ಕರ್, ಪಿ.ಎಸ್.ಮಧುಸೂದನ ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 14.03.2024

ಮಹಾಜನ ಕಾಲೇಜಿಗೆ ಅಂತರ ಕಾಲೇಜು ಪುರುಷರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರಥಮ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ, ಪುರುಷರ ಅಂತರ ಕಾಲೇಜು ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಪಡೆದಿದ್ದಾರೆ.

ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂಧನ, ಡಾ. ಎಚ್.ಎನ್.ಭಾಸ್ಕರ್,ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರರು ಹಾಗೂ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ತಂಡದ ನಾಯಕ ಸಿಪ್ಪನ್ ಅಲಿ, ಎಂ. ಕನಿಷ್ಕ್, ಎಸ್. ಚೇತನ್, ಭುವನೇಶ್ವರ್.ಪಿ.



ನಾಯಕ್, ಕಿಶೋರ್, ರಾಜಶೇಖರ ಸ್ವಾಮಿ, ಎಲ್.ಎನ್. ಆರ್ಯನ್, ಕಿಶೋರ್, ಜೆ. ಕೌಶಿಕ್, ಎಸ್.ಯು. ಕಾರ್ತಿಕ್, ಸೋಹನ್ ಪಿ ಹೆಗ್ಡೆ, ಸಂಜುದಬ್ಲಾಪುರ್, ಉಮೇಶ್, ಎನ್. ಚಂದನ್, ಕೆ. ಜತನ್, ಎನ್ .ಟಿ. ಶ್ರೀವತ್ಸ, ಎಸ್. ಸುಮನ್ ಹಾಗೂ ನಿಖಿತ್ ಗೌಡ ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 5 ಮಾರ್ಚ್ 2024

ಅಂತರ ಕಾಲೇಜು ಪುರುಷರ ಕ್ರಿಕೆಟ್ ಪಂದ್ಯಾವಳಿ: ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಪ್ರಥಮ ಸ್ಥಾನ



ಮೈಸೂರು, ಮಾ. 4– ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ, ಪುರುಷರ ಅಂತರ ಕಾಲೇಜು ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ, ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಪಡೆದಿದ್ದು, ಕಾಲೇಜಿನ ಪ್ರಾಂಶುಪಾಲರು, ಆಡಳಿತ ಮಂಡಳಿ ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ, ಡಾ.ಹೆಚ್.ಎನ್.ಭಾಸ್ಕರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರರು ಹಾಗೂ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ತಂಡದ ನಾಯಕ ಸಿಪ್ಪನ್ ಅಲಿ, ಕನಿಷ್ಕ ಎಂ, ಚೇತನ್ ಎಸ್, ಭುವನೇಶ್ವರ್ ಪಿ ನಾಯಕ್, ಕಿಶೋರ್, ರಾಜಶೇಖರ್ ಸ್ವಾಮಿ, ಆರ್ಯನ್ ಎಲ್.ಎನ್, ಕಿಶೋರ್, ಕೌಶಿಕ್ ಜೆ, ಕಾರ್ತಿಕ್ ಎಸ್.ಯು, ಸೋಹನ್ ಪಿ ಹೆಗ್ಡೆ, ಸಂಜು ದಬ್ಲಾಪುರ್, ಉಮೇಶ್, ಚಂದನ್ ಎನ್, ಜತನ್ ಕೆ, ಶ್ರೀವತ್ಸ ಎನ್.ಟಿ, ಸುಮನ್ ಎಸ್ ಹಾಗೂ ನಿಖಿತ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಮಂಗಳವಾರ • ಮಾರ್ಚ್ 5, 2024



ಮೈಸೂರು ವಿಶ್ವವಿದ್ಯಾನಿಲಯವು ಆಯೋಜಿಸಿದ್ದ ಪುರುಷರ ಆಂತರ ಕಾಲೇಜು ಮಟ್ಟದ ಕ್ರಿಕೆಟ್ ಟೂರ್ನಿಯಲ್ಲಿ ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಪಡೆದಿದೆ. ಕುಳಿತವರು (ಎಡದಿಂದ) ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂಧನ, ಎಚ್.ಎನ್. ಭಾಸ್ಕರ್, ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಎಸ್.ಆರ್. ರಮೇಶ್, ತಂಡದ ನಾಯಕ ಸಿಪ್ಪನ್ ಆಲಿ. ನಿಂತವರು (ಎಡದಿಂದ): ಎಂ. ಕನಿಷ್ಕ್, ಎಸ್. ಚೇತನ್, ಭುವನೇಶ್ವರ್ ನಾಯಕ್, ಕಿಶೋರ್, ರಾಜಶೇಖರ್ ಸ್ವಾಮಿ, ಎಲ್.ಎನ್. ಆರ್ಯನ್, ಜೆ. ಕೌಶಿಕ್, ಎಸ್.ಯು. ಕಾರ್ತಿಕ್, ಸೋಹನ್ ಹೆಗ್ಡೆ, ಸಂಜು ದಬ್ಲಾಪುರ್, ಉಮೇಶ್, ಎನ್. ಚಂದನ್, ಕೆ. ಜತನ್, ಎನ್.ಟಿ. ಶ್ರೀವತ್ಸ, ಎಸ್. ಸುಮನ್ ಹಾಗೂ ನಿಖಿತ್‌ಗೌಡ ಚಿತ್ರದಲ್ಲಿದ್ದಾರೆ

STAR OF MYSORE

Monday 4th March 2024

Winners of MCICT Men's Wrestling Overall Championship



SBRR Mahajana First Grade College won the Men's Wrestling Overall Championship of Mysore City Inter-Collegiate Tournament (MCICT) 2023-24 with 16 points. The Tournament was organised by the Department of Physical Education, SBRR Mahajana FGC, Mysuru. Seen in the picture are *(standing from left)* ***K. Sachin, Lalu Prasad, S. Manchanna and Mohan Kumar Dare;*** *(sitting from left)* ***P.S. Madhusudhana, Dr. B.R. Jayakumari, Principal, Dr. T. Vijayalakshmi Muralidhar, Hon. Secretary, MES, Dr. S.R. Ramesh, CEO and Dr. H.N. Bhaskar, PE Director.***

ಪ್ರಜಾವಾಣಿ
ಆತ್ಮಸಾಕ್ಷಿಯ ಕನ್ನಡ ದಿನಪತ್ರಿಕೆ
ಶುಕ್ರವಾರ • ಮಾರ್ಚ್ 22, 2024

'ಉತ್ತಮ ಜೀವನ ಶೈಲಿ ರೂಢಿಸಿಕೊಳ್ಳಿ'

ಮೈಸೂರು: ಉತ್ತಮ ನಾಳೆಗಾಗಿ ಉತ್ತಮ ಆಹಾರ ಪದ್ಧತಿ ಹಾಗೂ ಜೀವನ ಶೈಲಿ ಅಗತ್ಯ ಎಂದು ಆರೋಗ್ಯ ಸಮಾಲೋಚಕಿ ಸುಷ್ಮಾ ಅಪ್ಪಯ್ಯ ಹೇಳಿದರು.


ಸುಷ್ಮಾ ಅಪ್ಪಯ್ಯ

ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಆರೋಗ್ಯ ಅರಿವು ಕಾರ್ಯಕ್ರಮದಲ್ಲಿ 'ಪೌಷ್ಟಿಕತೆ ಮತ್ತು ನಿಮ್ಮ ಯಶಸ್ಸು' ಕುರಿತು ಅವರು ಮಾತನಾಡಿದರು.

ಸ್ಥೂಲಕಾಯ, ಅಧಿಕ ತೂಕ, ರಕ್ತದೊತ್ತಡ, ಸಿಎಚ್‌ಡಿ, ಹಾರ್ಮೋನ್‌ಗಳ ಅಸಮತೋಲನ, ಕ್ಯಾನ್ಸರ್, ಮಾನಸಿಕ ಒತ್ತಡ ಮತ್ತು ಪೋಷಕಾಂಶಗಳ ಕೊರತೆ ಬಗ್ಗೆ ಅವರು ತಿಳಿವಳಿಕೆ ಮೂಡಿಸಿದರು.

ಕಾಲೇಜಿನ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಐಕ್ಯೂಎಸಿ ಸಂಚಾಲಕಿ ಡಿ. ಗೀತಾ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಪ್ರಿಯಾಂಕಾ ಶೆಣೈ, ಸ್ಪಂದನಾ, ವಿ. ರಮ್ಯಾ, ಪಿ. ರಾಧಿಕಾ, ಜೂಹಾ ಪಾಲ್ಗೊಂಡರು.

MFGE In the Eyes of the Press.....



ಅಂಚೋಲನ
ದಿನ ಪತ್ರಿಕೆ

ಗುರುವಾರ, 14 ಮಾರ್ಚ್ 2024

ಮಹಾಜನ ಕಾಲೇಜಿನಲ್ಲಿ ವಿಶ್ವ 'ಪೈ' ದಿನಾಚರಣೆ

ಮೈಸೂರು: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹಾಗೂ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಂಭಾಗಣದಲ್ಲಿ 'ವಿಶ್ವ ಪೈ' ದಿನಾಚರಣೆ ನಡೆಯಿತು.

ಕಾರ್ಯಕ್ರಮದಲ್ಲಿ ಪರಿಷತ್ತು ಹಾಗೂ ಘಟಕದ ಸಂಚಾಲಕ ಆರ್.ಅನಂತ ರಾಮು ಮಾತನಾಡಿ, ನಿತ್ಯ ಜೀವನದಲ್ಲಿ ನೇರವಾಗಿ ಪೈ ಬಳಕೆಯಲ್ಲಿಲ್ಲದಿದ್ದರೂ ವಿಜ್ಞಾನ ಮತ್ತು ತಂತ್ರಜ್ಞಾನ, ಇತರೆ ಕ್ಷೇತ್ರಗಳಲ್ಲಿ ಬಳಕೆಯಲ್ಲಿರುವ ವಿಶಿಷ್ಟ ಸಂಖ್ಯೆ ಪೈ ಆಗಿದೆ. ವಿಜ್ಞಾನ ಮತ್ತು ಗಣಿತ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ವಿವರಿಸಿದರು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಡಾ.ಶ್ರೀರಾಜ್ ಮಾತನಾಡಿ, ಪ್ರತಿದಿನವೂ ಎಲ್ಲರೂ ಗಣಿತದಿಂದಲೇ ಪ್ರಾರಂಭಿಸಿ ಅದರಿಂದಲೇ ಜೀವನದಲ್ಲಿ ಪ್ರತಿಯೊಂದನ್ನೂ ಅಳೆಯುವುದುಂಟು. ವಿದ್ಯಾರ್ಥಿಗಳು ಶ್ರದ್ಧೆಯಿಂದ ಕಲಿತಾಗ ಗಣಿತ ಕಷ್ಟವಲ್ಲ. ಆದರೆ, ವಿದ್ಯಾರ್ಥಿಗಳು ತಮ್ಮ ಮೆದುಳಿನ ಬುದ್ಧಿಶಕ್ತಿ ಉಪಯೋಗಿಸಬೇಕು. ಕ್ಯಾಲ್ಕುಲೇಟರ್ ಬಳಸಬೇಡಿ ಎಂದು ಕಿವಿಮಾತು ಹೇಳಿದರು.

ಪ್ರೊ.ಭಾರ್ಗವ ಮಾತನಾಡಿದರು. ಘಟಕದ ಅಧ್ಯಕ್ಷ ಹರಿಪ್ರಸಾದ್ ಹಾಜರಿದ್ದರು. ಪ್ರಾಂಶು ಪಾಲ ಸಮಾರಂಭದ ಅಧ್ಯಕ್ಷತೆ ವಹಿಸಿ ದ್ದರು. ಪೂರ್ಣಿಮಾ ಅತಿಥಿಗಳನ್ನು ಸ್ವಾಗತಿಸಿ ದರು ಮತ್ತು ಡಾ.ಸುಮತಿ ಅತಿಥಿಗಳಿಗೆ ವಂದಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 15.03.2024

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪೈ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಿತ್ಯ ಜೀವನದಲ್ಲಿ ನೇರವಾಗಿ ಪೈ ಬಳಕೆಯಲ್ಲಿಲ್ಲದಿದ್ದರೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಇತರೆ ಕ್ಷೇತ್ರಗಳಲ್ಲಿ ಬಳಕೆಯಲ್ಲಿರುವ ವಿಶಿಷ್ಟ ಸಂಖ್ಯೆ ಪೈ ಎಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ನಗರ ಘಟಕದ ಸಂಚಾಲಕ ಆರ್. ಅನಂತರಾಮು ಹೇಳಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ನಗರ ಘಟಕ ಹಾಗೂ ವಿ.ವಿ. ಮೊಹಲ್ಲಾದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ನಡೆದ ವಿಶ್ವ ಪೈ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಇಂದು ವಿಶೇಷವಾದ ದಿನವನ್ನು ಆಚರಿಸುತ್ತಿದ್ದೇವೆ. ವಿದ್ಯಾರ್ಥಿಗಳು ಗಣಿತ ಕಠಿಣ ಎಂದು ಹೇಳುತ್ತಾರೆ. ಇದನ್ನು ಹೋಗಲಾಡಿಸಲು ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಪಾತ್ರ ಬಹುಮುಖ್ಯವಾದದ್ದು, ವಿದ್ಯಾರ್ಥಿಗಳು ತರ್ಕಬದ್ಧವಾಗಿ ಗಮನದಲ್ಲಿಟ್ಟು ಆಲೋಚಿಸಿದಾಗ ಗಣಿತ ಸುಲಭವಾಗುತ್ತದೆ. ವಿದ್ಯಾರ್ಥಿಗಳು ಏಕಾಗ್ರತೆಯಿಂದ ಮೈಗೂಡಿಸಿಕೊಳ್ಳಿ, ಅದರಿಂದಾಗಿ ಗಣಿತ ಸುಲಭವಾಗುತ್ತದೆ. ವಿಜ್ಞಾನ, ಗಣಿತ ಒಂದೇ ನಾಣ್ಯದ ಎರಡು ಮುಖ. ಗಣಿತ ಜ್ಞಾನಗಳ ಮೂಲ, ತಳಹದಿ ಇಲ್ಲದೆ ಹೋದರೆ ಬಡು ಅಸ್ಥಿರ, ಗಣಿತ ವಿಜ್ಞಾನದ ರಾಣಿ, ಗಣಿತದ ಕೊಡುಗೆ ಅಪಾರ, ಆಸಕ್ತಿವಹಿಸಿ ಅಭ್ಯಾಸ ಮಾಡಿ ಎಂದು ಅವರು ತಿಳಿಸಿದರು.

ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಡಾ. ಶ್ರೀರಾಜ್ಞಾತ ನಾಡಿ, ಪ್ರತಿದಿನವೂ ಎಲ್ಲರೂ ಗಣಿತದಿಂದಲೇ ಪ್ರಾರಂಭಿಸಿ ಆ ದಿನವನ್ನೂ ಸಹ ಗಣಿತದಿಂದಲೇ ಅಂತ್ಯ ಮಾಡುತ್ತಾರೆ.



ಜೀವನದಲ್ಲಿ ಪ್ರತಿಯೊಂದನ್ನೂ ಅಳೆಯುವುದು ಗಣಿತದಿಂದಲೇ. ವಿದ್ಯಾರ್ಥಿಗಳು ಗಣಿತವನ್ನು ಗಮನವಿಟ್ಟು ಶ್ರದ್ಧೆಯಿಂದ ಕೇಳಿ ಕಲಿತಾಗ ಗಣಿತ ಕಷ್ಟವಿಯವಲ್ಲ ಎಂದು ತಿಳಿಸಿದರು.

ವಿದ್ಯಾರ್ಥಿಗಳು ತಮ್ಮ ಮೆದುಳುಗಳಲ್ಲಿ ಇರುವ ಬುದ್ಧಿಶಕ್ತಿಯನ್ನು ಉಪಯೋಗಿಸಿ, ಕ್ಯಾಲುಕುಲೇಟರ್‌ಗಳನ್ನು ಬಳಸಬೇಡಿ ಎಂದು ಕಿವಿಮಾತು ಹೇಳಿದರು. ನಮ್ಮ ವಿಶ್ವವಿದ್ಯಾನಿಲಯದ ಪ್ರೊ. ಭಾರ್ಗವ, ಪ್ರೊ. ಅಡಿಗ ಅವರು ಸಂಶೋಧನೆ ಮಾಡಿ ದೇಶ ವಿದೇಶಗಳಲ್ಲಿ ಗೌರವ ತಂದುಕೊಟ್ಟಿದ್ದಾರೆ. ಆಧುನಿಕ ಜೀವನದ ಅನೇಕ ವಿಚಾರಗಳು ಗಣಿತಶಾಸ್ತ್ರದ ತಳಹದಿಯ ಮೇಲೆ ನಿಂತಿದೆ ಎಂದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ವಹಿಸಿದ್ದರು. ಪೂರ್ಣಿಮ ಸ್ವಾಗತಿಸಿದರು. ಡಾ. ಸುಮತಿ ವಂದಿಸಿದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾನುವಾರ 17 ಮಾರ್ಚ್ 2024

ಮಹಾಜನ ಕಾಲೇಜಲ್ಲಿ ವಿಶ್ವ 'ಪೈ' ದಿನಾಚರಣೆ



ಮಹಾಜನ ಪ್ರಥಮ ದರ್ಜೆ ಕಾಲೇಜಲ್ಲಿ ನಡೆದ ವಿಶ್ವ ಪೈ ದಿನಾಚರಣೆಯಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಅಧ್ಯಕ್ಷ ಆರ್. ಅನಂತರಾಮು ಮಾತನಾಡಿದರು.

ಮೈಸೂರು, ಮಾ. 16– ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಮೈಸೂರು ಘಟಕ, ಮಹಾಜನ ಪ್ರಥಮ ದರ್ಜೆ ಕಾಲೇಜು ಸಂಯುಕ್ತ ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ವಿಶ್ವ ಪೈ ದಿನವನ್ನು ಆಚರಿಸಲಾಯಿತು.

ಮೈಸೂರು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಅಧ್ಯಕ್ಷ ಆರ್.ಅನಂತರಾಮು 'ಪೈ ದಿನ'ವನ್ನು ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಮೈಸೂರು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಗಣಿತಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ಎಂ.ಎ. ಶ್ರೀರಾಜ್ ಮಾತನಾಡುತ್ತಾ, 'ಪೈ' ಎಂಬುದು ವೃತ್ತದ ಸುತ್ತಳತೆಯ ಅನುಪಾತವು ಅದರ ವ್ಯಾಸಕ್ಕೆ ಸರಿಸುಮಾರು 3,14159ಗೆ ಸಮಾನವಾಗಿರುತ್ತದೆ. ಇದು ಕೇವಲ ಸಂಖ್ಯಾತ್ಮಕ ಕುತೂಹಲವಲ್ಲ, ಆದರೆ ಗಣಿತ ಮತ್ತು ವಿಜ್ಞಾನದ ವಿವಿಧ ಶಾಖೆಗಳಲ್ಲಿ ಮೂಲ ಭೂತ ಅಂಶವಾಗಿದೆ. ಇದರ ಸರ್ವ ವ್ಯಾಪಕತ್ವವು ವಲಯಗಳನ್ನು ಮೀರಿ ವಿಸ್ತರಿಸುತ್ತದೆ. ಜ್ಯಾಮಿತಿ, ತ್ರಿಕೋನಮಿತಿ, ಭೌತಶಾಸ್ತ್ರ, ಇಂಜಿನಿಯರಿಂಗ್ ಮತ್ತು ಅಂಕಿ ಅಂಶಗಳಲ್ಲಿ ಅನ್ವಯಗಳನ್ನು ಕಂಡು ಕೊಳ್ಳುತ್ತದೆ ಎಂದು 'ಪೈ' ದಿನದ ಇತಿಹಾಸವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು.

ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಸುಮತಿ ಎಂ.ಪಿ., ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಪೂರ್ಣಿಮಾ, ಸಹಾಯಕ ಪ್ರಾಧ್ಯಾಪಕರಾದ ನಿರಂಜನ್, ಶ್ರೀಮತಿ ಗಾಯತ್ರಿ ವಿ ಈ ವೇಳೆ ಉಪಸ್ಥಿತರಿದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಶನಿವಾರ 16 ಮಾರ್ಚ್ 2024

16 MARCH 2024

ನಗರದಲ್ಲಿ ವಿಶ್ವ ಪೈ ದಿನಾಚರಣೆ



ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಮೈಸೂರು ಘಟಕ ಮತ್ತು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆಶ್ರಯದಲ್ಲಿ ವಿಶ್ವ ಪೈ ದಿನಾಚರಣೆ ಕಾರ್ಯಕ್ರಮದಲ್ಲಿ ಆರ್. ಅನಂತರಾಮು ಮಾತನಾಡಿದರು. ಡಾ.ಶ್ರೀರಾಜ್, ಡಾ.ಸುಮತಿ, ಡಾ.ಪೂರ್ಣಿಮಾ ಮತ್ತಿತರರಿದ್ದರು.

ಮೈಸೂರು: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಮೈಸೂರು ಘಟಕ ಹಾಗೂ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆಶ್ರಯದಲ್ಲಿ ವಿಶ್ವ ಪೈ ದಿನವನ್ನು ಇತ್ತೀಚೆಗೆ ಆಚರಿಸಲಾಯಿತು. ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಜ್ಞಾನ ಪರಿಷತ್ತಿನ ಸಂಚಾಲಕ ಆರ್.ಅನಂತರಾಮು ಮಾತನಾಡಿ, ನಿತ್ಯ ಜೀವನದಲ್ಲಿ ವಿಶಿಷ್ಟ ಸಂಖ್ಯೆ ಪೈ ನೇರವಾಗಿ ಬಳಕೆಯಲ್ಲಿ ಇಲ್ಲದಿದ್ದರೂ ವಿಜ್ಞಾನ, ತಂತ್ರಜ್ಞಾನ, ಇತರ ಕ್ಷೇತ್ರಗಳಲ್ಲಿ ಬಳಸಲಾಗುತ್ತಿದೆ. ಗಣಿತ ಕಲಿಕೆ ಕಠಿಣ ಎನ್ನಲಾಗುತ್ತದೆ. ಇಂಥ ಮನಸ್ಥಿತಿಯನ್ನು ಹೋಗಲಾಡಿಸಲು ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಪಾತ್ರ ಬಹುಮುಖ್ಯವಾಗುತ್ತದೆ ಎಂದರು. ಅತಿಥಿಯಾಗಿ ಭಾಗವಹಿಸಿದ್ದ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಡಾ.ಶ್ರೀರಾಜ್ ಮಾತನಾಡಿ, ಪ್ರತಿದಿನವೂ ಜೀವನದಲ್ಲಿ ನಾವು ಗಣಿತವನ್ನು ಯಾವ ರೀತಿಯಲ್ಲಾದರೂ ಬಳಸುತ್ತೇವೆ. ಆಧುನಿಕ ಜೀವನದ ಅನೇಕ ವಿಚಾರಗಳು ಗಣಿತಶಾಸ್ತ್ರದ ತಳಹದಿಯ ಮೇಲೆ ನಿಂತಿದೆ. ವಿದ್ಯಾರ್ಥಿಗಳು ಶ್ರದ್ಧೆಯಿಂದ ಕಲಿತರೆ ಗಣಿತ ಕಷ್ಟವಲ್ಲ ಎಂದು ತಿಳಿಸಿದರು. ಡಾ.ಸುಮತಿ, ಡಾ.ಪೂರ್ಣಿಮ ಇತರರು ಹಾಜರಿದ್ದರು.

ಆಂದೋಲನ
ದಿನ ಪತ್ರಿಕೆ

ಗುರುವಾರ, 25 ಏಪ್ರಿಲ್ 2024

MAHAJANA EDUCATION SOCIETY (R)
Education to Excel

SBRR MAHAJANA FIRST GRADE COLLEGE (Autonomous)
Jayalakshmipuram, Mysuru – 570 012, Karnataka
Affiliated to University of Mysore
Re-Accredited by NAAC with 'A' Grade, College with Potential for Excellence
Ph.: 0821 -2512065, Mob: 91132 93595 Website: www.fgc.mahajana.edu.in

ADMISSION NOTIFICATION : 2024-25

Issue of application forms and admissions to first year degree programs will be made between 10 a.m. and 5 p.m. in the college office
ONLINE Applications/ Registrations/ Admissions are made available in our college website : www.fgc.mahajana.edu.in

Online Admission Link: https://uucms.karnataka.gov.in

PROGRAMS OFFERED

- **B.A** - Any two disciplines within the combination of subjects offered below)
  a. History, Economics, Geography
  b. History, Economics, Sociology
  c. Journalism & Mass Communication, Economics, English (Opt.)
  d. Criminology & Forensic Science, Psychology, Sociology
- **B.Com**
- **BBA**
- **B.Sc** - (Any two disciplines within the combination of subjects offered below)
  a. Physics, Mathematics, Computer Science
  b. Biotechnology, Biochemistry, Microbiology
- **BCA**

PROGRAMS OFFERED AT POOJA BHAGAVAT MEMORIAL MAHAJANA EDUCATION CENTRE, METAGALLI, MYSURU - 570016
Enquiry: 0821-4 009600, 94499 18541

- **BBA** ▪ Hotel & Hospitality ▪ Aviation & International Tourism

Placement Assistance Provided

Add-on Courses: **DIPLOMA / SKILL ENHANCEMENT Courses** will be conducted with all programs

30+ Certificate & Value-added courses

- 100% Program Fee Exemption for Students with Score of 95% & above
  To continue to avail the facility in the subsequent years:
  - 100% concession in program fee on scoring 95% & above
  - 50% concession in program fee on scoring between 90- 94.99%
- Scholarship & Fee Concession for Meritorious and Sports Students
- 25% Concession on Program Fee for the Specially Abled and Children of in-service & Ex-service Personnel

Hostel facility is available for Boys & Girls (Hostel Enquiries: 88616 77775)

Dr. B.R. Jayakumari, Principal | Dr. T. Vijayalakshmi Muralidhar, Hon. Secretary | Sri. T. Muralidhar Bhagavat, President

STAR OF MYSORE

Wednesday 24th April 2024

MAHAJANA EDUCATION SOCIETY (R)
Education to Excel

SBRR MAHAJANA FIRST GRADE COLLEGE (Autonomous)
Jayalakshmipuram, Mysuru – 570 012, Karnataka
Affiliated to University of Mysore
Re-Accredited by NAAC with 'A' Grade, College with Potential for Excellence
Ph.: 0821 -2512065, Mob: 91132 93595 Website: www.fgc.mahajana.edu.in

ADMISSION NOTIFICATION : 2024-25

Issue of application forms and admissions to first year degree programs will be made between 10 a.m. and 5 p.m. in the college office
ONLINE Applications/ Registrations/ Admissions are made available in our college website : www.fgc.mahajana.edu.in

Online Admission Link: https://uucms.karnataka.gov.in

PROGRAMS OFFERED

- **B.A** - Any two disciplines within the combination of subjects offered below)
  a. History, Economics, Geography
  b. History, Economics, Sociology
  c. Journalism & Mass Communication, Economics, English (Opt.)
  d. Criminology & Forensic Science, Psychology, Sociology
- **B.Com**
- **BBA**
- **B.Sc** - (Any two disciplines within the combination of subjects offered below)
  a. Physics, Mathematics, Computer Science
  b. Biotechnology, Biochemistry, Microbiology
- **BCA**

PROGRAMS OFFERED AT POOJA BHAGAVAT MEMORIAL MAHAJANA EDUCATION CENTRE, METAGALLI, MYSURU - 570016
Enquiry: 0821-4 009600, 94499 18541

- **BBA** ▪ Hotel & Hospitality ▪ Aviation & International Tourism

Placement Assistance Provided

Add-on Courses: **DIPLOMA / SKILL ENHANCEMENT Courses** will be conducted with all programs

30+ Certificate & Value-added courses

- 100% Program Fee Exemption for Students with Score of 95% & above
  To continue to avail the facility in the subsequent years:
  - 100% concession in program fee on scoring 95% & above
  - 50% concession in program fee on scoring between 90- 94.99%
- Scholarship & Fee Concession for Meritorious and Sports Students
- 25% Concession on Program Fee for the Specially Abled and Children of in-service & Ex-service Personnel

Hostel facility is available for Boys & Girls (Hostel Enquiries: 88616 77775)

Dr. B.R. Jayakumari, Principal | Dr. T. Vijayalakshmi Muralidhar, Hon. Secretary | Sri. T. Muralidhar Bhagavat, President

ಆಂದೋಲನ
ದಿನಪತ್ರಿಕೆ

ಬುಧವಾರ, 17 ಏಪ್ರಿಲ್ 2024

'ನಿರಂತರ ಓದಿನಿಂದ ಅಂಬೇಡ್ಕರ್ ಆಗಲು ಸಾಧ್ಯ'

133ನೇ ಅಂಬೇಡ್ಕರ್ ಜಯಂತಿಯಲ್ಲಿ ಡಾ.ಬಿ.ಆರ್.ಜಯಕುಮಾರಿ ಸಲಹೆ



ಮೈಸೂರು: ಅಂಬೇಡ್ಕರ್ ಅವರ ನಿಷ್ಠೆ, ಪ್ರಾಮಾಣಿಕತೆ, ಛಲ, ಪರಿಶ್ರಮ, ದೇಶಪ್ರೇಮ ಹಾಗೂ ನಿರಂತರ ಓದಿನ ಬಗ್ಗೆ ಆಸಕ್ತಿ ಹೊಂದಿದಾಗ ಮಾತ್ರ ಪ್ರತಿಯೊಬ್ಬ ವಿದ್ಯಾರ್ಥಿಯೂ ಅಂಬೇಡ್ಕರ್ ಆಗಿ ಪರಿವರ್ತನೆಯಾಗಲು ಸಾಧ್ಯ ಎಂದು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 133ನೇ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರನ್ನು ಆರಾಧನೆ ಮಾಡಿದರೆ ಸಾಲದು, ಅವರ ಆಶಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಅವಮಾನಗಳನ್ನು ಮೆಟ್ಟಿ, ಸಾಧನೆಯ ಹಾದಿಯಲ್ಲಿ ಮುನ್ನುಗ್ಗಿ ಸನ್ಮಾನವನ್ನು ಪಡೆದ ಧೀಮಂತ ನಾಯಕ ಅವರು ಎಂದು ಸ್ಮರಿಸಿದರು.

ಅಂಬೇಡ್ಕರ್ ಅವರು ಸದಾ ಸಾಮಾಜಿಕ ಸಾಮರಸ್ಯಕ್ಕೆ ಹಾಗೂ ನೆಮ್ಮದಿಗೆ ಹೋರಾಡಿದರು. ಕಡು ಬಡವರಾದರೂ, ಸಮಾಜದ ನಿಂದನೆಗೆ ಒಳಗಾದರೂ, ಛಲ ಬಿಡದೆ ಸಮಾಜಕ್ಕೆ ಅಪಾರವಾದ ಕೊಡುಗೆಯನ್ನು ನೀಡಿ ಆದರ್ಶ ಪ್ರಾಯ ರಾದವರು ಎಂದು ತಿಳಿಸಿದರು. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಡೀನ್ ಡಾ.ಎಚ್.ಶ್ರೀಧರ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಹೊಸ ದಿಗಂತ

ಬುಧವಾರ
17 ಏಪ್ರಿಲ್ 2024

ನಿರಂತರ ಓದಿನಿಂದ ದೇಶಪ್ರೇಮ ಸಾಧ್ಯ

ಮೈಸೂರು: ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 133ನೇ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನಶೈಲಿ, ವ್ಯಕ್ತಿತ್ವ, ಪರಿಶ್ರಮ, ಸಮಾಜಕ್ಕೆ ನೀಡಿದ ಕೊಡುಗೆಯ ಬಗ್ಗೆ ವಿವರಿಸಿದರು. ಡಾ. ಬಿ.ಆರ್. ಅಂಬೇಡ್ಕರ್ ಒಬ್ಬ ಮಹಾನ್ ಚೇತನ. ಭಾರತದ ನಿರ್ಮಾಣದಲ್ಲಿ ಅಂಬೇಡ್ಕರ್ ಕೊಡುಗೆ ಅಪಾರ ಹಾಗೂ ಶ್ಲಾಘನೀಯ ಎಂದರು. ಅಂಬೇಡ್ಕರ್‌ರ ನಿಷ್ಠೆ, ಪ್ರಾಮಾಣಿಕತೆ, ಛಲ, ಪರಿಶ್ರಮ, ದೇಶಪ್ರೇಮ ಹಾಗೂ ನಿರಂತರ ಓದಿನ ಬಗ್ಗೆ ಆಸಕ್ತಿ ಹೊಂದಿದಾಗ ಪ್ರತಿಯೊಬ್ಬ ವಿದ್ಯಾರ್ಥಿಯು ಒಬ್ಬ ಅಂಬೇಡ್ಕರ್ ಆಗಿ ಪರಿವರ್ತನೆಯಾಗಲು ಸಾಧ್ಯ ಎಂದರು.

ಅಂಬೇಡ್ಕರ್ ಅವರನ್ನು ಆರಾಧನೆ ಮಾಡಿದರೆ ಸಾಲದು, ಅವರ ಆಶಯಗಳನ್ನು ಅರ್ಥಮಾಡಿಕೊಳ್ಳಬೇಕು. ಅವಮಾನಗಳನ್ನು ಮೆಟ್ಟಿ, ಸಾಧನೆಯ ಹಾದಿಯಲ್ಲಿ ಮುನ್ನುಗ್ಗಿ ಸನ್ಮಾನವನ್ನು ಪಡೆದ ಧೀಮಂತ ನಾಯಕ. ಅವರು ಬದುಕಿನುದ್ದಕ್ಕೂ ಸವಾಲುಗಳನ್ನು ಸ್ವೀಕರಿಸಿ ಸಂಯಮದ ಕುಲುಮೆಯಲ್ಲಿ ಬೆಂದು ಕಬ್ಬಿಣದಂತೆ ಗಟ್ಟಿಯಾಗಿ ನಿಂತವರು ಎಂದು ತಿಳಿಸಿದರು.

ಅಂಬೇಡ್ಕರ್ ಸದಾ ಸಾಮಾಜಿಕ ಸಾಮರಸ್ಯಕ್ಕೆ ಹಾಗೂ ನೆಮ್ಮದಿಗೆ ಹೋರಾಡಿದರು. ಕಡು ಬಡವನಾದರೂ,



ಸಮಾಜದ ನಿಂದನೆಗೆ ಒಳಗಾದರೂ, ಛಲವನ್ನು ಬಿಡದೆ ಸಮಾಜಕ್ಕೆ ಅಪಾರವಾದ ಕೊಡುಗೆಯನ್ನು ನೀಡಿ, ಆದರ್ಶ ಪ್ರಾಯರಾದವರು. ಈ ಸಾಧನೆಗೆ ಕಾರಣವಾದದ್ದು ಶಿಕ್ಷಣ; ಆ ಶಿಕ್ಷಣವೇ ಪ್ರತಿಯೊಬ್ಬರ ಗುರಿಯಾಗಬೇಕೆಂಬುದು ಅವರ ಆಶಯವಾಗಿತ್ತು. ಇಂದಿನ ವಿದ್ಯಾರ್ಥಿಗಳು ಮನಸ್ಸು ಮಾಡಿದರೆ, ಎಂತಹ ಸಾಧನೆ ಮಾಡಲು ಸಾಧ್ಯ. ಪ್ರತಿಯೊಬ್ಬ ವಿದ್ಯಾರ್ಥಿಯು ಸಮಯವನ್ನು ವ್ಯರ್ಥಮಾಡದೆ ನಿರಂತರವಾಗಿ ಓದಿನಲ್ಲಿ ತೊಡಗಿಸಿಕೊಂಡು ಗುರಿಸಾಧಿಸುವುದರೆಡೆಗೆ ಮುನ್ನುಗ್ಗಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಡೀನ್ ಡಾ. ಶ್ರೀಧರ ಹೆಚ್, ಬೋಧಕ, ಬೋಧಕೇತರ ವರ್ಗದವರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 17.04.2024

ಅಂಬೇಡ್ಕರ್ ಆಶಯಗಳನ್ನು ಅರ್ಥಮಾಡಿಕೊಳ್ಳಬೇಕು

ಮಹಾಜನ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಅಭಿಮತ

• ಕನ್ನಡಪ್ರಭ ವಾರ್ತೆ ಮೈಸೂರು

ಅಂಬೇಡ್ಕರ್ ಅವರನ್ನು ಆರಾಧಿಸಿದರೆ ಸಾಲದು, ಅವರ ಆಶಯಗಳನ್ನು ಅರ್ಥಮಾಡಿಕೊಳ್ಳಬೇಕು. ಅವಮಾನಗಳನ್ನು ಮೆಟ್ಟಿ ಸಾಧನೆಯ ಹಾದಿಯಲ್ಲಿ ಮುನ್ನುಗ್ಗಿ ಸನ್ಮಾನವನ್ನು ಪಡೆದ ಧೀಮಂತ ನಾಯಕ ಎಂದು ಮಹಾಜನ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನ ಶೈಲಿ, ಅವರ ವ್ಯಕ್ತಿತ್ವ, ಅವರ ಪರಿಶ್ರಮ, ಸಮಾಜಕ್ಕೆ ನೀಡಿದ ಕೊಡುಗೆಯ ಬಗ್ಗೆ ವಿವರಿಸಿದರು.

ಭಾರತ ಸಂವಿಧಾನದ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರೊಬ್ಬ ಮಹಾನ್ ಚೇತನ. ಭಾರತದ ನಿರ್ಮಾಣದಲ್ಲಿ ಅಂಬೇಡ್ಕರ್ ಅವರ ಕೊಡುಗೆ ಅಪಾರ ಹಾಗೂ ಶ್ಲಾಘನೀಯ. ಅಂಬೇಡ್ಕರ್ ಅವರ ನಿಷ್ಠೆ, ಪ್ರಾಮಾಣಿಕತೆ, ಛಲ, ಪರಿಶ್ರಮ, ದೇಶಪ್ರೇಮ ಹಾಗೂ ನಿರಂತರ ಓದಿನ ಬಗ್ಗೆ ಆಸಕ್ತಿ ಹೊಂದಿದಾಗ ಪ್ರತಿಯೊಬ್ಬ ವಿದ್ಯಾರ್ಥಿಯು ಒಬ್ಬ ಅಂಬೇಡ್ಕರ್‌ರಾಗಿ ಪರಿವರ್ತನೆಯಾಗಲು ಸಾಧ್ಯ ಎಂದರು.



ಅಂಬೇಡ್ಕರ್ ಅವರು ಸದಾ ಸಾಮಾಜಿಕ ಸಾಮರಸ್ಯಕ್ಕೆ ಹಾಗೂ ನೆಮ್ಮದಿಗೆ ಹೋರಾಡಿದರು.

ಕಡು ಬಡವನಾದರೂ, ಸಮಾಜದ ನಿಂದನೆಗೆ ಒಳಗಾದರೂ, ಅವರ ಛಲವನ್ನು ಬಿಡದೆ ಸಮಾಜಕ್ಕೆ ಅಪಾರವಾದ ಕೊಡುಗೆಯನ್ನು ನೀಡಿ ಆದರ್ಶಪ್ರಾಯರಾದವರು. ಈ ಸಾಧನೆಗೆ ಕಾರಣವಾದದ್ದು ಶಿಕ್ಷಣ. ಆ ಶಿಕ್ಷಣವೇ ಪ್ರತಿಯೊಬ್ಬರ ಗುರಿಯಾಗಬೇಕೆಂಬುದು ಅವರ ಆಶಯವಾಗಿತ್ತು ಎಂದು ಅವರು ಹೇಳಿದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಡೀನ್ ಡಾ.ಎಚ್. ಶ್ರೀಧರ ಮೊದಲಾದವರು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 13.04.2024

ಅಧಿವೇಶನ ಮಹಾಜನ ಪ್ರಥಮ ದರ್ಜೆ ಕಾಲೇಜು ಸಹಯೋಗದೊಂದಿಗೆ ಆಯೋಜನೆ

ಎಲೆಕ್ಟ್ರೋಫೋರೆಸಿಸ್, ಇಮ್ಯುನೊಟೆಕ್ನಿಕ್ಸ್ ಕುರಿತು ಅಧಿವೇಶನ

• ಕನ್ನಡಪ್ರಭ ವಾರ್ತೆ ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಜೈವಿಕ ತಂತ್ರಜ್ಞಾನ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಎಲೆಕ್ಟ್ರೋಫೋರೆಸಿಸ್ ಮತ್ತು ಇಮ್ಯುನೊಟೆಕ್ನಿಕ್ಸ್ ಕುರಿತು ಸಂವಾದಾತ್ಮಕ ಅಧಿವೇಶನವನ್ನು ಆಯೋಜಿಸಲಾಗಿತ್ತು.

ಮೈಸೂರು ವಿವಿ ಬಯೋಟೆಕ್ನಾಲಜಿ ವಿಭಾಗದ ಪ್ರಾಧ್ಯಾಪಕ ಡಾ.ಕೆ. ರಾಮಚಂದ್ರ ಕಿಣಿ ಅವರು, ಎಲೆಕ್ಟ್ರೋಫೋರೆಸಿಸ್ ತಂತ್ರಗಳು, ತತ್ವಗಳು, ಕ್ಯಾಪಿಲರಿ, ಪಲ್ಸ್ ಫೀಲ್ಡ್ ಎಲೆಕ್ಟ್ರೋಫೋರೆಸಿಸ್ ನಂತಹ ವಿವಿಧ



ರೀತಿಯ ಸುಧಾರಿತ ವಿಶ್ಲೇಷಣಾತ್ಮಕ ತಂತ್ರಗಳು ಮತ್ತು ಪ್ರೋಟೀನ್ ಗಳು, ನ್ಯೂಕ್ಲಿಯಿಕ್ ಆಮ್ಲಗಳು ಮತ್ತು ವಿವಿಧ ಜೈವಿಕ ಅಣುಗಳ ವಿಶ್ಲೇಷಣೆಗಾಗಿ ಸಂಶೋಧನೆಯ ಕ್ಷೇತ್ರದಲ್ಲಿ ಪ್ರಮುಖವಾದ ಅದರ ಅನ್ವಯಗಳ ಬಗ್ಗೆ ವಿವರಿಸಿದರು.

ಜೆಎಸ್ಎಸ್ ಅಹೆರ್ಜೀವರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಶೈಲಶ್ರೀ ಶೇಖರ್ಮಾತನಾಡಿ, ಪ್ರತಿ ಜನಕ ಪ್ರತಿಕಾಯ ಪರಸ್ಪರ ಕ್ರಿಯೆಯ ಮೂಲತತ್ವಗಳು, ವಿಭಿನ್ನ ಗುಣಾತ್ಮಕ ಮತ್ತು ಪರಿಮಾಣಾತ್ಮಕ ತಂತ್ರಗಳು ಮತ್ತು ಇಮ್ಯುನೊಮ್ಯಾಗ್ನೆಟಿಕ್ ಸೆಲ್ ವಿಂಗಡಣೆ ಹಾಗೂ ಫ್ಲೋಸೈಟೊಮೆಟ್ರಿ ವಂತಹ ಸುಧಾರಿತ ತಂತ್ರಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇ ಡಾ.ಎಸ್.ಆರ್. ರಮೇಶ್, ಜೈವಿಕ ತಂತ್ರಜ್ಞಾನ ವಿಭಾಗ ಮುಖ್ಯಸ್ಥೆ ಎನ್. ಪ್ರಿಯಾಂಕ ಶೆಣೈ, ಸಹಾಯಕ ಪ್ರಾಧ್ಯಾಪಕಿ ಎಸ್. ಅಮೂಲ್ಯ ಇದ್ದರು. ಲಕ್ಷ್ಮೀ ಪ್ರಾರ್ಥಿಸಿದರು. ಪ್ರೇಕ್ಷಾ ವಿಟಲ್ ಸ್ವಾಗತಿಸಿದರು. ಪಿ. ರಾಧಿಕಾ ನಿರೂಪಿಸಿದರು. ಕಾರ್ತಿಕ್ ವಂದಿಸಿದರು.

ಆಂದೋಲನ
ದಿನ ಪತ್ರಿಕೆ

ಮಂಗಳವಾರ, 23 ಏಪ್ರಿಲ್ 2024

'ದೇಶ ಬದಲಾಗಬೇಕಾದರೆ ಮೊದಲು ವ್ಯಕ್ತಿ ಬದಲಾಗಬೇಕು'

ಕಾರ್ಯಾಗಾರದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ.ನರೇಂದ್ರ ನಾಯಕ್ ಅಭಿಮತ



ಮೈಸೂರು: ವ್ಯಕ್ತಿ ತನ್ನ ಜೀವನದಲ್ಲಿ ಯಾವುದೇ ವಿಷಯವನ್ನು ಸೂಕ್ಷ್ಮವಾಗಿ ಹಾಗೂ ವಿಮರ್ಶಾತ್ಮಕವಾಗಿ ನೋಡದೆ, ಕುರುಡು ನಂಬಿಕೆಯಿಂದ ಒಪ್ಪಿಕೊಳ್ಳಬಾರದು ಎಂದು ಮಂಗಳೂರಿನ ಕಸ್ತೂರ ಬಾ ಮೆಡಿಕಲ್ ಕಾಲೇಜಿನ ಬಯೋಕೆಮಿಸ್ಟ್ರಿ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ನರೇಂದ್ರ ನಾಯಕ್ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಭೌತಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗ ದೊಂದಿಗೆ ಸೋಮವಾರ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ 'ವೈಚಾರಿಕ ಪ್ರಜ್ಞೆ ಮತ್ತು ವೈಜ್ಞಾನಿಕ ಮನೋಧರ್ಮ' ವಿಷಯ ಕುರಿತು ಮಾತನಾಡಿದ ಅವರು, ಆಧುನಿಕ ಸಮಾಜದಲ್ಲಿ ಹಲವರು ಧರ್ಮದ ಹೆಸರಿನಲ್ಲಿ ವಿದ್ಯಾವಂತರನ್ನು, ಅವಿದ್ಯಾವಂತರನ್ನು ಸಂವಹನ ವಿದ್ಯೆಗಳಿಂದ ಮೋಸಗೊಳಿಸುತ್ತಿದ್ದಾರೆ ಎಂಬುದನ್ನು ಪ್ರಾಯೋಗಿಕವಾಗಿ ವೀಡಿಯೊ ನಿದರ್ಶನಗಳೊಂದಿಗೆ ಪ್ರಸ್ತುತಪಡಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ವಿಚಾರವಾದಿಗಳ ಒಕ್ಕೂಟದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ವೈಜ್ಞಾನಿಕ ಕಾರ್ಯಕರ್ತ ಶ್ರೀನಿವಾಸ ನಟೇಕರ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಪೂರ್ಣಿಮಾ, ಪ್ರೊ.ಪಂಡಿತಾರಾಧ್ಯ, ದೇವರಾಜ, ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ.ವಿನೋದಮ್ಮ, ಸಹಾಯಕ ಪ್ರಾಧ್ಯಾಪಕರಾದ ಎಂ.ನಾಗೇಶ, ಕಿರಣ್ ಕುಮಾರ್, ಮನೋಜ್ ಕುಮಾರ್ ಹಾಗೂ ಭೌತಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ವಿ.ಗಾಯತ್ರಿ ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 23.04.2024

ದೇಶ ಬದಲಾಗಲು ವ್ಯಕ್ತಿ ಬದಲಾಗುವುದು ಅಗತ್ಯ

ಮಂಗಳೂರಿನ ಕಸ್ತೂರ ಬಾ ವೈದ್ಯಕೀಯ ಕಾಲೇಜಿನ ಬಯೋಕೆಮಿಸ್ಟ್ರಿ ವಿಭಾಗದ ನಿವೃತ್ತ ಪ್ರಾಧ್ಯಾಪಕ ನರೇಂದ್ರನಾಯಕ್

• ಕನ್ನಡಪ್ರಭ ವಾರ್ತೆ ಮೈಸೂರು

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಭೌತಶಾಸ್ತ್ರ ವಿಭಾಗ ಹಾಗೂ ಏಕ್ಯೂಎಸ ಸಹಯೋಗದಲ್ಲಿ ಕಾರ್ಯಾಗಾರ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಮಂಗಳೂರಿನ ಕಸ್ತೂರ ಬಾ ವೈದ್ಯಕೀಯ ಕಾಲೇಜಿನ ಬಯೋಕೆಮಿಸ್ಟ್ರಿ ವಿಭಾಗದ ನಿವೃತ್ತ ಪ್ರಾಧ್ಯಾಪಕ ನರೇಂದ್ರನಾಯಕ್ ಮಾತನಾಡಿ, 2011ರಲ್ಲಿ ವಿಡ್ ವಿಥೌಟ್ ರಿಲಿಜನ್ ಎಂಬ ಸ್ವಯಂ ಸೇವಾ ಸಂಸ್ಥೆಯ ಸ್ಥಾಪಕರು. ದೇವರ ಹೆಸರಿನಲ್ಲಿ ನಡೆಯುವ , ಶೋಷಣೆ, ದೇವಮಾನವರೆಂದು ಹೇಳಿಕೊಳ್ಳುವವರ ವಿರುದ್ಧ ದೇಶ, ವಿದೇಶಗಳಲ್ಲಿ ಸುಮಾರು 2000ಕ್ಕೂ ಹೆಚ್ಚು ಹೋರಾಟ ಕೈಗೊಂಡಿದ್ದು, ಸುಮಾರು 9 ಭಾಷೆಗಳಲ್ಲಿ ಪ್ರಬುದ್ಧತೆ ಹೊಂದಿದ್ದಾರೆ.

ಪವಾಡ ಬಯಲು ಕಾರ್ಯಕ್ರಮದಡಿ ಜನಮಾನಸದಲ್ಲಿ ವೈಜ್ಞಾನಿಕ ಮನೋಭಾವ -



ಪ್ರವೃತ್ತಿ ಬೆಳೆಸುವಲ್ಲಿ ಸದಾ ಕಾರ್ಯಪ್ರವೃತರಾಗಿದ್ದಾರೆ.

1004ರಲ್ಲಿ ಮೂಢನಂಬಿಕೆಯಿಂದ ಸ್ವಂತ ಮಗಳನ್ನೇ ಬಲಿನೀಡಿದ ಗುಲ್ಬರ್ಗ ಜಿಲ್ಲೆಯಲ್ಲಿ ನಡೆದ ಘಟನೆಯು ಇವರ ಜೀವನವನ್ನು ಮೌಢ್ಯ ವಿರೋಧಿಸಲಿಕ್ಕೆ ಮೀಸಲಿಡಲು ಪ್ರೇರೇಪಿಸಿತು. ಕಾರ್ಯಾಗಾರದಲ್ಲಿ ವೈಚಾರಿಕ ಪ್ರಜ್ಞೆ ಮತ್ತು ವೈಜ್ಞಾನಿಕ ಮನೋಧರ್ಮ ಕುರಿತು ಪ್ರಾತ್ಯಕ್ಷಿಕೆಗಳ ಮೂಲಕ ಅಮೂಲಾಗ್ರವಾಗಿ ವಿವರಿಸಿದರು. ವ್ಯಕ್ತಿ ತನ್ನ ಜೀವನದಲ್ಲಿ ಯಾವುದೇ ವಿಷಯವನ್ನು ಸೂಕ್ಷ್ಮವಾಗಿ ಹಾಗೂ ವಿಮರ್ಶಾತ್ಮಕವಾಗಿ ನೋಡದೆ, ಕುರುಡು ನಂಬಿಕೆಯಿಂದ ಒಪ್ಪಿಕೊಳ್ಳಬಾರದು ಎಂದರು.

ಈ ಆಧುನಿಕ ಸಮಾಜದಲ್ಲೂ ಧರ್ಮದ ಹೆಸರಿನಲ್ಲಿ ವಿದ್ಯಾವಂತರನ್ನು, ಅವಿದ್ಯಾವಂತರನ್ನು ಕೂಡ ಸಂಮೋಹನ ವಿದ್ಯೆಗಳಿಂದ ಮೋಸ ಗೊಳಿಸುತ್ತಿದ್ದಾರೆ ಎಂಬುದನ್ನು ಪ್ರಾಯೋಗಿಕವಾಗಿ ವಿಡಿಯೋ ನಿದರ್ಶನಗಳೊಂದಿಗೆ ಪ್ರಸ್ತುತಪಡಿಸಿದರು.

ಯುವಕರ ಮನಸ್ಸಿನ ಮಾತುಗಳನ್ನು ಕೆಲವು ಪವಾಡ ಪುರುಷರು ವಶೀಕರಣ ಮಾಡಿಕೊಂಡು ಅವರನ್ನು ನಂಬುವಂತೆ ಮಾಡಿ ಸುಲಭವಾದ ಮಾರ್ಗಗಳಿಂದ ಹೆಚ್ಚು ಹೆಚ್ಚು ಹಣ ಸಂಪಾದಿಸುತ್ತಿದ್ದಾರೆ, ಇದಕ್ಕೆ ಮುಗ್ಧ ಹಾಗೂ ಅಮಾಯಕ ಜನರು ಬಲಿಯಾಗುವುದಲ್ಲದೆ, ಕೆಲ ಅತ್ಯುನ್ನತ ಹುದ್ದೆಯಲ್ಲಿರುವ ಪ್ರಭಾವಿ ವ್ಯಕ್ತಿಗಳು ಇದನ್ನು ನಂಬುವುದರ ಮೂಲಕ ಅವರಲ್ಲಿರುವ ಜ್ಞಾನ ನಿರರ್ಥಕವಾಗುತ್ತಿರುವುದು ಕಂಡು ಬರುತ್ತಿದೆ. ಇದರಬಗ್ಗೆ ಜನರು ಜಾಗೃತಿವಹಿಸಬೇಕು ಎಂದು ಅವರು ತಿಳಿಸಿದರು.

ಈ ಕಾರ್ಯಾಗಾರದಲ್ಲಿ ಭಾರತೀಯ ವಿಚಾರವಾದಿಗಳ ಒಕ್ಕೂಟದ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ವೈಜ್ಞಾನಿಕ ಕಾರ್ಯಕರ್ತರು ಆದ ಶ್ರೀನಿವಾಸ ನಟೇಕರ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಸ್. ಪೂರ್ಣಿಮಾ, ಸಾಹಿತಿಗಳಾದ ಪಂಡಿತಾರಾಧ್ಯ, ದೇವರಾಜ, ಕನ್ನಡ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ವಿನೋದಮ್ಮ, ಸಹಾಯಕ ಪ್ರಾಧ್ಯಾಪಕರಾದ ಎಂ. ನಾಗೇಶ, ಕಿರಣ್‌ಕುಮಾರ್, ಮನೋಜ್ ಕುಮಾರ್, ಭೌತಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ವಿ. ಗಾಯತ್ರಿ ಮೊದಲಾದವರು ಇದ್ದರು.

ಹೊಸ ದಿಗಂತ

ಶುಕ್ರವಾರ 26 ಏಪ್ರಿಲ್ 2024

ಉದ್ದಿಮೆದಾರಳಾಗಿ ಮುನ್ನುಗ್ಗಲು ಸದೃಢ ಮನಸ್ಥಿತಿ ಅವಶ್ಯ : ರಚನಾ ಮಹೇಶ್

ಸ್ತ್ರೀಯೂ ಸ್ವಾವಂಬಿಯಾಗಿ ಬದುಕಬಹುದು

ಮೈಸೂರು ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯವಹಾರ ನಿರ್ವಹಣಾ ವಿಭಾಗ, ಐಕ್ಯೂಎಸಿ ವತಿಯಿಂದ ವೈಸ್ ವುಮೆನ್ ಇನ್ ಸ್ಮಾಲ್ ಎಂಟರ್‌ಪ್ರೈಸಸ್ ಸಹಯೋಗದಲ್ಲಿ ಅವಕಾಶಗಳು ಹಾಗೂ ಸವಾಲುಗಳು ಕುರಿತು ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ವೇಳೆ ಮಾತನಾಡಿದ ಮೈಸೂರಿನ ಎಜುಕೇರ್ ಐಟಿಇಎಸ್ ಮತ್ತು ವುಮೆನ್ ಕೆನ್ ಟ್ರಸ್ಟ್‌ನ ಸಂಸ್ಥಾಪಕಿ ರಚನಾ ಮಹೇಶ್ ಮಾತನಾಡಿ, ಮಹಿಳೆಯರು ಏಕಕಾಲದಲ್ಲಿ ಹಲವು ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯ ಉಳ್ಳವರಾಗಿದ್ದಾರೆ. ಆದ್ದರಿಂದ ಮಹಿಳೆ ಯಶಸ್ವಿ ವ್ಯಾಪಾರವನ್ನು ನಡೆಸಲು ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗೆಗೆ ವಿವರಿಸಿದರು.

ಅಲ್ಲದೇ ಮಹಿಳೆ ಉದ್ದಿಮೆದಾರಳಾಗಿ ಮುನ್ನುಗ್ಗಲು ಸದೃಢ ಮನಃಸ್ಥಿತಿಯನ್ನು ಹೊಂದಿರಬೇಕು. ಹಾಗಾಗಿ ವಿದ್ಯಾರ್ಥಿನಿಯರುಗಳಿಗೆ ಉದ್ಯಮ. ದಾರರಾಗಲು ವೈವಿಧ್ಯಮಯವಾದ ಸಲಹೆ ಮತ್ತು ಮಾರ್ಗದರ್ಶನ ನೀಡಿದರು.

ಮೈಸೂರಿನ ಕಲ್ಯಾಣಿ ಹೋಟೆಲ್‌ನ ವ್ಯವಸ್ಥಾಪಕ ನಿರ್ದೇಶಕಿ ವರ್ಷಿತ ರುಕ್ಮಾಂಗದ ಮಾತನಾಡಿ, ಒಂದು ಹೊಟೇಲ್ ಉದ್ಯಮ ನಡೆಸಿ, ಯಶಸ್ವಿಯಾದ ತಮ್ಮ ಉದ್ಯಮ ಜೀವನದ ಅನುಭವವನ್ನು ಹಂಚಿಕೊಂಡರು.



- **ಏಕಕಾಲದಲ್ಲಿ ಹಲವು ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯ ಉಳ್ಳವರು ಮಹಿಳೆಯರು**
- **ಜಗತ್ತಿನಾದ್ಯಂತ ಬಹುತೇಕ ಉದ್ಯಮಗಳಲ್ಲಿ ಮಹಿಳೆಯರೇ ಮೇಲು**

ಜಗತ್ತಿನಾದ್ಯಂತ ಬಹುತೇಕ ಉದ್ಯಮಗಳಲ್ಲಿ ಅಸಂಖ್ಯಾತ ಮಹಿಳೆಯರು ಅದರಲ್ಲಿನ ಸಮಸ್ಯೆ ಮತ್ತು ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಉನ್ನತ ಸ್ಥಾನವನ್ನಲಂಕರಿಸಿರುವುದನ್ನು ಹಲವು ನಿದರ್ಶನಗಳ ಮೂಲಕ ವಿವರಿಸಿದರು.

ಕಾರ್ಯಕ್ರಮದಲ್ಲಿ ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥೆ ಡಾ. ಶೈಲಾ ಎಸ್ ಉಪಸ್ಥಿತರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 26.04.2024

ಮಹಿಳೆಯಿಂದ ಏಕಕಾಲದಲ್ಲಿ ಹಲವು ಕಾರ್ಯ ನಿರ್ವಹಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವ್ಯವಹಾರ ನಿರ್ವಹಣಾ ವಿಭಾಗವು ಐಕ್ಯೂಎಸಿ ವತಿಯಿಂದ ವೈಸ್ ವುಮೆನ್ ಇನ್ ಸ್ಕಾಲ್ ಎಂಟರ್‌ಪ್ರೈಸಸ್ ಸಹಯೋಗದಲ್ಲಿ ಉದ್ಯಮಶೀಲತ್ವದ ಅವಕಾಶ ಮತ್ತು ಸವಾಲುಗಳು ಕುರಿತು ಸಂವಾದ ಕಾರ್ಯಕ್ರಮ ನಡೆಯಿತು.

ಎಡುಕೇರ್ ಐಟಿಇಎಸ್ ಮತ್ತು ವುಮೆನ್ ಕೆನ್ ಟ್ರಸ್ಟ್ ಸಂಸ್ಥಾಪಕಿ ರಚನಾ ಮಹೇಶ್ ಮಾತನಾಡಿ, ಮಹಿಳೆಯರು ಏಕಕಾಲದಲ್ಲಿ ಹಲವು ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯ ಉಳ್ಳವರಾಗಿದ್ದಾರೆ ಎಂದರು.

ಮಹಿಳೆ ಯಶಸ್ವಿ ವ್ಯಾಪಾರವನ್ನು ನಡೆಸಲು ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗೆಗೆ ವಿವರಿಸಿದರು.

ಅಲ್ಲದೇ ಮಹಿಳೆ ಉದ್ದಿಮೆದಾರಳಾಗಿ ಮುನ್ನುಗ್ಗಲು ಸದೃಢ ಮನಃಸ್ಥಿತಿಯನ್ನು ಹೊಂದಿರಬೇಕು. ಹಾಗಾಗಿ ವಿದ್ಯಾರ್ಥಿನಿಯರುಗಳಿಗೆ ಉದ್ಯಮದಾರರಾಗಲು



ವೈವಿಧ್ಯಮಯವಾದ ಸಲಹೆ ಮತ್ತು ಮಾರ್ಗದರ್ಶನ ನೀಡಿದರು.

ಮೈಸೂರಿನ ಕಲ್ಯಾಣ ಹೋಟೆಲ್ ನ ವ್ಯವಸ್ಥಾಪಕ ನಿರ್ದೇಶಕಿ ಹಾಗೂ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ವರ್ಷಿತ ರುಕ್ಕಾಂಗದ ಮಾತನಾಡಿ, ಹೋಟೇಲ್ ಉದ್ಯಮ ನಡೆಸಿ ಯಶಸ್ವಿಯಾದ ತಮ್ಮ ಉದ್ಯಮ ಜೀವನದ ಅನುಭವವನ್ನು ಹಂಚಿಕೊಂಡರು.

ಜಗತ್ತಿನಾದ್ಯಂತ ಬಹುತೇಕ ಉದ್ಯಮಗಳಲ್ಲಿ ಅಸಂಖ್ಯಾತ ಮಹಿಳೆಯರು ಅದರಲ್ಲಿನ ಸಮಸ್ಯೆ ಮತ್ತು ಸವಾಲನ್ನು ಸಮರ್ಥವಾಗಿ ಎದುರಿಸಿ ಉನ್ನತ ಸ್ಥಾನವನ್ನು ಅಲಂಕರಿಸಿರುವುದನ್ನು ಹಲವು ನಿದರ್ಶನಗಳ ಮೂಲಕ ವಿವರಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ, ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥೆ ಡಾ.ಎಸ್. ಶೈಲಾ ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 26 ಏಪ್ರಿಲ್ 2024

ಮಹಿಳೆಯರು ಏಕಕಾಲದಲ್ಲಿ ಹಲವು ಕಾರ್ಯಗಳ ನಿರ್ವಹಿಸುವ ಸಾಮರ್ಥ್ಯ ಉಳ್ಳವರು

ಎಜುಕೇರ್, ಐಐಇಎಸ್ ಅಂಡ್ ವುಮೆನ್‌ಕಾನ್ ಟ್ರಸ್ಟ್ ಸಂಸ್ಥಾಪಕಿ ರಚನಾ ಮಹೇಶ್ ಅಭಿಪ್ರಾಯ



ಮೈಸೂರು, ಏ. 25– ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯವಹಾರ ನಿರ್ವಹಣಾ ವಿಭಾಗ, ಐಕ್ಯೂಎಸಿ ವತಿಯಿಂದ ವೈಸ್–ವುಮೆನ್ ಇನ್ ಸ್ಮಾಲ್ ಎಂಟರ್‌ಪ್ರೈಸಸ್ ಸಹಯೋಗದಲ್ಲಿ ಉದ್ಯಮಶೀಲತೆ ಅವಕಾಶಗಳು ಮತ್ತು ಸವಾಲುಗಳು ಕುರಿತು ಸಂವಾದ ಆಯೋಜಿಸಲಾಗಿತ್ತು.

ಸಂವಾದ ಕಾರ್ಯಕ್ರಮದಲ್ಲಿ ಮೈಸೂರಿನ ಎಜುಕೇರ್, ಐಟಿಇಎಸ್ ಅಂಡ್ ವುಮೆನ್‌ಕಾನ್ ಟ್ರಸ್ಟ್ ಸಂಸ್ಥಾಪಕಿ ರಚನಾ ಮಹೇಶ್ ಮಾತನಾಡಿ, ಮಹಿಳೆಯರು ಏಕಕಾಲದಲ್ಲಿ ಹಲವು ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯ ಉಳ್ಳವರಾಗಿದ್ದಾರೆ. ಆದ್ದರಿಂದ ಮಹಿಳೆ ಯಶಸ್ವಿ ವ್ಯಾಪಾರವನ್ನು ನಡೆಸಲು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗೆಗೆ ವಿವರಿಸಿದರು. ಅಲ್ಲದೇ ಮಹಿಳೆ ಉದ್ದಿಮೆದಾರಳಾಗಿ ಮುನ್ನುಗ್ಗಲು ಸದೃಢ ಮನಃಸ್ಥಿತಿಯನ್ನು ಹೊಂದಿರಬೇಕು. ಹಾಗಾಗಿ ವಿದ್ಯಾರ್ಥಿನಿಯರಿಗೆ ಉದ್ಯಮದಾರರಾಗಲು ವೈವಿಧ್ಯಮಯವಾದ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿದರು.

ಮೈಸೂರಿನ ಕಲ್ಯಾಣಿ ಹೋಟೆಲ್‌ನ ವ್ಯವಸ್ಥಾಪಕ ನಿರ್ದೇಶಕಿ ಹಾಗೂ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಶ್ರೀಮತಿ ವರ್ಷಿತ ರುಕ್ಮಾಂಗದ ಅವರು, ಒಂದು ಹೊಟೇಲ್ ಉದ್ಯಮ ನಡೆಸಿ ಯಶಸ್ವಿಯಾದ ತಮ್ಮ ಉದ್ಯಮ ಜೀವನದ ಅನುಭವವನ್ನು ಹಂಚಿಕೊಂಡರು. ಜಗತ್ತಿನಾದ್ಯಂತ ಬಹುತೇಕ ಉದ್ಯಮಗಳಲ್ಲಿ ಅಸಂಖ್ಯಾತ ಮಹಿಳೆಯರು ಅದರಲ್ಲಿನ ಸಮಸ್ಯೆ ಮತ್ತು ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಉನ್ನತ ಸ್ಥಾನವನ್ನಲಂಕರಿಸಿರುವುದನ್ನು ಹಲವು ನಿದರ್ಶನಗಳ ಮೂಲಕ ವಿವರಿಸಿದರು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಡಾ. ಶೈಲಾ ಎಸ್ ಇನ್ನಿತರರು ಉಪಸ್ಥಿತರಿದ್ದರು.

MFGE In the Eyes of the Press.....

STAR OF MYSORE

Monday 29th April 2024

Women entrepreneurs share key to success

Mysuru, Apr. 29- Rachana Mahesh, Founder, Edukare ITES & Womencan Trust, Mysuru, delved into the qualities to be acquired to be an entrepreneur.

She was speaking during an interaction programme on 'Entrepreneurship Opportunities & Challenges', organised by the Department of Business Administration and IQAC in association with Women In Small Enterprise (WISE), a women wing of Mysore Chamber of Commerce & Industry (MCCI) at SBRR Mahajana First Grade College in the city recently.

Rachana elaborated on steps to be taken in order to run a successful business & also touched upon the importance of having a strong mindset while venturing into entrepreneurial space.



Varshitha Rukmangada, Managing Director, Hotel Kalyani, Mysuru and alumnus of the college, touched upon the importance of being dedicated and focused on goals by narrating her successful story in the hospitality industry. She highlighted the significance of facing adversities while working and explained about the rising position of women in industries all around the world, including the most challenging workplaces.

This was followed by a brief interaction session, where both the speakers answered various queries on entrepreneurship from the audience.

Sanjana Shakhapur, a student of second year BBA, welcomed and introduced the guests.

In all, 98 students were present on the occasion.

Dr. Vijayalakshmi Muralidhar, Hon. Secretary of Mahajana Education Society, Dr. B.R. Jayakumari, Principal of SBRR Mahajana First Grade College (Autonomous), Dr. Shyla, HoD, Business Administration, were present on the occasion.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 3.04.2024

ಜನಪದ ಕಲೆಗಳನ್ನು ಉತ್ತೇಜಿಸಿ, ಉಳಿಸಿ ಬೆಳೆಸಬೇಕು

ನಟ ಕಾರ್ತಿಕ್ ಮಹೇಶ್ ಅಭಿಮತ | ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಭಿನಂದನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಾನು ನಾಯಕ ನಟನಾಗಿ ನಟಿಸಿರುವ ಡೊಳ್ಳು ಚಿತ್ರವು ನನಗೆ ರಾಷ್ಟ್ರಪ್ರಶಸ್ತಿ ತಂದುಕೊಟ್ಟಿದೆ. ನಮ್ಮ ಕನ್ನಡ ನುಡಿ, ಸಂಸ್ಕೃತಿ, ಪರಂಪರೆಯನ್ನು ಎಂದಿಗೂ ಮರೆಯಬಾರದು. ಜನಪದ ಕಲೆಗಳನ್ನು ಉತ್ತೇಜಿಸಿ, ಉಳಿಸಿ ಬೆಳೆಸಬೇಕು ಎಂದು ನಟ ಕಾರ್ತಿಕ್ ಮಹೇಶ್ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರತಿಭಾ ವೇದಿಕೆ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಅಭಿನಂದನೆ ಸ್ವೀಕರಿಸಿ ಮಾತನಾಡಿದರು.



ವಿದ್ಯಾರ್ಥಿಗಳು ನಿಮ್ಮ ಪ್ರತಿಭೆಯನ್ನು ಗುರುತಿಸಿಕೊಂಡು ಸಕ್ರಿಯವಾಗಿ ಎಲ್ಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ವ್ಯಕ್ತಿತ್ವ ವೃದ್ಧಿಸಿಕೊಳ್ಳಿ. ಅಷ್ಟೇ ಅಲ್ಲದೆ ಹೆಚ್ಚು ಹೆಚ್ಚು ಕ್ರೀಡಾ ಕ್ಷೇತ್ರದಲ್ಲಿ ಪಾಲ್ಗೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಮಹಾ ಜನ ವಿದ್ಯಾಸಂಸ್ಥೆಯ ಗೌರವ ಕಾರ್ಯ ದರ್ಶಿ ಡಾ. ವಿಜಯಲಕ್ಷ್ಮಿ ಮುರಳೀ ಧರ್, ಕಾಲೇಜಿನ ಪ್ರಾಂಶು ಪಾಲೆ ಡಾ. ಬಿ. ಆರ್. ಜಯಕುಮಾರಿ ಇದ್ದರು. ಡಾ. ಎಚ್.ಆರ್.ತಿಮ್ಮೇಗೌಡ ಸ್ವಾಗತಿಸಿದರು. ಪ್ರಿಯಾಂಕ ಶೆಣೈ ಪ್ರಾರ್ಥಿಸಿದರು. ಎನ್. ಸುನಿಲ್ ನಿರೂಪಿಸಿದರು. ಎಂ. ನಾಗೇಶ ವಂದಿಸಿದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಸೋಮವಾರ 1.04.2024

- ಮಹಾಜನ ಪ್ರಥಮ ದರ್ಜೆ ಕಾಲೇಜು:ಪ್ರತಿಭಾ ವೇದಿಕೆಯಿಂದ ಹಿರಿಯ ವಿದ್ಯಾರ್ಥಿ ಕಾರ್ತಿಕ್ ಮಹೇಶ್ ಗೆ ಸನ್ಮಾನ, ಬಹುಮಾನ ವಿತರಣೆ, ಭಾಗವಹಿಸುವವರು– ಟಿ. ಮುರಳೀಧರ ಭಾಗವತ್, ವಿಜಯಲಕ್ಷ್ಮೀ ಮುರಳೀಧರ್, ಡಾ.ಬಿ.ಆರ್. ಜಯಕುಮಾರಿ, ಡಾ.ಎಸ್.ಆರ್. ರಮೇಶ್, ಜಯಲಕ್ಷ್ಮೀಪುರಂ, ಬೆಳಗ್ಗೆ 10.30.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 19 ಏಪ್ರಿಲ್ 2024

ಚುನಾವಣೆಯಲ್ಲಿ ಮತ ಚಲಾವಣೆ ಪ್ರತಿಯೊಬ್ಬರ ನೈತಿಕ ನಡಾವಳಿ

ಮಹಾಜನ ಕಾನೂನು ಕಾಲೇಜು ಪ್ರಾಂಶುಪಾಲರಾದ ಸೌಮ್ಯ ಅಭಿಮತ



ಮೈಸೂರು, ಏ. 18– ಮೈಸೂರಿನ ಫಸ್ಟ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ (ಸ್ವಾಯತ್ತ) ಹಾಗೂ ಐಕ್ಯೂಎಸಿ ವತಿಯಿಂದ ಆಯೋಜಿಸಿದ್ದ, "ಚುನಾವಣೆ ಹಾಗೂ ನೈತಿಕ ನಡಾವಳಿ" ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ವೇಳೆ ಮಹಾಜನ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಸೌಮ್ಯ ಮಾತನಾಡಿ, ಚುನಾವಣೆಯ ಮಹತ್ವ, ಚುನಾವಣೆಯಿಂದ ಸಮಾಜಕ್ಕೆ ಆಗುವ ಉಪಯುಕ್ತತೆ ಹಾಗೂ ಇಂದು ನಮ್ಮ ಭಾರತ ದೇಶ ಪ್ರಪಂಚಾದ್ಯಂತ ಗುರುತಿಸಿಕೊಳ್ಳಲು ಮುಖ್ಯ ಕಾರಣ ನಮ್ಮ ಸಂವಿಧಾನ. ಈ ಸಂವಿಧಾನದಲ್ಲಿ ಮತದಾನ ಒಂದು ಮೂಲಭೂತ ಹಕ್ಕು ಹಾಗೂ ರಾಜ್ಯದ ಪ್ರತಿಯೊಬ್ಬ ನಾಗರಿಕನಿಗೆ ನೀಡಿರುವ ಕರ್ತವ್ಯ. ಆ ಕರ್ತವ್ಯವನ್ನು ಚಲಾಯಿಸುವಾಗ ಪ್ರಜ್ಞಾವಂತ ನಾಗರಿಕರಾದ ನಾವು ಯಾವುದೇ ಭೌತಿಕ ಆಮಿಷಗಳಿಗೆ ಒಳಗಾಗದೆ ಪಾರದರ್ಶಕತೆಯಿಂದ, ನೈತಿಕವಾಗಿ ಮತವನ್ನು ಚಲಾಯಿಸಬೇಕು ಇದು ಪ್ರಜಾ ಪ್ರಭುತ್ವದ ಬಲಿಷ್ಠ ಅಸ್ತ್ರವಾಗಿದ್ದು, ಇದರಿಂದ ಮಾತ್ರ ದೇಶದ ಅಭಿವೃದ್ಧಿ, ದೇಶದ ನಿರ್ಮಾಣ ಸಾಧ್ಯವಾಗುತ್ತದೆ ಎಂದರು.

ಇದು ಪ್ರಜಾಪ್ರಭುತ್ವ ಸರ್ಕಾರ ಪ್ರಜೆಗಳಿಂದ ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಪ್ರಜೆಗಳು ನಡೆಸುವ ಸರ್ಕಾರ. ಆದ್ದರಿಂದ ಚುನಾವಣೆ ಒಂದೇ ನಮ್ಮ ಬಲಿಷ್ಠ ಅಸ್ತ್ರ. ಅದನ್ನು ನಮಗಷ್ಟೆ ಅಲ್ಲ ನಮ್ಮ ಮುಂದಿನ ಜನಾಂಗಕ್ಕೂ ಅನುಕೂಲವಾಗಿ ನಡೆಯುವಂತೆ ಮಾಡುವ ಒಬ್ಬ ಉತ್ತಮ ಜವಾಬ್ದಾರಿಯ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಪ್ರಸ್ತುತ ಸಮಾಜದಲ್ಲಿ ನಮ್ಮೆಲ್ಲರ ದೊಡ್ಡ ಸಮಸ್ಯೆ ಭ್ರಷ್ಟಾಚಾರ. ಅದನ್ನು ನಾವು ನಿರ್ಮೂಲನೆ ಮಾಡಬೇಕು. ಭ್ರಷ್ಟ ರಾಜಕಾರಣಿಯನ್ನು ಬೆಂಬಲಿಸಬಾರದು. ಆದ್ದರಿಂದ ಪ್ರತಿಯೊಬ್ಬ ನಾಗರಿಕನ ಮತದಾನ ಬಹಳ ಶ್ರೇಷ್ಠ ಮತದಾನದಲ್ಲಿ ಭಾಗವಹಿಸಿ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಿ ಭ್ರಷ್ಟ ಸರ್ಕಾರವನ್ನು ನಿರ್ಮೂಲನೆ ಮಾಡಿ ಎಂಬುದಾಗಿ ವಿವರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ಕಾನೂನು ವಿಭಾಗದ ಸಹಾಯಕ ಪ್ರಾಧ್ಯಾಪಕಿ ಮಂಜುಳಾ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 14.05.2024

Mahajana Education Society ®
Education to Excel

SBRR Mahajana First Grade College (Autonomous)

Jayalakshmipuram, Mysuru-570 012
Affiliated to University of Mysore * Re-Accredited by NAAC with 'A' Grade * College with Potential for Excellence

Admission is open for 2024-25

For application forms and admissions to first year degree programs please visit the college office between 10.30 a.m. & 5.30 p.m.
email: principal.fgc@mahajana.edu.in Enquiry: 0821-2512065, 91132 93595, Dept. of Tourism Enquiry: 0821-4009600, 94499 10541

Programs Offered

- B.A - History, Economics, Geography
  - History, Economics, Sociology
  - Journalism & Mass Communication, Economics, English (Optional)
  - Criminology & Forensic Science, Psychology, Sociology
- B.Com ❖ BBA ❖ BCA
- B.Sc- Physics, Mathematics, Computer Science
  - Biotechnology, Biochemistry, Microbiology
- BBA - Aviation & International Tourism, Hotel & Hospitality } Offered at PG Campus

- 100% Program fee exemption for students with score of 95% & above
  To continue to avail the facility in the subsequent years:
  - 100% concession in program fee on scoring 95% & above
  - 50% concession in program fee on scoring between 90- 94.99%
- Scholarship & Fee Concession for Meritorious and Sports Students
- 25% Concession on Program fee for the Specially Abled and Children of In-service & Ex-service Personnel

Hostel Facility is Available for Boys & Girls
(Hostel Enquiries: 8861677775)

For more information log on to www.fgc.mahajana.edu.in

Why Join Mahajana College?

1. Centrally Located in the Heritage City of Mysuru
2. Aided Institution and Affiliated to University of Mysore
3. Accredited by NAAC with 'A' Grade (3rd Cycle)
4. Conferred with 'College with Potential for Excellence' Status by UGC
5. Conferred with Autonomous Status by UGC
6. Updated and Relevant Curriculum
7. Practicing Outcome Based Education (OBE)
8. 100+ Well-qualified and Experienced Faculty
9. Use of Information & Communication Technology (ICT) for Enhanced Learning
10. Excellent Infrastructure and State-of-the-art Laboratories
11. Well-equipped Sports Facility with Multi-Gym
12. Digital Library and Audio Visual Centres
13. Media Centre for Creative Activities
14. Coaching for Competitive Exams
15. Collaboration with Industry for Curriculum based Industry Visits & Interaction
16. Promotion of Research, Innovation & Entrepreneurship through Research Cell
17. ASIC Platform to Promote Leadership among the Students
18. Career Guidance and Placement Assistance
19. Cash Prize for Toppers and Merit Scholarships for Meritorious Students
20. Eco-friendly Swacch Campus with Enhanced Academic Ambience

30 + Certificate & Value-Added Courses

ಆಂದೋಲನ
ದಿನ ಪತ್ರಿಕೆ

ಬುಧವಾರ, 22 ಮೇ 2024

ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಸಮಗ್ರ ಪ್ರಶಸ್ತಿ



ಮೈಸೂರು: ನಗರದ ಅಮೃತ ವಿಶ್ವವಿದ್ಯಾಪೀಠದ ವತಿಯಿಂದ ನಡೆದ 'ಸದ್ಗಮಯ' ರಾಜ್ಯಮಟ್ಟದ ಫೆಸ್ಟ್‌ನಲ್ಲಿ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರತಿಭಾ ವೇದಿಕೆಯ ವಿದ್ಯಾರ್ಥಿಗಳು ಭಾಗವಹಿಸಿ ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಬೆಸ್ಟ್ ಬಿಡರ್ಸ್ ಸ್ಪರ್ಧೆಯಲ್ಲಿ ಅರ್ಮಾನ್ ಮತ್ತು ಭುವ ನೇಶ್ ಅವರಿಗೆ ಪ್ರಥಮ, ಸೋಲೋ ಡಾನ್ಸ್ ಸ್ಪರ್ಧೆಯಲ್ಲಿ ಪಿ.ಪ್ರಜ್ವಲ್ ಪ್ರಥಮ, ಎಕ್ಸ್‌ಪ್ಲೋರ್ ಸ್ಪರ್ಧೆಯಲ್ಲಿ ಅಭಯ್ ಮತ್ತು ತಂಡದವರು ಪ್ರಥಮ ಬಹುಮಾನ ಪಡೆದುಕೊಂಡಿದೆ. ಸಾಧಕ ವಿದ್ಯಾರ್ಥಿಗಳನ್ನು ಸಂಸ್ಥೆಯ ಆಡಳಿತ ಮಂಡಳಿಯವರು, ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು ಹಾಗೂ ಅಧ್ಯಾಪಕೇತರರು ಅಭಿನಂದಿಸಿದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 22.05.2024

ಸದ್ಗಮಯ ಫೆಸ್ಟ್‌ನಲ್ಲಿ ಮಹಾಜನ ಕಾಲೇಜಿಗೆ ಸಮಗ್ರ ಪ್ರಶಸ್ತಿಯ ಗರಿ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಅಮೃತ ವಿಶ್ವವಿದ್ಯಾಪೀಠದಲ್ಲಿ ಆಯೋಜಿಸಿದ್ದ ಸದ್ಗಮಯ ರಾಜ್ಯಮಟ್ಟದ ಫೆಸ್ಟ್‌ನಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ಸಮಗ್ರ ಪ್ರಶಸ್ತಿ ಪಡೆಯಿತು. ಕಾಲೇಜಿನ ಟ್ಯಾಲೆಂಟ್ ಫೌರಂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಬೆಸ್ಟ್ ಬಿಡ್ಡರ್ಸ್ ವಿಭಾಗದಲ್ಲಿ ಅರ್ಮಾನ್ಮತ್ತು ಭುವನೇಶ್ ಅವರು ಪ್ರಥಮ, ಸೋಲೋ ಡ್ಯಾನ್ಸ್ ನಲ್ಲಿ ಪಿ. ಪ್ರಜ್ವಲ್ಪ್ರಥಮ, ಎಕ್ಸ್‌ಪ್ಲೋರ ಸ್ಪರ್ಧೆಯಲ್ಲಿ ಅಭಯ್ಮತ್ತು ತಂಡ ಪ್ರಥಮ ಬಹುಮಾನ ಪಡೆಯಿತು.

ಆ ಮೂಲಕ ಕಾಲೇಜಿನ ಆ ತಂಡವು ಸಮಗ್ರ ಪ್ರಶಸ್ತಿ ತನ್ನದಾಗಿಸಿಕೊಂಡಿತು. ಈ ಎಲ್ಲಾ ವಿದ್ಯಾರ್ಥಿಗಳು ಆಡಳಿತ ಮಂಡಳಿಯವರು, ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು, ಅಧ್ಯಾಪಕೇತರರು ಅಭಿನಂದಿಸಿದ್ದಾರೆ.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 22 ಮೇ 2024

ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಸಮಗ್ರ ಪ್ರಶಸ್ತಿ



ಮೈಸೂರಿನ ಅಮೃತ ವಿಶ್ವವಿದ್ಯಾಪೀಠ ಆಯೋಜಿಸಿದ್ದ 'ಸದ್ಗಮಯ' ರಾಜ್ಯಮಟ್ಟದ ಫೆಸ್ಟ್‌ನಲ್ಲಿ ಮಹಾಜನ ಕಾಲೇಜಿನ ಪ್ರತಿಭಾ ವೇದಿಕೆಯ ಟ್ಯಾಲೆಂಟ್ ಫೋರಂ ವಿದ್ಯಾರ್ಥಿಗಳು ಭಾಗವಹಿಸಿದ್ದು, ಬೆಸ್ಟ್ ಬಿಡ್ಡರ್ಸ್ ಸ್ಪರ್ಧೆಯಲ್ಲಿ ಅರ್ಮಾನ್, ಭುವನೇಶ್ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ. ಸೋಲೋ ಡಾನ್ಸ್‌ನಲ್ಲಿ ಪಿ.ಪ್ರಜ್ವಲ್ (ಪ್ರಥಮ), ಎಕ್ಸ್‌ಪ್ಲೋರ ಸ್ಪರ್ಧೆಯಲ್ಲಿ ಅಭಯ್, ತಂಡ (ಪ್ರಥಮ) ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಧವಾರ • ಮೇ 22, 2024



ಮೈಸೂರಿನ ಅಮೃತ ವಿಶ್ವವಿದ್ಯಾಪೀಠದಲ್ಲಿ ಈಚೆಗೆ ನಡೆದ 'ಸದ್ಗಮಯ' ಫೆಸ್ಟ್‌ನಲ್ಲಿ ಸಮಗ್ರ ಪ್ರಶಸ್ತಿ ಪಡೆದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಟ್ರೋಫಿಯನ್ನು ಕಾಲೇಜು ಸಿಬ್ಬಂದಿಯೊಂದಿಗೆ ಪ್ರದರ್ಶಿಸಿದರು

ಮಹಾಜನ ಕಾಲೇಜಿಗೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಅಮೃತ ವಿಶ್ವವಿದ್ಯಾಪೀಠ ಈಚೆಗೆ ನಡೆದ 'ಸದ್ಗಮಯ' ರಾಜ್ಯಮಟ್ಟದ ಫೆಸ್ಟ್‌ನಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಟ್ಯಾಲೆಂಟ್ ಫೋರಮ್ ವಿದ್ಯಾರ್ಥಿಗಳು ಸಮಗ್ರ ಪ್ರಶಸ್ತಿ ಪಡೆದರು.

ಬೆಸ್ಟ್ ಬಿಡರ್ಸ್ ಸ್ಪರ್ಧೆಯಲ್ಲಿ ಅರ್ಮಾನ್ ಮತ್ತು ಭುವನೇಶ್ ಪ್ರಥಮ, ಸೋಲೋ ಡಾನ್ಸ್ ಸ್ಪರ್ಧೆಯಲ್ಲಿ ಪಿ.ಪ್ರಜ್ವಲ್‌ಗೆ ಪ್ರಥಮ, ಎಕ್ಸ್‌ಪ್ಲೋರ ಸ್ಪರ್ಧೆಯಲ್ಲಿ ಅಭಯ್ ಮತ್ತು ತಂಡ ಪ್ರಥಮ ಬಹುಮಾನ ಗಳಿಸಿದೆ.

ಆಂದೋಲನ
ದಿನ ಪತ್ರಿಕೆ

ಭಾನುವಾರ, 26 ಮೇ 2024

ಭೌತಿಕ ಆಸ್ತಿಯ ಹಕ್ಕುಗಳನ್ನು ರಕ್ಷಿಸುವುದು ಅಗತ್ಯ: ನಾಗಭೂಷಣ್



ಮೈಸೂರು: ಬದಲಾಗುತ್ತಿರುವ ಸ್ಪರ್ಧಾತ್ಮಕ ಸ್ಥಿತ್ಯಂತರ ಆರ್ಥಿಕ ಜಗತ್ತಿನಲ್ಲಿ ನವ ಪ್ರವರ್ತನೆಗಳು, ಆರ್ಥಿಕ ಬೆಳವಣಿಗೆ ಮತ್ತು ಆರೋಗ್ಯಕರವಾದ ಸ್ಪರ್ಧಾತ್ಮಕ ಮನೋ ಪ್ರವೃತ್ತಿಗಳನ್ನು ಉತ್ತೇಜಿಸುವ ಮೂಲಕ ಭೌತಿಕ ಆಸ್ತಿಯ ಹಕ್ಕುಗಳನ್ನು ರಕ್ಷಿಸುವ ಮತ್ತು ಪ್ರೋತ್ಸಾಹಿಸುವ ಅಗತ್ಯತೆ ಬಹಳ ಮುಖ್ಯ ಎಂದು ಕುವೆಂಪು ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ನಾಗಭೂಷಣ್ ಹೇಳಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೇಗದ ಬೆಳವಣಿಗೆಯಲ್ಲಿ ಜಗತ್ತಿನಲ್ಲಿ ಆಗುತ್ತಿರುವ ಪೇಟೆಂಟ್ ಮತ್ತು ಕಾಪಿರೈಟ್‌ಗಳ ದುರ್ಬಳಕೆಯನ್ನು ತಡೆಗಟ್ಟುವ ಮೂಲಕ ರಾಷ್ಟ್ರದ ರಕ್ಷಣಾತ್ಮಕ ಬೆಳವಣಿಗೆಗೆ ಸಹಕಾರಿಯಾಗಬೇಕು ಎಂದರು. ಬಳಿಕ ವಿದ್ಯಾರ್ಥಿಗಳು ವಿಶೇಷ ಉಪನ್ಯಾಸಕರೊಂದಿಗೆ ಸಂವಾದ ಮತ್ತು ರಸಪ್ರಶ್ನೆಗಳಲ್ಲಿ ಪಾಲ್ಗೊಂಡಿದ್ದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ.ಎಂ.ಎನ್.ವೆಂಕಟಲಕ್ಷ್ಮಿ ಸ್ವಾಗತಿಸಿದರು. ಎಸ್.ಎಂ.ಚಲುವೇಗೌಡ ವಂದಿಸಿದರು. ವಿಭಾಗದ ಅಧ್ಯಾಪಕರಾದ ಡಾ.ಪಿ.ಜಿ.ಪುಷ್ಪಾರಾಣಿ, ಆರ್.ಸಿದ್ದಪ್ಪ ಇತರರು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 7.05.2024

ಮಹಾಜನ ಕಾಲೇಜಿನಲ್ಲಿ ಹ್ಯಾಕಾಥಾನ್ ಕಾರ್ಯಾಗಾರ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಸಿಎ ವಿಭಾಗ ಮತ್ತು ಕಂಪ್ಯೂಟರ್‌ಪ್ಯಾರಡೈಸ್ ಹಾಗೂ ಐಕ್ಯೂಎಸಿ ವತಿಯಿಂದ ಹ್ಯಾಕಾಥಾನ್ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಾಗಾರ ಉದ್ಘಾಟಿಸಿದ ಕಂಪ್ಯೂಟರ್ ಪ್ಯಾರಡೈಸ್ ಸಂಸ್ಥಾಪಕ ಎಸ್. ಆರೋಕಿಯಾಸ್ವಾಮಿ ಅವರು, ನೈಜ- ಪ್ರಪಂಚದ ಉದಾಹರಣೆಗಳನ್ನು ಮತ್ತು ಹ್ಯಾಕಾಥಾನ್ ಗಳ ಬಗ್ಗೆ ಕುರಿತು ಪ್ರಾಯೋಗಿಕವಾಗಿ ಸಲಹೆ, ಸೂಚನೆಗಳನ್ನು ನೀಡಿದರು.

ಕಾರ್ಯಾಗಾರದ ಅವಧಿಗಳು, ಸಿದ್ಧಾಂತ ಮತ್ತು ಅಭ್ಯಾಸದ ಡೈನಾಮಿಕ್ ಮಿಶ್ರಣವಾಗಿದ್ದು, ಹ್ಯಾಕಾಥಾನ್ ಮೂಲಗಳು, ಅಪ್ಲಿಕೇಶನ್ ಅಭಿವೃದ್ಧಿ ಮತ್ತು ಪೈಥಾನ್ ಅನ್ನು ಬಳಸಿಕೊಂಡು ಡೇಟಾಬೇಸ್ ನಿರ್ವಹಣೆ



ಸೇರಿದಂತೆ ವ್ಯಾಪಕ ಶ್ರೇಣಿಯ ವಿಷಯಗಳನ್ನು ತಿಳಿಸಿದರು. ಲ್ಯಾಬ್‌ನಲ್ಲಿನ ಹ್ಯಾಂಡ್ಸ್-ಆನ್ ಚಟುವಟಿಕೆಗಳು ಭಾಗವಹಿಸಿದವರಿಗೆ ಮೌಲ್ಯಯುತವಾದ ಪ್ರಾಯೋಗಿಕ ಅನುಭವವನ್ನು ಒದಗಿಸಿದವು, ತಂಡದ ಕೆಲಸ ಮತ್ತು ಸಮಸ್ಯೆಗಳನ್ನು ಪರಿಹರಿಸುವ ಕೌಶಲ್ಯಗಳನ್ನು ಪೋಷಕ ಪರಿಸರದಲ್ಲಿ ಬೆಳೆಸುತ್ತವೆ ಎಂದು ಅವರು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಬಿಸಿಎ ಕಂಪ್ಯೂಟರ್‌ಸೈನ್ಸ್ ವಿಭಾಗದ ಮುಖ್ಯಸ್ಥ ಎ.ರಾಧೇಶ್, ಪರೀಕ್ಷಾಂಗ ನಿರ್ವಹಣಾಧಿಕಾರಿ ಶ್ರುತಿ ಪೂಣಚ್ಚ ಮೊದಲಾದವರು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 7 ಮೇ 2024

ಮಹಾಜನ ಕಾಲೇಜಿನಲ್ಲಿ ಹ್ಯಾಕಥಾನ್ ಕಾರ್ಯಾಗಾರ





ಮೈಸೂರು, ಮೇ 6– ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಸಿಎ ವಿಭಾಗ, ಕಂಪ್ಯೂಟರ್ ಪ್ಯಾರಡೈಸ್ ಹಾಗೂ ಐಕ್ಯೂಎಸಿ ವತಿಯಿಂದ 'ಹ್ಯಾಕಥಾನ್' ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಂಪ್ಯೂಟರ್ ಪ್ಯಾರಡೈಸ್ ಸಂಸ್ಥಾಪಕ ಮತ್ತು ಟಾರಸ್ ಸಲ್ಯೂಷನ್ಸ್‌ನ ಎಸ್.ಆರೋಕಿಯಾ ಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ, ಹ್ಯಾಕಥಾನ್‌ಗಳ ಬಗ್ಗೆ ಪ್ರಾಯೋಗಿಕ ಸಲಹೆ, ಸೂಚನೆಗಳನ್ನು ನೀಡಿದರು. ಕಾರ್ಯಾಗಾರದ ಅವಧಿಗಳು, ಸಿದ್ಧಾಂತ, ಅಭ್ಯಾಸದ ಡೈನಾಮಿಕ್ ಮಿಶ್ರಣವಾಗಿದ್ದು, ಹ್ಯಾಕಥಾನ್ ಮೂಲಗಳು, ಅಪ್ಲಿಕೇಶನ್ ಅಭಿವೃದ್ಧಿ ಮತ್ತು ಪೈಥಾನ್ ಬಳಸಿಕೊಂಡು ಡೇಟಾಬೇಸ್ ನಿರ್ವಹಣೆ ಸೇರಿದಂತೆ ವ್ಯಾಪಕ ಶ್ರೇಣಿಯ ವಿಷಯಗಳನ್ನು ಒಳಗೊಂಡಿತ್ತು.

ಲ್ಯಾಬ್‌ನಲ್ಲಿನ ಹ್ಯಾಂಡ್ಸ್-ಆನ್ ಚಟುವಟಿಕೆಗಳು ಭಾಗವಹಿಸಿದವರಿಗೆ ಮೌಲ್ಯಯುತವಾದ ಪ್ರಾಯೋಗಿಕ ಅನುಭವವನ್ನು ಒದಗಿಸಿದವು, ತಂಡದ ಕೆಲಸ ಮತ್ತು ಸಮಸ್ಯೆಗಳನ್ನು ಪರಿಹರಿಸುವ ಕೌಶಲ್ಯಗಳನ್ನು ಪೋಷಕ ಪರಿಸರದಲ್ಲಿ ಬೆಳೆಸುತ್ತವೆ ಎಂದರು.

ಏಕದಿನ ಹ್ಯಾಕಥಾನ್ ಕಾರ್ಯಾಗಾರದಲ್ಲಿ ಭಾಗವಹಿಸಿದವರಿಗೆ ನಿರಂತರವಾಗಿ ವಿಕಸನಗೊಳ್ಳುತ್ತಿರುವ ತಂತ್ರಜ್ಞಾನ ಕಲಿಯಲು, ಸಹಯೋಗಿಸಲು ಮತ್ತು ಹೊಸತನವನ್ನು ಕಂಡುಕೊಳ್ಳಲು ಅನನ್ಯ ಅವಕಾಶಗಳನ್ನು ಒದಗಿಸಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡುತ್ತಾ, ಶಾಂತ್ರಿಕ ಉದ್ಯಮದಲ್ಲಿ ಸಹಯೋಗ ಮತ್ತು ನಾವೀನ್ಯತೆಗಳ ಪರಿವರ್ತಕ ಸಾಮರ್ಥ್ಯವನ್ನು ಭಾಗವಹಿಸಿದವರಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಬಿಸಿಎ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಎ.ರಾಧೇಶ್, ಪರೀಕ್ಷಾಂಗ ನಿರ್ವಹಣಾಧಿಕಾರಿ ಶ್ರುತಿಪೂಣಚ್ಚ, ವಿಭಾಗಗಳ ಅಧ್ಯಾಪಕರು, ಅಧ್ಯಾಪಕೇತರರು, 75 ಸ್ಪರ್ಧಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂಗಳವಾರ • ಮೇ 7, 2024



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಾಗಾರವನ್ನು ಎಸ್.ಆರೋಕಿಯಾ ಸ್ವಾಮಿ ಉದ್ಘಾಟಿಸಿದರು. ಬಿ.ಆರ್. ಜಯಕುಮಾರಿ, ಎ.ರಾಧೇಶ್, ಶ್ರುತಿ ಪೂಣಚ್ಚ ಭಾಗವಹಿಸಿದ್ದರು

'ಪ್ರಾಯೋಗಿಕ ಅನುಭವ ಅಗತ್ಯ'

ಪ್ರಜಾವಾಣಿ ವಾರ್ತೆ

ಮೈಸೂರು: 'ಪ್ರಾಯೋಗಿಕ ಅನುಭವಗಳು ವಿದ್ಯಾರ್ಥಿಗಳಲ್ಲಿ ಸಮಸ್ಯೆ ಪರಿಹರಿಸುವ ಕೌಶಲ ಬೆಳೆಸುತ್ತವೆ' ಎಂದು ಕಂಪ್ಯೂಟರ್ ಪ್ಯಾರಡೈಸ್ ಸ್ಥಾಪಕ ಎಸ್. ಆರೋಕಿಯಾ ಸ್ವಾಮಿ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 'ಹ್ಯಾಕಥಾನ್' ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, 'ನಿರಂತರವಾಗಿ ವಿಕಸನಗೊಳ್ಳುವ ತಂತ್ರಜ್ಞಾನವನ್ನು ಕಲಿಯಲು, ಹೊಸತನ ಕಂಡುಕೊಳ್ಳಲು ಪ್ರಯೋಗಗಳು ಸಹಕಾರಿ. ಹ್ಯಾಕಥಾನ್ ಒಂದು ಉತ್ತಮ ಅವಕಾಶ' ಎಂದರು.

ಕಾರ್ಯಾಗಾರವು ಸಿದ್ಧಾಂತ ಮತ್ತು ಅಭ್ಯಾಸದ ಮಿಶ್ರಣವಾಗಿದ್ದು, ತಂತ್ರಜ್ಞಾನ ಅಭಿವೃದ್ಧಿ ಕುರಿತು ವ್ಯಾಪಕ ಶ್ರೇಣಿಯ ವಿಷಯಗಳನ್ನು ಒಳಗೊಂಡಿತ್ತು. 75 ಸ್ಪರ್ಧಾರ್ಥಿಗಳು ಭಾಗವಹಿಸಿದ್ದರು.

ಕಾಲೇಜಿನ ಪ್ರಾಂಶುಪಾಲೆ ಬಿ.ಆರ್.ಜಯಕುಮಾರಿ, ಬಿಸಿಎ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಎ.ರಾಧೇಶ್, ಪರೀಕ್ಷಾಂಗ ನಿರ್ವಹಣಾಧಿಕಾರಿ ಶ್ರುತಿ ಪೂಣಚ್ಚ ಇದ್ದರು.

STAR OF MYSORE

Monday 13th May 2024

Hackathon held at Mahajana College



Mysuru, May 13- The one-day Hackathon workshop, a collaborative endeavour of the Department of BCA, IQAC and Computer Paradise, had been organised at SBRR Mahajana First Grade College in the city recently.

In his keynote address, Arokia Swamy, Director of Computer Paradise, Mysuru, shared invaluable wisdom drawn from his extensive experience, offering real-world examples and practical advice on hackathons.

Principal Dr. B.R. Jayakumari underscored the transformative potential of collaboration and innovation in the tech industry, inspiring attendees to approach the day's challenges with determination and enthusiasm.

The workshop sessions were a blend of theory and practical, covering a wide range of topics including hackathon basics, app development and database management using Python.

A. Radhesh, HoD, Computer Science and Application, was also present.

K.S. Nandini welcomed the gathering.

STAR OF MYSORE

Tuesday 21st May 2024

Event to foster innovation, creativity among students



Mysuru, May 21 (BCT)- SBRR Mahajana First Grade College had organised IDEATHON 2k24 recently to foster innovation and entrepreneurial spirit among students.

The event kicked off with a brainstorming session led by Lokesh Venkataswamy, CEO and Innovation Practitioner at Innomantra. He shared valuable insights on idea generation, development and enhancement, inspiring participants to think creatively. Subsequently, two competitive events, Business Planning and Case Study Analysis, attracted participants from various colleges across Mysuru.

These competitions provided a platform for students to showcase their analytical and strategic thinking skills.

The event concluded with a felicitation ceremony honouring the winners of the competitions.

Mahajana Education Society Hon. Secretary Dr. Vijaylakshmi Muralidhar, Principal Dr. B.R. Jayakumari, Academic Advisor & CEO Dr. S.R. Ramesh, Department of Business Administration Head Dr. S. Shyla, Department of Commerce Head Major B.R. Nikil and faculty members were present.

STAR OF MYSORE

Monday 20th May 2024

International Day of Immunology-2024

Inter-college poster-making competition attracts talents



Mysuru, May 20 (BCT)- The Department of Microbiology and Internal Quality Assurance Cell (IQAC) of SBRR Mahajana First Grade College, Jayalakshmipuram, in association with the Indian Immunology Society, New Delhi, hosted an inter-college poster-making competition and interactive sessions to celebrate the International Day of Immunology-2024.

The event drew an enthusiastic crowd of students, faculty and distinguished guests eager to delve into the latest advancements and challenges in the field.

This year's celebration, themed "Immunity Through the Ages: Navigating the Science of Aging and Immunology," aimed to highlight the critical connections between ageing and immunology and its practical applications in fighting diseases and promoting well-being in old age.

The celebration began with the inauguration of the poster-making competition, led by Dr. S.R. Ramesh, Chief Scientist, School of Life Sciences, Pooja Bhagavat Memorial Mahajana Education Centre, Dr. B.R. Jayakumari, Principal, SBRR Mahajana First Grade College and Dr. M.N. Kiran Kumar, distinguished Resource Person, Assistant Professor and UG-Course Coordinator, JSS Academy of Higher Education and Research.

Twenty-five teams from many colleges participated in the competition on the theme "Aging and Immunity." Dr. Girish Chandran, Assistant Professor and Coordinator, Department of Studies in Biochemistry and Smitha Grace, Assistant Professor and Coordinator, Department of Studies in Biotechnology, School of Life Sciences, Pooja Bhagavat Memorial Mahajana Education Centre, evaluated the posters.

Dr. T. Vijayalakshmi Muralidhar, Hon. Secretary, Mahajana Education Society, Principal, CEO & Academic Advisor, Dr. Kiran Kumar and the Life Sciences faculty inaugurated the event. The technical talks on ageing, thymus, immunity and age-related immune disorders were delivered by Dr. S.R. Ramesh and Dr. Kiran Kumar.

Spandana, HoD of Microbiology and faculty K. Shreeja and Zuha Afsha organised the event. The 1st prize was bagged by V. Vijayasree and Siddanth Yadhav, JSS AHER, while 2nd prize went to Veeresh and Samith from SBRR Mahajana FGC.

ಆರೋಗ್ಯ
ದಿನ ಪತ್ರಿಕೆ

ಭಾನುವಾರ, 5 ಮೇ 2024

ಮಹಾಜನ ಕಾಲೇಜಿನಲ್ಲಿ ಇಮ್ಯುನಾಲಜಿ ದಿನಾಚರಣೆ

ಮೈಸೂರು: ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಇಮ್ಯುನಾಲಜಿ ದಿನವನ್ನು ಆಚರಿಸಲಾಯಿತು.

ಕಾಲೇಜಿನ ಸೂಕ್ಷ್ಮ ಜೀವ ವಿಜ್ಞಾನ ವಿಭಾಗ ಮತ್ತು ಐಕ್ಯೂಎಸಿಯು ಹೊಸದಿಲ್ಲಿಯ ಇಂಡಿಯೆನ್ ಇಮ್ಯುನಾಲಜಿ ಸೊಸೈಟಿಯ ಸಹಯೋಗದಲ್ಲಿ ನಡೆಸಿದ ಕಾರ್ಯಕ್ರಮವನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಅವರು ಉದ್ಘಾಟಿಸಿದರು. ಕಾರ್ಯಕ್ರಮದ ಪ್ರಯುಕ್ತ ವಿಜಿಂಗ್ ಅಂಡ್ ಇಮ್ಯುನಿಟಿ ವಿಷಯದ ಮೇಲೆ ವಿದ್ಯಾರ್ಥಿಗಳಿಗೆ ಅಂತರ-ಕಾಲೇಜು ಭಿತ್ತಿಪತ್ರ ರಚನಾ ಸ್ಪರ್ಧೆ ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಜೆಎಸ್‌ಎಸ್ ಎಎಚ್‌ಇಆರ್ ಕಾಲೇಜಿನ ವಿದ್ಯಾರ್ಥಿಗಳಾದ ವಿಜಯಶ್ರೀ, ಸಿದ್ಧಾಂತ್ ಯಾದವ್ ಪ್ರಥಮ ಮತ್ತು ಮಹಾಜನ ಪ್ರಥಮ ದರ್ಜೆ ಕಾಲೇಜಿನ ವೀರೇಶ್ ಮತ್ತು ಸಮಿತ್ ಅವರು ದ್ವಿತೀಯ ಬಹುಮಾನ ಪಡೆದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಅಂತಾರಾಷ್ಟ್ರೀಯ ಇಮ್ಯುನಾಲಜಿ ದಿನವನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಅವರು ಉದ್ಘಾಟಿಸಿದರು. ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಡಾ.ಎಸ್.ಆರ್.ರಮೇಶ್ ಇತರರು ಚಿತ್ರದಲ್ಲಿದ್ದಾರೆ.

ಈ ವರ್ಷದ ಇಮ್ಯುನಾಲಜಿ ದಿನದ ಧ್ಯೇಯವು ಇಮ್ಯುನಿಟಿ ತ್ರೂ ದಿ ಏಜಸ್: ನ್ಯಾವಿಗೇಟಿಂಗ್ ದಿ ಸೈನ್ಸ್ ಆಫ್ ವಿಜಿಂಗ್ ಅಂಡ್ ಇಮ್ಯುನಾಲಜಿ ವೃದ್ಧಾಪ್ಯ ಮತ್ತು ರೋಗ ನಿರೋಧಕ ಶಾಸ್ತ್ರದ ನಡುವಿನ ಸೂಕ್ಷ್ಮ ಸಂಬಂಧ ಮತ್ತು ರೋಗಗಳ ವಿರುದ್ಧ ಹೋರಾಡುವ ಪ್ರಾಯೋಗಿಕ ಅನ್ವಯಗಳನ್ನು ತಿಳಿಸುವ ಗುರಿಯನ್ನು ಹೊಂದಿತ್ತು. 'ವಿಜಿಂಗ್ ಥೈಮಸ್ ಅಂಡ್ ಇಮ್ಯುನಿಟಿ ಕುರಿತು ಡಾ.ಎಸ್.ಆರ್.ರಮೇಶ್ ಹಾಗೂ 'ವಿಜ್‌ರಿಲೇಟೆಡ್ ಇಮ್ಯುನ್ ಡಿಸಾರ್ಡರ್ಸ್ ಕುರಿತು ಡಾ.ಎಂ.ಎನ್.ಕಿರಣ್ ಕುಮಾರ್ ವಿವರಣೆ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್.ರಮೇಶ್, ಮೈಕ್ರೋ ಬಯಾಲಜಿ ವಿಭಾಗದ ಮುಖ್ಯಸ್ಥರಾದ ಎನ್.ಸುಂದಸ್ ಸಹಾಯಕ ಪ್ರಾಧ್ಯಾಪಕರಾದ ಕೆ.ಶ್ರೀಜಾ, ಜೂಹಾ ಆಫ್ಸಾ, ಜೆಎಸ್‌ಎಸ್ ಎಎಚ್‌ಇಆರ್ ಕಾಲೇಜಿನ ಜೀವತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಎಂ.ಎನ್.ಕಿರಣ್ ಕುಮಾರ್ ಹಾಜರಿದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 6 ಮೇ 2024

ಅಂತಾರಾಷ್ಟ್ರೀಯ ಇಮ್ಯುನಾಲಜಿ ದಿನಾಚರಣೆ



ಮೈಸೂರು, ಮೇ 5–ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸೂಕ್ಷ್ಮಜೀವ ವಿಜ್ಞಾನ ವಿಭಾಗ ಮತ್ತು ಐಕ್ಯೂಎಸಿಯು ನವದೆಹಲಿಯ ಇಂಡಿಯನ್ ಇಮ್ಯುನಾಲಜಿ ಸೊಸೈಟಿ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಇಮ್ಯುನಾಲಜಿ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಸಿಇಓ ಮತ್ತು ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್. ರಮೇಶ್, ಜೆಎಸ್‌ಎಸ್ ಎ.ಎಚ್.ಇ.ಆರ್. ಕಾಲೇಜಿನ ಜೀವತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಕಿರಣ್ ಕುಮಾರ್ ಎಂ.ಎನ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಯುಕ್ತ 'ಏಜಿಂಗ್ ಆಂಡ್ ಇಮ್ಯುನಿಟಿ' ವಿಷಯದ ಮೇಲೆ ವಿದ್ಯಾರ್ಥಿಗಳಿಗೆ ಅಂತರ–ಕಾಲೇಜು ಭಿತ್ತಿಪತ್ರ ರಚನಾಸ್ಪರ್ಧೆ ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಜೆಎಸ್‌ಎಸ್ ಎಎಚ್‌ಇಆರ್ ಕಾಲೇಜಿನ ವಿದ್ಯಾರ್ಥಿಗಳಾದ ವಿಜಯಶ್ರೀ, ಸಿದ್ಧಾಂತ್ ಯಾದವ್ ಪ್ರಥಮ ಬಹುಮಾನ ಮತ್ತು ಮಹಾಜನ ಪ್ರಥಮ ದರ್ಜೆ ಕಾಲೇಜಿನ ವೀರೇಶ್, ಸಮಿತ್ ದ್ವಿತೀಯ ಬಹುಮಾನ ಪಡೆದರು.

ಈ ವರ್ಷದ ಇಮ್ಯುನಾಲಜಿ ದಿನದ ಧ್ಯೇಯವು 'ಇಮ್ಯುನಿಟಿ ತ್ರೂ ದಿ ಏಜಸ್: ನ್ಯಾವಿಗೇಟಿಂಗ್ ದಿ ಸೈನ್ಸ್ ಆಫ್ ಏಜಿಂಗ್ ಆಂಡ್ ಇಮ್ಯುನಾಲಜಿ' ವೃದ್ಧಾಪ್ಯ ಮತ್ತು ರೋಗನಿರೋಧಕಶಾಸ್ತ್ರದ ನಡುವಿನ ಸೂಕ್ಷ್ಮ ಸಂಬಂಧ ಮತ್ತು ರೋಗಗಳ ವಿರುದ್ಧ ಹೋರಾಡುವ ಪ್ರಾಯೋಗಿಕ ಅನ್ವಯಗಳನ್ನು ತಿಳಿಸುವ ಗುರಿಯನ್ನು ಹೊಂದಿತ್ತು. 'ಏಜಿಂಗ್ ಥೈಮಸ್ ಅಂಡ್ ಇಮ್ಯುನಿಟಿ' ಕುರಿತು ಡಾ.ಎಸ್.ಆರ್.ರಮೇಶ್ ಹಾಗೂ 'ಏಜ್ ರಿಲೇಟೆಡ್ ಇಮ್ಯುನ್ ಡಿಸಾರ್ಡರ್ಸ್' ಕುರಿತು ಡಾ.ಕಿರಣ್‌ಕುಮಾರ್ ಎಂ.ಎನ್. ವಿವರಣೆ ನೀಡಿದರು.

ಅಂಕೋಲಾ
ದಿನ ಪತ್ರಿಕೆ

ಮಂಗಳವಾರ, 7 ಮೇ 2024



ಕದಂಬ ರಜತ ಮಾಲೆ ಬಿಡುಗಡೆ... ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶ ಕಾರ್ಯಕ್ರಮದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ.ವಿಜಯಲಕ್ಷ್ಮೀ ಇತಿಹಾಸ ವಿಭಾಗದ ಕದಂಬ ರಜತ ಮಾಲೆ ಸಂಪುಟ-1 ಅನ್ನು ಲೋಕಾರ್ಪಣೆ ಮಾಡಿದರು. ಕಾಲೇಜಿನ ಪಾಂಶುಪಾಲರಾದ ಬಿ. ಆರ್.ಜಯಕುಮಾರಿ, ಇತಿಹಾಸ ವಿಭಾಗದ ಡಾ.ಎಚ್.ಶ್ರೀಧರ್, ಕನ್ನಡ ವಿಭಾಗದ ಡಾ.ಎಚ್.ಆರ್.ತಿಮ್ಮೇಗೌಡ, ನಂದೀಶ, ಜಯಲಕ್ಷ್ಮೀ ಮತ್ತಿತರರು ಹಾಜರಿದ್ದರು.

ಹೊಸ ದಿಗಂತ

ಸೋಮವಾರ, 6 ಮೇ 2024

ಸಂಪುಟ ಲೋಕಾರ್ಪಣೆ



ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ವಿಭಾಗದಿಂದ ಹೊರತಂದಿರುವ ಕದಂಬ ರಜತ ಮಾಲೆ ಸಂಪುಟ 01ನ್ನು ಲೋಕಾರ್ಪಣೆ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕಿ ಡಾ. ಎ.ಎಚ್.ಎಂ. ವಿಜಯಲಕ್ಷ್ಮೀ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿ ಈ ಸಂಚಿಕೆಯು ಅತ್ಯುತ್ತಮವಾದ ಲೇಖನಗಳು, ವರದಿಗಳು, ಪತ್ರಿಕಾ ಪ್ರಕಟಣೆಗಳು, ವಿವಿಧ ಚಟುವಟಿಕೆಗಳ ಛಾಯಾಚಿತ್ರಗಳನ್ನು ಒಳಗೊಂಡಿದ್ದು, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಸಮಾನವಾದ ಆದ್ಯತೆಯನ್ನು ನೀಡಲಾಗಿದೆ. ವಿದ್ಯಾರ್ಥಿಗಳು ಬರೆದಿರುವ ಲೇಖನಗಳಲ್ಲಿ ವಿಮರ್ಶೆ, ವಿಶ್ಲೇಷಣೆಯ ಪ್ರಬುದ್ಧತೆಯು ಎದ್ದು ಕಾಣುತ್ತದೆ.

ಜೊತೆಗೆ ವಿದ್ಯಾರ್ಥಿಗಳ ಸೃಜನಶೀಲತೆ ಹಾಗೂ ಕ್ರಿಯಾಶೀಲ ಬರವಣಿಗೆಯ ಆಸಕ್ತಿಯನ್ನು ಕಾಣಬಹುದು. ಇಂತಹವಿಭಿನ್ನವಾದ ಶೈಕ್ಷಣಿಕ ಕಾರ್ಯಚಟುವಟಿಕೆಗಳು ನಿರಂತರವಾಗಿ ಮೂಡಿ ಬರಲಿ ಎಂದು ಶುಭ ಹಾರೈಸಿದರು.

'ಇತಿಹಾಸ ಅರಿಯದವನು ಇತಿಹಾಸ ಸೃಷ್ಟಿಸಲಾರ' ಎಂಬ ಧ್ಯೇಯದೊಂದಿಗೆ ಸಾಮಾನ್ಯ ವಿಷಯಜ್ಞಾನ, ಐತಿಹಾಸಿಕ ಅರಿವು ಹಾಗೂ ಸೃಜನಶೀಲ ಬರವಣಿಗೆಯ ಆಸಕ್ತಿ ಮತ್ತು ಕೌಶಲವನ್ನು ಮುನ್ನೆಲೆಗೆ ತಂದು ಅದನ್ನು ಅನಾವರಣಗೊಳಿಸುವ ಹಾಗೂ ಪ್ರಕಟಿಸುವ ಇತಿಹಾಸವಿಭಾಗದ ಮಾಸಿಕ ಸಂಚಿಕೆಯೇ ಕದಂಬ ಕಳೆದ 2015 ರಿಂದಇಲ್ಲಿಯವರೆಗೂ ಸುಮಾರು 42 ಮಾಸಿಕ ಸಂಚಿಕೆಗಳನ್ನು ಪ್ರಕಟಿಸಲಾಗಿದೆ. ಈ ಕದಂಬ ಸಂಚಿಕೆಯು ಪ್ರತಿ ಶೈಕ್ಷಣಿಕ ಚಾತುರ್ಮಾಸದಲ್ಲಿ ನಡೆಯುವ ವಿಭಾಗದ ಎಲ್ಲಾ ಶೈಕ್ಷಣಿಕ ಹಾಗೂ ಪಠ್ಯೇತರ ಚಟುವಟಿಕೆಗಳ ಸಮಗ್ರ ಮಾಹಿತಿಗಳು, ಛಾಯಾಚಿತ್ರಗಳು, ಪತ್ರಿಕಾ ಪ್ರಕಟಣೆಗಳನ್ನೊಳಗೊಂಡಂತೆ ವಿವಿಧಚಾರಿತ್ರಿಕ ವಿಷಯ ಗಳನ್ನು ಕುರಿತು ವಿದ್ಯಾರ್ಥಿಗಳು ಬರೆದಿರುವ ಲೇಖನಗಳು, ಪ್ರಬಂಧಗಳು ಮತ್ತು ವರದಿಗಳನ್ನು ಹಾಗೂ ವಿಭಾಗದ ಅಧ್ಯಾಪಕರ ಲೇಖನಗಳು, ಶೈಕ್ಷಣಿಕ ಸಾಧನೆಗಳು, ಪಠ್ಯೇತರ ಚಟುವಟಿಕೆಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಕೊಡುಗೆಯನ್ನು ಸದರಿ ಸಂಚಿಕೆಯು ಒಳಗೊಂಡಿದೆ ಎಂದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 5.05.2024

ಕದಂಬ ರಜತಮಾಲೆ ಲೋಕಾರ್ಪಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಕದಂಬ ರಜತ ಮಾಲೆ: ಸಂಪುಟ-1 ಅನ್ನು ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕಿ ಡಾ.ಎ.ಎಚ್.ಎಂ. ವಿಜಯಲಕ್ಷ್ಮೀ ಲೋಕಾರ್ಪಣೆ ಮಾಡಿದರು.

ನಂತರ ಮಾತನಾಡಿದ ಅವರು, ಈ ಸಂಚಿಕೆಯು ಅತ್ಯುತ್ತಮವಾದ ಲೇಖನಗಳು, ವರದಿಗಳು, ಪತ್ರಿಕಾ ಪ್ರಕಟಣೆಗಳು, ವಿವಿಧ ಚಟುವಟಿಕೆಗಳ ಛಾಯಾಚಿತ್ರಗಳನ್ನು ಒಳಗೊಂಡಿದ್ದು, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಸಮಾನವಾದ ಆದ್ಯತೆಯನ್ನು ನೀಡಲಾಗಿದೆ ಎಂದು ಶ್ಲಾಘಿಸಿದರು.

ವಿದ್ಯಾರ್ಥಿಗಳು ಬರೆದಿರುವ ಲೇಖನಗಳಲ್ಲಿ ವಿಮರ್ಶೆ, ವಿಶ್ಲೇಷಣೆಯ ಪ್ರಬುದ್ಧತೆಯು ಎದ್ದು ಕಾಣುತ್ತದೆ. ಜೊತೆಗೆ ವಿದ್ಯಾರ್ಥಿಗಳ ಸೃಜನಶೀಲತೆ ಹಾಗೂ ಕ್ರಿಯಾಶೀಲ ಬರವಣಿಗೆಯ ಆಸಕ್ತಿಯನ್ನು ಕಾಣಬಹುದು. ಇಂತಹ ವಿಭಿನ್ನವಾದ ಶೈಕ್ಷಣಿಕ ಕಾರ್ಯ ಚಟುವಟಿಕೆಗಳು ನಿರಂತರವಾಗಿ ಮೂಡಿಬರಲಿ ಎಂದು ಅವರು ಶುಭ ಹಾರೈಸಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಸಹಾಯಕ ಪ್ರಾಧ್ಯಾಪಕರಾದ ಎ.ಆರ್. ನಂದೀಶ, ಎನ್. ಜಯಲಕ್ಷ್ಮೀ ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 6 ಮೇ 2024

'ಕದಂಬ ರಜತ ಮಾಲೆ' ಲೋಕಾರ್ಪಣೆ



ಮೈಸೂರು,ಮೇ5–ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕಿ ಡಾ.ವಿಜಯಲಕ್ಷ್ಮಿ ಇತಿಹಾಸ ವಿಭಾಗದ 'ಕದಂಬ ರಜತ ಮಾಲೆ: ಸಂಪುಟ –01' ಅನ್ನು ಲೋಕಾರ್ಪಣೆ ಮಾಡಿದರು.

ಬಳಿಕ ಮಾತನಾಡಿದ ಅವರು, ಈ ಸಂಚಿಕೆಯು ಅತ್ಯುತ್ತಮವಾದ ಲೇಖನಗಳು, ವರದಿಗಳು, ಪತ್ರಿಕಾ ಪ್ರಕಟಣೆಗಳು, ವಿವಿಧ ಚಟುವಟಿಕೆಗಳ ಛಾಯಾಚಿತ್ರಗಳನ್ನು ಒಳಗೊಂಡಿದೆ. ವಿದ್ಯಾರ್ಥಿಗಳು ಬರೆದಿರುವ ಲೇಖನಗಳಲ್ಲಿ ವಿಮರ್ಶೆ, ವಿಶ್ಲೇಷಣೆಯ ಪ್ರಬುದ್ಧತೆಯು ಎದ್ದು ಕಾಣುತ್ತದೆ. ಜೊತೆಗೆ ವಿದ್ಯಾರ್ಥಿಗಳ ಸೃಜನಶೀಲತೆ ಹಾಗೂ ಕ್ರಿಯಾಶೀಲ ಬರವಣಿಗೆಯ ಆಸಕ್ತಿಯನ್ನು ಕಾಣಬಹುದು. ಇಂತಹ ವಿಭಿನ್ನವಾದ ಶೈಕ್ಷಣಿಕ ಕಾರ್ಯಚಟುವಟಿಕೆಗಳು ನಿರಂತರವಾಗಿ ಮೂಡಿ ಬರಲಿ ಎಂದು ಶುಭ ಹಾರೈಸಿದರು.

'ಇತಿಹಾಸ ಅರಿಯದವನು ಇತಿಹಾಸ ಸೃಷ್ಟಿಸಲಾರ' ಧ್ಯೇಯದೊಂದಿಗೆ ಸಾಮಾನ್ಯ ವಿಷಯ ಜ್ಞಾನ, ಐತಿಹಾಸಿಕ ಅರಿವು ಹಾಗೂ ಸೃಜನಶೀಲ ಬರವಣಿಗೆಯ ಆಸಕ್ತಿ ಮತ್ತು ಕೌಶಲವನ್ನು ಮುನ್ನೆಲೆಗೆ ತಂದು ಅದನ್ನು ಅನಾವರಣಗೊಳಿಸುವ ಹಾಗೂ ಪ್ರಕಟಿಸುವ ಇತಿಹಾಸ ವಿಭಾಗದ ಮಾಸಿಕ ಸಂಚಿಕೆಯೇ 'ಕದಂಬ'. ಕಳೆದ 2015 ರಿಂದ ಇಲ್ಲಿಯವರೆಗೂ ಸುಮಾರು 42 ಮಾಸಿಕ ಸಂಚಿಕೆಗಳನ್ನು ಪ್ರಕಟಿಸಲಾಗಿದೆ.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ಶೈಕ್ಷಣಿಕ ಡೀನ್ ಡಾ.ಶ್ರೀಧರ ಹೆಚ್., ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ವಿಭಾಗದ ಅಧ್ಯಾಪಕ ನಂದೀಶ, ಜಯಲಕ್ಷ್ಮೀ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಭಾನುವಾರ 5 ಮೇ 2024
5 MAY 2024

ಕದಂಬ ರಜತ ಮಾಲೆಯಲ್ಲಿ ಸೃಜನಶೀಲ ಬರವಣಿಗೆ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ 'ಕದಂಬ ರಜತ ಮಾಲೆ' ಸಂಪುಟ-01 ಕೃತಿಯನ್ನು ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕಿ ಡಾ.ಎ.ಎಚ್.ಎಂ.ವಿಜಯಲಕ್ಷ್ಮೀ ಬಿಡುಗಡೆ ಮಾಡಿದರು.

ಈ ಸಂಚಿಕೆಯು ಅತ್ಯುತ್ತಮವಾದ ಲೇಖನಗಳು, ವರದಿಗಳು, ಪತ್ರಿಕಾ ಪ್ರಕಟಣೆಗಳು, ವಿವಿಧ ಚಟುವಟಿಕೆಗಳ ಛಾಯಾಚಿತ್ರ ಒಳಗೊಂಡಿದ್ದು, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಸಮಾನವಾದ ಆದ್ಯತೆಯನ್ನು ನೀಡಲಾಗಿದೆ. ವಿದ್ಯಾರ್ಥಿಗಳು ಬರೆದಿರುವ ಲೇಖನಗಳಲ್ಲಿ ವಿಮರ್ಶೆ, ವಿಶ್ಲೇಷಣೆಯ ಪ್ರಬುದ್ಧತೆಯು ಎದ್ದು ಕಾಣುತ್ತದೆ. ಜತೆಗೆ ವಿದ್ಯಾರ್ಥಿಗಳ ಸೃಜನಶೀಲತೆ ಹಾಗೂ ಕ್ರಿಯಾಶೀಲ ಬರವಣಿಗೆ ಆಸಕ್ತಿಯನ್ನು ಕಾಣಬಹುದು. ಇಂತಹ ವಿಭಿನ್ನವಾದ ಶೈಕ್ಷಣಿಕ ಕಾರ್ಯಚಟುವಟಿಕೆಗಳು ನಿರಂತರವಾಗಿ ಮೂಡಿಬರಲಿ ಎಂದು ಅವರು ಹೇಳಿದರು. ಇತಿಹಾಸ ಅರಿಯದವನು ಇತಿಹಾಸ ಸೃಷ್ಟಿಸಲಾರ ಎಂಬ ಧ್ಯೇಯದೊಂದಿಗೆ ಸಾಮಾನ್ಯ ವಿಷಯ ಜ್ಞಾನ, ಐತಿಹಾಸಿಕ ಅರಿವು ಹಾಗೂ ಸೃಜನಶೀಲ ಬರವಣಿಗೆಯ ಆಸಕ್ತಿ ಮತ್ತು ಕೌಶಲವನ್ನು ಮುನ್ನೆಲೆಗೆ ತಂದು ಅದನ್ನು ಅನಾವರಣಗೊಳಿಸುವ ಹಾಗೂ ಪ್ರಕಟಿಸುವ ಇತಿಹಾಸ ವಿಭಾಗದ ಮಾಸಿಕ ಸಂಚಿಕೆಯೇ ಕದಂಬ. ಕಳೆದ 2015ರಿಂದ ಇಲ್ಲಿಯವರೆಗೂ ಸುಮಾರು 42 ಮಾಸಿಕ ಸಂಚಿಕೆಗಳನ್ನು ಪ್ರಕಟಿಸಲಾಗಿದೆ ಎಂದರು.

» ಡಾ.ಎ.ಎಚ್. ಎಂ.ವಿಜಯಲಕ್ಷ್ಮೀ ಅಭಿಮತ



ವಿಜಯವಾಣಿ ಚಿತ್ರ

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಕದಂಬ ರಜತ ಮಾಲೆ' ಸಂಪುಟ-01 ಕೃತಿಯನ್ನು ಡಾ.ಎ.ಎಚ್. ಎಂ.ವಿಜಯಲಕ್ಷ್ಮೀ ಬಿಡುಗಡೆ ಮಾಡಿದರು.

ಕದಂಬ ಸಂಚಿಕೆಯು ಪ್ರತಿ ಶೈಕ್ಷಣಿಕ ಚಾತುರ್ಮಾಸದಲ್ಲಿ ನಡೆಯುವ ವಿಭಾಗದ ಎಲ್ಲ ಶೈಕ್ಷಣಿಕ ಹಾಗೂ ಪಠ್ಯೇತರ ಚಟುವಟಿಕೆಗಳ ಸಮಗ್ರ ಮಾಹಿತಿಗಳು, ಛಾಯಾಚಿತ್ರಗಳು, ಪತ್ರಿಕಾ ಪ್ರಕಟಣೆಗಳನ್ನೊಳಗೊಂಡಂತೆ ವಿವಿಧ ಚಾರಿತ್ರಿಕ ವಿಷಯಗಳ ಕುರಿತು ವಿದ್ಯಾರ್ಥಿಗಳು ಬರೆದಿರುವ ಲೇಖನಗಳು, ಪ್ರಬಂಧ, ವರದಿ, ವಿಭಾಗದ ಅಧ್ಯಾಪಕರ ಲೇಖನಗಳು, ಶೈಕ್ಷಣಿಕ ಸಾಧನೆಗಳು, ಪಠ್ಯೇತರ ಚಟುವಟಿಕೆಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಕೊಡುಗೆಯನ್ನು ಈ ಸಂಚಿಕೆಯು ಒಳಗೊಂಡಿದೆ ಎಂದು ವಿವರಿಸಿದರು.

ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥ, ಶೈಕ್ಷಣಿಕ ಡೀನ್ ಡಾ. ಎಚ್.ಶ್ರೀಧರ, ಡಾ.ಎಚ್.ಆರ್. ತಿಮ್ಮೇಗೌಡ, ಎ.ಆರ್.ನಂದೀಶ್, ಜಯಲಕ್ಷ್ಮೀ ಇತರರು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 1.05.2024

ಕವಿಮಾತು ಉಪೇಂದ್ರ ಪೈ ಸ್ಮಾರಕ ಕಾಲೇಜಿನ ಪ್ರಾಧ್ಯಾಪಕ ರಾಜೇಶ್ ನಾಯರ್‌ಅಭಿಮತ

ಜೀವನ ಪರಿಪೂರ್ಣವಾಗಿಸಲು ಕಠಿಣ ಪರಿಶ್ರಮ ಅತ್ಯವಶ್ಯಕ

• ಕನ್ನಡಪ್ರಭ ವಾರ್ತೆ ಮೈಸೂರು

ಕಾಲೇಜು ಜೀವನದಲ್ಲಿ ಎಲ್ಲದರಲ್ಲೂ ಪರಿಪೂರ್ಣವಾಗಿರಬೇಕೆಂಬ ಹಂಬಲ ಇರುತ್ತದೆ, ಅದನ್ನು ಸಾಧಿಸಲು ಕಠಿಣ ಪರಿಶ್ರಮ ಮತ್ತು ಆತ್ಮವಿಶ್ವಾಸ ಅವಶ್ಯಕ ಎಂದು ಮಣಿಪಾಲ್ ಉಪೇಂದ್ರ ಪೈ ಸ್ಮಾರಕ ಕಾಲೇಜಿನ ಪ್ರಾಧ್ಯಾಪಕ ಮತ್ತು ಎನ್‌ಎಸ್‌ಎಸ್ ಅಧಿಕಾರಿ ರಾಜೇಶ್ ನಾಯರ್ ತಿಳಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಇಂಗ್ಲಿಷ್ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ವಿದ್ಯಾರ್ಥಿ ಜೀವನದ ಶ್ರೇಷ್ಠತೆ ಗಳಿಸುವುದು ಹೇಗೆ? ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ವಿದ್ಯಾರ್ಥಿ ಜೀವನವನ್ನು ಉತ್ತಮವಾಗಿಸಬೇಕು ಎಂದರೆ ಮೊದಲು



ನಾವು ಕಾಲೇಜು ಜೀವನವನ್ನು ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಆನಂದಿಸಬೇಕು. ಕಾಲೇಜಿನ ಎಲ್ಲಾ ಭಾಗವಹಿಸುವ ಮೂಲಕ ಸಿಗುವ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದರು. ನಂಬಿಕೆ ಇಲ್ಲದವನೇ ನಾಸ್ತಿಕ, ಆತ್ಮವಿಶ್ವಾಸವನ್ನು ಕುಗ್ಗಿಸುವ ಸಂದರ್ಭಗಳು ಜೀವನದಲ್ಲಿ ಬಹಳ ಬರುತ್ತವೆ. ಆದರೆ ನಾವು ನಮ್ಮ ಮೇಲೆ ಪೂರ್ಣ ವಿಶ್ವಾಸ ಹಾಗೂ ನಂಬಿಕೆಯನ್ನು ಹೊಂದಿದ್ದರೆ, ಯಾರು ಎಷ್ಟೇ ಟೀಕಿಸಿದರೂ ನಾವು ನಮ್ಮ ಪ್ರಯತ್ನವನ್ನು ಬಿಡುವುದಿಲ್ಲ. ವಿದ್ಯಾರ್ಥಿಯಾಗಿ, ಕಷ್ಟಪಟ್ಟು ಓದದೇ, ಇಷ್ಟಪಟ್ಟು ಓದಬೇಕು ಎಂದು ಅವರು ಕಿವಿಮಾತು ಹೇಳಿದರು.

ನನ್ನ ದೇವರೊಬ್ಬನೇ ಶ್ರೇಷ್ಠ ಎಂಬುದು ಮೂರ್ಖತನ, ನಮ್ಮ ಒಳಗಡೆ ಇರುವ ಶಕ್ತಿಯೇ ದೇವರು, ಅದನ್ನು ಜಾಗೃತಗೊಳಿಸಿ, ಸರಿಯಾಗಿ ಉಪಯೋಗಿಸುವ ಮೂಲಕ ಜೀವನದಲ್ಲಿ ಯಶಸ್ಸನ್ನು ಸಾಧಿಸಬಹುದು. ನಮ್ಮ ಬುದ್ಧಿಯಲ್ಲಿ ಸಕಾರಾತ್ಮಕ ಹಾಗೂ ಸಕಾರತ್ಮಕ ಎರಡೂ ಯೋಚನೆಗಳು ಇರುತ್ತವೆ. ಮೊದಲು ಬುದ್ಧಿಯನ್ನು ಶುದ್ಧ ಮಾಡಿ, ಮನಸ್ಸಿನ ಚಂಚಲತೆಯನ್ನು ನಿರ್ವಹಿಸಿ, ನಮ್ಮಳಗಿರುವ ಏಕಾಗ್ರತೆಯನ್ನು ಉತ್ತೇಜಿಸಿವುದರ ಮೂಲಕ ಮನಸ್ಸಿನ ಪರಿಪೂರ್ಣತೆಯನ್ನು ಆನಂದಿಸಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಡಿ. ಗೀತಾ, ಡಿವೈನ್ ಪಾರ್ಕ್ ನ್ಯಾದಸ್ಯರಾದ ದಿವಾಕರ ಶೆಟ್ಟಿ, ನಾರಾಯಣ್ ಸ್ವಾಮಿ, ಉಷಾ ಕೀರ್ತಿ, ಚೇತನ, ಪಿ.ಆರ್.ಓ ಪೂರ್ಣಿಮಾ ಇದ್ದರು. ಎನ್.ಸಿ. ಹಂಸವೇಣಿ ನಿರೂಪಿಸಿದರು. ಎಂ. ನಾಗೇಶ ವಂದಿಸಿದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 1 ಮೇ 2024

ನನ್ನ ದೇವನೇ ಶ್ರೇಷ್ಠ ಎಂಬ ಮನೋಭಾವ ಮೂರ್ಖತನದ್ದು

ವಿಶೇಷ ಉಪನ್ಯಾಸದಲ್ಲಿ ಡಿವೈನ್ ಪಾರ್ಕ್ ಸದಸ್ಯ ರಾಜೇಶ್ ನಾಯರ್ ಅಭಿಮತ



ಮೈಸೂರು,ಏ.30–ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಮತ್ತು ಇಂಗ್ಲಿಷ್ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ 'ವಿದ್ಯಾರ್ಥಿ ಜೀವನದ ಶ್ರೇಷ್ಠತೆ ಗಳಿಸುವುದು ಹೇಗೆ?' ಕುರಿತು ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಾಧ್ಯಾಪಕ ಹಾಗೂ ಡಿವೈನ್ ಪಾರ್ಕ್ ಸದಸ್ಯ ರಾಜೇಶ್ ನಾಯರ್ ಮಾತನಾಡಿ, ವಿದ್ಯಾರ್ಥಿ ಜೀವನವನ್ನು ಉತ್ತಮವಾಗಿಸಬೇಕು ಎಂದರೆ ಮೊದಲು ನಾವು ಕಾಲೇಜು ಜೀವನವನ್ನು ಆನಂದಿಸಬೇಕು. ಎಲ್ಲಾ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಭಾಗವಹಿಸುವ ಮೂಲಕ, ಸಿಗುವ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಕಾಲೇಜು ಜೀವನದಲ್ಲಿ ಎಲ್ಲದರಲ್ಲೂ ಪರಿಪೂರ್ಣವಾಗಿರಬೇಕೆಂಬ ಹಂಬಲ ಇರುತ್ತದೆ ಅದನ್ನು ಸಾಧಿಸಲು ಕೊಂಚ ಪರಿಶ್ರಮ ಮತ್ತು ಆತ್ಮವಿಶ್ವಾಸ ಅತ್ಯಂತ ಅವಶ್ಯಕ.

ಸ್ವಾಮಿ ವಿವೇಕಾನಂದರು, 'ನಂಬಿಕೆ ಇಲ್ಲದವನೇ ನಾಸ್ತಿಕ, ಆತ್ಮವಿಶ್ವಾಸವನ್ನು ಕುಗ್ಗಿಸುವ ಸಂದರ್ಭಗಳು ಜೀವನದಲ್ಲಿ ಬಹಳ ಬರುತ್ತವೆ. ಆದರೆ ನಾವು ನಮ್ಮ ಮೇಲೆ ಪೂರ್ಣ ವಿಶ್ವಾಸ ಹಾಗೂ ನಂಬಿಕೆಯನ್ನು ಹೊಂದಿದ್ದರೆ, ಯಾರು ಎಷ್ಟೇ ಟೀಕಿಸಿದರೂ ನಾವು ನಮ್ಮ ಪ್ರಯತ್ನವನ್ನು ಬಿಡುವುದಿಲ್ಲ. ವಿದ್ಯಾರ್ಥಿಯಾಗಿ, ಕಷ್ಟ ಪಟ್ಟು ಓದದೇ, ಇಷ್ಟಪಟ್ಟು ಓದಬೇಕೆಂದು ತಿಳಿಸಿದರು.

'ದೇವರು ಒಬ್ಬನೇ, ನಾಮ ಹಲವು' ಎಂಬ ಮಾತನ್ನು ಉಲ್ಲೇಖಿಸಿ 'ನನ್ನ ದೇವರೊಬ್ಬನೇ ಶ್ರೇಷ್ಠ ಎಂಬುದು ಮೂರ್ಖತನ, ನಮ್ಮ ಒಳಗಡೆ ಇರುವ ಶಕ್ತಿಯೇ ದೇವರು. ಅದನ್ನು ಜಾಗೃತಗೊಳಿಸಿ, ಸರಿಯಾಗಿ ಉಪಯೋಗಿಸುವ ಮೂಲಕ ಜೀವನದಲ್ಲಿ ಯಶಸ್ಸನ್ನು ಸಾಧಿಸಬಹುದು. ನಮ್ಮ ಬುದ್ಧಿಯಲ್ಲಿ ನಕಾರಾತ್ಮಕ ಹಾಗೂ ಸಕಾರಾತ್ಮಕ ಎರಡೂ ಯೋಚನೆಗಳು ಇರುತ್ತವೆ. ಮೊದಲು ಬುದ್ಧಿಯನ್ನು ಶುದ್ಧ ಮಾಡಿ, ಮನಸ್ಸಿನ ಚಂಚಲತೆಯನ್ನು ನಿರ್ವಹಿಸಿ, ನಮ್ಮೊಳಗಿರುವ ವಿಕಾಗ್ರತೆಯನ್ನು ಉತ್ತೇಜಿಸುವುದರ ಮೂಲಕ ಮನಸ್ಸಿನ ಪರಿಪೂರ್ಣತೆಯನ್ನು ಆನಂದಿಸಬೇಕು. 'ಲೋಕಾ ಸಮಸ್ತಾ ಸುಖಿನೋ ಭವಂತು' ಎಂಬ ಧ್ಯೇಯದ ಮೂಲಕ ಕೇವಲ ನಮ್ಮ ಹಿತಕ್ಕಲ್ಲದೇ ಲೋಕದ ಹಿತಕ್ಕಾಗಿ ಬಾಳಬೇಕು ಹಾಗೂ ಈ ಭಾವವನ್ನು ವಿದ್ಯಾರ್ಥಿ ಜೀವನದಿಂದಲೇ ಬೆಳೆಸಿಕೊಳ್ಳಬೇಕು ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಗೀತಾ, ಡಿವೈನ್ ಪಾರ್ಕ್‌ನ ಸದಸ್ಯರಾದ ದಿವಾಕರ ಶೆಟ್ಟಿ, ನಾರಾಯಣ್‌ಸ್ವಾಮಿ, ಉಷಾ ಕೀರ್ತಿ, ಚೇತನ, ಪಿಆರ್‌ಒ ಪೂರ್ಣಿಮಾ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಧವಾರ • ಮೇ 1, 2024

'ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ'

ಪ್ರಜಾವಾಣಿ ವಾರ್ತೆ



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ವಿದ್ಯಾರ್ಥಿ ಜೀವನದ ಶ್ರೇಷ್ಠತೆ ಗಳಿಸುವುದು ಹೇಗೆ?' ವಿಷಯದ ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ರಾಜೇಶ್ ನಾಯರ್ ಮಾತನಾಡಿದರು

ಮೈಸೂರು: 'ಸಾಧನೆಗೆ ಕಠಿಣ ಪರಿಶ್ರಮ ಮತ್ತು ಆತ್ಮವಿಶ್ವಾಸ ಅವಶ್ಯ' ಎಂದು ಪ್ರಾಧ್ಯಾಪಕ ಮತ್ತು ಡಿವೈನ್ ಪಾರ್ಕ್ ಸದಸ್ಯ ರಾಜೇಶ್ ನಾಯರ್ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಮತ್ತು ಇಂಗ್ಲಿಷ್ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ 'ವಿದ್ಯಾರ್ಥಿ ಜೀವನದ ಶ್ರೇಷ್ಠತೆ ಗಳಿಸುವುದು ಹೇಗೆ?' ಎಂಬ ವಿಷಯದ ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿದ್ಯಾರ್ಥಿ ಜೀವನವನ್ನು ಉತ್ತಮವಾಗಿಸಬೇಕು ಎಂದರೆ ಮೊದಲು ನಾವು ಕಾಲೇಜು ಜೀವನವನ್ನು ಆನಂದಿಸಬೇಕು. ಎಲ್ಲಾ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಭಾಗವಹಿಸುವ ಮೂಲಕ, ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಎಲ್ಲದರಲ್ಲೂ ಪರಿಪೂರ್ಣವಾಗಿರಬೇಕೆಂಬ ಹಂಬಲ ಇರುತ್ತದೆ. ಅದಕ್ಕೆ ಶ್ರಮ ಹಾಗೂ ಆತ್ಮವಿಶ್ವಾಸ ಅತ್ಯಂತ ಅಗತ್ಯವಾಗುತ್ತದೆ' ಎಂದು ತಿಳಿಸಿದರು.

'ಆತ್ಮವಿಶ್ವಾಸವನ್ನು ಕುಗ್ಗಿಸುವ ಸಂದರ್ಭಗಳು ಜೀವನದಲ್ಲಿ ಬಹಳ ಬರುತ್ತವೆ. ಆದರೆ, ನಾವು ನಮ್ಮ ಮೇಲೆ ಪೂರ್ಣ ವಿಶ್ವಾಸ ಹಾಗೂ ನಂಬಿಕೆಯನ್ನು ಹೊಂದಿದ್ದರೆ, ಯಾರು ಎಷ್ಟೇ ಟೀಕಿಸಿದರೂ ಪ್ರಯತ್ನವನ್ನು ಬಿಡುವುದಿಲ್ಲ. ವಿದ್ಯಾರ್ಥಿಗಳು ಕಷ್ಟಪಟ್ಟು ಓದದೇ ಇಷ್ಟಪಟ್ಟು ಕಲಿಯಬೇಕು' ಎಂದು ಸಲಹೆ ನೀಡಿದರು.

'ನಮ್ಮಲ್ಲಿ ನಕಾರಾತ್ಮಕ ಹಾಗೂ ಸಕಾರತ್ಮಕ ಯೋಚನೆಗಳೆರಡೂ ಇರುತ್ತವೆ. ಮೊದಲು ಬುದ್ಧಿ ಶುದ್ಧ ಮಾಡಿ, ಚಂಚಲತೆಯನ್ನು ನಿರ್ವಹಿಸಿ, ನಮ್ಮೊಳಗಿರುವ ಏಕಾಗ್ರತೆಯನ್ನು ಉತ್ತೇಜಿಸುವ ಮೂಲಕ ಮನಸ್ಸಿನ ಪರಿಪೂರ್ಣತೆಯನ್ನು ಅನಂದಿಸಬೇಕು' ಎಂದರು.

ಕಾಲೇಜಿನ ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಎಚ್.ಆರ್. ತಿಮ್ಮೇಗೌಡ, ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಗೀತಾ ಡಿ., ಡಿವೈನ್ ಪಾರ್ಕ್‌ನ ಸದಸ್ಯರಾದ ದಿವಾಕರ ಶೆಟ್ಟಿ, ನಾರಾಯಣಸ್ವಾಮಿ, ಚೇತನ, ಸಹಾಯಕ ಇಂಗ್ಲಿಷ್ ಪ್ರಾಧ್ಯಾಪಕರಾದ ಹಂಸವೇಣಿ ಎನ್.ಸಿ., ನಾಗೇಶ ಎಂ., ಪಿಆರ್‌ಒ ಪೂರ್ಣಿಮಾ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಬುಧವಾರ 1 ಮೇ 2024
1 MAY 2024

ಜೀವನದಲ್ಲಿ ಪರಿಪೂರ್ಣತೆ ಸಾಧಿಸಲು ಕಠಿಣ ಶ್ರಮ ಅಗತ್ಯ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಕಾಲೇಜು ಜೀವನದಲ್ಲಿ ಎಲ್ಲದರಲ್ಲೂ ಪರಿಪೂರ್ಣ ವಾಗಿರ ಬೇಕು ಎಂಬ ಹಂಬಲವಿರುತ್ತದೆ. ಅದನ್ನು ಸಾಧಿಸಲು ಕಠಿಣ ಪರಿಶ್ರಮ, ಆತ್ಮವಿಶ್ವಾಸ ಅತ್ಯಂತ ಅವಶ್ಯಕ ಎಂದು ಪ್ರಾಧ್ಯಾಪಕ ರಾಜೇಶ್ ನಾಯರ್ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ, ಇಂಗ್ಲಿಷ್ ವಿಭಾಗ ಹಾಗೂ ಐಕ್ಯುಎಸಿ ಸಹಯೋಗದಲ್ಲಿ ಕಾಲೇಜಿನಲ್ಲಿ ಸೋಮವಾರ ಆಯೋಜಿಸಿದ್ದ 'ವಿದ್ಯಾರ್ಥಿ ಜೀವನದ ಶ್ರೇಷ್ಠತೆ ಗಳಿಸುವುದು ಹೇಗೆ?' ಕುರಿತು ವಿಶೇಷ ಉಪನ್ಯಾಸ ನೀಡಿದರು.

ವಿದ್ಯಾರ್ಥಿ ಜೀವನವನ್ನು ಉತ್ತಮವಾಗಿಸ ಬೇಕು ಎಂದರೆ ಮೊದಲು ನಾವು ಕಾಲೇಜು ಜೀವನವನ್ನು ಆನಂದಿಸಬೇಕು. ಕಾಲೇಜಿನ ಎಲ್ಲ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ಭಾಗವಹಿ ಸುವ ಮೂಲಕ, ಸಿಗುವ ಅವಕಾಶವನ್ನು ಸರಿ ಯಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸ್ವಾಮಿ ವಿವೇಕಾನಂದರ ಮಾತನ್ನು ಉಲ್ಲೇಖಿಸಿದ ಅವರು, ನಂಬಿಕೆ ಇಲ್ಲದವನೇ ನಾಸ್ತಿಕ, ಆತ್ಮವಿಶ್ವಾಸವನ್ನು ಕುಗ್ಗಿಸುವ ಸಂದರ್ಭಗಳು ಜೀವನದಲ್ಲಿ ಬಹಳ ಬರುತ್ತವೆ. ಆದರೆ ನಾವು ನಮ್ಮ ಮೇಲೆ ಪೂರ್ಣ ವಿಶ್ವಾಸ ಹಾಗೂ ನಂಬಿಕೆಯನ್ನು ಹೊಂದಿದ್ದರೆ, ಯಾರು ಎಷ್ಟೇ ಟೀಕಿಸಿದರೂ ನಾವು ನಮ್ಮ ಪ್ರಯತ್ನವನ್ನು ಬಿಡುವುದಿಲ್ಲ. ವಿದ್ಯಾರ್ಥಿಯಾಗಿ, ಕಷ್ಟಪಟ್ಟು ಓದದೇ, ಇಷ್ಟಪಟ್ಟು ಓದಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.



» ಪ್ರಾಧ್ಯಾಪಕ ರಾಜೇಶ್ ನಾಯರ್ ಅಭಿಮತ

ನಮ್ಮ ಬುದ್ಧಿಯಲ್ಲಿ ನಕಾ ರಾತ್ಮಕ ಹಾಗೂ ಸಕಾರತ್ಮಕ ಎರಡೂ ಯೋಚನೆ ಗಳು ಇರುತ್ತವೆ. ಮೊದಲು ಬುದ್ಧಿ ಯನ್ನು ಶುದ್ಧ ಮಾಡಿ, ಮನಸ್ಸಿನ ಚಂಚಲತೆಯನ್ನು ನಿರ್ವಹಿಸಿ, ನಮ್ಮೊಳಗಿರುವ ಏಕಾಗ್ರತೆಯನ್ನು ಉತ್ತೇಜಿಸಬೇಕು ಎಂದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್ .ತಿಮ್ಮೇಗೌಡ, ಇಂಗ್ಲಿಷ್ ವಿಭಾ ಗದ ಮುಖ್ಯಸ್ಥೆ ಡಿ.ಗೀತಾ, ಡಿವೈನ್ ಪಾರ್ಕ್‌ನ ಸದಸ್ಯರಾದ ದಿವಾಕರ ಶೆಟ್ಟಿ, ನಾರಾಯಣ್ ಸ್ವಾಮಿ, ಉಷಾ ಕೀರ್ತಿ, ಚೇತನ, ಪಿಆರ್‌ಒ ಪೂರ್ಣಿಮಾ, ಸಹಾಯಕ ಇಂಗ್ಲಿಷ್ ಪ್ರಾಧ್ಯಾಪಕಿ ಎನ್.ಸಿ.ಹಂಸವೇಣಿ, ಸಹಾಯಕ ಕನ್ನಡ ಪ್ರಾಧ್ಯಾಪಕ ಎಂ.ನಾಗೇಶ್ ಇತರರಿದ್ದರು.

ಆಂದೋಲನ
ದಿನ ಪತ್ರಿಕೆ

ಶನಿವಾರ, 18 ಮೇ 2024



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದದಿಂದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ವಿವಿ ಅಂತರ ಕಾಲೇಜು ಅಂತರ ವಲಯ ಪುರುಷರ ಪಂದ್ಯಾವಳಿಯಲ್ಲಿ ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ತಂಡ ದ್ವಿತೀಯ ಬಹುಮಾನ ಪಡೆದಿದೆ. ಕೆವಿಎಸ್ ಅಧಿಕಾರಿ ಡಾ.ರವಿಕುಮಾರ್, ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಎಚ್.ಎನ್.ಭಾಸ್ಕರ್ ಮತ್ತು ಪಿ.ಎಸ್. ಮಧುಸೂದನ, ಕೆ.ಸೋಮಶೇಖರ್, ಕ್ರೀಡಾ ವಿದ್ಯಾರ್ಥಿಗಳು ಚಿತ್ರದಲ್ಲಿದ್ದಾರೆ.

aÄºÁdÆ «ZÁj ¸ÁA¸ÉÃ¥ÀÆgÄ.

aÄºÁdÆ ¥ÀæPÁgÄ zeÉÆ PÁ¯ÉÃdÄ, aÃ¥ÀÆgÄ.
¥ÀwÃ¥ÉÆPÀt ºÉè.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 18.05.2024



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿಸಿದ್ದ ಅಂತರ ಕಾಲೇಜು ಅಂತರ ವಲಯ ಪುರುಷರ ಪಂದ್ಯಾವಳಿಯಲ್ಲಿ ಜಯಲಕ್ಷ್ಮೀಪುರಂನಲ್ಲಿರುವ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು 2023-24ನೇ ಸಾಲಿನ ದ್ವಿತೀಯ ಸಮಗ್ರ ಪ್ರಶಸ್ತಿ ಪಡೆದಿದ್ದಾರೆ. ಡಾ. ರವಿಕುಮಾರ್, ಕೆಎಎಸ್ ಅಧಿಕಾರಿಗಳು, ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ, ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು, ಡಾ. ಎಸ್. ಆರ್. ರಮೇಶ್, ಸಿಇಒ, ಡಾ.ಎಚ್.ಎನ್. ಭಾಸ್ಕರ್, ಪಿ.ಎಸ್. ಮಧುಸೂಧನ, ಕೆ. ಸೋಮಶೇಖರ್ ಹಾಗೂ ಕ್ರೀಡಾ ವಿದ್ಯಾರ್ಥಿಗಳು ಇದ್ದಾರೆ.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 21 ಮೇ 2024

ಮಹಾಜನ ಕಾಲೇಜಿಗೆ ದ್ವಿತೀಯ ಸಮಗ್ರ ಪ್ರಶಸ್ತಿ



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿಸಿದ್ದ, ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಂತರ ವಲಯ ಪುರುಷರ ಪಂದ್ಯಾವಳಿಯಲ್ಲಿ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು 2023–24ನೇ ಸಾಲಿನ ದ್ವಿತೀಯ ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ. ಚಿತ್ರದಲ್ಲಿ (ವೇದಿಕೆಯ ಮೇಲೆ ನಿಂತಿರುವವರು): ಡಾ. ರವಿಕುಮಾರ್, ಕೆಎಎಸ್ ಅಧಿಕಾರಿಗಳು, ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ, ಡಾ. ಬಿ.ಆರ್.ಜಯಕುಮಾರಿ, ಪ್ರಾಂಶುಪಾಲರು, ಡಾ.ಎಸ್.ಆರ್.ರಮೇಶ್, ಸಿಇಒ, ಡಾ.ಭಾಸ್ಕರ್ ಹೆಚ್.ಎನ್. ಮತ್ತು ಪಿ.ಎಸ್.ಮಧುಸೂಧನ, ದೈಹಿಕ ಶಿಕ್ಷಣ ನಿರ್ದೇಶಕರು, ಸೋಮಶೇಖರ್ ಹಾಗೂ ಕ್ರೀಡಾ ವಿದ್ಯಾರ್ಥಿಗಳನ್ನು ಕಾಣಬಹುದು.

ಆಂದೋಲನ
ದಿನ ಪತ್ರಿಕೆ

ಗುರುವಾರ, 16 ಮೇ 2024

ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಪ್ರಥಮ ಸ್ಥಾನ



ಮೈಸೂರು: ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಸ್ಪೋರ್ಟ್ ಪೆವಿಲಿಯನ್‌ನಲ್ಲಿ ನಡೆದ ಮಹಿಳೆಯರ ಅಂತರ ಕಾಲೇಜು ಅಂತರ ವಲಯ ಸಾಫ್ಟ್ ಬಾಲ್ ಪಂದ್ಯಾವಳಿಯಲ್ಲಿ ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ತಂಡ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿದೆ.

ಲವ್‌ಯಾ(ನಾಯಕಿ), ಸ್ಮಿತಾ, ದಕ್ಷಿತಾ, ದೀಕ್ಷಿತ, ಪ್ರಿಯಾಂಕ, ಅಭಿಗ್ನಗೌಡ, ಶರಣ್ಯ, ಕೀರ್ತನ, ತಾಶಿ, ಸುಪ್ರೀತ, ಲೆನಿಟ, ಇಂದುಶ್ರೀ, ಸಂಗೀತ, ಸಾಗರಿ ಪೊನ್ನಮ್ಮ ಅವರನ್ನು ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದಿಂದ ಅಭಿನಂದಿಸಲಾಯಿತು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ, ಡಾ.ಎಚ್.ಎನ್. ಭಾಸ್ಕರ್, ಕೆ.ಸೋಮಶೇಖರ್ ಹಾಜರಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 16 ಮೇ 2024

ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಪ್ರಥಮ ಸ್ಥಾನ



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಸ್ಪೋರ್ಟ್ಸ್ ಪೆವಿಲಿಯನ್ ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಅಂತರ ವಲಯ ಸಾಫ್ಟ್‌ಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಗಳಿಸಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂದನ, ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಡಾ.ಟಿ.ವಿಜಯಲಕ್ಷ್ಮೀಮುರಳೀಧರ್, ಗೌ.ಕಾರ್ಯದರ್ಶಿ, ಮಹಾಜನ ವಿದ್ಯಾಸಂಸ್ಥೆ, ಮೈಸೂರು, ಡಾ. ಎಚ್.ಎನ್. ಭಾಸ್ಕರ್, ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ತಂಡದ ನಾಯಕಿ ಲವ್‌ಯಾ ಅವರನ್ನು ಕಾಣಬಹುದು. (ಎಡದಿಂದ ಬಲಕ್ಕೆ ನಿಂತಿರುವವರು): ಸೋಮಶೇಖರ್ ಕೆ, ಸ್ಮೀತಾ, ದಕ್ಷಿತಾ, ದೀಕ್ಷಿತ, ಪ್ರಿಯಾಂಕ, ಅಭಿಗ್ನಗೌಡ, ಶರಣ್ಯ, ಕೀರ್ತನ, ತಾಶಿ, ಸುಪ್ರಿತ, ಲೆನಿಟ, ಇಂದುಶ್ರೀ, ಸಂಗೀತ ಹಾಗೂ ಸಾಗರಿ ಪೊನ್ನಮ್ಮ ಅವರನ್ನು ಕಾಣಬಹುದು.

STAR OF MYSORE

Thursday 16th May 2024

Mysore University Inter-Collegiate Inter-Zonal Softball Champions



The women's Softball team of SBRR Mahajana First Grade College bagged first place in the Mysore University Inter-Collegiate Inter-Zonal Softball Championship organised by the Department of Physical Education, University of Mysore (UoM), Mysuru recently. Seen in the picture are (sitting from left) P.S. Madhusudhana, Physical Education Director, Dr. B.R. Jayakumari, Principal, Dr. T. Vijayalakshmi Muralidhar, Hon. Secretary, Mahajana Education Society, Dr. H.N. Bhaskar, Physical Education Director and Team Captain Lavya; (standing from left) K. Somashekar, Smitha, Dakshitha, Deekshitha, Priyanka, Abignagowda, Sharanya, Kirthana, Tasi, Supritha, Lenita, Indushree, Sangeetha and Sagari Ponnamma.

ಹೊಸ ದಿಗಂತ

ಬುಧವಾರ
15 ಮೇ 2024

ಶಿಕ್ಷಣದ ಜತೆ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳಿ



ಮೈಸೂರು: ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು ಎಂದು ಹಾಸ್ಯ ಸಾಹಿತಿ ಎಂ.ಎಸ್. ನರಸಿಂಹಮೂರ್ತಿ ಹೇಳಿದರು,

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 'ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯ ಸಮಾರೋಪ ಸಮಾರಂಭ'ಹಾಗೂ ಪ್ರತಿಭಾ ಪುರಸ್ಕಾರ ಮತ್ತು 'ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ'ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಅವರು, ಹಿರಿಯರನ್ನು ಹಾಗೂ ತಂದೆ, ತಾಯಿಯನ್ನು ಗೌರವಿಸುವುದರ ಜೊತೆಗೆ ಗುರು ಪರಂಪರೆಯನ್ನು ಸ್ಮರಿಸಿಕೊಳ್ಳಬೇಕು. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ಸಮಾನವಾಗಿ ಸರಿದೂಗಿಸಿಕೊಂಡು ಹೋದಾಗ ತಮ್ಮ ಗುರಿಯನ್ನು ತಲುಪಬಹುದು ಎಂದು ಸಲಹೆ ನೀಡಿದರು.

ಒಂದು ವಸ್ತು ಕಳೆದು ಹೋದರೆ ಮತ್ತೊಮ್ಮೆ ತೆಗೆದುಕೊಳ್ಳಬಹುದು. ಆದರೆ ಒಬ್ಬ ವ್ಯಕ್ತಿಗೆ ಜೀವ ಹೋದರೆ ಮತ್ತೆ ಸಿಗುವುದಿಲ್ಲ. ಹಾಗಾಗಿ ವಿದ್ಯಾರ್ಥಿಗಳು ಜೀವನದಲ್ಲಿ ಮಾನವೀಯತೆಯನ್ನು ರೂಢಿಸಿಕೊಳ್ಳಬೇಕು. ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಎಂಬುವುದು ಕೇವಲ ಕಾಲೇಜಿಗೆ ಮಾತ್ರ ಸೀಮಿತವಾಗಿಲ್ಲ. ಇಲ್ಲಿ ಕಲಿಯುವ, ಇಲ್ಲಿ ಎದುರಿಸುವ ಮತ್ತು ಶಿಸ್ತು ಮುಂದಿನ ದಿನಗಳಲ್ಲಿ ಸಂಸತ್ತಿನಲ್ಲೇ ಭಾಗವಹಿಸುವ ಅವಕಾಶಗಳನ್ನು ತ'ಂದುಕೊಡಬಹುದು ಎಂದರು. ಪ್ರತಿಭಾವೇದಿಕೆ ನಿಮ್ಮೊಳಗಿರುವ ಕಲೆಯನ್ನು ಪ್ರಪಂಚಕ್ಕೆ ಪರಿಚಯಿಸುವ ಮೊದಲ ಮೆಟ್ಟಿಲಾಗಿರುತ್ತದೆ. ಹಾಗಾಗಿ ಈ ವೇದಿಕೆಗಳನ್ನು ಸುಸಜ್ಜಿತವಾಗಿ ಬಳಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ವರ್ಷದ ಅತ್ಯುತ್ತಮ ವಿದ್ಯಾರ್ಥಿ ಸಂಸದೆಯಾಗಿ ಹೊರ ಹೊಮ್ಮಿದ ಅಂತಿಮ ವರ್ಷದ ಬಿ.ಕಾಂ. ವಿದ್ಯಾರ್ಥಿನಿ ಕು. ಅರ್ಚನಾ ಪರಮೇಶ್ವರ ಹೆಗಡೆ ಅವರನ್ನು ಸನ್ಮಾನಿಸಲಾಯಿತು. ಪ್ರತಿಭಾ ನ್ವಿತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಫಲಕಗಳನ್ನು ನೀಡಿ ಗೌರವಿಸಲಾಯಿತು. ಕಾಲೇಜಿನ ಸಾಂಸ್ಕೃತಿಕ, ಸಾಹಿತ್ಯಕ, ಎನ್‌ಸಿಸಿ, ಎನ್‌ಎಸ್‌ಎಸ್, ರೋಟ್ರಾಕ್ಟ್‌ಕ್ಲಬ್, ಅತ್ಯುತ್ತಮ ಸ್ವಯಂ ಸೇವಕ, ಗ್ರಂಥಾಲಯ ಬಳಕೆ, ಹಾಜರಾತಿ ಮತ್ತು ಕ್ರೀಡೆ ಇನ್ನಿತರ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ಸುಮಾರು 35ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಐಕ್ಯೂಎಸಿ ಸಂಯೋಜಕಿ ಗೀತಾ ಡಿ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್ ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 15.05.2024

ಶಿಕ್ಷಣದ ಜತೆ ಮಾನವೀಯ ಮೌಲ್ಯ ರೂಢಿಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಸಾಹಿತಿ ನರಸಿಂಹಮೂರ್ತಿ ಸಲಹೆ | ಮಹಾಜನ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ

• ಕನ್ನಡಪ್ರಭ ವಾರ್ತೆ ಮೈಸೂರು

ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು ಎಂದು ಸಾಹಿತಿ ಎಂ.ಎಸ್. ನರಸಿಂಹಮೂರ್ತಿ ಕರೆ ನೀಡಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ನಡೆದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯ ಸಮಾರೋಪ ಸಮಾರಂಭ, ಪ್ರತಿಭಾ ಪುರಸ್ಕಾರ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಈ ಕಾಲೇಜಿನಲ್ಲಿ ಅನೇಕ ಬಹುಮುಖ ಪ್ರತಿಭೆಗಳಿವೆ. ವಿಶ್ವವಿದ್ಯಾಲಯದಲ್ಲಿರುವ ಎಲ್ಲಾ ಪ್ರಶಸ್ತಿಗಳನ್ನು ಈ ಕಾಲೇಜಿನ ವಿದ್ಯಾರ್ಥಿಗಳೇ ಬಾಚಿಕೊಂಡಿದ್ದಾರೆ ಎಂಬುದನ್ನು ನೋಡಿ ತುಂಬಾ ಸಂತೋಷವಾಯಿತು. ಈ ಕಾಲೇಜಿನಲ್ಲಿ ಪ್ರತಿಯೊಂದು ವಿಚಾರಗಳು ತುಂಬಾ ವ್ಯವಸ್ಥಿತವಾಗಿ



ಮಹಾಜನ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿ ಸಂಸತ್, ಪ್ರತಿಭಾ ವೇದಿಕೆ ಸಮಾರೋಪದಲ್ಲಿ ವರ್ಷದ ಅತ್ಯುತ್ತಮ ವಿದ್ಯಾರ್ಥಿ ಸಂಸದೆಯಾಗಿ ಹೊರಹೊಮ್ಮಿದ ಅರ್ಚನಾ ಪರಮೇಶ್ವರ ಹೆಗಡೆ ಅವರನ್ನು ಸನ್ಮಾನಿಸಲಾಯಿತು.

ನಡೆಯುತ್ತಿವೆ. ವಿದ್ಯಾರ್ಥಿಗಳು ಅವಕಾಶ ಬಂದಾಗ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳಲ್ಲಿರುವ ನಾಯಕತ್ವದ ಗುಣ ಬೆಳೆಸುವಲ್ಲಿ ಕಾಲೇಜು ಶ್ರಮಿಸುತ್ತಿರುವುದು ಶ್ಲಾಘನೀಯ. ಈ ನಿಟ್ಟಿನಲ್ಲಿ ಮಹಾಜನ ಸಂಸ್ಥೆಯು ವಿದ್ಯಾರ್ಥಿಗಳ ಬದುಕನ್ನು ಹಸನುಗೊಳಿಸುವಲ್ಲಿ ಹಲವು ವೇದಿಕೆಗಳ ಮೂಲಕ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಎಷ್ಟೋ ಬಾರಿ ಅವಕಾಶಗಳನ್ನು ಬಳಸಿಕೊಳ್ಳಲು ಆಗುವುದಿಲ್ಲ. ಆದರೆ ಅದಕ್ಕಾಗಿ ಧೈರ್ಯ ಕಳೆದುಕೊಳ್ಳದೇ ಮುಂದೆ ಬರುವ ಅವಕಾಶವನ್ನು ಜಾಣ್ಮೆಯಿಂದ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದರು. ಹಿರಿಯರನ್ನು ಹಾಗೂ ತಂದೆ, ತಾಯಿಯನ್ನು ಗೌರವಿಸುವುದರ ಜೊತೆಗೆ ಗುರು ಪರಂಪರೆಯನ್ನು ಸ್ಥರಿಸಿಕೊಳ್ಳಬೇಕು. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ಸಮಾನವಾಗಿ ಸರಿದೂಗಿಸಿಕೊಂಡು ಹೋದಾಗ ತಮ್ಮ ಗುರಿಯನ್ನು ತಲುಪಬಹುದು ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಜೀ ಮುರಳೀಧರ್ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ನೀವು ಏನನ್ನು ಆಯ್ಕೆ ಮಾಡಿಕೊ ಳ್ಳುತ್ತೀರಾ ಎಂಬುವುದರ ಮೇಲೆ ನಿಮ್ಮ ಬದುಕು ಅವಲಂಬಿತವಾಗಿರುತ್ತದೆ. ಜೊತೆಗೆ ಅದರ ಆಧಾ ರದ ಮೇಲೆ ಪ್ರತಿಫಲ ಸಿಗುತ್ತದೆ. ಅವಕಾಶಗಳು, ವೇದಿಕೆಗಳು ಎಲ್ಲಾ ಕಡೆ ಇರುತ್ತದೆ. ಆದರೆ ಅದನ್ನು ಆಯ್ಕೆ ಮಾಡಿಕೊಳ್ಳುವುದು ನಿಮಗೆ ಬಿಟ್ಟದ್ದು ಎಂದು ಶುಭ ಹಾರೈಸಿದರು.

ಇದೇ ವೇಳೆ ವರ್ಷದ ಅತ್ಯುತ್ತಮ ವಿದ್ಯಾರ್ಥಿ ಸಂಸದೆಯಾಗಿ ಹೊರಹೊಮ್ಮಿದ ಅಂತಿಮ ವರ್ಷದ ಬಿ.ಕಾಂ. ವಿದ್ಯಾರ್ಥಿನಿ ಅರ್ಚನಾ ಪರಮೇಶ್ವರ ಹೆಗಡೆ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್. ಆರ್. ರಮೇಶ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಪ್ರತಿಭಾ ವೇದಿಕೆಯ ಸಂಚಾಲಕ ಎಂ. ನಾಗೇಶ, ವಿದ್ಯಾರ್ಥಿ ಸಂಸತ್ತಂಚಾಲಕಿ ಡಾ. ಎಂ.ಆರ್. ಇಂದ್ಯಾಣಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಡಿ. ಗೀತಾ ಇದ್ದರು. ನಿಹಾರಿಕಾ ಮತ್ತು ತಂಡದವರು ನಾಡಗೀತೆ ಹಾಡಿದರು. ಕಾಲೇಜಿನ ವಾರ್ಷಿಕ ವರದಿ ಮತ್ತು ಪ್ರತಿಭಾ ವೇದಿಕೆಯ ವರದಿಯನ್ನು ವಿದ್ಯಾರ್ಥಿನಿಯರಾದ ಶಾನ್ಯ ಮತ್ತು ಶ್ರೇಯಾ ಓದಿದರು. ಸುನಿಲ್ ನಿರೂಪಿಸಿದರು. ಎಂ. ನಾಗೇಶ ವಂದಿಸಿದರು.

ಆಂದೋಲನ
ದಿನ ಪತ್ರಿಕೆ

ಶುಕ್ರವಾರ, 24 ಮೇ 2024



ಪ್ರೊ.ಎಚ್.ಟಿ.ವೆಂಕಟೇಶ್ ಮೂರ್ತಿಗೆ ಸನ್ಮಾನ... ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಾರದ ಸಮಾವೇಶದಲ್ಲಿ ಮಂಡ್ಯ ವಿವಿ ಸರ್ ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಎಚ್.ಟಿ.ವೆಂಕಟೇಶ ಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್.ತಿಮ್ಮೇಗೌಡ, ಸಹಾಯಕ ಕನ್ನಡ ಪ್ರಾಧ್ಯಾಪಕ ಎಂ.ನಾಗೇಶ ಮತ್ತು ಸುನಿಲ್ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 23.05.2024

ಮನುಷ್ಯ ಹುಟ್ಟು ಸಾಧನೆ ಮಾಡುವುದಕ್ಕಾಗಿ: ವೆಂಕಟೇಶಮೂರ್ತಿ

ಮೈಸೂರು: ಮನುಷ್ಯ ಹುಟ್ಟಿರುವುದು ಸಾಧನೆ ಮಾಡಲಿಕ್ಕಾಗಿಯೇ ಹೊರತು ಕೆಟ್ಟದ್ದನ್ನು ಮಾಡುವುದಕ್ಕಲ್ಲ, ಮನುಷ್ಯ ಮಾತ್ರ ಒಳ್ಳೆಯದನ್ನು ಮಾಡಲು ಸಾಧ್ಯ ಎಂದು ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಎಚ್.ಟಿ. ವೆಂಕಟೇಶಮೂರ್ತಿ ತಿಳಿಸಿದರು.

ನಗರದ ಎಸ್.ಬಿ.ಆರ್.ಆರ್‌ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾರದ ಸಮಾವೇಶದ ಮುಖ್ಯ ಅತಿಥಿಗಳಾಗಿದ್ದ ಅವರನ್ನು ಅಭಿನಂದಿಸಲಾಯಿತು. ಬಳಿಕ ಮಾತನಾಡಿದ ಅವರು, ತಮ್ಮ ಬದುಕಿನಲ್ಲಿ ಎದುರಾದ ಸಮಸ್ಯೆ ಹಾಗೂ ಸವಾಲುಗಳನ್ನು ಎದುರಿಸಿ, ಇಂದು ಉನ್ನತ ವ್ಯಕ್ತಿಯಾಗಿದ್ದರ, ಸನ್ನವೇಶ ವಿವರಿಸಿದರು.

ಮಕ್ಕಳು ತಂದೆ, ತಾಯಿಯರ ಭಾವನೆಗಳನ್ನು ಅರ್ಥ ಮಾಡಿಕೊಂಡು ಉತ್ತಮವಾದ ಮಾರ್ಗದಲ್ಲಿ ನಡೆಯಬೇಕಾಗಿದೆ. ವಿದ್ಯಾರ್ಥಿಗಳ ಆಸೆ, ಕನಸು, ಜವಾಬ್ದಾರಿ, ತೊಳಲಾಟ, ಮನಃಸ್ಥಿತಿ, ದ್ವಂದ್ವ, ಎಲ್ಲವೂ, ಪೋಷಕರಿಗೆ ಹಾಗೂ ಗುರುಗಳಿಗೆ



ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 14 ಮೇ 2024

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಸಾಹಿತಿ ಎಂ.ಎಸ್. ನರಸಿಂಹಮೂರ್ತಿ, ಎಸ್.ಬಿ. ನವೀನ್‌ಗೌಡ, ಅಧ್ಯಕ್ಷತೆ : ಕು. ಅರ್ಚನಾ ಪರಮೇಶ್ವರ ಹೆಗಡೆ, ಉಪಸ್ಥಿತರು : ಟಿ. ಮುರಳೀಧರ್ ಭಾಗವತ್, ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಡಾ. ಸಿ.ಕೆ. ರೇಣುಕಾರ್ಯ, ಡಾ. ಎಸ್.ಆರ್. ರಮೇಶ್, ಡಾ. ಬಿ.ಆರ್. ಜಯಕುಮಾರಿ, ಎಂ. ನಾಗೇಶ್, ಡಾ. ಕ್ಯಾಪ್ಟನ್ ಎಂ.ಆರ್. ಇಂದ್ರಾಣಿ, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 10.30ಕ್ಕೆ.

ಪ್ರಜಾವಾಣಿ

ಮಂಗಳವಾರ • ಮೇ 14, 2024

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ. ಭಾಷಣ- ಎಂ.ಎಸ್.ನರಸಿಂಹಮೂರ್ತಿ, ನವೀನ್ ಗೌಡ, ಅಧ್ಯಕ್ಷತೆ- ಅರ್ಚನಾ ಪರಮೇಶ್ವರ ಹೆಗಡೆ, ಸ್ಥಳ- ಕಾಲೇಜು ಆವರಣ, ಬೆಳಿಗ್ಗೆ 10.30.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 21.05.2024

ಭಾವನೆಗಳಿಗೆ ಸ್ಪಂದಿಸುವ ವಲಯ ರಂಗಭೂಮಿ

ರಂಗಕರ್ಮಿ ಯತೀಶ್ ಎನ್. ಕೊಳ್ಳೇಗಾಲ ಅಭಿಮತ | ರಂಗಭೂಮಿ ಒಳನೋಟ ಕುರಿತು ಸಂವಾದ ಕಾರ್ಯಕ್ರಮ

• ಕನ್ನಡಪ್ರಭ ವಾರ್ತೆ ಮೈಸೂರು

ರಂಗಭೂಮಿ ನಮಗೆ ಧೈರ್ಯ ಹಾಗೂ ಶಿಸ್ತನ್ನು ಕಲಿಸುತ್ತದೆ. ರಂಗಭೂಮಿ ಒಂದು ಅದ್ಭುತ ವ್ಯಕ್ತಿತ್ವವನ್ನು ನಿರ್ಮಾಣ ಮಾಡುವ ವಲಯವಾಗಿದೆ ಎಂದು ರಂಗಕರ್ಮಿ ಯತೀಶ್ ಎನ್..ಕೊಳ್ಳೇಗಾಲ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ, ಪ್ರತಿಭಾ ವೇದಿಕೆ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಆಯೋಜಿಸಿದ್ದ ರಂಗಭೂಮಿ ಒಳನೋಟ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೀವನದಲ್ಲಿ ಎಲ್ಲವನ್ನು ಹಾಗೂ ಎಲ್ಲರನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ರಂಗಭೂಮಿ ನಮಗೆ ಕಲಿಸಿಕೊಟ್ಟಿದೆ. ರಂಗಭೂಮಿ ಒಂದು ಸಮುದಾಯಿಕ ಕಲೆ. ಅದು ಮನುಷ್ಯನ ಪರಿಶ್ರಮ ಹಾಗೂ ಶಿಸ್ತಿನ್ನು ಬಯಸುತ್ತದೆ ಎಂದರು.



ರಂಗಭೂಮಿ ಬದುಕುವ ಶೈಲಿಯನ್ನು ನಿರ್ಮಾಣ ಮಾಡಿಕೊಡುತ್ತದೆ. ನಾಟಕದ ಚಟುವಟಿಕೆಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡಾಗ ನಾವು ಜೀವನಶೈಲಿಯನ್ನು ರೂಢಿಸಿಕೊಳ್ಳುತ್ತವೆ. ರಂಗಭೂಮಿ ಜೀವನವನ್ನು ಕಲಿಸುವ ಅಪರೂಪದ ಪಾಠಶಾಲೆಯಾಗಿದೆ ಎಂದು ಅವರು ಹೇಳಿದರು.

ನಾಟಕವು ಒಂದು ಕಾರ್ಯಕ್ರಮದಂತೆ ಇದನ್ನು ಯಶಸ್ವಿಗೊಳಿಸುವಲ್ಲಿ ನಮ್ಮೆಲ್ಲರ ವ್ಯಯಕ್ತಿಕ ಆಸೆ- ಆಕಾಂಕ್ಷೆಗಳನ್ನು ಬದಿಗಿರಿಸಿ ದುಡಿಯಬೇಕು. ಒಂದು ನಾಟಕದ ಯಶಸ್ಸು ಇಡೀ ತಂಡದ ವಿಜಯವಾಗಿ ಕಾಣುತ್ತದೆ. ಒಂದು ಗುಂಪಿನೊಂದಿಗೆ ಬೆರೆಯುವ ಕಲೆಯನ್ನು ನಾಟಕ ಕಲಿಸುತ್ತದೆ ಎಂದು ಅವರು ತಿಳಿಸಿದರು. ಎಲ್ಲರನ್ನು ಬಿಟ್ಟು ಏಕಾಂಗಿ ತನದಲ್ಲಿ ಬದುಕುತ್ತಿರುವ ಮನುಷ್ಯನಿಗೆ, ರಂಗಭೂಮಿ ಇಂದು ಕೂಡಿ ಬದುಕುವ ಕಲೆಯನ್ನು ಕಲಿಸಿಕೊಡುತ್ತದೆ. ರಂಗಭೂಮಿ ಒಂದು ವ್ಯಕ್ತಿತ್ವ ನಿರ್ಮಾಣದ ಶಿಬಿರವಾಗಿಯೂ ಇಂದು ಬಳಕೆಗೊಳ್ಳುತ್ತಿದೆ. ನಿರಂತರ ಅಧ್ಯಯನ ದಕ್ಕಮವನ್ನು ರಂಗಭೂಮಿ ನಮಗೆ ಕಲಿಸುತ್ತದೆ ಎಂದರು.

ಮಹಾಜನ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಸಹಾಯಕ ಪ್ರಾಧ್ಯಾಪಕ ಜೆ. ಮನೋಜ್ ಕುಮಾರ್, ಪ್ರತಿಭಾ ವೇದಿಕೆ ಸಂಚಾಲಕ ಎಂ. ನಾಗೇಶ್, ಸಾರಂತ ತಂಡದ ಸಂಚಾಲಕ ರಾಧೇಶ್ ಇದ್ದರು. ಸಿ.ಎಂ. ಕಿರಣ್ ಕುಮಾರ್ ಸ್ವಾಗತಿಸಿದರು.